ಗುರುವಾರ, ಫೆಬ್ರುವರಿ 1, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 32 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಸಿಮಿಲಿಪಾಲ್‌ನಲ್ಲಿ ಕಪ್ಪು ಹುಲಿ ಸಂತತಿ ಹೆಚ್ಚಿದೆಯೇ?



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,752	21,725	₹64,880 (ಬೆಂಗಳೂರು)	₹73,900 (ಬೆಂಗಳೂರು)	83.04

₹ 600 ಕೋಟಿ ಮೊತ್ತದ ಭೂಹಗರಣದ ಆರೋಪ • ಇ.ಡಿ ಅಧಿಕಾರಿಗಳಿಂದ 7 ಗಂಟೆ ವಿಚಾರಣೆ

ಸೊರೇನ್ ಸೆರೆ; ಚಂಪೈ ಹೊಸ ಸಿ.ಎಂ

ರಾಂಚಿ (ಪಿಟಿಐ): ದಿಢೀರ್ ರಾಜಕೀಯ ಬೆಳವಣಿಗೆಯಲ್ಲಿ ಜಾರ್ಖಂಡ್ ಮುಖ್ಯಮಂತ್ರಿ ಸ್ಥಾನಕ್ಕೆ ಹೇಮಂತ್ ಸೊರೇನ್ ಅವರು ಬುಧವಾರ ರಾಜೀನಾಮೆ ಸಲ್ಲಿಸಿದ್ದಾರೆ. ಇದರ ಬೆನ್ನಲ್ಲೇ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಅವರನ್ನು ಬಂಧಿಸಿದೆ.

ಇನ್ನೊಂದೆಡೆ, ಆಡಳಿತಾರೂಢ ಮೈತ್ರಿಕೂಟದ ನೇತೃತ್ವ ವಹಿಸಿದ್ದ ಜಾರ್ಖಂಡ್ ಮುಕ್ತಿ ಮೋರ್ಚಾದ (ಜೆಎಂಎಂ) ಶಾಸಕಾಂಗ ಪಕ್ಷದ ನಾಯಕನಾಗಿ ಹಿರಿಯ ನಾಯಕ ಚಂಪೈ ಸೊರೇನ್ ಸರ್ವಾನುಮತದಿಂದ ಆಯ್ಕೆಯಾಗಿದ್ದು, ಸರ್ಕಾರ ರಚಿಸಲು ಹಕ್ಕು ಪ್ರತಿಪಾದಿಸಿದ್ದಾರೆ.

ಸುಮಾರು ₹600 ಕೋಟಿ ಮೊತ್ತದ ಭೂ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಇ.ಡಿ ಅಧಿಕಾರಿಗಳು ಸುಮಾರು ಏಳು ಗಂಟೆ ಹೇಮಂತ್ ಅವರನ್ನು ವಿಚಾರಣೆಗೆ ಒಳಪಡಿಸಿದರು. ಬಳಿಕ ರಾಜಭವನಕ್ಕೆ ತೆರಳಿ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರಿಗೆ ಹೇಮಂತ್ ರಾಜೀನಾಮೆ ಸಲ್ಲಿಸಿದರು. ಅದಾದ ಕೆಲವೇ ಕ್ಷಣಗಳಲ್ಲಿ ಇ.ಡಿ ಅಧಿಕಾರಿಗಳು ಅವರನ್ನು ಬಂಧಿಸಿದರು.

ಈ ನಡುವೆ ಸಿ.ಎಂ ನಿವಾಸದಲ್ಲಿ ನಡೆದ ಸಭೆಯಲ್ಲಿ ಚಂಪೈ ಸೊರೇನ್ ಅವರನ್ನು ಜೆಎಂಎಂ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು ಎಂದು ಪಕ್ಷದ ವಕ್ತಾರ ವಿನೋದ್ ಪಾಂಡೆ ತಿಳಿಸಿದರು. ಚಂಪೈ ಅವರು ಶಿಬು ಸೊರೇನ್ ಅವರಿಗೆ ಅತ್ಯಂತ ಆಪ್ತರೂ ಹೌದು. ಹೇಮಂತ್ ಅವರ ಸಂಪುಟದಲ್ಲಿ ಸಾರಿಗೆ ಸಚಿವರಾಗಿದ್ದರು.

ಇ.ಡಿ ವಿಚಾರಣೆಗೆ ಹಾಜರಾಗಲು ಸೂಚಿಸಿ ಸಮನ್ಸ್ ನೀಡಿದ್ದರೂ ಹೇಮಂತ್ ಏಳು ಬಾರಿ ವಿಚಾರಣೆಯಿಂದ ತಪ್ಪಿಸಿಕೊಂಡಿದ್ದರು. ಬಂಧನ ಭೀತಿಯಲ್ಲಿದ್ದ ಅವರು ಮಂಗಳವಾರವಷ್ಟೇ ಆಡಳಿತರೂಢ ಮೈತ್ರಿಕೂಟದ ಶಾಸಕರ ಸಭೆ ನಡೆಸಿ, ಉತ್ತರಾಧಿಕಾರಿ ಆಯ್ಕೆ ಬಗ್ಗೆ ಚರ್ಚಿಸಿದ್ದರು.

ಹದಿನೈದು ದಿನಗಳಲ್ಲಿ ಎರಡನೇ ಬಾರಿಗೆ ವಿಚಾರಣೆಗೆ ಒಳಗಾಗಿ, ಬಂಧನ ಸನ್ನಿಹಿತವಾಗುತ್ತಿದ್ದಂತೆ ಹೇಮಂತ್, ಪತ್ನಿ ಕಲ್ಪನಾ ಅವರ ಹೆಸರನ್ನು ಉತ್ತರಾಧಿಕಾರಿ ಸ್ಥಾನಕ್ಕೆ ಪ್ರಸ್ತಾಪಿಸಬಹುದು ಎಂಬ ನಿರೀಕ್ಷೆ ಗಳಿದ್ದವು.

6Bನೇ ಪುಟ ನೋಡಿ



ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಸಂಪುಟ ಸಚಿವ ಚಂಪೈ ಸೊರೇನ್ ಜತೆಗೆ ರಾಂಚಿಯಲ್ಲಿನ ರಾಜಭವನಕ್ಕೆ ಬುಧವಾರ ತೆರಳಿ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು – ಪಿಟಿಐ ಚಿತ್ರ

47 ಶಾಸಕರ ಬೆಂಬಲ ಇದೆ. 43 ಶಾಸಕರ ಬೆಂಬಲ ಪತ್ರವನ್ನು ರಾಜ್ಯಪಾಲರಿಗೆ ನೀಡಿ ಸರ್ಕಾರ ರಚಿಸಲು ಹಕ್ಕು ಪ್ರತಿಪಾದಿಸಿದ್ದೇನೆ. ಆಹ್ವಾನ ಬರುವ ನಿರೀಕ್ಷೆಯಿದೆ
ಚಂಪೈ ಸೊರೇನ್, ಜೆಎಂಎಂ ಶಾಸಕಾಂಗ ಪಕ್ಷದ ನಾಯಕ

ಸೊರೇನ್ ಕುಟುಂಬದಲ್ಲಿ ಅಂತಃಕಲಹ

ರಾಂಚಿ (ಪಿಟಿಐ): ಹೇಮಂತ್ ಸೊರೇನ್ ನಿರ್ಗಮನದ ಬೆನ್ನಲ್ಲೇ ಅವರ ಕುಟುಂಬದಲ್ಲಿ ಮುಖ್ಯಮಂತ್ರಿ ಗಾದಿಗಾಗಿ ತೀವ್ರ ಅಂತಃಕಲಹ ನಡೆದ ಸಂಗತಿ ಹೊರಬಿದ್ದಿದೆ.

ಹೇಮಂತ್ ಸೊರೇನ್ ಅವರ ಪತ್ನಿ ಕಲ್ಪನಾ ಅವರು ಮುಖ್ಯಮಂತ್ರಿಯಾಗಲಿದ್ದಾರೆ ಎನ್ನುವ ಸುದ್ದಿ ಆರಂಭದಲ್ಲಿ ಹರಿದಾಡಿದಾಗ ಜೆಎಂಎಂ ಮುಖ್ಯಸ್ಥ ಶಿಬು ಸೊರೇನ್ ಅವರ ಹಿರಿಯ ಸೊಸೆ, ಶಾಸಕಿ ಸೀತಾ ಸೊರೇನ್ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ದೂರವಾಣಿಯಲ್ಲಿ ಪಿಟಿಐ ಜೊತೆಗೆ ಮಾತನಾಡಿದ ಸೀತಾ, 'ಜೆಎಂಎಂ ಶಾಸಕಾಂಗ ಪಕ್ಷದ ನಾಯಕಿಯಾಗಿ ಕಲ್ಪನಾ ಆಯ್ಕೆಗೆ ನನ್ನ ತೀವ್ರ ಆಕ್ಷೇಪವಿದೆ' ಎಂದಿದ್ದರು. ಮಂಗಳವಾರ ಹೇಮಂತ್ ನೇತೃತ್ವದಲ್ಲಿ ನಡೆದಿದ್ದ ಶಾಸಕರ ಸಭೆಯಲ್ಲೂ ಕಲ್ಪನಾ ಭಾಗವಹಿಸಿದ್ದರು. ಇದಕ್ಕೂ ಸೀತಾ ಅಸಮಾಧಾನ ವ್ಯಕ್ತಪಡಿಸಿದ್ದರು.

ಪ್ರಮುಖ ಬೆಳವಣಿಗೆಗಳು

- ತಮ್ಮ ಬಂಧನ ಪ್ರಶ್ನಿಸಿ ಹೇಮಂತ್ ಸೊರೇನ್ ಅವರು ಬುಧವಾರ ರಾತ್ರಿ ಜಾರ್ಖಂಡ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಹಂಗಾಮಿ ಮುಖ್ಯನ್ಯಾಯಮೂರ್ತಿ ಶ್ರೀ ಚಂದ್ರಶೇಖರ್ ಮತ್ತು ನ್ಯಾಯಮೂರ್ತಿ ಅನುಭಾ ರಾವತ್ ಚೌಧರಿ ಅವರಿರುವ ನ್ಯಾಯಪೀಠವು ಗುರುವಾರ ಬೆಳಿಗ್ಗೆ 10.30ಕ್ಕೆ ಅರ್ಜಿ ವಿಚಾರಣೆ ನಡೆಸಲಿದೆ.
- ತಮ್ಮ ದೆಹಲಿ ನಿವಾಸದಲ್ಲಿ ಶೋಧ ಕೈಗೊಂಡಿದ್ದ ಇ.ಡಿ ಹಿರಿಯ ಅಧಿಕಾರಿಗಳ ವಿರುದ್ಧ ಹೇಮಂತ್ ಸೊರೇನ್, ರಾಂಚಿಯ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ಎಫ್‌ಐಆರ್ ದಾಖಲಾಗಿದೆ.
- ತಾನು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವವರೆಗೆ ತಮ್ಮನ್ನು ಬಂಧಿಸುವುದಕ್ಕೆ ಸಂಬಂಧಿಸಿದ ಮೆಮೊಗೆ ಸಹಿ ಹಾಕಲು ಹೇಮಂತ್ ಸೊರೇನ್ ನಿರಾಕರಿಸಿದರು. ರಾಜೀನಾಮೆ ಸಲ್ಲಿಸಿದ ನಂತರವಷ್ಟೇ ತಮ್ಮ ಹೇಳಿಕೆ ದಾಖಲಿಸಿಕೊಳ್ಳುವಂತೆ ತಿಳಿಸಿದರು. ಇದಕ್ಕೆ ಇ.ಡಿ ಅಧಿಕಾರಿಗಳು ಸಮ್ಮತಿಸಿದರು ಎಂದು ಮೂಲಗಳು ಹೇಳಿವೆ.



ಪೊಲೀಸರಿಗೆ ಧನ್ಯವಾದ...

ಬೆಂಗಳೂರಿನ ಸಂಚಾರ ಪೊಲೀಸ್ ಉದ್ಯಾನದಲ್ಲಿ 'ನಾಗರಿಕ ಪ್ರಜ್ಞೆಗಾಗಿ ಮಕ್ಕಳ ಆಂದೋಲನ'ದ (ಸಿಎಂಸಿಎ) ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ 'ನನ್ನ ಸಂಚಾರ ಪೊಲೀಸರಿಗೆ ಧನ್ಯವಾದ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಕ್ಕಳು, ಪೊಲೀಸರಿಂದ ಸಂಚಾರ ನಿಯಮಗಳ ಬಗ್ಗೆ ಮಾಹಿತಿ ಪಡೆದರು ಮತ್ತು ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ ಪಡೆದು ಸಂಭ್ರಮಿಸಿದರು
– ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ

ಹತ್ತು ಅಧಿಕಾರಿಗಳ ಬಳಿ ಪತ್ತೆಯಾದ ₹ 23 ಕೋಟಿ ಆಸ್ತಿ

ಹಲವೆಡೆ 'ಲೋಕಾ' ಬಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ರಾಜ್ಯದ ವಿವಿಧೆಡೆ ಹತ್ತು ಅಧಿಕಾರಿಗಳಿಗೆ ಸಂಬಂಧಿಸಿದ 41 ಸ್ಥಳಗಳಲ್ಲಿ ಬುಧವಾರ ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸರು, ₹23.17 ಕೋಟಿ ಮೌಲ್ಯದ ಆಸ್ತಿಗಳನ್ನು ಪತ್ತೆಮಾಡಿದ್ದಾರೆ.

ಲೋಕೋಪಯೋಗಿ ಇಲಾಖೆಯ ಮಂಡ್ಯ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಹರ್ಷ ಎಚ್.ಆರ್., ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಮಧುಗಿರಿ ಉಪ ವಿಭಾಗದ ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಎ. ಹನುಮಂತರಾಯಪ್ಪ, ಕೃಷ್ಣ ದೇವರಾಯ ವಿಶ್ವವಿದ್ಯಾಲಯದ ನಂದಿಹಳ್ಳಿ ಸ್ನಾತಕೋತ್ತರ ಅಧ್ಯಯನ ಕೇಂದ್ರದ ನಿರ್ದೇಶಕ ಬಿ.ರವಿ, ಜೆಸ್ಕಾಂ ವಿಜಯನಗರ ವಿಭಾಗದ ಎಇಇ ಆರ್. ಆರ್. ಭಾಸ್ಕರ್, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಹುಣಸೂರು ಉಪ ವಿಭಾಗದ ಎಇಇ ಪಿ. ರವಿಕುಮಾರ್, ಚಿಕ್ಕಮಗಳೂರಿನ ವಾಣಿಜ್ಯ ತೆರಿಗೆ ಅಧಿಕಾರಿ ನೇತ್ರಾವತಿ ಕೆ.ಆರ್., ಹೂವಿನ ಹಡಗಲಿ ವಲಯ ಅರಣ್ಯಾಧಿಕಾರಿ ರೇಣುಕಮ್ಮ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಎಇಇ ಎಂ.ಎನ್. ಯಜ್ಞೇಂದ್ರ, ಮೆಸ್ಕಾಂ ಅತ್ತಾವರ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಶಾಂತಕುಮಾರ್ ಎಚ್.ಎಂ. ಮತ್ತು ಹಾಸನ ತಾಲ್ಲೂಕು ಆಹಾರ ನಿರೀಕ್ಷಕ ಜಗನ್ನಾಥ ಜಿ.ಪಿ. ದಾಳಿಗೊಳಗಾದ ಅಧಿಕಾರಿಗಳು.

ಹತ್ತು ಮಂದಿಯ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿರುವ ಲೋಕಾಯುಕ್ತ ಪೊಲೀಸರು, ಬುಧವಾರ ಏಕಕಾಲಕ್ಕೆ 41 ಸ್ಥಳಗಳ ಮೇಲೆ ದಾಳಿ ನಡೆಸಿದರು. ಸಂಜೆಯವರೆಗೂ ಶೋಧ ನಡೆಸಲಾಯಿತು.

ಹರ್ಷ ಎಚ್.ಆರ್. ಬಳಿಕ ₹4.50 ಕೋಟಿ ಆಸ್ತಿ ಪತ್ತೆಯಾಗಿದೆ. ಗೃಹೋಪಯೋಗಿ ವಸ್ತುಗಳ ಖರೀದಿಗೆ ₹2.82 ಕೋಟಿ ವೆಚ್ಚ ಮಾಡಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ. ನೇತ್ರಾವತಿ ಅವರ ಮನೆಯಲ್ಲಿ ₹4.58 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ. ಐದು ನಿವೇಶನ ಮತ್ತು ಒಂದು ಮನೆಯನ್ನೂ ಇವರು ಹೊಂದಿರುವುದು ಪತ್ತೆಯಾಗಿದೆ.

ರೇಣುಕಮ್ಮ ಮನೆಯಲ್ಲಿ ₹2.09 ಲಕ್ಷ ನಗದು ಪತ್ತೆಯಾಗಿದ್ದು, ತಲಾ ಎರಡು ಮನೆ ಮತ್ತು ನಿವೇಶನ, 11 ಎಕರೆ ಕೃಷಿ ಜಮೀನು ಒಡೆತನಕ್ಕೆ ಸಂಬಂಧಿಸಿದ ದಾಖಲೆಗಳೂ ಸಿಕ್ಕಿವೆ.

11ನೇ ಪುಟ ನೋಡಿ

ಇಂದು ಕೇಂದ್ರದ ಮಧ್ಯಂತರ ಬಜೆಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಗುರುವಾರ ಬೆಳಿಗ್ಗೆ 11 ಗಂಟೆಗೆ ಲೋಕಸಭೆಯಲ್ಲಿ 2024–25ನೇ ಹಣಕಾಸು ವರ್ಷದ ಕೇಂದ್ರದ ಮಧ್ಯಂತರ ಬಜೆಟ್ ಮಂಡಿಸಲಿದ್ದಾರೆ.

ನಿರ್ಮಲಾ ಅವರು ಮಂಡಿಸುತ್ತಿರುವ ಆರನೇ ಬಜೆಟ್ ಇದಾಗಿದೆ. ಆ ಮೂಲಕ ಆರು ಬಾರಿ ಬಜೆಟ್ ಮಂಡಿಸಿರುವ ಮಾಜಿ ಪ್ರಧಾನಿ ದಿವಂಗತ ಮೊರಾರ್ಜಿ ದೇಸಾಯಿ ಅವರ ದಾಖಲೆಯನ್ನು ಸರಿಗಟ್ಟಲಿದ್ದಾರೆ.

ಮಧ್ಯಂತರ ಬಜೆಟ್‌ನಲ್ಲಿ ಯಾವುದೇ ಹೊಸ ಘೋಷಣೆಗಳನ್ನು ಪ್ರಕಟಿಸುವುದಿಲ್ಲ ಎಂದು ಈಗಾಗಲೇ ಅವರು ಹೇಳಿದ್ದಾರೆ. ಹಾಗಾಗಿ, ಹಳೆಯ ಹಾಗೂ ಹೊಸ ತೆರಿಗೆ ಪದ್ಧತಿಯಡಿ ತೆರಿಗೆದಾರರಿಗೆ ಯಾವುದೇ ವಿನಾಯಿತಿ ಪ್ರಕಟಿಸುವ ಸಾಧ್ಯತೆ ಇಲ್ಲ ಎಂದು ಮೂಲಗಳು ತಿಳಿಸಿವೆ.

ಲೋಕಸಭೆ ಚುನಾವಣೆ ನಂತರ ಅಧಿಕಾರಕ್ಕೆ ಬರುವ ಹೊಸ ಸರ್ಕಾರವು ಪೂರ್ಣ ಬಜೆಟ್ ಮಂಡಿಸಲಿದೆ ಎಂದು ಆ ಮೂಲಗಳು ತಿಳಿಸಿವೆ.

'ಜ್ಞಾನವಾಪಿ'ಯಲ್ಲಿ ಪೂಜೆಗೆ ಅವಕಾಶ

ವಾರಾಣಸಿ ಜಿಲ್ಲಾ ಕೋರ್ಟ್ ಆದೇಶ ಉಲ್ಲೇಖಿಸಿ ಹಿಂದೂ ಅರ್ಜಿದಾರರ ವಕೀಲರ ಹೇಳಿಕೆ

ಮಸೀದಿಯ ನೆಲಮಹಡಿಯಲ್ಲಿ ಪೂಜೆ ಸಲ್ಲಿಸಲು ಅರ್ಚಕರಿಗೆ ಕೋರ್ಟ್‌ನಿಂದ ಅನುಮತಿ

ಪ್ರಜಾವಾಣಿ ವಾರ್ತೆ

ಲಖನೌ: ಮಹತ್ವದ ಬೆಳವಣಿಗೆಯಲ್ಲಿ, ವಿವಾದಿತ ಜ್ಞಾನವಾಪಿ ಮಸೀದಿಯ ನೆಲಮಹಡಿಯಲ್ಲಿ ಪೂಜೆ ಸಲ್ಲಿಸಲು ಹಿಂದೂ ಅರ್ಚಕರಿಗೆ ವಾರಾಣಸಿಯ ಜಿಲ್ಲಾ ಕೋರ್ಟ್ ಬುಧವಾರ ಅವಕಾಶವನ್ನು ಕಲ್ಪಿಸಿದೆ.

ಈ ವಿವಾದಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಮಂಗಳವಾರವಷ್ಟೇ ಪೂರ್ಣಗೊಳಿಸಿದ್ದ ಜಿಲ್ಲಾ ಕೋರ್ಟ್, ಈ ಕುರಿತ ಆದೇಶವನ್ನು ಕಾಯ್ದಿರಿಸಿದೆ.

'ಮಸೀದಿಯ ನೆಲಮಹಡಿಯಲ್ಲಿ ಪೂಜೆ ಸಲ್ಲಿಸಲು ಅರ್ಚಕರಿಗೆ ಕೋರ್ಟ್ ಅವಕಾಶ ನೀಡಿದೆ. ಇದಕ್ಕಾಗಿ ವಾರದಲ್ಲಿ ಅಗತ್ಯ ವ್ಯವಸ್ಥೆಯನ್ನು ಒದಗಿಸಬೇಕು ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಗೂ ಆದೇಶಿಸಿದೆ' ಎಂದು ಅರ್ಜಿದಾರರ ಪರ ವಕೀಲರಾದ ವಿಷ್ಣು ಶಂಕರ್ ಜೈನ್ ಅವರು ಸುದ್ದಿಗಾರರಿಗೆ ತಿಳಿಸಿದರು.

ಇದಕ್ಕೂ ಮೊದಲು ಮಸೀದಿಯ ನೆಲಮಹಡಿಯ ಭದ್ರತಾ ವ್ಯವಸ್ಥೆ ನಿರ್ವಹಣೆಯ ಹೊಣೆಯನ್ನು ವಾರಾಣಸಿ ಜಿಲ್ಲಾ ಆಡಳಿತದ ಸುಪರ್ದಿಗೆ ಕೋರ್ಟ್ ಒಪ್ಪಿಸಿತ್ತು. ಜಿಲ್ಲಾ ನ್ಯಾಯಾಧೀಶ ಅಜಯ್ ಕೃಷ್ಣ ವಿಶ್ವೇಶ್ ಅವರ ಆದೇಶವನ್ನು ಉಲ್ಲೇಖಿಸಿದ ವಕೀಲ ಜೈನ್ ಅವರು, 'ಈಗ ಯಾರು ಬೇಕಾದರೂ ನೆಲಮಹಡಿಗೆ ತೆರಳಿ ಪೂಜೆ ಸಲ್ಲಿಸಬಹುದು' ಎಂದು ಪ್ರತಿಪಾದಿಸಿದರು.

11ನೇ ಪುಟ ನೋಡಿ



ಇದು ಹಿತಾನುಭವದ ಆದೇಶ. ಕಾಶಿ ಮತ್ತು ಮಥುರಾದಲ್ಲಿಯೂ ದೇವಸ್ಥಾನಗಳನ್ನು 'ಮೂಲಸ್ಥಳದಲ್ಲಿಯೇ' ನಿರ್ಮಾಣ ಮಾಡಬೇಕು. ಅಲ್ಲಿ ಪೂಜೆ ಸಲ್ಲಿಸುವ ಹಕ್ಕು ಹಿಂದೂಗಳಿಗೆ ಸಿಗಬೇಕು
ಉಮಾ ಭಾರತಿ, ಬಿಜೆಪಿಯ ಹಿರಿಯ ನಾಯಕಿ

ಈ ಆದೇಶ ಒಂದು ಮೈಲಿಗಲ್ಲು. ಸಂತೋಷ ಪಡಬೇಕಾದ, ಹಿಂದೂಗಳಿಗೆ ಭಾವನಾತ್ಮಕವಾಗಿ ಪ್ರಮುಖವಾದ ದಿನ. ಹಿಂದೂ ಧರ್ಮೀಯರಿಗೆ ವಾರಾಣಸಿಗಿಂತಲೂ ಉತ್ತಮವಾದ ಸ್ಥಳ ಇನ್ನೊಂದಿಲ್ಲ
ಮೋಹನ್ ಯಾದವ್, ಮಧ್ಯಪ್ರದೇಶದ ಮುಖ್ಯಮಂತ್ರಿ

ಅಂಜುಮಾನ್ ಸಮಿತಿಗೆ ಹೈಕೋರ್ಟ್ ನೋಟಿಸ್

ಪ್ರಯಾಗ್‌ರಾಜ್ (ಪಿಟಿಐ): ಜ್ಞಾನವಾಪಿ ಮಸೀದಿಯ 'ವಜುಖಾನಾ' ಪ್ರದೇಶದ ಸಮೀಕ್ಷೆ ನಡೆಸಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ನಿರ್ದೇಶನ ನೀಡಲು ನಿರಾಕರಿಸಿದ ವಾರಾಣಸಿ ಕೋರ್ಟ್ ನಿರ್ಧಾರ ಪ್ರಶ್ನಿಸಿದ್ದ ಅರ್ಜಿಗೆ ಸಂಬಂಧಿಸಿ ಅಲಹಾಬಾದ್ ಹೈಕೋರ್ಟ್ ಬುಧವಾರ ಅಂಜುಮಾನ್ ಇಂತೆಜಾಮಿಯಾ ಸಮಿತಿಗೆ ನೋಟಿಸ್ ನೀಡಿದೆ.

ಶೃಂಗಾರ ಗೌರಿ ಪೂಜಾ ಮೊಕದ್ದಮೆಯ ಅರ್ಜಿದಾರರಲ್ಲಿ ಒಬ್ಬರಾದ ರಾಖಿ ಸಿಂಗ್ ಅವರ ಪರಿಷ್ಕೃತ ಅರ್ಜಿಗೆ ಸಂಬಂಧಿಸಿ ನ್ಯಾಯಮೂರ್ತಿ ರೋಹಿತ್ ರಂಜನ್ ಅಗರವಾಲ್ ಈ ಕುರಿತು ಆದೇಶ ನೀಡಿದರು.

ಅರ್ಜಿದಾರ ಮಹಿಳೆಯು, 'ಶಿವಲಿಂಗ' ಪತ್ತೆಯಾಗಿದ್ದ ಸ್ಥಳ ಹೊರತುಪಡಿಸಿ ಮಸೀದಿಯ ವಜುಖಾನಾ ವಲಯದ ಸಮೀಕ್ಷೆ ನಡೆಸಬೇಕು ಎಂದು ಈ ಮೊದಲು ವಾರಾಣಸಿ ಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯಲ್ಲಿ ಪ್ರತಿಪಾದಿಸಿದ್ದರು. ಜಿಲ್ಲಾ ಕೋರ್ಟ್ ಇದನ್ನು ತಿರಸ್ಕರಿಸಿತ್ತು.

11ನೇ ಪುಟ ನೋಡಿ

'ವಿರೋಧ ಪಕ್ಷಗಳ ಜೊತೆಗೆ ನಂಟು ಹೊಂದಿರುವುದಾಗಿ ಹೇಳಲು ಒತ್ತಡ'

ಸಂಸತ್ ಭದ್ರತಾ ಲೋಪ

ನವದೆಹಲಿ (ಪಿಟಿಐ): ಸಂಸತ್ತಿನ ಭದ್ರತಾ ಲೋಪ ಪ್ರಕರಣದಲ್ಲಿ ಬಂಧಿತರಾಗಿರುವ ಆರು ಆರೋಪಿಗಳ ಪೈಕಿ ಐವರು, ವಿರೋಧ ಪಕ್ಷಗಳ ಜತೆ ತಮಗೆ ನಂಟು ಇದೆ ಎಂಬುದಾಗಿ ಒಪ್ಪಿಕೊಳ್ಳುವಂತೆ ದೆಹಲಿ ಪೊಲೀಸರು ಕಿರುಕುಳ ನೀಡಿದ್ದಾರೆ ಎಂದು ನ್ಯಾಯಾಲಯಕ್ಕೆ ಬುಧವಾರ ತಿಳಿಸಿದ್ದಾರೆ.

ಮನೋರಂಜನ್ ಡಿ., ಸಾಗರ್ ಶರ್ಮ, ಲಲಿತ್ ಝಾ, ಅಮೋಲ್ ಶಿಂದೆ ಮತ್ತು ಮಹೇಶ್ ಕುಮಾವತ್ ಅವರು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ಹರದೀಪ್ ಕೌರ್ ಅವರ ಎದುರು ಪೊಲೀಸರ ವಿರುದ್ಧ ಈ ಆರೋಪ ಹೊರಿಸಿದ್ದಾರೆ. ನ್ಯಾಯಾಧೀಶರು ಆರೂ ಮಂದಿಯ ನ್ಯಾಯಾಂಗ ಬಂಧನ ಅವಧಿಯನ್ನು ಮಾರ್ಚ್ 1ರವರೆಗೆ ವಿಸ್ತರಿಸಿದ್ದಾರೆ. ಸರಿಸುಮಾರು 70 ಖಾಲಿ ಹಾಳೆಗಳ ಮೇಲೆ ಸಹಿ ಹಾಕುವಂತೆ ತಮ್ಮ ಮೇಲೆ ಒತ್ತಡ ತರಲಾಗಿದೆ ಎಂದು ಕೂಡ ಅವರು ತಿಳಿಸಿದ್ದಾರೆ.

'ಆರೋಪಿಗಳಿಗೆ ಕಿರುಕುಳ ನೀಡಲಾಗಿದೆ, ಅವರಿಗೆ ಸಹಿ ಹಾಕುವಂತೆ, ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆಯ ಅಡಿ ತಾವು ತಪ್ಪು ಮಾಡಿರುವುದಾಗಿ ಮತ್ತು ರಾಷ್ಟ್ರೀಯ ಪಕ್ಷಗಳ ಜೊತೆ ನಂಟು ಇದೆ ಎಂಬುದಾಗಿ ಒಪ್ಪಿಕೊಳ್ಳುವಂತೆ ಮಾಡಲು ವಿದ್ಯುತ್ ಶಾಕ್ ನೀಡಲಾಗಿದೆ. ರಾಜಕೀಯ ಪಕ್ಷ/ವಿರೋಧ ಪಕ್ಷದ ನಾಯಕನ ಜೊತೆ ತಮಗೆ ನಂಟು ಇದೆ ಎಂಬುದನ್ನು ಹಾಳೆಯ ಮೇಲೆ ಬರೆಯಲು ಇಬ್ಬರು ಆರೋಪಿಗಳ ಮೇಲೆ ಒತ್ತಡ ತರಲಾಗಿದೆ' ಎಂದು ಆರೋಪಿಗಳು ಒಟ್ಟಾಗಿ ಸಲ್ಲಿಸಿರುವ ಅರ್ಜಿಯಲ್ಲಿ ಹೇಳಲಾಗಿದೆ.

10ನೇ ಪುಟ ನೋಡಿ

ಆರ್ಥಿಕ ಪರಿಸ್ಥಿತಿ: ಬಿಜೆಪಿ ಇಕ್ಕಟ್ಟಿಗೆ ಸಿಲುಕಿಸಲು ಸಿ.ಎಂ ತಂತ್ರ

'ಶ್ವೇತ ಪತ್ರ'ಕ್ಕೆ ಸರ್ಕಾರ ತಯಾರಿ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: 'ಗ್ಯಾರಂಟಿಗಳ ಜಾರಿಯಿಂದ ರಾಜ್ಯ ಆರ್ಥಿಕ ದಿವಾಳಿಯತ್ತ ಸಾಗಿದೆ' ಎಂಬ ಬಿಜೆಪಿ ಟೀಕೆಗೆ ಪ್ರತಿಯೇಟು ಕೊಡಲು ಮುಂದಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಿಂದಿನ ಐದು ವರ್ಷಗಳಲ್ಲಿ ವಿತ್ತೀಯ ಶಿಸ್ತು ಉಲ್ಲಂಘನೆ ಹಾಗೂ ಕೇಂದ್ರದ ಅನುದಾನದಲ್ಲಿನ ಕಡಿತದ ಕುರಿತು 'ಶ್ವೇತಪತ್ರ' ಮಂಡಿಸಲು ತಯಾರಿ ನಡೆಸಿದ್ದಾರೆ.



2018ರಲ್ಲಿ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾದ ಬಳಿಕ ಹಾಗೂ ಬಿಜೆಪಿ ಸರ್ಕಾರದ ಅವಧಿಯಲ್ಲಿ ವಿತ್ತೀಯ ಶಿಸ್ತು ಉಲ್ಲಂಘನೆ ಹೇಗೆ ಆಗಿದೆ? ಕೇಂದ್ರ ಸರ್ಕಾರ ಯಾವ್ಯಾವ ಬಾಬ್ತಿನಲ್ಲಿ ಎಷ್ಟು ಕಡಿತ ಮಾಡಿದೆ ಎಂಬ ವಿವರವನ್ನು 'ಶ್ವೇತಪತ್ರ' ಒಳಗೊಂಡಿರಲಿದೆ ಎಂದು ಹಣಕಾಸು ಇಲಾಖೆ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಮುಖ್ಯಮಂತ್ರಿ ಸೂಚನೆಯಂತೆ ಅವರ ಸಚಿವಾಲಯದ ಅಧಿಕಾರಿಗಳು ಮತ್ತು ಹಣಕಾಸು ಇಲಾಖೆಯ ಹಿರಿಯ ಅಧಿಕಾರಿಗಳು ಶ್ವೇತಪತ್ರಕ್ಕೆ ಅಗತ್ಯವಿರುವ ಮಾಹಿತಿಗಳನ್ನು ಸಂಗ್ರಹಿಸುತ್ತಿದ್ದಾರೆ. ಫೆಬ್ರುವರಿ 12ರಿಂದ ಆರಂಭವಾಗುವ ವಿಧಾನಮಂಡಲ ಅಧಿವೇಶನದಲ್ಲೇ ಶ್ವೇತಪತ್ರವನ್ನು ಪ್ರಕಟಿಸುವ ಸಾಧ್ಯತೆ ಇದೆ ಎಂದೂ ಮೂಲಗಳು ಹೇಳಿವೆ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದ ಆರ್ಥಿಕ ಪರಿಸ್ಥಿತಿ ಕುಸಿದಿದೆ ಎಂದು ಆರೋಪಿಸಿದ್ದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶ್ವೇತಪತ್ರ ಪ್ರಕಟಿಸುವಂತೆ ಆಗ್ರಹಿಸಿದ್ದರು. ಈ ಸವಾಲನ್ನು ಸ್ವೀಕರಿಸಿರುವ ಮುಖ್ಯಮಂತ್ರಿ, ಶ್ವೇತಪತ್ರ ಸಿದ್ಧಪಡಿಸಲು ಸೂಚಿಸಿದ್ದಾರೆ.

7ನೇ ಪುಟ ನೋಡಿ

ವಿತ್ತೀಯ ಶಿಸ್ತು ಉಲ್ಲಂಘನೆಯ ಪಟ್ಟಿ

ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಮತ್ತು ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಲೋಕೋಪಯೋಗಿ, ಜಲ ಸಂಪನ್ಮೂಲ, ಸಣ್ಣ ನೀರಾವರಿ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ವಿತ್ತೀಯ ಶಿಸ್ತು ಉಲ್ಲಂಘಿಸಿ ಲಕ್ಷಾಂತರ ಕೋಟಿ ರೂಪಾಯಿ ಮೊತ್ತದ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿತ್ತು.

2022–23ರ ಅಂತ್ಯಕ್ಕೆ ರಾಜ್ಯದಲ್ಲಿ ₹ 2.55 ಲಕ್ಷ ಕೋಟಿ ಮೊತ್ತದ ಕಾಮಗಾರಿಗಳು ಬಾಕಿ ಉಳಿದಿದ್ದವು. ಈ ಅವಧಿಯಲ್ಲಿ ವಿತ್ತೀಯ ಶಿಸ್ತು ಉಲ್ಲಂಘಿಸಿ ಮಂಜೂರಾತಿ ನೀಡಿದ ಕಾಮಗಾರಿಗಳ ವಿವರಗಳನ್ನು ಶ್ವೇತಪತ್ರ ಒಳಗೊಂಡಿರಲಿದೆ ಎಂದು ಮೂಲಗಳು ಹೇಳಿವೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ



ಕೆಪಿಎಸ್‌ಸಿ ಕಲಹ: ಕಾರ್ಯದರ್ಶಿಯಿಂದ ಸಭೆ, ನಾಲ್ವರು ಸದಸ್ಯರಿಂದ ಅನುಮೋದನೆ

ಅಧ್ಯಕ್ಷರಿಗೆ ಸಡ್ಡು, ಆಯ್ಕೆ ಪಟ್ಟಿಗೆ ಅಸ್ತು

• ರಾಜೇಶ್ ರೈ ಚಟ್ಲ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ಅಧ್ಯಕ್ಷ ಮತ್ತು ಕಾರ್ಯದರ್ಶಿಯ ನಡುವೆ ನಡೆಯುತ್ತಿರುವ ಸಂಘರ್ಷ ತಾರಕಕ್ಕೆ ಏರಿದೆ. ಅಧ್ಯಕ್ಷರ ಸೂಚನೆಯನ್ನು ಧಿಕ್ಕರಿಸಿರುವ ಕಾರ್ಯದರ್ಶಿ ಕೆ.ಎಸ್. ಲತಾ ಕುಮಾರಿ ಅವರು ಆಯೋಗದ ಸಭೆ ನಡೆಸಿ, ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದ ವಿವಿಧ ಇಲಾಖೆಗಳ ಒಟ್ಟು 666 ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಗೆ ಅನುಮೋದನೆ ಪಡೆದುಕೊಂಡಿದ್ದಾರೆ.

'ಕರ್ತವ್ಯಲೋಪ ಮತ್ತು ಅಧಿಕಾರ ದುರುಪಯೋಗ, ದುರ್ನಡತೆ ತೋರಿಸಿರುವ ಅಧ್ಯಕ್ಷರು ಮತ್ತು ನಾಲ್ವರು ಸದಸ್ಯರ (ವಿಜಯಕುಮಾರ್ ಡಿ. ಕುಚನೂರೆ, ಎಂ.ಬಿ. ಹೆಗ್ಗಣ್ಣವರ, ಬಿ.ವಿ. ಗೀತಾ, ಮುಸ್ತಫಾ ಹುಸೇನ್ ಸಯ್ಯದ್ ಅಜೀಜ್) ಸದಸ್ಯತ್ವ ರದ್ದುಪಡಿಸಲು ಸೂಕ್ತ ಕ್ರಮ ವಹಿಸಬೇಕು' ಎಂದು ಕೋರಿ ರಾಜ್ಯಪಾಲರಿಗೆ ಪತ್ರ ಬರೆದ ಬೆನ್ನಲ್ಲೆ, ಕಾರ್ಯದರ್ಶಿಯವರು ಆಯೋಗದ ಸಭೆಯನ್ನು ಬುಧವಾರ ನಡೆಸಿದ್ದಾರೆ.

ಕಾರ್ಯದರ್ಶಿಯ ಸಲಹೆಯಂತೆ ಆಯೋಗದ ಹಿರಿಯ ಸದಸ್ಯ ರೊನಾಲ್ಡ್ ಅನಿಲ್ ಫರ್ನಾಂಡಿಸ್ ಅಧ್ಯಕ್ಷತೆಯಲ್ಲಿ ಬುಧವಾರ ಬೆಳಿಗ್ಗೆ 11 ಗಂಟೆಗೆ ಸಭೆ ನಡೆದಿದೆ. ಸದಸ್ಯರಾದ ಆರ್. ಗಿರೀಶ್, ಬಿ. ಪ್ರಭುದೇವ ಮತ್ತು ಶಾಂತಾ ಹೊಸಮನಿ ಈ ಸಭೆಗೆ ಹಾಜರಾಗಿದ್ದರು. ತಮ್ಮ ಕಚೇರಿಯಲ್ಲಿಯೇ ಇದ್ದ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಮತ್ತು ಕೆಲವು ಸದಸ್ಯರು ಹಾಜರಾಗಲಿಲ್ಲ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿನ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) (ಗ್ರೇಡ್–1) ಹುದ್ದೆಗಳ ಆಯ್ಕೆ ಪಟ್ಟಿಯೂ ಸೇರಿದಂತೆ ವಿವಿಧ ಇಲಾಖೆಗಳ ಒಟ್ಟು ಒಂಬತ್ತು ನೇಮಕಾತಿ ಅಧಿಸೂಚನೆಗಳ ಅಂತಿಮ ಆಯ್ಕೆ ಪಟ್ಟಿಗೆ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಎಇಇ ತಾತ್ಕಾಲಿಕ ಪಟ್ಟಿಗೆ ಸಲ್ಲಿಕೆಯಾಗಿದ್ದ ಆಕ್ಷೇಪಣೆಗಳ ಪರಿಶೀಲನೆಗೆ ಸದಸ್ಯರಾದ ಶಾಂತಾ ಹೊಸಮನಿ ಅಧ್ಯಕ್ಷತೆಯಲ್ಲಿ ಉಪ ಸಮಿತಿ ರಚಿಸಲಾಗಿತ್ತು. ಸಭೆಯಲ್ಲಿದ್ದ ಅವರ ಅಭಿಪ್ರಾಯ ಮತ್ತು ಪತ್ರ ಪಡೆದು ಎಇಇ ಪಟ್ಟಿಗೆ ಅನುಮೋದನೆ ನೀಡಲಾಗಿದೆ ಎಂದು ಮೂಲಗಳು ಹೇಳಿವೆ.

11ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

ಕಾರ್ಯದರ್ಶಿ ವರ್ಗಾವಣೆಗೆ ಯತ್ನ?

ಈ ಮಧ್ಯೆ, ಕಾರ್ಯದರ್ಶಿಯನ್ನು ವರ್ಗಾವಣೆ ಮಾಡಲು ತೆರೆಮರೆಯಲ್ಲಿ ತೀವ್ರ ಯತ್ನ ನಡೆಯುತ್ತಿದೆ ಎಂದು ಗೊತ್ತಾಗಿದೆ. ಕಾರ್ಯದರ್ಶಿಯಾಗಿದ್ದ ವಿಕಾಸ್ ಕಿಶೋರ್ ಸುರಳ್ಕರ್ ಅವರನ್ನೂ ಸರ್ಕಾರದ ಮೇಲೆ ಒತ್ತಡ ತಂದು ವರ್ಗಾವಣೆ ಮಾಡಲಾಗಿತ್ತು. ಇದೀಗ ಲತಾ ಕುಮಾರಿ ಅವರನ್ನೂ ವರ್ಗಾವಣೆ ಮಾಡಲು ಪ್ರಯತ್ನಗಳು ನಡೆಯುತ್ತಿವೆ. ಮುಖ್ಯ ಕಾರ್ಯದರ್ಶಿ, ಡಿಪಿಎಆರ್ ಕಾರ್ಯದರ್ಶಿ, ಕೆಲವು ಸಚಿವರನ್ನು ಭೇಟಿ ಮಾಡಿರುವ ಕೆಲವರು ಈ ಯತ್ನ ಮುಂದುವರಿಸಿದ್ದಾರೆ. ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಕೆಲವು ಸದಸ್ಯರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಇತ್ತೀಚೆಗೆ ಭೇಟಿ ಮಾಡಿ ಕೆಪಿಎಸ್‌ಸಿಯಲ್ಲಿನ ಬೆಳವಣಿಗೆಗಳ ಬಗ್ಗೆ ವಿವರಿಸಿದ್ದರು.

ಕಾರ್ಯದರ್ಶಿಯ ವರ್ಗಾವಣೆ ಮಾಡಬೇಕೆಂಬ ಬೇಡಿಕೆಗೆ ಮುಖ್ಯಮಂತ್ರಿ ಸಕಾರಾತ್ಮಕವಾಗಿ ಸ್ಪಂದಿಸಿಲ್ಲ ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ತಿಳಿಸಿವೆ.

ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

‘ದೇಗುಲಗಳಲ್ಲಿ ವಸ್ತ್ರಸಂಹಿತೆ: ತೀರ್ಮಾನವಾಗಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಸ್ಥಾನಗಳಲ್ಲಿ ವಸ್ತ್ರಸಂಹಿತೆ ಜಾರಿ ಮಾಡುವ ಕುರಿತು ಸರ್ಕಾರ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜೀವಮಾನ ಸಾಧನೆಯ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಿ ಅವರು ಮಾತನಾಡಿದರು.

‘ಎಲ್ಲರ ನಂಬಿಕೆಗಳನ್ನೂ ಗೌರವಿಸುತ್ತೇವೆ. ದೇವಸ್ಥಾನಕ್ಕೆ ಹೋಗುವವರು ಅವರ ಇಷ್ಟದ ಉಡುಪು ಧರಿಸಿಯೇ ಹೋಗಬಹುದು. ಈ ವಿಚಾರದಲ್ಲಿ ರಾಜ್ಯ ಸರ್ಕಾರದ ಅಭ್ಯಂತರ ಇಲ್ಲ’ ಎಂದರು.

ಮುಖ್ಯಾಂಶಗಳು

- ಪ್ರಶಸ್ತಿಗಳ ಆಯ್ಕೆಯಲ್ಲಿ ಆಯ್ಕೆ ಸಮಿತಿ ನಿರ್ಣಯವೇ ಅಂತಿಮ – ಸಿ.ಎಂ
- ಸರ್ಕಾರವನ್ನು ಟೀಕಿಸಿದರೆ ದೇಶದ್ರೋಹಿ ಪಟ್ಟ – ಸಾಹಿತಿ ಕೆ.ಮರುಳಸಿದ್ದಪ್ಪ
- ಸಂಸ್ಕೃತಿ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ರಾಜಕಾರಣ ಸಲ್ಲದು – ಶಿವರಾಜ ತಂಗಡಗಿ

‘ದೇವರು, ಧರ್ಮದ ಬಗ್ಗೆ ಯಾರ ನಂಬಿಕೆಯಿದ್ದರೂ ಎಲ್ಲರೂ ಮೊದಲು ಮನುಷ್ಯರಾಗಬೇಕು. ಮನುಷ್ಯ ಮನುಷ್ಯರನ್ನು ದ್ವೇಷಿಸಬಾರದು. ಇದೇ ಅತ್ಯುನ್ನತ ಮೌಲ್ಯ’ ಎಂದು ಪ್ರತಿಪಾದಿಸಿದರು.

‘ಪ್ರಶಸ್ತಿಗಳನ್ನು ಆಯಾ ವರ್ಷವೇ ಪ್ರದಾನ ಮಾಡಬೇಕು. ಹಿಂದಿನ ನಾಲ್ಕು ವರ್ಷ ಪ್ರಶಸ್ತಿಯನ್ನೇ ಪ್ರದಾನ ಮಾಡಿರಲಿಲ್ಲ. ಪ್ರಶಸ್ತಿಗಳ ಆಯ್ಕೆಯಲ್ಲಿ ಆಯ್ಕೆ ಸಮಿತಿ ನಿರ್ಣಯವೇ ಅಂತಿಮ’ ಎಂದು ಹೇಳಿದರು.

ಸಂಗೊಳ್ಳಿ ರಾಯಣ್ಣ ಪ್ರಶಸ್ತಿ ಸ್ವೀಕರಿಸಿ ಸಾಹಿತಿ ಕೆ.ಮರುಳಸಿದ್ದಪ್ಪ ಮಾತನಾಡಿ, ಅಕಾಡೆಮಿ ಹಾಗೂ ಪ್ರಾಧಿಕಾರಕ್ಕೆ ಶೀಘ್ರದಲ್ಲೇ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಕ ಮಾಡುವಂತೆ ಮನವಿ ಮಾಡಿದರು.

75 ಮಂದಿಗೆ ಪ್ರಶಸ್ತಿ ಪ್ರದಾನ

2020-21ರಿಂದ 2023-24ನೇ ಸಾಲಿನ ಬಸವ ರಾಷ್ಟ್ರೀಯ ಪುರಸ್ಕಾರ, ಶ್ರೀಭಗವಾನ್ ಮಹಾವೀರ ಶಾಂತಿ ರಾಷ್ಟ್ರೀಯ ಪ್ರಶಸ್ತಿ, ಟಿ.ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ, ಪಂಡಿತ್ ಪಂಚಾಕ್ಷರಿ ಗವಾಯಿ ಪ್ರಶಸ್ತಿ, ಸಂಗೊಳ್ಳಿ ರಾಯಣ್ಣ ಪ್ರಶಸ್ತಿ, ಅಕ್ಕಮಹಾದೇವಿ ಪ್ರಶಸ್ತಿ, ಕನಕಶ್ರೀ ಪ್ರಶಸ್ತಿ, ಪಂಪ ಪ್ರಶಸ್ತಿ, ಶ್ರೀನಿಜಗುಣ ಪುರಂದರ ಪ್ರಶಸ್ತಿ, ಕುಮಾರವ್ಯಾಸ ಪ್ರಶಸ್ತಿ, ಶಾಂತಲಾನಾಟ್ಯ ರಾಣಿ ಪ್ರಶಸ್ತಿ, ಸಂತ ಶಿಶುನಾಳ ಷರೀಫ ಪ್ರಶಸ್ತಿ, ಪ್ರೊ.ಕೆ.ಜಿ. ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ, ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ಬಿ.ವಿ.ಕಾರಂತ ಪ್ರಶಸ್ತಿ, ಡಾ.ಗುಬ್ಬಿ ವೀರಣ್ಣ ಪ್ರಶಸ್ತಿ, ಡಾ.ಸಿದ್ದಲಿಂಗಯ್ಯ ಸಾಹಿತ್ಯ ಪ್ರಶಸ್ತಿ, ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ, ಜಾನಪದಶ್ರೀ ಪ್ರಶಸ್ತಿ ಪುರಸ್ಕೃತರಾದ ಒಟ್ಟು 75 ಮಂದಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

‘ಮೈತುಂಬ ಬಟ್ಟೆ ಧರಿಸಿ ದೇವಸ್ಥಾನಗಳಿಗೆ ಹೋಗಬೇಕು ಎಂಬುದು ಒಳ್ಳೆಯ ವಿಚಾರ. ಆದರೆ, ನಿರ್ದಿಷ್ಟ ಉಡುಪನ್ನೇ ಧರಿಸಿ ಬರಬೇಕು ಎಂದು ಸೂಚಿಸುವುದು ಸರಿಯಲ್ಲ. ಅದು ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾದ ನಡೆ’ ಎಂದು ಹೇಳಿದರು.

‘ಯಾರು ದೇಶ ಪ್ರೇಮಿ, ಯಾರು ದೇಶ ದ್ರೋಹಿ ಎಂಬುದನ್ನು ಜನರು ನಿರ್ಧರಿಸಬೇಕು. ಆದರೆ, ಆಡಳಿತದಲ್ಲಿ ಇದ್ದವರೇ ನಿರ್ಧಾರ ಮಾಡುತ್ತಿದ್ದಾರೆ. ಸರ್ಕಾರವನ್ನು ಟೀಕಿಸಿದರೆ ದೇಶದ್ರೋಹಿ ಪಟ್ಟ ಕಟ್ಟಲಾಗುತ್ತಿದೆ’ ಎಂದರು.

ಬಸವ ರಾಷ್ಟ್ರೀಯ ಪುರಸ್ಕಾರ ಸ್ವೀಕರಿಸಿದ ಆನಂದ ತೇಲ್ತುಂಬ್ಡೆ ಮಾತನಾಡಿ, ‘ಕರ್ನಾಟಕವು ನನಗೆ ಪ್ರಶಸ್ತಿ ನೀಡಿ ಗೌರವಿಸಿದ್ದು ಹೆಮ್ಮೆ ಹಾಗೂ ಸಂತೋಷ ತಂದಿದೆ’ ಎಂದು ಹೇಳಿದರು.

ಕನ್ನಡ ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಮಾತನಾಡಿ, ‘ಹಿಂದಿನ ಸರ್ಕಾರ ನಾಲ್ಕು ವರ್ಷದ ಪ್ರಶಸ್ತಿಯನ್ನೇ ಪ್ರದಾನ ಮಾಡಿರಲಿಲ್ಲ. ಅವರು ಆಯ್ಕೆ ಮಾಡಿದ್ದ ಸಾಧಕರನ್ನೇ ಈಗ ಗೌರವಿಸಿದ್ದೇವೆ. ಸಂಸ್ಕೃತಿ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ರಾಜಕಾರಣ ಬೆರೆಸಬಾರದು’ ಎಂದರು.

₹7,500 ಪಿಂಚಣಿಗೆ ಆಗ್ರಹ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಪಿಎಸ್– 95 ಪಿಂಚಣಿದಾರರಿಗೆ ಮಾಸಿಕ ಕನಿಷ್ಠ ₹7,500 ಪಿಂಚಣಿ ನೀಡಬೇಕು ಹಾಗೂ ಉಚಿತ ವೈದ್ಯಕೀಯ ಸೌಲಭ್ಯ ಕಲ್ಪಿಸಬೇಕು’ ಎಂದು ಒತ್ತಾಯಿಸಿ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಪದಾಧಿಕಾರಿಗಳು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ರಿಚ್ಮಂಡ್ ವೃತ್ತದಲ್ಲಿರುವ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರ ಕಚೇರಿ ಎದುರು ಸೇರಿದ್ದ ಪ್ರತಿಭಟನಕಾರರು, ತಮ್ಮ ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು.

‘ಬೇಡಿಕೆ ಈಡೇರಿಕೆಗಾಗಿ ಹಲವು ವರ್ಷಗಳಿಂದ ಹೋರಾಟ ಮಾಡಲಾಗುತ್ತಿದೆ. ಪ್ರಧಾನ ಮಂತ್ರಿ ಹಾಗೂ ಸಚಿವರಿಗೂ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಬೇಡಿಕೆ ಈಡೇರಿಕೆಯ ಭರವಸೆ ಮಾತ್ರ ಸಿಕ್ಕಿದ್ದು, ಇದುವರೆಗೂ ಈಡೇರಿಲ್ಲ’ ಎಂದು ಪ್ರತಿಭಟನಕಾರರು ಅಸಮಾಧಾನ ವ್ಯಕ್ತಪಡಿಸಿದರು.

‘ಮುಂಬರುವ ಬಜೆಟ್ ನಲ್ಲಾದರೂ ನಮ್ಮ ಬೇಡಿಕೆ ಈಡೇರಿಸಬೇಕು. ಇಲ್ಲದಿದ್ದರೆ, ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು’ ಎಂದು ಅವರು ಎಚ್ಚರಿಸಿದರು.

ಸಾಮಾಜಿಕ ಹೋರಾಟಗಳಿಗೆ ಪ್ರಚಾರದ ಕೊರತೆ

ವಿಚಾರ ಸಂಕಿರಣದಲ್ಲಿ ಡಿಎಸ್‌ಎಸ್ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಹೋರಾಟಗಳು ಇಂದಿಗೂ ಜಾಗೃತವಾಗಿವೆ. ಆದರೆ, ಮಾಧ್ಯಮಗಳಲ್ಲಿ ಅವುಗಳ ಪ್ರಚಾರಕ್ಕೆ ಅವಕಾಶ ಸಿಗುತ್ತಿಲ್ಲ. ಬಂಡವಾಳಶಾಹಿಗಳ ಕಪಿಮುಷ್ಟಿಯಲ್ಲಿ ಮಾಧ್ಯಮಗಳಿರುವುದೇ ಇದಕ್ಕೆ ಕಾರಣ ಎಂದು ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ವಿಷಾದಿಸಿದರು.

ಮೂಕನಾಯಕ ಪತ್ರಿಕೆಯ 104 ನೇ ವರ್ಷಾಚರಣೆ ಪ್ರಯುಕ್ತ ಬೆಂಗಳೂರು ವಿಶ್ವವಿದ್ಯಾಲಯದ ಬಾಬಾ ಸಾಹೇಬ್ ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಅಂಬೇಡ್ಕರ್‌ವಾದ ಮಾಸ ಪತ್ರಿಕೆ ಜಂಟಿಯಾಗಿ ಆಯೋಜಿಸಿದ್ದ ‘ತಳಸಮುದಾಯಗಳು ಮತ್ತು ಮುಖ್ಯವಾಹಿನಿ ಮಾಧ್ಯಮ ಅಂದು– ಇಂದು’ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಅನಕ್ಷರಸ್ಥರೇ ಅಧಿಕವಿದ್ದ ಕಾಲದಲ್ಲಿ ಅಂಬೇಡ್ಕರ್ ಪತ್ರಿಕೆ ನಡೆಸಿದ್ದರು. ಈಗ ವಿದ್ಯಾವಂತರು, ಸಂಪನ್ಮೂಲ ಹೊಂದಿದವರು ಹೆಚ್ಚಿದ್ದರೂ ಜನಪರವಾದ ಪತ್ರಿಕೆಯನ್ನು ಹೊಂದಲು ತಳಸಮುದಾಯಗಳಿಗೆ ಸಾಧ್ಯವಾಗಿಲ್ಲ. ಹಿಂದೆ ವಿಶ್ವವಿದ್ಯಾಲಯಗಳಲ್ಲಿ ಇರುತ್ತಿದ್ದ ಚಿಂತಕರು ಸಾಮಾಜಿಕ ಹೋರಾಟಗಳಲ್ಲಿ ಭಾಗಿಯಾಗುತ್ತಿದ್ದರು. ಈಗ ಹೋರಾಟಗಳಿಂದ ಚಿಂತಕರು ದೂರ ಸರಿಯುತ್ತಿದ್ದಾರೆ ಎಂದು ಬೇಸರಿಸಿದರು.



‘ತಳಸಮುದಾಯಗಳು ಮತ್ತು ಮುಖ್ಯವಾಹಿನಿ ಮಾಧ್ಯಮ ಅಂದು ಇಂದು’ ವಿಚಾರ ಸಂಕಿರಣದಲ್ಲಿ ‘ಅಂಬೇಡ್ಕರ್ ವಾದ’ ಮಾಸಪತ್ರಿಕೆಯ ಸಂಚಿಕೆ ಬಿಡುಗಡೆ ಮಾಡಲಾಯಿತು. ಚಿಂತಕಿ ಶಾರದಾ, ಅಂಬೇಡ್ಕರ್‌ವಾದ ಮಾಸಪತ್ರಿಕೆಯ ಸಂಪಾದಕ ರವಿಕುಮಾರ್ ಬಾಗಿ, ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಸಂಶೋಧನಾ ಕೇಂದ್ರದ ನಿರ್ದೇಶಕ ಹೊನ್ನು ಸಿದ್ಧಾರ್ಥ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ಚಿಂತಕ ಶ್ರೀಪಾದ್ ಭಟ್, ಕೌದಿ ಪ್ರಕಾಶನದ ಮಮತಾ ಕೆ.ಎನ್. ಭಾಗವಹಿಸಿದ್ದರು.

ಅಂಬೇಡ್ಕರ್‌ವಾದ ಮಾಸಪತ್ರಿಕೆಯ ಸಂಪಾದಕ ರವಿಕುಮಾರ್ ಬಾಗಿ ಮಾತನಾಡಿ, ‘ಬಾಬಾ ಸಾಹೇಬ್ ಅಂಬೇಡ್ಕರ್ ಸಂವಿಧಾನ ಶಿಲ್ಪಿ, ಸಮಾಜ ಸುಧಾರಕ, ಅರ್ಥಶಾಸ್ತ್ರಜ್ಞ, ರಾಜಕೀಯ ತಜ್ಞ ಮಾತ್ರವಲ್ಲ, ದೇಶ ಕಂಡ ಬಹುದೊಡ್ಡ ಮಹಿಳಾವಾದಿ ಹಾಗೂ ಧೀಮಂತ ಪತ್ರಕರ್ತ’ ಎಂದು ಬಣ್ಣಿಸಿದರು.

ಪತ್ರಿಕಾ ವೃತ್ತಿ ನ್ಯಾಯೋಚಿತವಾಗಿರಬೇಕು, ಪೂರ್ವಗ್ರಹ ಇರಬಾರದು. ಪತ್ರಕರ್ತರು ನೈತಿಕ ಮೌಲ್ಯವನ್ನು ಹೊಂದಿರಬೇಕು. ನಿರ್ಭಯರಾಗಿರಬೇಕು. ಸಮಾಜದ ಹಿತಕಾಯುವವರಾಗಿಬೇಕು. ವ್ಯಕ್ತಿ ಪೂಜೆಗೆ ಅವಕಾಶ ಇರಬಾರದು ಎಂದು ಅಂಬೇಡ್ಕರ್ ಅಂದೇ ಆಶಯ ವ್ಯಕ್ತಪಡಿಸಿದ್ದರು ಎಂದು ನೆನಪು ಮಾಡಿಕೊಂಡರು.

ಚಿಂತಕ ಶ್ರೀಪಾದ್ ಭಟ್ ಮಾತನಾಡಿ, ‘ಅಂಬೇಡ್ಕರ್ ಅವರನ್ನು ಮತ್ತೆ ಅನುಸಂಧಾನ ಮಾಡಬೇಕಿದೆ. ಜ್ಯೋತಿ ಬಾಪುಲೆ ಮತ್ತು ಅಂಬೇಡ್ಕರ್ ಜಾತಿವಿನಾಶದ ವಿಚಾರದಲ್ಲಿ ಸಾಮ್ಯತೆ ಸಾಧಿಸಿದ್ದರು’ ಎಂದು ಆಶಿಸಿದರು.

ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಸಂಶೋಧನಾ ಕೇಂದ್ರದ ನಿರ್ದೇಶಕ ಹೊನ್ನು ಸಿದ್ಧಾರ್ಥ ಅಧ್ಯಕ್ಷತೆ ವಹಿಸಿ ಮಾತನಾಡಿ, ‘ಮೂಕನಾಯಕ ಪತ್ರಿಕೆಗೆ ದೇಣಿಗೆ ನೀಡಿ ಬಾಬಾ ಸಾಹೇಬರ ಬೆನ್ನಿಗೆ ನಿಂತವರು ಶಾಹು ಮಹಾರಾಜರು’ ಎಂದು ನೆನಪು ಮಾಡಿಕೊಂಡರು.

‘ಮೂಕ ನಾಯಕ’, ‘ಬಹಿಷ್ಕೃತ ಭಾರತ’, ‘ಸಮತಾ’, ‘ಜನತಾ’, ‘ಪ್ರಬುದ್ಧ ಭಾರತ’ ಇವು ಕ್ರಮವಾಗಿ ಅಂಬೇಡ್ಕರ್ ನಡೆಸಿದ ಪತ್ರಿಕೆಗಳು. ಈ ಹೆಸರುಗಳೇ ಅಂಬೇಡ್ಕರ್ ಅವರ ವೈಚಾರಿಕ ಪ್ರಜ್ಞೆ ವಿಸ್ತರಿಸುತ್ತಾ ವಿಕಾಸವಾಗಿರುವುದನ್ನು ಪ್ರತಿಬಿಂಬಿಸುತ್ತದೆ ಎಂದು ವಿಶ್ಲೇಷಿಸಿದರು.

ಪತ್ರಿಕೋದ್ಯಮದಲ್ಲಿ ಮಹಿಳೆಯರ ಸಂಖ್ಯೆ ಬಹಳ ಕಡಿಮೆ ಇದೆ. ಲಿಂಗ ತಾರತಮ್ಯದ ಸಮಸ್ಯೆ ಮಾಧ್ಯಮಗಳಲ್ಲಿ ಕೊನೆಗೊಳ್ಳಬೇಕು ಎಂದು ಕೌದಿ ಪ್ರಕಾಶನದ ಮಮತಾ ಕೆ.ಎನ್. ಅಭಿಪ್ರಾಯಪಟ್ಟರು.

ಸುದ್ದಿ 2 ನಿಮಿಷ

ಮುಂದಿನ ತಿಂಗಳು 36 ಸಾವಿರ ಮನೆಗಳ ವಿತರಣೆ: ಜಮೀರ್

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ 36 ಸಾವಿರ ಮನೆಗಳನ್ನು ಮುಂದಿನ ತಿಂಗಳು ವಿತರಿಸಲಿದ್ದಾರೆ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ತಿಳಿಸಿದರು.

ಕೆ.ಆರ್. ಪುರ ಸಮೀಪದ ನಾಗೇನಹಳ್ಳಿಯಲ್ಲಿ 800 ಹಾಗೂ ಸರ್ವಜ್ಞ ನಗರ ಕ್ಷೇತ್ರದ ಚಟ್ಟಪ್ಪ ಗಾರ್ಡನ್‌ನಲ್ಲಿ ನಿರ್ಮಿಸುತ್ತಿರುವ 209 ಮನೆಗಳ ಕಾಮಗಾರಿ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ರಾಜ್ಯದಾದ್ಯಂತ ಬಡ ಕುಟುಂಬಗಳಿಗೆ ನಿರ್ಮಿಸ ಲಾಗಿರುವ 1.82 ಲಕ್ಷ ಮನೆಗಳ ಪೈಕಿ 36 ಸಾವಿರ ಮನೆಗಳನ್ನು ವಿತರಿಸಲಾಗುತ್ತದೆ. ಅದಕ್ಕೆ ಪೂರ್ವಭಾವಿಯಾಗಿ ಬೆಂಗಳೂರಿನಲ್ಲಿ ನಿರ್ಮಾಣವಾಗುತ್ತಿರುವ ಮನೆಗಳ ಕಾಮಗಾರಿಯನ್ನು ಪರಿಶೀಲಿಸಲಾಯಿತು ಎಂದು ಹೇಳಿದರು.

ಫೆಬ್ರುವರಿ 20ರೊಳಗೆ ಮೂಲ ಸೌಕರ್ಯ ಸಹಿತ ಎಲ್ಲ ಕಾಮಗಾರಿ ಪೂರ್ಣಗೊಳಿಸಿ ಕಾಂಪೌಂಡ್ ಕೂಡ ನಿರ್ಮಿಸಬೇಕು ಎಂದು ಅಧಿಕಾರಿಗಳಿಗೆ ಅವರ ಸೂಚಿಸಿದರು.

ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ, ಆಯುಕ್ತ ವೆಂಕಟೇಶ್, ಪ್ರಧಾನ ಎಂಜಿನಿಯರ್ ಬಾಲರಾಜು ಉಪಸ್ಥಿತರಿದ್ದರು.



‘ಲಿಂಗತ್ವ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ನಿಗಮ ಸ್ಥಾಪಿಸಿ’

ಬೆಂಗಳೂರು: ‘ಲಿಂಗತ್ವ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ನಿಗಮ ಸ್ಥಾಪಿಸಿ, ₹100 ಕೋಟಿ ಅನುದಾನವನ್ನು ನೀಡಬೇಕು’ ಎಂದು ಲಿಂಗತ್ವ ಅಲ್ಪಸಂಖ್ಯಾತರ ವೇದಿಕೆ ಸರ್ಕಾರಕ್ಕೆ ಆಗ್ರಹಿಸಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಸಂಚಾಲಕ ಮಲ್ಲು ಕುಂಬಾರ, ‘ಕಾಂಗ್ರೆಸ್ ಪಕ್ಷವು ವಿಧಾನಸಭೆ ಚುನಾವಣೆ ಪ್ರಣಾಳಿಕೆಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ನಿಗಮ ಸ್ಥಾಪಿಸುವುದಾಗಿ ಘೋಷಿಸಿತ್ತು. ಆ ಘೋಷಣೆಯನ್ನು ಈಗ ಜಾರಿ ಮಾಡಬೇಕು. ರಾಜ್ಯ ಸರ್ಕಾರ ಜಾರಿಗೆ ತಂದಿರುವ ‘ಗೃಹ ಲಕ್ಷ್ಮಿ’, ‘ಶಕ್ತಿ’ ಸೇರಿದಂತೆ ವಿವಿಧ ಯೋಜನೆಗಳ ಲಾಭ ಪಡೆದುಕೊಳ್ಳಲು ಲಿಂಗತ್ವ ಅಲ್ಪಸಂಖ್ಯಾತರಿಗೆ ಸಾಧ್ಯವಾಗುತ್ತಿಲ್ಲ. ಇದರಿಂದ ಸಮುದಾಯದವರು ಸಮಸ್ಯೆ ಎದುರಿಸುತ್ತಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಲಿಂಗತ್ವ ಅಲ್ಪಸಂಖ್ಯಾತರಿಗೆ ನೋಡಲ್ ಇಲಾಖೆಯಾಗಿದ್ದು, ಇಲಾಖೆ ಸಚಿವರು ಸಮುದಾಯದ ಕುಂದು ಕೊರತೆ ಬಗ್ಗೆ ಸಭೆ ನಡೆಸಬೇಕು’ ಎಂದು ತಿಳಿಸಿದರು.


‘ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆ ಮಾಡಬೇಕು. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾಧ್ಯಕ್ಷರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆ ಹಾಗೂ ಸಮುದಾಯದವರನ್ನು ಒಳಗೊಂಡ ಜಿಲ್ಲಾ ಲಿಂಗತ್ವ ಅಲ್ಪಸಂಖ್ಯಾತರ ಸಮಿತಿಯನ್ನು ರಚಿಸಬೇಕು. ಈ ಸಮುದಾಯಕ್ಕೆ ಎಲ್ಲ ವಸತಿ ಯೋಜನೆಗಳಲ್ಲಿ ಶೇ 5 ರಷ್ಟು ಮೀಸಲಾತಿ ಘೋಷಿಸಬೇಕು’ ಎಂದು ಒತ್ತಾಯಿಸಿದರು.



'ಪ್ರಜಾವಾಣಿ' ಕಚೇರಿಯಲ್ಲಿ 'ಇ–ಶ್ರಮ್' ನೋಂದಣಿ ಇಂದು

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ವತಿಯಿಂದ ಫೆ.1ರಂದು ಪತ್ರಿಕಾ ಏಜೆಂಟರು ಮತ್ತು ವಿತರಕರಿಗೆ 'ಇ–ಶ್ರಮ್' ಯೋಜನೆಗೆ ನೋಂದಣಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಬೆಳಿಗ್ಗೆ 11 ಗಂಟೆಯಿಂದ ನೋಂದಣಿ ಪ್ರಕ್ರಿಯೆ ಆರಂಭ ಆಗಲಿದೆ.


ಸಂತೋಷ ಲಾಡ್


ಕೆ.ವಿ.ಪ್ರಭಾಕರ್

ಎಂ.ಜಿ.ರಸ್ತೆಯಲ್ಲಿರುವ 'ಪ್ರಜಾವಾಣಿ' ಕೇಂದ್ರ ಕಚೇರಿಯಲ್ಲಿ ನೋಂದಣಿ ಕಾರ್ಯಕ್ರಮ ನಡೆಯಲಿದೆ. ಸಂಜೆ 4 ರಿಂದ ನಡೆಯುವ ಕಾರ್ಯಕ್ರಮದಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಸಾಂಕೇತಿಕವಾಗಿ 'ಇ–ಶ್ರಮ್' ಕಾರ್ಡ್‌ಗಳನ್ನು ವಿತರಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಹಾಗೂ ಕಾರ್ಮಿಕ ಇಲಾಖೆ ಆಯುಕ್ತ ಎಚ್.ಎನ್.ಗೋಪಾಲಕೃಷ್ಣ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ನೋಂದಣಿಗೆ ಆಸಕ್ತಿಯುಳ್ಳವರು ಮೊಬೈಲ್: 94481 59346 ಹಾಗೂ 97399 97923 ಸಂಪರ್ಕಿಸಬಹುದು.

ವೈದ್ಯಕೀಯ ಕಾಲೇಜು ಆರಂಭಕ್ಕೆ ಬಿಬಿಎಂಪಿ ಯೋಜನೆ

• ಸ್ನೇಹಾ ರಮೇಶ್

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ತನ್ನ ಮೊದಲ ವೈದ್ಯಕೀಯ ಕಾಲೇಜನ್ನು ತೆರೆಯಲು ಯೋಜಿಸಿದೆ.

ಗೋವಿಂದರಾಜನಗರದ ಎಂ.ಸಿ ಬಡಾವಣೆಯಲ್ಲಿ ₹106 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ 'ಶ್ರೀ ಬಾಲಗಂಗಾಧರ ನಾಥ ಸ್ವಾಮೀಜಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ'ಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸಲಾಗುತ್ತಿದೆ.

'ಪ್ರಸ್ತಾವ ಪ್ರಾರಂಭಿಕ ಹಂತದಲ್ಲಿದ್ದು, ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗುತ್ತಿದೆ. ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 300 ಹಾಸಿಗೆಗಳ ಸೌಲಭ್ಯವಿದ್ದು, ವೈದ್ಯಕೀಯ ಕಾಲೇಜು ಸ್ಥಾಪನೆಗೆ ಬೇಕಾದ ಅಗತ್ಯವನ್ನು ಪೂರೈಸಲಿದೆ' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

'ಮುಂದಿನ ಬಜೆಟ್‌ನಲ್ಲಿ ₹500 ಕೋಟಿ ಅನುದಾನ ನೀಡುವಂತೆ ಆರೋಗ್ಯ ವಿಭಾಗ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸುಸಜ್ಜಿತ ವೈದ್ಯ ಸೌಲಭ್ಯಗಳಿದ್ದರೂ, ಸಿಬ್ಬಂದಿ ಕೊರತೆ ಇದೆ. ಇದರಿಂದ ಹಲವು ಸೌಲಭ್ಯಗಳು ಇನ್ನೂ ಕಾರ್ಯಾರಂಭವಾಗಿಲ್ಲ. ವೈದ್ಯಕೀಯ ಕಾಲೇಜಿಗೆ ಹೆಚ್ಚಿನ ಸಿಬ್ಬಂದಿಯ ಅಗತ್ಯವಿರುತ್ತದೆ' ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.


ಬಿಬಿಎಂಪಿಯಿಂದ ಗೋವಿಂದರಾಜನಗರದಲ್ಲಿ ನಿರ್ಮಾಣಗೊಂಡಿರುವ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ

ಫೆಬ್ರುವರಿ 2023ರಲ್ಲಿ ಆರಂಭವಾದ ಈ 'ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ'ಯಲ್ಲಿ ಪ್ರಯೋಗಾಲಯ, ರೆಡಿಯಾಲಜಿ, ಶಿಶುಆರೈಕೆ ಕೇಂದ್ರ, ಕಿಮೊಥೆರಪಿ, ರಕ್ತ ಸಂಗ್ರಹ, ತುರ್ತುನಿಗಾ ಘಟಕ, ಶಸ್ತ್ರಚಿಕಿತ್ಸಾ ಕೇಂದ್ರ, ಮೂಳೆ, ದಂತ ಚಿಕಿತ್ಸಾ ಸೇವೆಗಳು ಸೇರಿದಂತೆ ಹೆರಿಗೆ ಕೇಂದ್ರಗಳ ಸೌಲಭ್ಯವಿದೆ.

ಇ ಆಸ್ಪತ್ರೆ: ರೆಫೆರಲ್ ಆಸ್ಪತ್ರೆಗಳು, ಹೆರಿಗೆ ಕೇಂದ್ರಗಳು, ಹೊಸ ಜನರಲ್ ಆಸ್ಪತ್ರೆಗಳನ್ನು ಇ–ಆಸ್ಪತ್ರೆಗಳನ್ನಾಗಿ ಮಾರ್ಪಡಿಸುವ ಪ್ರಸ್ತಾವವನ್ನು ಬಿಬಿಎಂಪಿ ಆರೋಗ್ಯ ವಿಭಾಗ ಸರ್ಕಾರಕ್ಕೆ ಸಲ್ಲಿಸಿದೆ. ಇ– ಆಸ್ಪತ್ರೆಗಳು ಆನ್‌ಲೈನ್‌ನಲ್ಲಿ ಕಾಯ್ದಿರಿಸುವಿಕೆ, ಪ್ರಯೋಗಾಲಯ ವರದಿ ನೀಡುವ ಸೌಲಭ್ಯಗಳನ್ನು ಹೊಂದಲಿವೆ. ಈ ಯೋಜನೆಗೆ ₹8 ಕೋಟಿ ಅನುದಾನ ನೀಡಬೇಕೆಂದು ಮನವಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಪ್ರಯಾಣಿಕರ ಕಾಯ್ದಿರಿಸುವಿಕೆ ಕೇಂದ್ರ ಇಂದು ಆರಂಭ

ಬೆಂಗಳೂರು: ಆನೇಕಲ್‌ನಲ್ಲಿರುವ ನೈರುತ್ಯ ರೈಲ್ವೆಯ ಗಣಕೀಕೃತ ಪ್ರಯಾಣಿಕರ ಕಾಯ್ದಿರಿಸುವಿಕೆ ಕೇಂದ್ರ ಫೆ.1ಕ್ಕೆ ಪುನರಾರಂಭಗೊಳ್ಳಲಿದೆ.

ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಕೇಂದ್ರವನ್ನು ತಾತ್ಕಾಲಿಕವಾಗಿ ಮುಚ್ಚಲಾಗಿತ್ತು. ಕೇಂದ್ರವು ಸೋಮವಾರದಿಂದ ಶನಿವಾರದವರೆಗೆ ಕೆಲಸದ ದಿನಗಳಲ್ಲಿ ಬೆಳಿಗ್ಗೆ 8ರಿಂದ ಮಧ್ಯಾಹ್ನ 2ರ ವರೆಗೆ ಕಾರ್ಯನಿರ್ವಹಿಸಲಿದೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.



ಕಿದ್ವಾಯಿ: ಎಂಆರ್‌ಐ ಸೇವೆ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರ ಕೆಟ್ಟು ಹೋಗಿರುವುದರಿಂದ ರೋಗಿಗಳು ಪರೀಕ್ಷೆಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಸಂಸ್ಥೆಯಲ್ಲಿ ಒಂದು ಎಂಆರ್‌ಐ ಸ್ಕ್ಯಾನಿಂಗ್ ಯಂತ್ರವಿದೆ. ಕಳೆದ 15 ದಿನದಿಂದ ಈ ಯಂತ್ರ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದ ರೋಗಿಗಳು ಎಂಆರ್‌ಐ ಸ್ಕ್ಯಾನಿಂಗ್‌ಗೆ ವಿಕ್ಟೋರಿಯಾ ಸೇರಿ ಕೆಲ ಆಸ್ಪತ್ರೆಗಳಿಗೆ ತೆರಳುತ್ತಿದ್ದಾರೆ. ಇನ್ನೂ ಕೆಲವರು ಖಾಸಗಿ ವ್ಯವಸ್ಥೆಯಡಿ ಮಾಡಿಸಿಕೊಳ್ಳುತ್ತಿದ್ದಾರೆ.

'ಖಾಸಗಿ ವ್ಯವಸ್ಥೆಯಡಿ ಎಂಆರ್‌ಐ ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು ₹ 8 ಸಾವಿರದಿಂದ ₹ 10 ಸಾವಿರ ವೆಚ್ಚವಾಗುತ್ತದೆ. ಇದರಿಂದಾಗಿ ಸಮಸ್ಯೆಯಾಗಿದೆ. ಆದಷ್ಟು ಬೇಗ ಕಿದ್ವಾಯಿ ಸಂಸ್ಥೆಯಲ್ಲಿನ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರವನ್ನು ದುರಸ್ಥಿಪಡಿಸಿ, ಪರೀಕ್ಷೆ ನಡೆಸಬೇಕು' ಎಂದು ರೋಗಿಯೊಬ್ಬರು ಆಗ್ರಹಿಸಿದರು.

'ಕೆಟ್ಟಿರುವ ಯಂತ್ರ ದುರಸ್ತಿಗೆ ಕ್ರಮ ವಹಿಸಲಾಗಿದೆ. ಯಂತ್ರ ಹಳೆಯದಾಗಿರುವುದರಿಂದ ಹೊಸ ಯಂತ್ರ ಖರೀದಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುಮತಿಗೆ ಕಾಯುತ್ತಿದ್ದೇವೆ' ಎಂದು ಸಂಸ್ಥೆಯ ಆಡಳಿತಾಧಿಕಾರಿಗಳು ತಿಳಿಸಿದ್ದಾರೆ.

'ಕೆರೆ ಮಿತ್ರ', 'ಹಸಿರು ಮಿತ್ರ' ನೋಂದಣಿ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆಗಳು ಮತ್ತು ಉದ್ಯಾನಗಳ ಸಮರ್ಪಕ ನಿರ್ವಹಣೆಯ ಬಗ್ಗೆ ಮೇಲ್ವಿಚಾರಣೆ ನಡೆಸಲು ಆಸಕ್ತಿಯಿರುವ ನಾಗರಿಕರು, 'ಕೆರೆ ಮಿತ್ರ' ಹಾಗೂ 'ಹಸಿರು ಮಿತ್ರ'ರಾಗಿ ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ನೋಂದಾಯಿಸಿಕೊಳ್ಳುವ ಅವಧಿಯನ್ನು ಫೆ.12ರವರೆಗೆ ವಿಸ್ತರಿಸಲಾಗಿದೆ.

https://keremithra.bbmpgov.in/registration ಹಾಗೂ https://hasirumithra.bbmpgov.in/registration ಲಿಂಕ್‌ನಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯ್‌ಕುಮಾರ್ ಹರಿದಾಸ್ ತಿಳಿಸಿದ್ದಾರೆ.





ಕಾಂತರಾಜ ಆಯೋಗದ ವರದಿ ಜಾರಿ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ

ವಿವಿಧ ಮಠಾಧೀಶರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಚ್. ಕಾಂತರಾಜ ಆಯೋಗದ ವರದಿ ಜಾರಿಗೊಳಿಸಬೇಕು' ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅತಿ ಹಿಂದುಳಿದ ಮಠಾಧೀಶರ ಮಹಾಸಭಾದಿಂದ ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಮಠಾಧೀಶರು, ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು.

'ಅತಿ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಸ್ಥಾಪಿಸಿರುವ ಎಲ್ಲ ನಿಗಮಗಳಿಗೆ ತಲಾ ₹ 500 ಕೋಟಿ ಅನುದಾನ ಬಿಡುಗಡೆ ಮಾಡಬೇಕು. ಸಮಾಜದ ಜನರ ಕುಲ ಕಸುಬುಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು' ಎಂದು ಮಠಾಧೀಶರು ಒತ್ತಾಯಿಸಿದರು.

ಪ್ರಣವಾನಂದ ಸ್ವಾಮೀಜಿ, ಬಸವ ನಾಗಿದೇವ ಶರಣ, ಸಂಗಮಾನಂದ ಸ್ವಾಮೀಜಿ, ದೊಡ್ಡೇಂದ್ರ ಸ್ವಾಮೀಜಿ, ವರಲಿಂಗ ಸ್ವಾಮೀಜಿ ಭಾಗಿಯಾಗಿದ್ದರು.


ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸ್ವಾಮೀಜಿಗಳು ಹಾಗೂ ಸಾರ್ವಜನಿಕರು, ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು – ಪ್ರಜಾವಾಣಿ ಚಿತ್ರ

ಲಂಚ: ಬೆಸ್ಕಾಂ ಜೆಇ ಪ್ರಕಾಶ್ ಬಂಧನ

ಪ್ರಜಾವಾಣಿ ವಾರ್ತೆ


ಪ್ರಕಾಶ್

ಬೆಂಗಳೂರು: ಬಹುಮಹಡಿ ಕಟ್ಟಡವೊಂದಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ₹1 ಲಕ್ಷ ಲಂಚ ಪಡೆದ ಬೆಸ್ಕಾಂ ಉತ್ತರ-2 ವಿಜಯನಗರ ಉಪ ವಿಭಾಗದ ಕಿರಿಯ ಎಂಜಿನಿಯರ್ ಪ್ರಕಾಶ್ ಅವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಸಂಜೆ ಬಂಧಿಸಿದ್ದಾರೆ.

ವಿಜಯನಗರದಲ್ಲಿರುವ ರತ್ನಾ ಆ್ಯಂಡ್ ಉಮರಾಣಿ ಎಂಬ ಬಹುಮಹಡಿ ಕಟ್ಟಡಕ್ಕೆ ನೀಡಿದ್ದ ವಿದ್ಯುತ್ ಪೂರೈಕೆಯ ಸಂಪರ್ಕವನ್ನು ಪುನಃ ಚಾಲನೆಗೊಳಿಸಬೇಕಿತ್ತು. ಇದಕ್ಕಾಗಿ ವಿದ್ಯುತ್ ಕಾಮಗಾರಿಗಳ ಗುತ್ತಿಗೆದಾರ ಮಂಜೇಶ್ ಎಂಬವರು ಅರ್ಜಿ ಸಲ್ಲಿಸಿದ್ದರು.

ವಿದ್ಯುತ್ ಸಂಪರ್ಕಕ್ಕೆ ಅನುಮತಿ ನೀಡಲು ₹2.50 ಲಕ್ಷ ಲಂಚ ನೀಡುವಂತೆ ಪ್ರಕಾಶ್ ಬೇಡಿಕೆ ಇಟ್ಟಿದ್ದರು. ಅರ್ಜಿದಾರರು ಚೌಕಾಸಿ ನಡೆಸಿದಾಗ ₹1 ಲಕ್ಷ ಕೊಟ್ಟರೆ ಒಪ್ಪಿಗೆ ನೀಡುವುದಾಗಿ ಹೇಳಿದ್ದರು. ಈ ಕುರಿತು ಅರ್ಜಿದಾರರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕಕ್ಕೆ ದೂರು ನೀಡಿದ್ದರು.

ಆರೋಪಿಯ ಸೂಚನೆಯಂತೆ ಬೆಸ್ಕಾಂ ವಿಜಯನಗರ ಉಪ ವಿಭಾಗದ ಕಚೇರಿಯಲ್ಲಿ ಬುಧವಾರ ಸಂಜೆ ಭೇಟಿಮಾಡಿದ ಮಂಜೇಶ್ ₹1 ಲಕ್ಷ ಲಂಚದ ಹಣವನ್ನು ತಲುಪಿಸಿದರು. ಪ್ರಕಾಶ್ ಹಣ ಪಡೆಯುತ್ತಿದ್ದಂತೆಯೇ ದಾಳಿಮಾಡಿದ ಲೋಕಾಯುಕ್ತ ಪೊಲೀಸರು ಅವರನ್ನು ಬಂಧಿಸಿದರು.

ಲೋಕಾಯುಕ್ತದ ಬೆಂಗಳೂರು ನಗರ-1 ಎಸ್‌ಪಿ ಶ್ರೀನಾಥ್ ಜೋಶಿ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಬಿ.ಎಲ್. ಶ್ರೀನಿವಾಸಮೂರ್ತಿ ಮೇಲುಸ್ತುವಾರಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್‌ಸ್ಪೆಕ್ಟರ್ ಆನಂದ್ ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

ಯಶಸ್ವಿನಿ: ವಾರದೊಳಗೆ ಆಸ್ಪತ್ರೆಗೆ ಬಿಲ್ ಪಾವತಿ

ಬೆಂಗಳೂರು: 'ಯಶಸ್ವಿನಿ' ಯೋಜನೆಯಡಿ ಖಾಸಗಿ ಆಸ್ಪತ್ರೆಗಳು ರೋಗಿಗಳಿಗೆ ಚಿಕಿತ್ಸೆ ನೀಡಿದ ಒಂದು ವಾರದೊಳಗೆ ಬಿಲ್ ಪಾವತಿ ಮಾಡುವ ವ್ಯವಸ್ಥೆ ಜಾರಿ ಮಾಡಲಾಗಿದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ತಿಳಿಸಿದರು.

ಈ ಹಿಂದೆ ಸುಮಾರು ₹25 ಕೋಟಿಯಷ್ಟು ಬಾಕಿ ಉಳಿದಿತ್ತು. ಇದರಿಂದ ಖಾಸಗಿ ಆಸ್ಪತ್ರೆಗಳು ಯಶಸ್ವಿನಿ ಯೋಜನೆಯಡಿ ಚಿಕಿತ್ಸೆ ನೀಡಲು ಹಿಂದೇಟು ಹಾಕುತ್ತಿದ್ದವು. ಈಗ ಆ ಸಮಸ್ಯೆ ನಿವಾರಿಸಲಾಗಿದೆ. ರೋಗಿಗಳಿಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಅಲ್ಲದೇ, ಯಶಸ್ವಿನಿ ಯೋಜನೆಯ ಚಿಕಿತ್ಸಾ ದರವನ್ನು ಕೇಂದ್ರ ಸರ್ಕಾರದ ಆಯುಷ್ಮಾನ್ ದರಕ್ಕೆ ಸರಿಸಮಾನವಾಗಿ ಪರಿಷ್ಕರಿಸಲು ನಿರ್ಧರಿಸಲಾಗಿದ್ದು, ಇದಕ್ಕೆ ಖಾಸಗಿ ಆಸ್ಪತ್ರೆಗಳು ಒಪ್ಪಿಗೆ ನೀಡಿವೆ. ರಾಜ್ಯ ಸರ್ಕಾರ 15–20 ವರ್ಷಗಳಷ್ಟು ಹಿಂದೆ ದರ ನಿಗದಿ ಮಾಡಿತ್ತು. ದರವು ತುಂಬಾ ಕಡಿಮೆ ಇತ್ತು. ದರ ಪರಿಷ್ಕರಿಸುವಂತೆ ಖಾಸಗಿ ಆಸ್ಪತ್ರೆಗಳೂ ಒತ್ತಾಯ ಮಾಡಿದ್ದವು ಎಂದು ರಾಜಣ್ಣ ಹೇಳಿದರು.

ಈ ಹಿಂದೆ ಯಶಸ್ವಿನಿ ಯೋಜನೆಯನ್ನು ನಿಲ್ಲಿಸಿದ ನಂತರ ಖಾಸಗಿ ಆಸ್ಪತ್ರೆಗಳಿಗೆ ಬಾಕಿ ಹಣ ಪಾವತಿ ಮಾಡಿರಲಿಲ್ಲ. ಇದರಿಂದ ಯೋಜನೆಯಡಿ ನೋಂದಣಿ ಮಾಡಿಕೊಳ್ಳಲು ಕೆಲವು ಆಸ್ಪತ್ರೆಗಳು ಹಿಂದೇಟು ಹಾಕಿದ್ದವು. ಈಗ ಆ ಸಮಸ್ಯೆ ಪರಿಹಾರವಾಗಿದ್ದು ರಾಜ್ಯದ ಎಲ್ಲೆಡೆ ಖಾಸಗಿ ಆಸ್ಪತ್ರೆಗಳು ಯಶಸ್ವಿನಿ ಯೋಜನೆಯಡಿ ಜನರಿಗೆ ಚಿಕಿತ್ಸೆ ನೀಡಲು ಮುಂದೆ ಬಂದಿವೆ ಎಂದು ಹೇಳಿದರು.

ಜಮೀನು ಸ್ವಾಧೀನ ಪ್ರಕ್ರಿಯೆ ವಿಳಂಬ ಸಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಭಿವೃದ್ಧಿ ನಿಟ್ಟಿನಲ್ಲಿನ ಜಮೀನು ಸ್ವಾಧೀನ ಪ್ರಕ್ರಿಯೆಗಳನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸದೇ ಇರುವುದು; ಪ್ರಾಥಮಿಕ ಅಧಿಸೂಚನೆಯಲ್ಲಿ ಗುರುತಿಸಲಾದ ಜಮೀನಿನ ಮಾಲೀಕರಿಗೆ ಸಾಕಷ್ಟು ಅನಾನುಕೂಲತೆ ಉಂಟು ಮಾಡುತ್ತದೆ. ಹೀಗಾಗಿ, ಅಗತ್ಯವಿಲ್ಲ ಎಂದಾದ ಜಮೀನುಗಳನ್ನು ಅಧಿಸೂಚನೆ ವ್ಯಾಪ್ತಿಗೆ ತರದಂತೆ ನೋಡಿಕೊಳ್ಳಬೇಕು' ಎಂದು ಹೈಕೋರ್ಟ್, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಐಎಡಿಬಿ) ಸೂಚಿಸಿದೆ.

ತಮ್ಮ 4 ಎಕರೆ ಜಮೀನಿಗೆ ಸಂಬಂಧಿಸಿದಂತೆ 2009ರ ಡಿಸೆಂಬರ್ 11ರಂದು ಹೊರಡಿಸಲಾಗಿದ್ದ ಪ್ರಾಥಮಿಕ ಅಧಿಸೂಚನೆಯನ್ನು ಪ್ರಶ್ನಿಸಿ, ಬಾಗೇಪಲ್ಲಿ ತಾಲ್ಲೂಕಿನ ಕೊಂಡರೆಡ್ಡಿಪಲ್ಲಿಯ ಎಚ್.ಎಸ್.ಅಬ್ದುಲ್ ರಿಯಾಜ್ ಬಾಷಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಕೆಐಎಡಿಬಿ ತನ್ನ ಪ್ರಾಥಮಿಕ ಅಧಿಸೂಚನೆಯಲ್ಲಿ ವಿಶಾಲವಾದ ಭೂ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳಲು ಬಯಸುತ್ತದೆ. ಆದರೆ, ಅಂತಿಮ ಅಧಿಸೂಚನೆಯಲ್ಲಿ ಪ್ರಸ್ತಾಪಿಸಲಾದ ಮೂಲ ಜಮೀನಿನ ಶೇ 50ಕ್ಕಿಂತ ಕಡಿಮೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುತ್ತಿರುವುದು ಅನೇಕ ಸಂದರ್ಭಗಳಲ್ಲಿ ಕಂಡುಬರುತ್ತಿದೆ. ಇದು ಜಮೀನು ಸ್ವಾಧೀನಪಡಿಸಿಕೊಳ್ಳುವ ಮುನ್ನ ಮಂಡಳಿ ಸರಿಯಾದ ಅಧ್ಯಯನ ನಡೆಸಿಲ್ಲ ಎಂಬುದನ್ನು ತೋರಿಸುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.


ಬಿಜೆಪಿ ಕೇಂದ್ರೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಶಿಕ್ಷಣ ತಜ್ಞ ಡಾ.ಎಂ.ಕೆ.ಶ್ರೀಧರ್ ಅವರನ್ನು ಜಯನಗರದ ಮನೆಯಲ್ಲಿ ಭೇಟಿ ಮಾಡಿ ಗೌರವಿಸಿದರು. ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್ ಇದ್ದರು

'ಭ್ರಷ್ಟಾಚಾರಕ್ಕೆ 'ಸುರಂಗ' ಮಾರ್ಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ನಡೆಸುವುದಕ್ಕಾಗಿಯೇ ಸುರಂಗ ಮಾರ್ಗ ನಿರ್ಮಾಣ ಮಾಡಲು ಕಾಂಗ್ರೆಸ್ ನೇತೃತ್ವದ ಸರ್ಕಾರ ಮುಂದಾಗಿದೆ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ ಆರೋಪಿಸಿದ್ದಾರೆ.

ನಗರದ ಸಂಚಾರ ದಟ್ಟಣೆ ಕಡಿಮೆ ಮಾಡಬೇಕಿದ್ದರೆ ಸುರಂಗ ರಸ್ತೆ ಬದಲು ಉಪನಗರ ರೈಲು ಮತ್ತು ಮೆಟ್ರೊ ಮಾರ್ಗಗಳನ್ನು ವಿಸ್ತರಣೆ ಮಾಡಬೇಕು ಎಂದು ಅವರು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

'60 ಕಿ,ಮೀ. ಸುರಂಗ ಮಾರ್ಗಕ್ಕೆ ₹30,000 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಅಂದರೆ 1 ಕಿ.ಮೀ. ಸುರಂಗ ಮಾರ್ಗಕ್ಕೆ ₹500 ಕೋಟಿ ವೆಚ್ಚ. ಸುರಂಗ ರಸ್ತೆ ನಿರ್ಮಾಣದಿಂದ ಎಷ್ಟು ವಾಹನದಟ್ಟಣೆ ಕಡಿಮೆಯಾಗಲಿದೆ ಎನ್ನುವ ಬಗ್ಗೆ ಸರ್ಕಾರ ಶ್ವೇತ ಪತ್ರ ಹೊರಡಿಸಿಲ್ಲ' ಎಂದು ತಿಳಿಸಿದ್ದಾರೆ.

ಸುರಂಗ ರಸ್ತೆಗಳಿಂದ ನಗರದಲ್ಲಿ ಸಂಚಾರ ದಟ್ಟಣೆ ಕಡಿಮೆಯಾಗಲ್ಲ. ರಾಜಕಾಲುವೆ ಒತ್ತುವರಿ ಮಾಡಿಕೊಂಡು ಕಟ್ಟಡಗಳನ್ನು ಕಟ್ಟಲಾಗಿದೆ. ಮಳೆ ನೀರು ಹರಿಯಲು ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲ. ಈ ರೀತಿ ಇರುವಾಗ ಸುರಂಗ ರಸ್ತೆ ನಿರ್ಮಾಣ ಮಾಡಿದರೆ, ಸುರಕ್ಷತೆಯ ಬಗ್ಗೆ ಆತಂಕ ಕಾಡುತ್ತದೆ ಎಂದಿದ್ದಾರೆ.

ಈ ಬಗ್ಗೆ ಚರ್ಚಿಸಲು ಎಎಪಿ ವತಿಯಿಂದ ಫೆ.3ರಂದು ಶಾಸಕರ ಭವನದಲ್ಲಿ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ. 'ಸುರಂಗ ರಸ್ತೆಯಾ? ಅಥವಾ ಉಪನಗರ ರೈಲಾ?' ಎನ್ನುವ ವಿಚಾರದ ಬಗ್ಗೆ ಅಂದು ಚರ್ಚಿಸಲಾಗುತ್ತದೆ. ನಗರ ತಜ್ಞರು, ಸಾಮಾಜಿಕ ಕ್ಷೇತ್ರದ ಪರಿಣಿತರು ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಬಳಿಕ ಚರ್ಚೆಯ ನಿರ್ಣಯಗಳನ್ನು ಸರ್ಕಾರಕ್ಕೆ ತಲುಪಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಗಾಂಧಿ ಮಾರ್ಗದಿಂದಲೇ ಶಾಂತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಬಹುದೊಡ್ಡ ಶಕ್ತಿಯಾದ ಯುವಪೀಳಿಗೆ ‘ಗಾಂಧಿ ಮಾರ್ಗ’ ಅನುಸರಿಸಿದರೆ ದೇಶದಲ್ಲಿ ಶಾಂತಿ, ಸೌಹಾರ್ದ ಸದಾ ನೆಲೆಸುತ್ತದೆ ಎಂದು ದೀನಬಂಧು ಸೇವಾ ಸಂಸ್ಥೆಯ ಸ್ಥಾಪಕ ಜಿ.ಎಸ್.ಜಯದೇವ ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ಸಂಸ್ಥೆ, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಇಲಾಖೆ ಮಂಗಳವಾರ ಆಯೋಜಿಸಿದ್ದ ಸರ್ವೋದಯ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಶ್ವದಲ್ಲೇ ಅತಿ ಹೆಚ್ಚಿನ ಸಂಖ್ಯೆಯ ಯುವ ಜನರು ಭಾರತದಲ್ಲಿ ಇದ್ದಾರೆ. ಹಾಗಾಗಿ, ನಮ್ಮದು ‘ಯಂಗ್ ಇಂಡಿಯಾ’. ದೇಶದ ಪ್ರತಿ ಮಕ್ಕಳು, ಯುವ ಜನರಿಗೂ ಗಾಂಧಿ ತತ್ವ, ಅವುಗಳ ಪ್ರಾಮುಖ್ಯತೆಯನ್ನು ಅರ್ಥ ಮಾಡಿಸುವ ಕೆಲಸ ಆಗಬೇಕು. ಬಾಲ್ಯದಿಂದಲೇ ಮನಸ್ಸಲ್ಲಿ ಬಿತ್ತಬೇಕು. ಅವರು ದೊಡ್ಡ ವರಾದಂತೆ ಸಹಜವಾಗಿ ಗಾಂಧಿ ಮಾರ್ಗದಲ್ಲಿ ನಡೆಯುತ್ತಾರೆ ಎಂದರು.

ಶಿಕ್ಷಣ ತಜ್ಞ ಎಚ್.ಎನ್. ಮುರಳೀಧರ್ ಮಾತನಾಡಿ, ಗಾಂಧೀಜಿ ಹುತಾತ್ಮರಾದರೂ, ಗಾಂಧಿ ಚಿಂತನೆಗಳು ದೇಶ–ವಿದೇಶಗಳಲ್ಲೂ ಅವರನ್ನು ಜೀವಂತವಾಗಿರಿಸಿವೆ. ಹುತಾತ್ಮರ ದಿನ ಅವರ ಸ್ಮರಣೆ ಮಾಡಿದರಷ್ಟೇ ಸಾಲದು, ಪ್ರತಿಯೊಬ್ಬರೂ ಅವರ ಮಾರ್ಗದಲ್ಲಿ ನಡೆಯುವ ಸಂಕಲ್ಪ ಮಾಡಬೇಕು ಎಂದು ಹೇಳಿದರು.

ಕಥಾ ನಿರೂಪಕ ವಿಕ್ರಂ ಶ್ರೀಧರ್, ಗಾಂಧಿ ಕಥೆಗಳ ಮೂಲಕ ಮಕ್ಕಳಿಗೆ ಅವರ ಜೀವನದ ಮೌಲ್ಯಗಳನ್ನು ಹೇಳಿದರು. ಗಾಂಧಿ ಸ್ಮಾರಕ ನಿಧಿಯ ಖಜಾಂಚಿ ಎಚ್.ಬಿ.ದಿನೇಶ್ ಪ್ರತಿಜ್ಞಾ ವಿಧಿ ಬೋಧಿಸಿದರು. ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ವಿಶುಕುಮಾರ್, ಕಾರ್ಯದರ್ಶಿ ಎಂ.ಸಿ. ನರೇಂದ್ರ, ಬೆಂಗಳೂರು ನಗರ ವಿ.ವಿ.ಯ ಎನ್‌ಎಸ್‌ಎಸ್ ಅಧಿಕಾರಿ ಎಚ್.ಜಿ. ಗೋವಿಂದೇಗೌಡ ಉಪಸ್ಥಿತರಿದ್ದರು.

ಸಿಇಟಿಗೆ ಅರ್ಜಿ: ಸರ್ವರ್ ಸಮಸ್ಯೆ, ಅಭ್ಯರ್ಥಿಗಳ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸರ್ವರ್ ಸಮಸ್ಯೆಯಿಂದ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಪರದಾಡುವಂತಾಗಿದೆ.

ಶಾಲಾ ಶಿಕ್ಷಣ ಇಲಾಖೆ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಎಸ್‌ಎಟಿಎಸ್ ತಂತ್ರಾಂಶ (ವಿದ್ಯಾರ್ಥಿ ಸಾಮರ್ಥ್ಯ ಪತ್ತೆ ವ್ಯವಸ್ಥೆ) ಕಡ್ಡಾಯಗೊಳಿಸಿದೆ. ಈ ತಂತ್ರಾಂಶಕ್ಕೆ ವಿದ್ಯಾರ್ಥಿಗಳು ಶಾಲಾ ಹಂತದ ಶೈಕ್ಷಣಿಕ ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕು. ಹಾಗೆ ಅಪ್‌ಲೋಡ್ ಮಾಡಿದ ದಾಖಲೆಗಳನ್ನೇ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಿಇಟಿಗೆ ಬಳಸಿಕೊಳ್ಳುತ್ತದೆ.

ಈಗಾಗಲೇ ಎಸ್‌ಎಸ್‌ಎಲ್‌ಸಿ ಪೂರೈಸಿ, ಪದವಿಪೂರ್ವ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ತಾವು ಹಿಂದೆ ಓದಿದ ಶಾಲೆಗಳ ದಾಖಲೆಗಳನ್ನು ಎಸ್‌ಎಟಿಎಸ್ ತಂತ್ರಾಂಶಕ್ಕೆ ಅಪ್‌ಲೋಡ್ ಮಾಡಲು ಸರ್ವರ್ ಸಮಸ್ಯೆ ಎದುರಾಗಿದೆ. ಇದರಿಂದ ಕಳೆದ 10 ದಿನಗಳಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗಿಲ್ಲ.

‘ಪ್ರತಿದಿನ ಸರಾಸರಿ 30 ಸಾವಿರದವರೆಗೆ ವಿದ್ಯಾರ್ಥಿಗಳು ದಾಖಲೆಗಳನ್ನು ಅಪ್‌ಲೋಡ್ ಮಾಡುತ್ತಿದ್ದಾರೆ. ಸರ್ವರ್ ಸಮಸ್ಯೆಯ ಕಾರಣ ಎಸ್‌ಎಟಿಎಸ್ ತಂತ್ರಾಂಶದಲ್ಲಿ ಸಮಸ್ಯೆಯಾಗಿದೆ. ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳ ಜತೆ ಸಭೆ ನಡೆಸಿದ್ದು, ಹೆಚ್ಚುವರಿ ಸರ್ವರ್ ಅಳವಡಿಕೆಗೆ ಸಮ್ಮತಿಸಿದ್ದಾರೆ. ಒಂದೆರಡು ದಿನಗಳಲ್ಲಿ ಸಮಸ್ಯೆ ಬಗೆಹರಿಯಲಿದೆ’ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಸಲು ಫೆ. 10 ಕೊನೆಯ ದಿನ. ಏ. 18 ಮತ್ತು 19ರಂದು ಸಿಇಟಿ ಪರೀಕ್ಷೆಗಳು ನಡೆಯಲಿವೆ.

ಬಾವುಟ ವಿರುದ್ಧ ಪ್ರತಾಪ ಸಿಂಹ ‘ಪೋಸ್ಟ್’

ಪ್ರಜಾವಾಣಿ ವಾರ್ತೆ

ಮೈಸೂರು: ಬಿಜೆಪಿಯ ಸಂಸದ ಪ್ರತಾಪ ಸಿಂಹ ಇಲ್ಲಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಾಕಲಾಗಿರುವ ಬಾವುಟಗಳ ಬಗ್ಗೆ ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನ ತಮ್ಮ ಖಾತೆಯಲ್ಲಿ ಫೋಟೊ ಸಹಿತ ಪೋಸ್ಟ್ ಹಾಕಿ ಸರ್ಕಾರವನ್ನು ಪ್ರಶ್ನಿಸಿದ್ದಾರೆ.

‘ಮೈಸೂರಿನ ಕೈಲಾಸಪುರಂನ ಮೊಟ್ಟೆಕೇರಿ ಶ್ರೀನಿವಾಸ ಟೆಂಪಲ್ ರಸ್ತೆಯಲ್ಲಿರುವ ಅಂಬೇಡ್ಕರ್ ಉದ್ಯಾನದಲ್ಲಿ ಟಿಪ್ಪು ಬಾವುಟ ಹಾಕಿದ್ದಾರಲ್ಲಾ ಅವರು ಯಾರ ಅನುಮತಿ ಪಡೆದಿದ್ದಾರೆ ಸಿದ್ದರಾಮಯ್ಯನವರೇ, ಪರಮೇಶ್ವರರೇ?’ ಎಂದು ಮಂಗಳವಾರ ಹಾಕಿದ್ದ ಪೋಸ್ಟ್‌ನಲ್ಲಿ ಕೇಳಿದ್ದರು.

ಬುಧವಾರ ಪೋಸ್ಟ್ ಹಾಕಿರುವ ಅವರು, ‘ಮೈಸೂರು ಜಿಲ್ಲಾಡಳಿತಕ್ಕೆ ಧನ್ಯವಾದಗಳು. ಆದರೆ ಒಂದು ಬಾವುಟ ತೆಗೆದು ಪಕ್ಕದಲ್ಲೇ ಇನ್ನೊಂದನ್ನೇಕೆ ಬಿಟ್ಟಿದ್ದೀರಿ? ನಾನೇ ಸ್ಥಳಕ್ಕೆ ಬಂದು ತೋರಿಸಬೇಕಾ? ಕೈಲಾಸಪುರಂ 4ನೇ ಮುಖ್ಯರಸ್ತೆ, ಅಂಬೇಡ್ಕರ್ ಉದ್ಯಾನ, ಶ್ರೀನಿವಾಸ ದೇವಸ್ಥಾನ ರಸ್ತೆಯಲ್ಲಿ ಮತ್ತೊಂದು ಧ್ವಜ ಇರುವುದು ಕಾಣುತ್ತಿಲ್ಲವೇ’ ಎಂದು ಪ್ರಶ್ನೆ ಮಾಡಿದ್ದಾರೆ.

ಅವರ ಪೋಸ್ಟ್ ಬಗ್ಗೆ ಪರ–ವಿರೋಧ ಚರ್ಚೆ ನಡೆಯುತ್ತಿದೆ.

‘ಶಿವರಾಮ ಕಾರಂತ ಪುರಸ್ಕಾರ’ಕ್ಕೆ ಕೃತಿಗಳ ಆಹ್ವಾನ

ಮೂಡುಬಿದಿರೆ: ಇಲ್ಲಿನ ಶಿವರಾಮ ಕಾರಂತ ಪ್ರತಿಷ್ಠಾನವು ಕೊಡಮಾಡುವ ‘ಶಿವರಾಮ ಕಾರಂತ ಪುರಸ್ಕಾರ’ಕ್ಕೆ ಕೃತಿಗಳನ್ನು ಆಹ್ವಾನಿಸಿದೆ.

2019ರಿಂದ 2023ರ ಅವಧಿಯಲ್ಲಿ ಪ್ರಕಟವಾದ ಯಾವುದೇ ಪ್ರಕಾರದ ಕೃತಿಗಳನ್ನು ಲೇಖಕರು ಅಥವಾ ಪ್ರಕಾಶಕರು ಕಳುಹಿಸಬಹುದು. ಪುರಸ್ಕಾರವು ಪ್ರಶಸ್ತಿ ಫಲಕ ಮತ್ತು ₹10 ಸಾವಿರ ನಗದು ಬಹುಮಾನ ಒಳಗೊಂಡಿದೆ. ಆಸಕ್ತರು ಗ್ರಂಥಗಳ ಮೂರು ಪ್ರತಿಗಳನ್ನು ಮಾರ್ಚ್ 7ರ ಒಳಗಾಗಿ ಶಿವರಾಮ ಕಾರಂತ ಪ್ರತಿಷ್ಠಾನ, ಕನ್ನಡ ಭವನ, ಮೂಡುಬಿದಿರೆ, ದಕ್ಷಿಣ ಕನ್ನಡ ಜಿಲ್ಲೆ – 574227 ಈ ವಿಳಾಸಕ್ಕೆ ಕಳುಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.



ಶ್ರದ್ಧಾಂಜಲಿ ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಶಾಖೆಯು ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ‘ಐಎಂಎ ಕೋವಿಡ್ ಹುತಾತ್ಮರ ದಿನ’ ಕಾರ್ಯಕ್ರಮದಲ್ಲಿ ಸಂಘದ ಸದಸ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಮೇಣದ ದೀಪ ಬೆಳಗುವ ಮೂಲಕ ಮೃತ ವೈದ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಐಎಂಎ ಕರ್ನಾಟಕ ಶಾಖೆಯ ಅಧ್ಯಕ್ಷ ಡಾ.ಎಸ್. ಶ್ರೀನಿವಾಸ್ ಪಾಲ್ಗೊಂಡಿದ್ದರು

15 ಕೆಎಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಜುನಾಥ ಸ್ವಾಮಿ ಜಿ.ಎನ್., ವಿಶ್ವನಾಥ ಪಿ. ಹಿರೇಮಠ, ಸಯೀದಾ ಆಯಿಷಾ ಸೇರಿದಂತೆ 15 ಮಂದಿ ಕೆಎಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಬುಧವಾರ ಆದೇಶ ಹೊರಡಿಸಿದೆ.

ಸೂಪರ್ ಟೈಮ್ ವೇತನ ಶ್ರೇಣಿಯ ಮೂವರು, ಆಯ್ಕೆ ಶ್ರೇಣಿಯ ಮೂವರು, ಹಿರಿಯ ಶ್ರೇಣಿಯ ಒಬ್ಬರು ಮತ್ತು ಕಿರಿಯ ಶ್ರೇಣಿಯ ಎಂಟು ಮಂದಿ ಕೆಎಎಸ್ ಅಧಿಕಾರಿಗಳು ವರ್ಗಾವಣೆ ಆದವರಲ್ಲಿ ಸೇರಿದ್ದಾರೆ.

ನಗರದಲ್ಲಿ ಇಂದು

4ನೇ ವಾರ್ಷಿಕೋತ್ಸವದ ಅಂಗವಾಗಿ ಕೃಷ್ಣ ಹಾನ್‌ಬಾಳ್ ಅವರ ಎರಡು ಕೃತಿಗಳ ಲೋಕಾರ್ಪಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ: ಕೃತಿ ಲೋಕಾರ್ಪಣೆ: ವೂಡೇ ಪಿ. ಕೃಷ್ಣ, ಪುಸ್ತಕದ ಬಗ್ಗೆ ಮಾತು: ಆರ್. ವಾದಿರಾಜ್, ಪ್ರಶಸ್ತಿ ಪ್ರದಾನ: ವನಜಾಕ್ಷಿ ಆರ್.ಎಚ್., ಅಧ್ಯಕ್ಷತೆ: ಎಸ್. ರಾಮಲಿಂಗೇಶ್ವರ, ಆಯೋಜನೆ: ಭರವಸೆ ತಂಡ, ಸ್ಥಳ: ಸನ್ಮಾನ್ ಹೋಟೆಲ್ ಸಭಾಂಗಣ, ಸುಬೇದಾರ್ ಛತ್ರಂ ರಸ್ತೆ, ಶೇಷಾದ್ರಿಪುರ, ಸಂಜೆ 4.30

ಮಡಿವಾಳ ಮಾಚಿದೇವ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಶಿವಯೋಗಾನಂದ ಮಹಾಪುರಿ ಸ್ವಾಮೀಜಿ, ಬಸವ ಮಾಚಿದೇವಸ್ವಾಮೀಜಿ, ಮುಕ್ತಾನಂದ ಸ್ವಾಮೀಜಿ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

‘ಸೌರಭ 24’ ರಾಜ್ಯಮಟ್ಟದ ಅಂತರ ಕಾಲೇಜು ರಂಗ ಸ್ಪರ್ಧೆ ಉದ್ಘಾಟನಾ ಸಮಾರಂಭ: ಮುಖ್ಯ ಅತಿಥಿಗಳು: ನರಹಳ್ಳಿ ಬಾಲಸುಬ್ರಮಣ್ಯ, ಶರತ್ ಲೋಹಿತಾಶ್ವ, ಕೆ.ವಿ. ನಾಗರಾಜಮೂರ್ತಿ, ಡಿ.ಎನ್. ವೆಂಕಟ್ ರಾವ್, ಆಯೋಜನೆ: ಭಾರತ ಯಾತ್ರಾ ಕೇಂದ್ರ, ರಂಗಸೌರಭ, ಸ್ಥಳ: ಸಂಸ ಬಯಲು ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.30

‘ಆತ್ಮನಿರ್ಭರ ಪ್ರಜಾಪ್ರಭುತ್ವ’ದ ಬಗ್ಗೆ ಉಪನ್ಯಾಸ ಮಂಡನೆ: ಉಪನ್ಯಾಸಕರು: ಶೀಲಾದೇವಿ ಮಳಿಮಠ್, ಮುಖ್ಯ ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ: ಕನ್ನಡ ಯುವಜನ ಸಂಘ, ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಪ್ರವಚನ ವಾಹಿನಿ: ‘ವೀರಬ್ರಹ್ಮೇಂದ್ರ ಸ್ವಾಮಿಗಳ ಚರಿತ್ರೆ’ ಬಗ್ಗೆ ಉಪನ್ಯಾಸ: ಎ. ಆರ್. ಪುಟ್ಟಾಚಾರ್ಯ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, 9ನೇ ಬ್ಲಾಕ್, ಜಯನಗರ, ಸಂಜೆ 6.30

ಸಂಕ್ರಾಂತಿ ನಾಟಕೋತ್ಸವ: ಧಾತ್ರಿ ರಂಗ ಸಂಸ್ಥೆಯಿಂದ ‘ಶ್ರೀಕೃಷ್ಣ ಸಂಧಾನ’ ಹಾಸ್ಯ ನಾಟಕ, ‘ಸೋರುತಿಹುದು ಸಂಬಂಧ’ ಸಾಂಸಾರಿಕ ನಾಟಕ ಪ್ರದರ್ಶನ, ಆಯೋಜನೆ: ಕಲಾ ರಂಗಲೋಕ, ಸ್ಥಳ: ಜೈಮಾರುತಿ ನಗರ, ನಂದಿನ ಬಡಾವಣೆ 4ನೇ ಬ್ಲಾಕ್, ಸಂಜೆ 6.30

ಹರಿದಾಸ ವೈಭವ: ಅಪರ್ಣ ಮುಕುಂದ್, ವಾದ್ಯ ಸಹಕಾರ: ಹರೀಶ್, ಸರ್ವೋತ್ತಮ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಒಂದನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

ವೇಣುನಾದ ವೈಭವ: ತೇಜಸ್ ರಾಜೇಶ್, ಸಮರ್ಥ್ ಚಂದ್ರ ಭಾರದ್ವಾಜ್, ವಾದ್ಯ ಸಹಕಾರ: ಭರತ್ ಚಂದ್ರ ಭಾರದ್ವಾಜ್, ಸ್ಕಂದ ಮಂಜುನಾಥ್, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in



ಸಿಮಿಲಿಪಾಲ್‌ನಲ್ಲಿ ಕಪ್ಪು ಹುಲಿ

ಯು.ಟಿ. ಆಯಿಷಾ ಫರ್ಝಾನ

ಕಪ್ಪು ಬಣ್ಣದ ಅಥವಾ ಕೃಷ್ಣವರ್ಣದ ಹುಲಿ (Melanistic tigers)ಗಳು ಒಡಿಶಾದ ಸಿಮಿಲಿಪಾಲ್ ಹುಲಿ ಸಂರಕ್ಷಣಾ ಮೀಸಲು ಅರಣ್ಯದಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತವೆ ಎಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಖಾತೆಯ ರಾಜ್ಯ ಸಚಿವ ಅಶ್ವಿನಿ ಕುಮಾರ್ ಚೌಬೆ ಇತ್ತೀಚೆಗೆ ತಿಳಿಸಿದ್ದಾರೆ. 2022ರ ಆವೃತ್ತಿಯ ಅಖಿಲ ಭಾರತ ಹುಲಿ ಗಣತಿಯ ಪ್ರಕಾರ ಅಲ್ಲಿ ಒಟ್ಟು 16 ಹುಲಿಗಳನ್ನು ದಾಖಲಿಸಲಾಗಿದ್ದು, ಅವುಗಳಲ್ಲಿ 10 ಕರಿಬಣ್ಣದ ಹುಲಿಗಳಾಗಿವೆ.

ಕರಿಬಣ್ಣದ ಹುಲಿಗಳು

- ಕಪ್ಪು ಬಣ್ಣದ ಹುಲಿಗಳು ಬಂಗಾಳ ಹುಲಿಗಳ (Panthera tigris tigris)ಲ್ಲಿಯೇ ಕಂಡುಬರುವ ಒಂದು ಪ್ರಭೇದವಾಗಿದೆ. ಇವುಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಕಪ್ಪು ಪಟ್ಟಿಯ ಕಿತ್ತಳೆ ಚರ್ಮದ ಬದಲಾಗಿ ದಟ್ಟವಾದ, ಬಹುತೇಕ ಕರಿವರ್ಣವೇ ಇರುತ್ತದೆ.

ತಳಿಶಾಸ್ತ್ರ

- ಕರಿಬಣ್ಣದ ಗುಣಲಕ್ಷಣಗಳು ಒಂದು ಅಪಸರಣದ (recessive) ವಂಶವಾಹಿಯ ಕಾರಣದಿಂದ ಉಂಟಾಗುತ್ತಿದ್ದು, ತಂದೆ-ತಾಯಿ ಹುಲಿಗಳೆರಡೂ ಕಪ್ಪು ಬಣ್ಣದವುಗಳಾಗಿದ್ದಾಗ ಮಾತ್ರವೇ ಕಪ್ಪು ಬಣ್ಣದ ಸಂತಾನ ಹುಟ್ಟುತ್ತವೆ. ಈ ವಂಶವಾಹಿ ವೈವಿಧ್ಯ ಕೇವಲ ಹುಲಿಗಳಿಗೆ ಮಾತ್ರವೇ ಸೀಮಿತವಾಗಿರದೆ, ಚಿರತೆಗಳು ಮತ್ತು ಜಾಗ್ವಾರ್‌ನಂತಹ ದೊಡ್ಡ ಜಾತಿಯ ಹುಲಿ ಪ್ರಭೇದದ ಪ್ರಾಣಿಗಳಲ್ಲಿ ಕಂಡುಬರುತ್ತದೆ. ಬಣ್ಣಗಳ ಮೇಲೆ ಪರಿಣಾಮ ಬೀರುವ ವಂಶವಾಹಿಗಳ ಪರಿವರ್ತನೆ ಮತ್ತು ಗಾಢ ಬಣ್ಣಗಳಿಗೆ ಕಾರಣವಾಗುವ ಮೆಲಾನಿನ್ ಉತ್ಪಾದನೆ ಹೆಚ್ಚಾಗುವುದರಿಂದ ಈ ಬಣ್ಣಕ್ಕೆ ಕಾರಣವಾಗುತ್ತದೆ.

ದೈಹಿಕ ಗುಣಲಕ್ಷಣಗಳು

- ಕಪ್ಪು ಬಣ್ಣದ ಹುಲಿಗಳು ಎದ್ದುಕಾಣುವ ಗಾಢವಾದ ಚಾಕಲೇಟ್ ಕಂದು ಬಣ್ಣದಿಂದ ಹಿಡಿದು ಹೆಚ್ಚು ಕಡಿಮೆ ಸಂಪೂರ್ಣ ಕಪ್ಪಾದ ತೊಗಲಿನ ತನಕ ವರ್ಣ ವೈವಿಧ್ಯ ಹೊಂದಿವೆ. ಕೃಷ್ಣವರ್ಣದ ಹುಲಿಗಳ ಕಣ್ಣುಗಳು ಸಾಮಾನ್ಯವಾಗಿ ಉಜ್ವಲ ಹಳದಿ ಅಥವಾ ಚಿನ್ನದ ಬಣ್ಣದ್ದಾಗಿದ್ದು, ಪ್ರಖರವಾಗಿರುತ್ತದೆ.
- ಕಪ್ಪು ಬಣ್ಣದ ಹುಲಿಗಳನ್ನು ಅರಣ್ಯಗಳು, ಹುಲ್ಲುಗಾವಲುಗಳು ಮತ್ತು ಜೌಗು ಪ್ರದೇಶಗಳ ಮ್ಯಾಂಗ್ರೋವ್ ದಟ್ಟಣೆ ಸೇರಿ ವಿವಿಧ ವಾಸಸ್ಥಾನಗಳಲ್ಲಿ ಕಾಣಬಹುದು.

ಸ್ವಭಾವ ಮತ್ತು ಹೊಂದಾಣಿಕೆ

- ಇವು ಏಕಾಂಗಿ ಜೀವಿಗಳಾಗಿದ್ದು, ಸ್ವಭಾವದಲ್ಲಿ ಒಂದೇ ಪ್ರದೇಶಕ್ಕೇ ಸೀಮಿತವಾಗಿದ್ದು (territorial), ರಾತ್ರಿ ಹೊತ್ತು ಬೇಟೆಯಾಡುತ್ತವೆ. ಕರಿಬಣ್ಣದ ಕಾರಣಕ್ಕಾಗಿ ಬೇಟೆ ಆಡುವುದನ್ನು ಸುಲಭವಾಗಿದ್ದರಿಂದ ಕಡಿಮೆ ಬೆಳಕಿರುವ ಪ್ರದೇಶಗಳಲ್ಲಿ ಹೊಂಚುಹಾಕಿ ಬೇಟೆಯಾಡುತ್ತವೆ. ಜಾಗತಿಕ ಹುಲಿಗಳ ಸಂಖ್ಯೆಯು ವಾಸಸ್ಥಳಗಳ ನಾಶ, ಅತಿಕ್ರಮಣ, ಬೇಟೆ ಮತ್ತು ಮಾನವ-ವನ್ಯಜೀವಿ ಸಂಘರ್ಷಗಳ ಕಾರಣಗಳಿಂದ ಇವು ಅಪಾಯಕ್ಕೆ ಸಿಲುಕಿವೆ.

ಸಿಮಿಲಿಪಾಲ್

- ಒಡಿಶಾದ ಸಿಮಿಲಿಪಾಲ್ ಬೆಟ್ಟಗಳು ಅಲ್ಲಿನ ಆದಿವಾಸಿ ಸಮುದಾಯಗಳು ಮತ್ತು ಹುಲಿಗಳೆರಡಕ್ಕೂ ಬಹುಮುಖ್ಯವಾದ ಜೀವಾಧಾರಕ ವ್ಯವಸ್ಥೆಯಾಗಿದೆ. ಒಡಿಶಾದ ಮಯೂರ್‌ಭಂಜ್ ಜಿಲ್ಲೆಯ ಮಧ್ಯಭಾಗದಲ್ಲಿರುವ ಸಿಮಿಲಿಪಾಲ್‌ನ ಬೆಟ್ಟಗಳು, ಅರಣ್ಯಗಳು, ನದಿಗಳು ಮತ್ತು ವನ್ಯಜೀವಿಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ. ರಾಷ್ಟ್ರೀಯ ಉದ್ಯಾನ ಮತ್ತು ಹುಲಿ ಸಂರಕ್ಷಣಾ ಮೀಸಲು ಅರಣ್ಯವಾಗಿರುವ ಸಿಮಿಲಿಪಾಲ್ ತನ್ನ ಹೆಸರನ್ನು ಇಲ್ಲಿ ಹೇರಳವಾಗಿ ಬೆಳೆಯುವ ಸಿಮುಲ್ (red silk cotton) ಎಂದು ಕರೆಯಲಾಗುವ ಮರಗಳಿಂದ ಪಡೆದುಕೊಂಡಿದೆ. ಕೋಲ್ಹಾ, ಸಂತಾಲ್, ಭೂಮಿಜ, ಗೊಂಡ್ ಮತ್ತು ಹೋ ಮುಂತಾದ ವಿವಿಧ ಬುಡಕಟ್ಟುಗಳ ಜನರು ಸಿಮಿಲಿಪಾಲ್ ಮತ್ತು ಸುತ್ತಮುತ್ತಲಿನ ಭೂಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಹೆಚ್ಚುವರಿಯಾಗಿ, ವಿಶೇಷವಾಗಿ ಅಪಾಯ ಎದುರಿಸುತ್ತಿರುವ ಬುಡಕಟ್ಟು ಗುಂಪುಗಳಿಗೆ ಸೇರಿದ ಖಡಿಯಾ, ಮಾಂಕಿಡಿಯಾ ಮತ್ತು ಲೋಧಾಗಳು ಕೂಡಾ ಇದೇ ಪ್ರದೇಶದಲ್ಲಿ ವಾಸಿಸುತ್ತಿದ್ದು, ಬಹುತೇಕ ಅರಣ್ಯಾಧಾರಿತ ಜೀವನೋಪಾಯಗಳನ್ನು ಅವಲಂಬಿಸಿದ್ದಾರೆ.
- ಈ ರಕ್ಷಿತ ಪ್ರದೇಶವು 2009ರಿಂದ ಯುನೆಸ್ಕೋ ವಿಶ್ವ ಜೈವಿಕ ವಲಯಗಳ ಮೀಸಲು ನೆಟ್ವರ್ಕ್‌ನ (UNESCO World Network of Biosphere Reserves) ಭಾಗವಾಗಿದೆ.
- ಸಿಮಿಲಿಪಾಲ್ ಪ್ರದೇಶವು ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿ ಸಂಪತ್ತಿನ ಆಗರವಾಗಿದೆ. ಇದು ಭಾರತದ ಎರಡು ಜೀವವೈವಿಧ್ಯ ಸೂಕ್ಷ್ಮತಾಣಗಳಾದ ಈಶಾನ್ಯದ ಸಬ್ ಹಿಮಾಲಯನ್ ಮತ್ತು ದಕ್ಷಿಣದ ಪಶ್ಚಿಮ ಘಟ್ಟ ಪ್ರದೇಶಗಳ ನಡುವಿನ ಕೊಂಡಿಯಾಗಿದೆ. ಈ ಪ್ರದೇಶವು ಭಾರತದ ಹೂ ಬಿಡುವ ಸಸ್ಯಗಳಲ್ಲಿ 7 ಶೇಕಡಾ, ಆರ್ಕಿಡ್‌ಗಳಲ್ಲಿ 8 ಶೇಕಡಾ, ಸರೀಸೃಪಗಳಲ್ಲಿ 7 ಶೇಕಡಾ, ಪಕ್ಷಿಗಳಲ್ಲಿ 20 ಶೇಕಡಾ, ಸಸ್ತನಿಗಳಲ್ಲಿ 11 ಶೇಕಡಾದಷ್ಟನ್ನು ಹೊಂದಿದೆ. ಸಿಮಿಲಿಪಾಲ್ ಪ್ರದೇಶದಲ್ಲಿ 1,253ಕ್ಕೂ ಹೆಚ್ಚು ಪ್ರಭೇದಗಳ ಹೂ ಬಿಡುವ ಸಸ್ಯಗಳು, 99 ಪ್ರಭೇದಗಳ ಹೂ ಬಿಡದ ಸಸ್ಯಗಳು, 21 ಪ್ರಭೇದಗಳ ಉಭಯಜೀವಿಗಳು (amphibians ಅಂದರೆ, ನೆಲ ಜಲ ಎರಡರಲ್ಲೂ ವಾಸಿಸುವ ಜೀವಿಗಳು), 62 ಪ್ರಭೇದಗಳ ಸರೀಸೃಪಗಳು (reptiles ಅಂದರೆ, ಹಾವು, ಹಲ್ಲಿ ಜಾತಿಗೆ ಸೇರಿದ ಹರಿದಾಡುವ ಜೀವಿಗಳು), 361ಪ್ರಭೇದಗಳ ಹಕ್ಕಿಗಳು ಮತ್ತು 55 ಪ್ರಭೇದಗಳ ಸಸ್ತನಿಗಳನ್ನು (mammals ಅಂದರೆ, ಮೊಲೆಯೂಡುವ ಪ್ರಾಣಿಗಳು) ಇಲ್ಲಿ ಗುರುತಿಸಲಾಗಿದೆ.
- ಈ ಪ್ರದೇಶವು 104 ಆರ್ಕಿಡ್ ಪ್ರಭೇದಗಳ ನೆಲೆಯಾಗಿದ್ದು ಇವುಗಳಲ್ಲಿ ಕೆಲವು ಅಳಿವಿನಂಚಿನಲ್ಲಿವೆ. 72 ಹಿಮಾಲಯದ ಆರ್ಕಿಡ್ ಪ್ರಭೇದಗಳೂ ಇಲ್ಲಿವೆ. ನೂರಾರು ವಿಧಗಳ ಕೀಟಗಳು, ಜರಿಗಿಡಗಳು (ferns) ಮತ್ತು ಔಷಧೀಯ ಸಸ್ಯಗಳೂ ಇಲ್ಲಿವೆ. ಮಹಾಶೀರ್, ಗೊರವಂಕ (Hornbill), ಔಸಿಂಘ, ಮೌಸ್ ಡಿಯರ್ (ಪುಟ್ಟ ಜಾತಿಯ ಜಿಂಕೆ), ಹೆಬ್ಬಳಿಲು (Giant squirrel), ಹಾರುವ ಅಳಿಲು, ರೂಡಿ ಮಂಗೂಸ್ (ಒಂದು ರೀತಿಯ ಮುಂಗುಸಿ), ಉದ್ದ ಮೂತಿಯ ಮೊಸಳೆ (mugger crocodile) ಮತ್ತು ರೂಫಸ್ ಟೈಲ್ಡ್ ಹೇರ್ (ಒಂದು ಜಾತಿಯ ಮೊಲ) ಮುಂತಾದ ಅಪರೂಪದ, ವಿನಾಶದ ಅಂಚಿನಲ್ಲಿರುವ, ಅಪಾಯಕ್ಕೆ ಒಳಗಾಗಿರುವ ಪ್ರಾಣಿ ಮತ್ತು ಸಸ್ಯ ಪ್ರಭೇದಗಳಿಗೆ ಸಿಮಿಲಿಪಾಲ್ ನೆಲೆಯಾಗಿದೆ. ಅಲ್ಲಿ ಹುಲಿ, ಚಿರತೆ ಮುಂತಾದ ದೊಡ್ಡ ಗಾತ್ರದ ಮಾಂಸಾಹಾರಿ ಪ್ರಾಣಿಗಳಲ್ಲದೇ ಆನೆ, ಕಾಡುಕೋಣ (Indian Gaur) ಮುಂತಾದ ಭಾರೀ ಗಾತ್ರದ ಸಸ್ಯಾಹಾರಿ ಪ್ರಾಣಿಗಳೂ ಇವೆ.
- ಸಿಮಿಲಿಪಾಲ್‌ನ ಹುಲಿಗಳು ಮಧ್ಯ ಭಾರತದ ಹುಲಿಗಳ ವಿಶಿಷ್ಟವಾದ ನಿರ್ದಿಷ್ಟ ಸಂತತಿಯನ್ನು ಪ್ರತಿನಿಧಿಸುತ್ತವೆ. ಆಗಾಗ ಕಂಡುಬರುವ ಕಪ್ಪು ಬಣ್ಣದ ಹುಲಿಗಳು ಈ ಪ್ರದೇಶವನ್ನು ಇನ್ನಷ್ಟು ವಿಶೇಷವನ್ನಾಗಿ ಮಾಡಿದ್ದು, ಇದು ಇಡೀ ಜಗತ್ತಿನಲ್ಲೇ ಇಂತಹ ಹುಲಿಗಳ ಏಕೈಕ ವಾಸಸ್ಥಾನವಾಗಿದೆ.
- ಕೃಷ್ಣವರ್ಣದ ಹುಲಿಗಳು ಬಂಗಾಳ ಹುಲಿಗಳ ಅಪರೂಪದ ವೈವಿಧ್ಯವಾಗಿದ್ದು, ಸಿಮಿಲಿಪಾಲ್‌ನಲ್ಲಿ ಮಾತ್ರ ಕಂಡುಬರುತ್ತವೆ. ಇವು ಒಂದು ಪ್ರಮುಖ ಪ್ರಭೇದದ ಒಳಗೆಯೇ ಇರುವ ವೈವಿಧ್ಯವನ್ನು ತೋರಿಸಿಕೊಡುತ್ತದೆ. ಅವುಗಳ ವಿಶಿಷ್ಟ ರೂಪಲಕ್ಷಣಗಳು ಮತ್ತು ಸಾಂಸ್ಕೃತಿಕ ಮಹತ್ವವು ಅವುಗಳನ್ನು ನೈಸರ್ಗಿಕ ಪ್ರಪಂಚದಲ್ಲಿ ಕುತೂಹಲಕಾರಿ ಮತ್ತು ಸೌಂದರ್ಯ ಹಾಗೂ ನಿಗೂಢತೆಯ ಸಂಕೇತವನ್ನಾಗಿ ಮಾಡಿವೆ. ಹುಲಿಗಳ ವಾಸಸ್ಥಾನಗಳನ್ನು ರಕ್ಷಿಸುವ ಮತ್ತು ಹುಲಿಗಳನ್ನು ಉಳಿಸುವ ಗುರಿಹೊಂದಿರುವ ವಿವಿಧ ರೀತಿಯ ಸಂರಕ್ಷಣಾ ಪ್ರಯತ್ನಗಳು ಈ ಕೃಷ್ಣವರ್ಣದ ಅದ್ಭುತವಾದ ಹುಲಿಗಳ ವಂಶವಾಹಿ ವೈವಿಧ್ಯವನ್ನು ಉಳಿಸಿಕೊಳ್ಳುವುದಕ್ಕೂ ನಿರ್ಣಾಯಕ ಅಂಶಗಳಾಗಿವೆ.

ವಿದೇಶ ವಿದ್ಯಮಾನ

ಗುರುಶಂಕರ್ ಕೆ.ಪಿ.

ಇಸ್ರೇಲ್ ವಿರುದ್ಧ ನರಮೇಧದ ಆರೋಪ: ಜನವರಿ 2024ರಲ್ಲಿ ದಕ್ಷಿಣ ಆಫ್ರಿಕಾ ಇಸ್ರೇಲ್ ವಿರುದ್ಧ ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ನರಮೇಧದ ಪ್ರಕರಣ ದಾಖಲಿಸಿದೆ. 'ಅಂತರರಾಷ್ಟ್ರೀಯ ನರಮೇಧದ ವಿರೋಧಿ ಒಪ್ಪಂದ'ವನ್ನು ಉಲ್ಲಂಘಿಸಿದೆ ಎಂದು ಆರೋಪಿಸಿದೆ.

- ನರಮೇಧವೆಂದರೆ ಒಂದು ರಾಷ್ಟ್ರ, ಜನಾಂಗ ಅಥವಾ ಧಾರ್ಮಿಕ ಗುಂಪನ್ನು ನಾಶ ಮಾಡುವ ಉದ್ದೇಶದಿಂದ ಹತ್ಯೆ ಮಾಡುವುದು. ದೈಹಿಕ ಅಥವಾ ಮಾನಸಿಕ ಹಾನಿ ಉಂಟುಮಾಡುವುದು ಅಥವಾ ಇನ್ನಿತರೆ ಸ್ವರೂಪದ ವಿನಾಶಕಾರಿ ಚಟುವಟಿಕೆಗಳಿಂದ ಜೀವಕ್ಕೆ ಹಾನಿ ಕಾರ್ಯದಲ್ಲಿ ತೊಡಗಿದರೆ ಅದನ್ನು ನರಮೇಧ ಎಂದು ಈ ಒಪ್ಪಂದದಲ್ಲಿ ಉಲ್ಲೇಖಿಸಲಾಗಿದೆ.
- **ದಕ್ಷಿಣ ಆಫ್ರಿಕಾದ ಆರೋಪಗಳು:** ಅಕ್ಟೋಬರ್ 2023ರಿಂದ ಇಸ್ರೇಲ್ ಪ್ಯಾಲೆಸ್ಟೀನ್ ಮೇಲೆ ಗಾಜಾ ಪಟ್ಟಿಯಲ್ಲಿ ಶಸ್ತ್ರಸಜ್ಜಿತ ದಾಳಿಯನ್ನು ಪ್ರಾರಂಭಿಸಿದ್ದು ನರಮೇಧದ ಉದ್ದೇಶವನ್ನು ಹೊಂದಿದೆ ಎಂದು ಆರೋಪಿಸಿದೆ. ನಾಗರಿಕ ಸಮುದಾಯದ ಹತ್ಯೆ ಮತ್ತು ಪ್ಯಾಲೆಸ್ಟೀನ್ ನಿವಾಸಿಗಳನ್ನು ಸ್ಥಳಾಂತರ ಮಾಡುವ ಉದ್ದೇಶ ಇಸ್ರೇಲ್‌ಗೆ ಇತ್ತು. ಕೆಲ ಸಂದರ್ಭಗಳಲ್ಲಿ ಸಾರ್ವಜನಿಕರು ಕೂಡ ಪ್ಯಾಲೆಸ್ಟೀನ್ ನಿವಾಸಿಗಳ ಮೇಲೆ ಹಲ್ಲೆ ಮಾಡುತ್ತಿದ್ದರೂ ಯಾವುದೇ ರೀತಿಯ ಕಾನೂನು ಕ್ರಮವನ್ನು ಜರುಗಿಸಲು ಇಸ್ರೇಲ್ ವಿಫಲವಾಗಿದೆ ಎಂದು ದಕ್ಷಿಣ ಆಫ್ರಿಕಾ ಆರೋಪಿಸಿದೆ
- **ಹಿಂದಿನ ಪ್ರಕರಣಗಳು:** ಇದೇ ಸ್ವರೂಪದ ಪ್ರಕರಣಗಳನ್ನು ಉಕ್ರೇನ್, ರಷ್ಯಾದ ವಿರುದ್ಧ ಮತ್ತು ಗಾಂಭಿಯ ಮಯನ್ಮಾರ್ ವಿರುದ್ಧ ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿತ್ತು.

ಈಕ್ವೆಡಾರ್‌ನಿಂದ ತುರ್ತು ಪರಿಸ್ಥಿತಿಯ ಘೋಷಣೆ

ಈಕ್ವೆಡಾರ್ ನ ಕುಖ್ಯಾತ ಅಪರಾಧಿ ಜೈಲಿನಿಂದ ತಪ್ಪಿಸಿಕೊಂಡ ಕಾರಣದಿಂದ ಈಕ್ವೆಡಾರ್ ಅಧ್ಯಕ್ಷರಾದ ಡೇನಿಯಲ್ ನಬಾವ 60 ದಿನಗಳ ತುರ್ತುಪರಿಸ್ಥಿತಿಯನ್ನು ಹೇರಿದ್ದಾರೆ.

- ತಪ್ಪಿಸಿಕೊಂಡ ವ್ಯಕ್ತಿಯನ್ನು ಬಂಧಿಸಲು ಸಾಧ್ಯವಾಗದ ಕಾರಣ, ಇದರಿಂದ ರಾಷ್ಟ್ರದಾದ್ಯಂತ ವಿವಿಧ ರೀತಿಯ ಸಮಸ್ಯೆಗಳು ಉದ್ಭವವಾಗಬಹುದಾದ ಸಾಧ್ಯತೆ ಹೆಚ್ಚಾಗಿರುವುದರಿಂದ ಈ ಕ್ರಮ ಕೈಗೊಂಡಿದ್ದಾರೆ.
- ಈಕ್ವೆಡಾರ್‌ನ ಕುಖ್ಯಾತ ಗ್ಯಾಂಗ್‌ಸ್ಟರ್ ಜೋಸ್ ಅಡಾಲ್ಫೋ ಮಸ್ಯಾಸ್ (ಫಿಟೋ ಎಂಬ ಹೆಸರಿನಿಂದ ಕುಖ್ಯಾತಿಗೊಂಡಿದ್ದ) 34 ವರ್ಷಗಳ ಕಾಲ ಜೈಲು ಶಿಕ್ಷೆಯನ್ನು ಅನುಭವಿಸುತ್ತಿದ್ದ. ಮಾದಕ ವಸ್ತುಗಳ ಸಾಗಣೆ, ಹತ್ಯೆ ಪ್ರಕರಣಗಳು, ಕೊಲೆ ಸುಲಿಗೆಗಳಲ್ಲಿ ಆರೋಪಗಳು ಸಾಬೀತಾಗಿದ್ದವು.

ಸುಸ್ಥಿರ ಇಂಧನ ಪಾಲುದಾರಿಕೆ

ಡೆನ್ಮಾರ್ಕ್ ಸರ್ಕಾರ ಸುಸ್ಥಿರ ಇಂಧನ ವಲಯದಲ್ಲಿ ಭಾರತದೊಂದಿಗೆ ಪಾಲುದಾರಿಕೆಯನ್ನು ಹೊಂದಲು 'ಹಸಿರು ಇಂಧನ ಭಾರತ ಒಕ್ಕೂಟ' ಪ್ರಾರಂಭಿಸುವ ಘೋಷಣೆ ಮಾಡಿದೆ. ಎರಡು ರಾಷ್ಟ್ರಗಳ ನಡುವೆ ಹಸಿರು ಇಂಧನದ ಬಳಕೆಯನ್ನು ಹೆಚ್ಚಿಸುವ ಉದ್ದೇಶದಿಂದ ಮತ್ತು ಶುದ್ಧ ಜಲಜನಕ ಇಂಧನವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಈ ಕ್ರಮಕ್ಕೆ ಮುಂದಾಗಿವೆ.

- 2020ರಲ್ಲಿ ಎರಡು ರಾಷ್ಟ್ರಗಳ ನಡುವೆ ಹಸಿರು ಇಂಧನ ವಲಯ ಕಾರ್ಯತಂತ್ರದ ಸಹಭಾಗಿತ್ವ ಒಪ್ಪಂದವನ್ನು ಸಹಿ ಹಾಕಲಾಗಿತ್ತು.
- ಭಾರತ 2070ರ ಒಳಗಾಗಿ ಶೂನ್ಯ ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆ ಗುರಿಯನ್ನು ಹೊಂದಿದ್ದು ಈ ನಿಟ್ಟಿನಲ್ಲಿ ಭಾರತಕ್ಕೆ ಬೆಂಬಲ ನೀಡುವ ಉದ್ದೇಶದಿಂದ ಡೆನ್ಮಾರ್ಕ್ ಮುಂದಾಗಿದೆ.

ಭಾರತ ಮತ್ತು ಮಾರಿಷಸ್ ಜಂಟಿ ಒಪ್ಪಂದಕ್ಕೆ ಸಹಿ

2024ರ ಪ್ರಾಥಮಿಕ ಹಂತದಲ್ಲಿ ಇಸ್ರೊ ಸಂಸ್ಥೆ ಭಾರತ ಮತ್ತು ಮಾರಿಷಸ್ ಜಂಟಿಯಾಗಿ ಅಭಿವೃದ್ಧಿಪಡಿಸುವ ಸಣ್ಣ ಉಪಗ್ರಹವನ್ನು ಉಡಾಯಿಸಲು ನಿರ್ಧಾರವನ್ನು ಕೈಗೊಂಡಿದ್ದು ಈ ನಿಟ್ಟಿನಲ್ಲಿ ಎರಡು ರಾಷ್ಟ್ರಗಳ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

- ಒಪ್ಪಂದ ಸಹಿ ಹಾಕಿರುವ ಸಂಸ್ಥೆಗಳು-ಇಸ್ರೊ ಮತ್ತು ಮಾರಿಷಸ್ ರಿಸರ್ಚ್ ಅಂಡ್ ಇನ್ನೋವೇಶನ್ ಕೌನ್ಸಿಲ್.
- 1986ರಲ್ಲಿ ಭಾರತ ಸರ್ಕಾರ ತನ್ನ ಬಾಹ್ಯಾಕಾಶ ಚಟುವಟಿಕೆಗಳಿಗೆ ಸಹಾಯವಾಗಲು ಮಾರಿಷಸ್ ಗ್ರೌಂಡ್ ಟ್ರಾಕಿಂಗ್ ಸ್ಟೇಷನ್ ಸ್ಥಾಪಿಸಿದ್ದು ಇಂದಿಗೂ ಕೂಡ ಎರಡು ರಾಷ್ಟ್ರಗಳ ನಡುವಿನ ಈ ಸಹಕಾರ ಮುಂದುವರೆಯುತ್ತಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

SECOND LANGUAGE- ENGLISH

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

37. 'So we shuddered there in silence, -For the stoutest held his breath,'

Who does 'we' refer to?

Ans:- We refer to all the Sailors in the wrecked ship.

b. What does 'stoutest' mean in the context?

In this context the stoutest means the strongest brave sailor.

c. Why did he hold his breath?

He hold his breath out of fear because the sea was roaring like a hungry lion.

VIII. Given below is a profile, write a paragraph using the clues given below:

38. Sarojini Naidu : Date of Birth: 13th February 1879, Hyderabad.

Parents: Barada Sundari Devi, Aghornath, Chattopadhyaya.

Education: University of Madras; King's college, London.

Notable works: In the Bazaars of Hyderabad, The Golden Threshold.

Associations: Indian National Congress.

Ans:- Sarojini Naidu was born on 13th February 1879 in Hyderabad. Her Parents were Varada Sundari Devi and Aghornath Chattopadhyaya. She studied in University of Madras (now Chennai) and later in Kings College in London. She was a well known Poetress. Her notable works are "In the Bazaars of Hyderabad and The Golden Threshold. She was a patriotic woman worked under Indian National Congress.

IX. Develop the story using the clues given below:


39. Three friends - two geese, a tortoise - decide to migrate - food, water - geese fly - tortoise can't - devise a way - carry tortoise - hold stick with their beaks - tortoise not to speak – hold the middle of the stick - children. Clap - tortoise angry - bursts out - fell - moral.

The geese and a tortoise

Once upon a time the three friends were live in the forest. They were two geese and a tortoise. Because of the shortage of Rain, it was very difficult to find food and water in their place. They thought and decided to migrate to the place. The geese were ready to fly but tortoise cannot fly. So they make a plan. They brought a strong stick and the two geese hold that stick two ends and the tortoise was hold the stick in the middle with its mouth. The geese were instructed to tortoise during their flying. It should not talk. The tortoise agreed. They started their journey, middle of the journey, the naughty Children seeing the rare view of their flying, they clapped loudly. Their clap made the tortoise insult and it became angry. So it starts to scold them. Whenever it opens its mouth, it fell down and died.

Moral: We should not anger on others. It will harm us and Think twice before you work/talk.

X. Study the picture given below. Write a description or an account of what the picture suggests to you in a paragraph:



40. The above pictures represents over traffic. The number of vehicles increased

The increase in vehicles is a major issue in cities like Bengaluru. The rapid urbanization in India has led to a significant increase in the number of motor vehicles. As the number of vehicles increases, so does the congestion, and vehicles are becoming the main source of air pollution in urban India.

it is very difficult or horrible to travel. Where Pot holes in the road, Authorities should repair the Pot holes now & then. Over speeding should be checked to avoid accidents. If the authorities built the Fly overs, it will help the riders and travellers. All people should aware of all these anti should Co-operate with the authorities

XI. Read the following passage and answer the questions that follow:

41. There seems to be a general opinion in this country that Sardar Patel was slightly of a harsh and rough temperament. Men call him the 'Iron man Of India.' He was, no doubt, an Iron man in the sense that .one could rely on him for strict and efficient administration. But as a man, to those who had the good fortune of coming into close contact with him, he was kind and considerate. At times, he even became emotional, where his friends and followers were concerned. However, it goes without saying that the Sardar had the great skill for organizing affairs. He knew the way of picking people and putting them in their proper places. Once he judged a man and found him correct, he trusted him fully and got him to do anything he wanted.

A. What lessons do you learn from the life of the Sardar Patel?

Ans:- The lessons we learn from the life of Sardar Patel were:(i) The Strict and efficient administration.
(ii) The Great skill for Organizing affairs.
(iii) The way of picking people and putting them in their proper places.
(iv) Judging a man and found him correct, trust him fully and got him to do anything he wanted.

(Contd…….)

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC MATHEMATICS

REVISION : MODEL QUESTIONS

41. Solve the following system of equations by matrix method: $x+y+z=6$ $y=3z=11$ $x-2y+z=0$.

$$\text{Ans}:-\ A=\begin{bmatrix}1&1&1\\0&1&3\\1&-2&1\end{bmatrix};\ X=\begin{bmatrix}x\\y\\z\end{bmatrix}\text{ and }B=\begin{bmatrix}6\\11\\0\end{bmatrix}$$

$AX=B$

$$|A|=\begin{vmatrix}1&1&1\\0&1&3\\1&-2&1\end{vmatrix}=1(1+6)-1(0-3)+(0-0)=9$$

$$\text{adj}A=\begin{bmatrix}\begin{vmatrix}1&3\\-2&1\end{vmatrix}&-\begin{vmatrix}3&-3\\-1&1\end{vmatrix}&\begin{vmatrix}3&0\\-1&3\end{vmatrix}\\-\begin{vmatrix}-3&2\\3&1\end{vmatrix}&\begin{vmatrix}7&2\\-1&1\end{vmatrix}&-\begin{vmatrix}7&-3\\-1&3\end{vmatrix}\\\begin{vmatrix}-3&2\\0&-3\end{vmatrix}&-\begin{vmatrix}7&2\\3&-3\end{vmatrix}&\begin{vmatrix}7&-3\\3&0\end{vmatrix}\end{bmatrix}^T=\begin{vmatrix}7&3&-1\\-3&0&3\\2&-3&1\end{vmatrix}^T$$

$$\text{adj}A=\begin{bmatrix}7&3&-1\\-3&0&3\\2&-3&1\end{bmatrix}\Rightarrow A^{-1}=\frac{\text{adj}A}{|A|}$$

$X=A^{-1}B$

$$\Rightarrow\frac{1}{9}\begin{bmatrix}7&3&-1\\-3&0&3\\2&-3&1\end{bmatrix}\begin{bmatrix}6\\11\\0\end{bmatrix}\Rightarrow\frac{1}{9}\begin{bmatrix}9\\18\\27\end{bmatrix}$$

$\Rightarrow x=1,\quad y=2,\quad z=3$

42. If $y=5\cos(\log x)+7\sin(\log x)$, show that $x^2y_2+xy_1+y=0$.

Ans:- Consider, $y=5\cos(\log x)+7\sin(\log x)$

D. w. r. to x

$y_1=5(-\sin(\log x)\,1/x+7\cos(\log x))\,1/x$

$\Rightarrow xy_1=5[-\sin(\log x)+7\cos(\log x)]$ D. w.r.t x

$\Rightarrow xy_2+xy_1=5[-\cos(\log x)1/x+7(-\sin(\log x)\,1/x)]$

$\Rightarrow x^2y_2+xy_1=-(5\cos(\log x)+7\sin(\log x))$

$\Rightarrow x^2y_2+xy_1=-y\Rightarrow x^2y_2+xy_1+y=0$

43. The length of x of a rectangle is decreasing at the rate of 3 cm/min & width y is increasing at the rate of 2 cm/min when $x=10$ cm and $y=6$ cm. Find the rates of change of –

i) the perimeter and ii) the area of the rectangle.

$\text{Ans}:-$ Given $\frac{dx}{dt}=-3;\quad \frac{dy}{dt}=2$

Perimeter, $P=2(x+y)$ d. w.r.t. t

$$\frac{dp}{dt}=2\left(\frac{dx}{dt}+\frac{dy}{dt}\right)$$

$$\frac{dp}{dt}=2(-3+2)=-2\text{cm}/\text{min}$$

$\therefore$ Perimeter of rectangle is decreasing at the rate of 2 cm/min

$$\text{d.w.r.t.x}\ \frac{dA}{dt}=x\frac{dy}{dt}+y\frac{dx}{dt}$$

$$\frac{dA}{dt}=10(2)+6(-3)=2\text{cm}/\text{min}$$

$\therefore$ Area is increasing at 2cm / min

45. Find $\int\frac{dx}{\sqrt{a^2-x^2}}$ hence evaluate $\int\frac{dx}{7-6x-x^2}$

Ans:- Let $x=a\sin\theta\Rightarrow dx=a\cos\theta\,d\theta$


$\theta=\sin^{-1}\frac{x}{a}$

$$\int\frac{a\cos\theta\,d\theta}{\sqrt{a^2-a^2\sin^2\theta}}=\frac{a}{a}\int\frac{\cos\theta d\theta}{\sqrt{1-\sin^2\theta}}=\int d\theta=\theta+c=\sin^{-1}\frac{x}{a}+c$$

$$\int\frac{dx}{\sqrt{7-6x-x^2}}=\int\frac{dx}{\sqrt{16-(x+3)^2}}=\sin^{-1}\left(\frac{x+3}{4}\right)+c$$

46. Using integration find the area of the region bounded by the triangle whose vertices are (-1, 0) (1, 3) & (3, 2)

Ans:-



$$\text{Equation of } A(-1,0);B(1,3)=\frac{y_2-y_1}{x_2-x_1}=\frac{y-y_1}{x-x_1}$$

$$=\frac{3-0}{1-(-1)}=\frac{y-0}{x-(-1)}=\frac{3(x+1)}{2}=y$$

$$y=\frac{3x+3}{2}$$

||ly eqn of AC is $y=\frac{-x+7}{2}$ & eqn of BC is $y=\frac{x+1}{2}$

Required area of triangle ABC

$$=\int_{-1}^{1}\frac{3x+3}{2}dx+\int_{1}^{3}\frac{-x+7}{2}dx-\int_{-1}^{3}\frac{x+1}{2}dx$$

$$\Rightarrow\frac{3}{2}\left[\frac{x^2}{2}+x\right]_{-1}^{1}+\left[\frac{-x^2}{4}+\frac{7x}{2}\right]_{1}^{3}-\left[\frac{x^2}{4}+\frac{1}{2}x\right]_{-1}^{3}$$

$$\Rightarrow\frac{3}{2}(2)+\frac{20}{4}-4=4\text{ sq units}$$

47. Solve the different equation $x\log x\frac{dy}{dx}+y=\frac{2}{x}\log x$

$\text{Ans}:-$ Given $\frac{dy}{dx}+\frac{y}{x\log x}=\frac{2}{x^2}$ is a L.D.E

compare with $\frac{dy}{dx}+py=Q$

we get, $P=\frac{1}{x\log x}$ and $Q=\frac{2}{x^2}$

(Contd…..)

ಚಿತ್ರದುರ್ಗ ಲೋಕಸಭಾ ಕ್ಷೇತ್ರ: ಹೊರಗಿನವರ ಬಗ್ಗೆ ಕಾಂಗ್ರೆಸ್, ಬಿಜೆಪಿಯಲ್ಲಿ ಹೆಚ್ಚಿದ ಅಸಮಾಧಾನ

ಆಕಾಂಕ್ಷಿಗಳಿಂದ 'ಸ್ಥಳೀಯ ಅಭ್ಯರ್ಥಿ' ದಾಳ

• ಜಿ.ಬಿ. ನಾಗರಾಜ

ಚಿತ್ರದುರ್ಗ: ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಸ್ಥಳೀಯ ಅಭ್ಯರ್ಥಿಯನ್ನು ಅಖಾಡಕ್ಕೆ ಇಳಿಸಬೇಕು ಎಂಬ ದಾಳವನ್ನು ಕಾಂಗ್ರೆಸ್ ಮತ್ತು ಬಿಜೆಪಿಯ ಟಿಕೆಟ್ ಆಕಾಂಕ್ಷಿಗಳು ಉರುಳಿಸಿದ್ದಾರೆ. ಚುನಾವಣೆ ಸಮೀಪಿಸುತ್ತಿದ್ದಂತೆಯೇ ಈ ಧ್ವನಿ ಇನ್ನಷ್ಟು ಜೋರಾಗುತ್ತಿದೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮುರು, ಚಿತ್ರದುರ್ಗ, ಹೊಸದುರ್ಗ, ಹೊಳಲ್ಕೆರೆ ಹಾಗೂ ತುಮಕೂರು ಜಿಲ್ಲೆಯ ಶಿರಾ ಮತ್ತು ಪಾವಗಡ ವಿಧಾನಸಭಾ ಕ್ಷೇತ್ರ ಒಳಗೊಂಡಿರುವ ಲೋಕಸಭಾ ಕ್ಷೇತ್ರವನ್ನು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆಯ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಪ್ರತಿನಿಧಿಸುತ್ತಿದ್ದಾರೆ. 'ಹತ್ತು ವರ್ಷಗಳಿಂದ ಕ್ಷೇತ್ರವನ್ನು ಹೊರಗಿನವರು ಪ್ರತಿನಿಧಿಸುತ್ತಿದ್ದಾರೆ' ಎಂಬ ಚರ್ಚೆ ಮುನ್ನೆಲೆಗೆ ಬಂದಿದೆ.

ಲೋಕಸಭಾ ಕ್ಷೇತ್ರ ವ್ಯಾಪ್ತಿಯ 8 ವಿಧಾನಸಭಾ ಕ್ಷೇತ್ರಗಳ ಪೈಕಿ ಏಳು ಕ್ಷೇತ್ರಗಳನ್ನು ಕಾಂಗ್ರೆಸ್ ಪ್ರತಿನಿಧಿಸುತ್ತಿದೆ. ಹೊಳಲ್ಕೆರೆ ವಿಧಾನಸಭಾ ಕ್ಷೇತ್ರ


ನಾರಾಯಣ ಸ್ವಾಮಿ


ಜನಾರ್ದನ ಸ್ವಾಮಿ


ಬಿ.ಎನ್‌.ಚಂದ್ರಪ್ಪ

ಮಾತ್ರ ಬಿಜೆಪಿ ಹಿಡಿತದಲ್ಲಿದೆ. ವಿಧಾನಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆದ್ದಿರುವ ಉಮೇದಿ ನಲ್ಲಿರುವ ರಾಜ್ಯದ ಆಡಳಿತಾರೂಢ ಪಕ್ಷ ಕ್ಷೇತ್ರವನ್ನು 'ಕೈ'ವಶ ಮಾಡಿಕೊಳ್ಳುವ ಉತ್ಸಾಹದಲ್ಲಿದೆ. ಬಿಜೆಪಿ- ಜೆಡಿಎಸ್ ಮೈತ್ರಿ ಕಮಲ ಪಾಳೆಯದ ಹುಮ್ಮಸ್ಸು ಹೆಚ್ಚಿಸಿದೆ.

'ಭ್ರಷ್ಟಾಚಾರದಿಂದ ಬೇಸತ್ತು ರಾಜಕಾರಣದಿಂದ ದೂರ ಉಳಿಯುವ ಬಗ್ಗೆ ಆಲೋಚಿಸಿದ್ದೇನೆ. ಈ ಭ್ರಷ್ಟ ವ್ಯವಸ್ಥೆಯಲ್ಲಿ ಮುಂದುವರಿಯುವ ರಾಜಕಾರಣಿ ನಾನಲ್ಲ' ಎಂದು ಸಚಿವ ಎ.ನಾರಾಯಣಸ್ವಾಮಿ ನೀಡಿದ ಹೇಳಿಕೆ ಸಂಚಲನ ಸೃಷ್ಟಿಸಿದೆ. ಮೂಲತಃ ಆನೇಕಲ್‌ನ ಸಚಿವರು ಚುನಾವಣಾ ರಾಜಕಾರಣದಿಂದ ದೂರ ಉಳಿಯಬಹುದು ಎಂಬ ಲೆಕ್ಕಾಚಾರದಲ್ಲಿ ಕ್ಷೇತ್ರದಲ್ಲಿನ ಬಿಜೆಪಿ ಟಿಕೆಟ್

> **ಟಿಕೆಟ್‌ಗಾಗಿ ಅಂದಾಜು 8 ಜನ ಆಕಾಂಕ್ಷಿಗಳಿರುವುದು ಪಕ್ಷದ ಗಮನಕ್ಕೆ ಬಂದಿದೆ. ಗೆಲುವನ್ನು ಮಾನದಂಡವಾಗಿಸಿ ಟಿಕೆಟ್ ಹಂಚಿಕೆ ಮಾಡುವುದು ಪಕ್ಷದ ನೀತಿ**
> **ಕೆ.ಎಸ್.ನವೀನ್,** ಬಿಜೆಪಿ ರಾಜ್ಯ ವಕ್ತಾರ

ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗುತ್ತಿದೆ.

'ಲೋಕಸಭಾ ಚುನಾವಣೆಗೆ ನಾರಾಯಣಸ್ವಾಮಿ ಮತ್ತೆ ಸ್ಪರ್ಧೆ ಮಾಡುತ್ತಾರೆಯೇ?' ಎಂಬ ಪ್ರಶ್ನೆಗೆ ಪಕ್ಷದ ವರಿಷ್ಠರೇ ಉತ್ತರ ನೀಡಬೇಕಿದೆ. 2009ರಲ್ಲಿ ಕ್ಷೇತ್ರದಲ್ಲಿ ಮೊದಲ ಬಾರಿಗೆ ಕಮಲ ಅರಳಿಸಿದ್ದ ಜನಾರ್ದನ ಸ್ವಾಮಿ ಇದೀಗ ಮತ್ತೆ ಪ್ರಮುಖ ಆಕಾಂಕ್ಷಿಯಾಗಿದ್ದಾರೆ. ಸ್ಥಳೀಯರಾಗಿದ್ದು 2014ರಲ್ಲಿ ಪರಾಭವಗೊಂಡಿದ್ದ ಇವರು, 2019ರಲ್ಲಿ ಬಿಜೆಪಿ ಟಿಕೆಟ್‌ನ ಪ್ರಬಲ ಆಕಾಂಕ್ಷಿಯಾಗಿದ್ದರು. ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ), ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಹಾಗೂ ಬಾಬಾ ಅಣು ಸಂಶೋಧನಾ ಕೇಂದ್ರಗಳನ್ನು ಕ್ಷೇತ್ರ ವ್ಯಾಪ್ತಿಯಲ್ಲಿ ತಂದು ವಿಜ್ಞಾನ ನಗರಿ ನಿರ್ಮಿಸಿದ ಹಿರಿಮೆಯನ್ನು ಬೆನ್ನಿಗೆ ಇಟ್ಟುಕೊಂಡಿರುವ ಇವರು ಟಿಕೆಟ್ ನಿರೀಕ್ಷಿಸುತ್ತಿದ್ದಾರೆ.

ನಿವೃತ್ತ ಐಎಎಸ್ ಅಧಿಕಾರಿಕಾರಿಗಳಾದ ಲಕ್ಷ್ಮಿನಾರಾಯಣ, ಎಂ.ಕೆ. ಶ್ರೀರಂಗಯ್ಯ, ಮಾಯಕೊಂಡದ ಮಾಜಿ ಶಾಸಕ ಪ್ರೊ. ಲಿಂಗಪ್ಪ, ಹರಪನಹಳ್ಳಿಯ ವೈದ್ಯ ಡಾ.ರಮೇಶ್, ಸೂರನಹಳ್ಳಿ ವಿಜಯಕುಮಾರ್, ಎಂ.ಸಿ. ರಘುಚಂದನ್, ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಹಿನ್ನೆಲೆಯ ಮೂಡಿಗೆರೆಯ ನರೇಂದ್ರ ಟಿಕೆಟ್ ನಿರೀಕ್ಷೆಯಲ್ಲಿದ್ದಾರೆ. ಅಚ್ಚರಿಯ ಅಭ್ಯರ್ಥಿ ಬರುವ ಕೌತುಕ ಕೂಡ ಬಿಜೆಪಿಯಲ್ಲಿದೆ.

ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಹೊರಗಿನವರಿಗೆ ಹೆಚ್ಚು ಮಣೆ ಹಾಕಲಾಗಿದೆ ಎಂಬ ಅಸಮಾಧಾನ ಸ್ಥಳೀಯ ನಾಯಕರಲ್ಲಿದೆ. ಸ್ಥಳೀಯರಿಗೆ ಟಿಕೆಟ್ ನೀಡಬೇಕು ಎಂಬ ವಾದವನ್ನು ಬಿಜೆಪಿ ಮತ್ತು ಕಾಂಗ್ರೆಸ್‌ನಲ್ಲಿ ಮುಂದಿಡಲಾಗುತ್ತಿದೆ. ಎರಡು ರಾಜಕೀಯ ಪಕ್ಷಗಳಿಗೆ ಇದು ಬಿಸಿತುಪ್ಪವಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಕಾಂಗ್ರೆಸ್ ಟಿಕೆಟ್‌ಗೆ ಪೈಪೋಟಿ

ಕಾಂಗ್ರೆಸ್ ಟಿಕೆಟ್ ಕೋರಿ 24 ಆಕಾಂಕ್ಷಿಗಳು ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷ, 2014ರಲ್ಲಿ ಕ್ಷೇತ್ರ ಪ್ರತಿನಿಧಿಸಿದ್ದ ಬಿ.ಎನ್. ಚಂದ್ರಪ್ಪ, ಕೆಪಿಸಿಸಿ ಅಸಂಘಟಿತ ಕಾರ್ಮಿಕರ ವಿಭಾಗದ ಅಧ್ಯಕ್ಷ ಜಿ.ಎಸ್. ಮಂಜುನಾಥ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನೇರ್ಲಗುಂಟೆ ಎಂ.ರಾಮಪ್ಪ, ಜೆ.ಜೆ.ಹಟ್ಟಿ ತಿಪ್ಪೇಸ್ವಾಮಿ, ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರ ಪುತ್ರ ವಿನಯ್ ತಿಮ್ಮಾಪುರ, ಮಾಜಿ ಸಚಿವ ಪಾವಗಡದ ವೆಂಕಟರಮಣಪ್ಪ ಅವರ ಪುತ್ರ ಕುಮಾರಸ್ವಾಮಿ ಹೆಸರು ಪ್ರಮುಖವಾಗಿದೆ.

ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಬಿ.ಎನ್.ಚಂದ್ರಪ್ಪ ಈಗ ಮತ್ತೆ ಟಿಕೆಟ್ ನಿರೀಕ್ಷೆಯಲ್ಲಿ ಕ್ಷೇತ್ರ ಸುತ್ತಾಡುತ್ತಿದ್ದಾರೆ. ಟಿಕೆಟ್ ಕೋರಿ ಕೆಪಿಸಿಸಿಗೆ ಅರ್ಜಿ ಸಲ್ಲಿಸದಿದ್ದರೂ ಮಾಜಿ ಸಚಿವ ಎಚ್. ಆಂಜನೇಯ ಹೆಸರು ಕ್ಷೇತ್ರದಲ್ಲಿ ಹರಿದಾಡುತ್ತಿದೆ.

ಸುದ್ದಿ 2 ನಿಮಿಷ

ಮುದ್ದಹನುಮೇಗೌಡ ಕಾಂಗ್ರೆಸ್ ಅಭ್ಯರ್ಥಿ: ಸಚಿವ ಕೆ.ಎನ್. ರಾಜಣ್ಣ

ಕೊಡಿಗೇನಹಳ್ಳಿ (ತುಮಕೂರು): ತುಮಕೂರು ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮಾಜಿ ಸಂಸದ ಎಸ್.ಪಿ.ಮುದ್ದಹನುಮೇಗೌಡ ಸ್ಪರ್ಧಿಸಲಿದ್ದಾರೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದ್ದಾರೆ.

ಹೋಬಳಿಯ ಗುಟ್ಟೆ ಗ್ರಾಮಕ್ಕೆ ಬುಧವಾರ ಭೇಟಿ ನೀಡಿದ ಸಂದರ್ಭದಲ್ಲಿ ಮಾತನಾಡಿದ ಅವರು, ಈ ಬಾರಿ ಮುದ್ದಹನುಮೇಗೌಡ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಟಿಕೆಟ್ ನೀಡುವ ಅವಕಾಶ ಹೆಚ್ಚಿದೆ. ಈ ಬಗ್ಗೆ ವರಿಷ್ಠರು ಶೀಘ್ರದಲ್ಲಿ ನಿರ್ಧರಿಸಲಿದ್ದಾರೆ ಎಂದರು.

ಬಡವರು ಹಸಿವಿನಿಂದ ಇರಬಾರದು ಎಂಬ ಕಾರಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಕ್ಕಿ ಕೊಡುತ್ತಿದ್ದಾರೆ. ಐದು ಗ್ಯಾರಂಟಿ ಜಾರಿ ಮಾಡಿ ಬಡವರ ಪರ ನಿಂತಿದ್ದಾರೆ. ನಿಮ್ಮ ಪರವಾಗಿ ಕೆಲಸ ಮಾಡುವವರಿಗೆ ಲೋಕಸಭೆ ಚುನಾವಣೆಯಲ್ಲಿ ಮತ ನೀಡಿ, ಋಣ ತೀರಿಸಬೇಕು ಎಂದು ಕೇಳಿಕೊಂಡರು.

ಕುಮಾರಸ್ವಾಮಿ- ಸೋಮಣ್ಣ ಮುಕ್ಕಾಲು ತಾಸು ಮಾತುಕತೆ



ರಾಮನಗರ: ಬಿಜೆಪಿ ಮುಖಂಡ ವಿ. ಸೋಮಣ್ಣ ಬುಧವಾರ ಕೇತಗಾನಹಳ್ಳಿ ತೋಟದ ಮನೆಯಲ್ಲಿ ಜೆಡಿಎಸ್ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರನ್ನು ಬುಧವಾರ ಭೇಟಿ ಮಾಡಿದರು.

ಉಭಯ ಕುಶಲೋಪರಿ ನಡೆಸಿದ ಇಬ್ಬರೂ ನಂತರ ಸ್ಥಳದಲ್ಲಿದ್ದವರನ್ನು ಹೊರಗಡೆ ಕಳಿಸಿ ಮುಕ್ಕಾಲು ತಾಸು ರಹಸ್ಯವಾಗಿ ಮಾತುಕತೆ ನಡೆಸಿದರು.

ತುಮಕೂರು ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟು ಕೊಟ್ಟರೆ ಅಲ್ಲಿಂದ ತಾವು ಕಣಕ್ಕಿಳಿಯುವುದರ ಬಗ್ಗೆ ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸದ್ಯ ಬಿಜೆಪಿ ಸಂಸದರು ಪ್ರತಿನಿಧಿಸುತ್ತಿರುವ ತುಮಕೂರು ಕ್ಷೇತ್ರದಲ್ಲಿ ಜೆಡಿಎಸ್ ಟಿಕೆಟ್‌ಗೆ ಬೇಡಿಕೆ ಇಟ್ಟಿದೆ ಎನ್ನಲಾಗಿದೆ. ಅಲ್ಲಿಂದ ದೇವೇಗೌಡ ಅವರ ಕುಟುಂಬದವರೊಬ್ಬರು ಕಣಕ್ಕಿಳಿಯಲಿದ್ದಾರೆ ಎಂಬ ಮಾತು ಕೇಳಿ ಬರುತ್ತಿವೆ. ತುಮಕೂರು ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿರುವ ಸೋಮಣ್ಣ, ಇತ್ತೀಚೆಗೆ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಅದರ ಬೆನ್ನಲ್ಲೇ ಈಗ, ಅವರ ಪುತ್ರ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿರುವುದು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ.

ಬ್ಲ್ಯಾಕ್‌ಮೇಲ್ ಅಲ್ಲ ಮನವಿ: ಬಾಲಕೃಷ್ಣ

ಪ್ರಜಾವಾಣಿ ವಾರ್ತೆ

ಮಾಗಡಿ (ರಾಮನಗರ): 'ಬಿಜೆಪಿಯವರ ಮಂತ್ರಾಕ್ಷತೆ ಬದಲು ಕಾಂಗ್ರೆಸ್‌ನ ಗ್ಯಾರಂಟಿಗೆ ಜನ ಮತ ಹಾಕಬೇಕು ಎಂಬುದು ನನ್ನ ಮನವಿಯಷ್ಟೇ. ಒಂದು ವೇಳೆ ಹಾಕದಿದ್ದರೆ ಗ್ಯಾರಂಟಿ ಕೊಟ್ಟು ಏನೂ ಪ್ರಯೋಜನವಾಗಿಲ್ಲ, ಅದನ್ನು ರದ್ದುಗೊಳಿಸುವುದು ಒಳ್ಳೆಯದು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದೇನೆ. ಇದು ನನ್ನ ವೈಯಕ್ತಿಕ ಅಭಿಪ್ರಾಯವೇ ಹೊರತು ಪಕ್ಷದ್ದಲ್ಲ' ಎಂದು ಶಾಸಕ ಎಚ್.ಸಿ. ಬಾಲಕೃಷ್ಣ ಇಲ್ಲಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಜನ ಮತ ಹಾಕಲೇಬೇಕು. ಇಲ್ಲದಿದ್ದರೆ ಗ್ಯಾರಂಟಿ ರದ್ದು ಮಾಡುತ್ತೇವೆಂದು ನಾನು ಬ್ಲ್ಯಾಕ್‌ಮೇಲ್ ಮಾಡುತ್ತಿಲ್ಲ. ನಮಗೇ ಯಾಕೆ ಮತ ಹಾಕಬೇಕೆಂಬ ವಾಸ್ತವಾಂಶವನ್ನು ಜನರ ಮುಂದಿಡುತ್ತಿದ್ದೇನೆ. ಜನತೆಗೆ ಇದು ಗೊತ್ತಾಗಲಿ ಎಂದು ಆ ರೀತಿ ಹೇಳಿದ್ದೇನೆ' ಎಂದರು.

'ಹಿಂದೆ ಬಿಜೆಪಿಯವರು ಕಪ್ಪುಹಣ ವಾಪಸ್ ತಂದು ಎಲ್ಲರ ಖಾತೆಗೆ ₹15 ಲಕ್ಷ ಹಾಕುತ್ತೇವೆ ಎಂದಿದ್ದರು. ಯಾರಿಗಾದರೂ ಹಾಕಿದ್ದಾರೆಯೇ? ಅವರು ಹೇಳಿಯೂ ಕೊಡಲಿಲ್ಲ. ಆದರೆ, ನಾವು ಹೇಳಿದಂತೆ ಗ್ಯಾರಂಟಿಗಳನ್ನು ಜಾರಿ ಮಾಡಿದ್ದೇವೆ. ಇವುಗಳ ಪ್ರಯೋಜನ ಪಡೆದಿರುವ ಜನ ಚುನಾವಣೆಯಲ್ಲಿ ಶಕ್ತಿ ತುಂಬಿದರೆ ನಮಗೆ ಸ್ಫೂರ್ತಿ ಬರುತ್ತದೆ. ಮತ್ತಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡುತ್ತೇವೆ' ಎಂದರು.

'ರಾಜ್ಯದ ಜನ ಮಂತ್ರಾಕ್ಷತೆಗೆ ಮತ ಹಾಕಿದ್ದಾರೊ ಅಥವಾ ಗ್ಯಾರಂಟಿಗೆ ಹಾಕಿದ್ದಾರೊ ಎಂಬುದು ಚುನಾವಣೆ ಫಲಿತಾಂಶದಲ್ಲಿ ಗೊತ್ತಾಗಲಿದೆ' ಎಂದು ಹೇಳಿದರು.

'ಗ್ಯಾರಂಟಿ ಯೋಜನೆ ನಿಲ್ಲಿಸುವುದಿಲ್ಲ'

ಬೆಂಗಳೂರು: 'ರಾಜ್ಯ ಸರ್ಕಾರದ 'ಗ್ಯಾರಂಟಿ' ಯೋಜನೆಗಳು ಬಡವರ ಕಾರ್ಯಕ್ರಮಗಳಾಗಿದ್ದು, ಅವುಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಶಾಸಕ ಎಚ್.ಸಿ. ಬಾಲಕೃಷ್ಣ ಅವರು ಮಂಗಳವಾರ ನೀಡಿದ್ದ ಹೇಳಿಕೆಗೆ ಬುಧವಾರ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಗ್ಯಾರಂಟಿ ಯೋಜನೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮುಂದುವರಿಸಲಾಗುವುದು' ಎಂದರು.

ಚಿಕ್ಕಮಗಳೂರು: ಕಾಂಗ್ರೆಸ್ ವಿರುದ್ಧ ಬಿ.ವೈ. ವಿಜಯೇಂದ್ರ ಆಕ್ರೋಶ

'ಕೈ'ನಿಂದ ಮತದಾರರಿಗೆ ಬ್ಲ್ಯಾಕ್‌ಮೇಲ್'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ಅಕ್ಷತೆ ಬೇಕಾ- ಗ್ಯಾರಂಟಿ ಬೇಕಾ ಎಂದು ಕೇಳುವ ಮೂಲಕ ಜನರನ್ನು ಕಾಂಗ್ರೆಸ್ ಪಕ್ಷ ಬ್ಲ್ಯಾಕ್‌ಮೇಲ್ ಮಾಡುತ್ತಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ಮೂಡಿಗೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶಾಸಕ ಎಚ್.ಸಿ. ಬಾಲಕೃಷ್ಣ ಅವರು ಈ ರೀತಿ ಹೇಳಿಕೆ ನೀಡಿದ್ದಾರೆ. ಕಾಂಗ್ರೆಸ್ ನಾಯಕರಿಗೆ ನಾಚಿಕೆ ಆಗಬೇಕು' ಎಂದರು.

'ಶಾಲೆಗೆ ಹೋಗುವ ಮಕ್ಕಳಿಗೆ ಬಸ್ ಇಲ್ಲ, ರೈತರ ಪಂಪ್ ಸೆಟ್‌ಗೆ ವಿದ್ಯುತ್ ಇಲ್ಲ. ಇವರು ಯಾವ ಗ್ಯಾರಂಟಿ ಬಗ್ಗೆ ಮಾತನಾಡುತ್ತಿದ್ದಾರೆ. ಲೋಕಸಭೆ ಚುನಾವಣೆ ಘೋಷಣೆಗೂ ಮುನ್ನವೇ ಕಾಂಗ್ರೆಸ್ ಸೋಲು ಒಪ್ಪಿಕೊಂಡಿದೆ' ಎಂದು ಲೇವಡಿ ಮಾಡಿದರು.

'ಮೂರು ರಾಜ್ಯದಲ್ಲಿ ಬಿಜೆಪಿ ಗೆಲುವು, ಬಾಲರಾಮನ ಮೂರ್ತಿ ಪುನರ್ ಪ್ರತಿಷ್ಠಾಪನೆ ಬಳಿಕ ದೇಶದ ವಾತಾವರಣ ಬದಲಾಗಿದೆ. ಕಾಂಗ್ರೆಸ್ ನಾಯಕರು ಭಯಭೀತರಾಗಿ ಇಂಥ ಹೇಳಿಕೆ ನೀಡುತ್ತಿದ್ದಾರೆ' ಎಂದು ಅವರು ಹೇಳಿದರು.

'ಮಂಡ್ಯ ಜಿಲ್ಲೆ ಕೆರಗೋಡಿನಲ್ಲಿ ಹನಮಧ್ವಜ ಇಳಿಸಿದ ವಿಷಯದಲ್ಲಿ ಕಾಂಗ್ರೆಸ್ ಮುಖಂಡರು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ದ್ವಂದ್ವದಲ್ಲಿದ್ದಾರೆ. ಯಾವುದೇ ತೀರ್ಮಾನ ಮಾಡಲಾಗುತ್ತಿಲ್ಲ. ಕಾಂಗ್ರೆಸ್ ದೇಶ- ರಾಜ್ಯದ ಜನರ ಕ್ಷಮೆ ಕೇಳಬೇಕು' ಎಂದು ಒತ್ತಾಯಿಸಿದರು.

ದೃಷ್ಟಿಬೊಟ್ಟೂ ಉಳಿಯಲ್ಲ: ಅಶೋಕ

'ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಲ್ಲ, ಗ್ಯಾರಂಟಿ ನಿಲ್ಲಲ್ಲ. ಕಳೆದ ಬಾರಿ ದೃಷ್ಟಿ ಬೊಟ್ಟಿನಂತೆ ಒಂದು ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದಿತ್ತು. ಈ ಬಾರಿ ಅದನ್ನೂ ಕಳೆದುಕೊಳ್ಳಲಿದೆ' ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿದರು.

'ಗ್ಯಾರಂಟಿಗಳಿಂದ ಸರ್ಕಾರ ಪಾಪರ್ ಆಗಲಿದೆ ಎಂದು ಸರ್ಕಾರದ ಆರ್ಥಿಕ ಸಲಹೆಗಾರಾದ ಬಸವರಾಜ ರಾಯರೆಡ್ಡಿ ಹೇಳಿದ್ದಾರೆ. ಅದೇ ರೀತಿ ಶಾಸಕ ಎಚ್.ಸಿ. ಬಾಲಕೃಷ್ಣ ಹೇಳಿದ್ದಾರೆ. ಅವರೆಲ್ಲರೂ ಸರಿಯಾಗಿಯೇ ಹೇಳಿದ್ದಾರೆ' ಎಂದರು.

'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೋದ ಕಡೆಯಲ್ಲೆಲ್ಲ ಕಾಂಗ್ರೆಸ್ ಪಕ್ಷ ಅಧಿಕಾರ ಕಳೆದುಕೊಳ್ಳುತ್ತಿದೆ. ಬಿಹಾರದಲ್ಲಿ ಈಗಾಗಲೇ ಅವರು ಅಧಿಕಾರ ಕಳೆದುಕೊಂಡಿದ್ದಾರೆ. ಮಮತಾ ಬ್ಯಾನರ್ಜಿ, ಅರವಿಂದ ಕೇಜ್ರಿವಾಲ್ ದೂರವಾಗಿದ್ದಾರೆ. ಎಲ್ಲ ಕಡೆ 'ಇಲ್ಲ' ಎಂಬ ಪ್ರತಿಕ್ರಿಯೆ ಬಂದಿದ್ದು, ಕರ್ನಾಟಕದಲ್ಲೂ ಇಲ್ಲ ಎಂಬುದೇ ಗ್ಯಾರಂಟಿಯಾಗಲಿದೆ. ಆದ್ದರಿಂದ 'ಕಾಂಗ್ರೆಸ್ ಗೆಲ್ಲಲ್ಲ, ಗ್ಯಾರಂಟಿ ನಿಲ್ಲಲ್ಲ' ಎಂದು ಪ್ರತಿಪಾದಿಸಿದರು.

'ಚುನಾವಣೆ ಬಳಿಕ ಗ್ಯಾರಂಟಿಗೇ ಗ್ಯಾರಂಟಿ ಇಲ್ಲ'

ಹಾಸನ: 'ಲೋಕಸಭೆ ಚುನಾವಣೆ ಬಳಿಕ ಗ್ಯಾರಂಟಿಗೇ ಗ್ಯಾರಂಟಿ ಇರುವುದಿಲ್ಲ. ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿಯವರೇ ಇದನ್ನು ಒಪ್ಪಿಕೊಂಡಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಮುಂದಿನ ದಿನಗಳಲ್ಲಿ ಗ್ಯಾರಂಟಿ ಅನುಷ್ಠಾನಕ್ಕೆ ಕಟ್ಟುನಿಟ್ಟಿನ ನಿಯಮ ರೂಪಿಸಲು ಸರ್ಕಾರ ಚಿಂತಿಸಿದ್ದು, ಶೇ 25 ರಿಂದ 30ರಷ್ಟು ಫಲಾನುಭವಿಗಳಿಗೆ ಯೋಜನೆ ಕಡಿತವಾಗುವ ಸಾಧ್ಯತೆ ಇದೆ. ಗ್ಯಾರಂಟಿ ಯೋಜನೆ ಮುಂದುವರಿಯುವ ಬಗ್ಗೆ ಶಾಸಕ ಬಾಲಕೃಷ್ಣ ಅವರಿಗೂ ಅನುಮಾನವಿದೆ. ಸೋಲುವ ಭಯದಿಂದಲೇ ಯುದ್ಧಕ್ಕೂ ಮೊದಲೇ ಸೋಲನ್ನು ಒಪ್ಪಿಕೊಂಡು, ಗ್ಯಾರಂಟಿ ಮುಂದುವರಿಯುವುದಿಲ್ಲ ಎಂಬ ಹೇಳಿಕೆ ನೀಡಿದ್ದಾರೆ' ಎಂದು ಅಶೋಕ ಟೀಕಿಸಿದರು.

'ಸಿದ್ದರಾಮಯ್ಯ ಅವರು 14 ಬಾರಿ ಬಜೆಟ್ ಮಂಡಿಸಿರುವ ದಾಖಲೆ ಹೊಂದಿದ್ದಾರೆ. ಅವರು ಎಷ್ಟು ನಿಸ್ಸೀಮರು ಎಂದರೆ ಐದು ಗ್ಯಾರಂಟಿ ಜಾರಿ ಮಾಡುವ ಭರದಲ್ಲಿ ಜನರಿಗೆ ಆರ್ಥಿಕ ಬರೆ ಹಾಕಿದ್ದಾರೆ. ಗಂಡಸರಿಂದ ಕಸಿದುಕೊಂಡು ಮಹಿಳೆಯರಿಗೆ ₹ 2 ಸಾವಿರ ನೀಡುವ ಗ್ಯಾರಂಟಿ ಜಾರಿ ಮಾಡಿದ್ದಾರೆ. ಗ್ಯಾರಂಟಿಯೊಂದಿಗೆ ಹಣ ಲೂಟಿ ಮಾಡುವ ಪ್ಲಾನ್ ಮಾಡಿರುವ ಮುಖ್ಯಮಂತ್ರಿಗೆ ನೊಬೆಲ್ ಪ್ರಶಸ್ತಿ ಕೊಡಬೇಕು' ಎಂದು ಟೀಕಿಸಿದರು.

ಕಾಂಗ್ರೆಸ್‌ನಿಂದ ಬ್ಲ್ಯಾಕ್‌ಮೇಲ್ ರಾಜಕಾರಣ: ಧೀರಜ್ ಮುನಿರಾಜು

ಬೆಂಗಳೂರು: 'ಕಾಂಗ್ರೆಸ್ ಪಕ್ಷವು ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟುಕೊಂಡು ಮತದಾರರನ್ನು 'ಬ್ಲ್ಯಾಕ್‌ಮೇಲ್' ಮಾಡಲು ಹೊರಟಿದೆ. ಕಾಂಗ್ರೆಸ್ ಶಾಸಕ ಎಚ್. ಸಿ. ಬಾಲಕೃಷ್ಣ ಅವರ ಹೇಳಿಕೆ ಬೆದರಿಕೆ ರಾಜಕಾರಣದ ಭಾಗವಾಗಿದೆ' ಎಂದು ಬಿಜೆಪಿ ಯುವ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಶಾಸಕ ಧೀರಜ್ ಮುನಿರಾಜು ಆರೋಪಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷಕ್ಕೆ ಮತ ನೀಡದಿದ್ದರೆ ಗ್ಯಾರಂಟಿ ಯೋಜನೆಗಳು ಸ್ಥಗಿತಗೊಳ್ಳುತ್ತವೆ ಎಂದು ಬಾಲಕೃಷ್ಣ ಹೇಳಿಕೆ ನೀಡಿದ್ದಾರೆ. ಇದು ಸಂವಿಧಾನ ವಿರೋಧಿ ನಡವಳಿಕೆ' ಎಂದರು.

'ಯಾವುದೇ ಗ್ಯಾರಂಟಿ ಯೋಜನೆಯೂ ಸರಿಯಾಗಿ ಜಾರಿಯಾಗುತ್ತಿಲ್ಲ. ಜನರಿಗೆ ಈ ಯೋಜನೆಗಳ ಅನುಕೂಲ ದೊರಕುವುದನ್ನು ತಪ್ಪಿಸಲು ಬಿಪಿಎಲ್ ಪಡಿತರ ಚೀಟಿ ರದ್ದುಮಾಡಿ, ಎಪಿಎಲ್ ಪಡಿತರ ಚೀಟಿ ನೀಡುವ ಕೆಲಸ ಸದ್ದಿಲ್ಲದೇ ನಡೆಯುತ್ತಿದೆ' ಎಂದು ದೂರಿದರು.



ಸನ್ಮಾನ

ಬೆಂಗಳೂರಿನಲ್ಲಿ ಬುಧವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, 2020–21ರಿಂದ 2023–24ನೇ ಸಾಲಿನ ಜೀವಮಾನ ಸಾಧನೆಗೆ ಕೊಡ ಮಾಡುವ ವಿವಿಧ ಪ್ರಶಸ್ತಿಗಳನ್ನು 75 ಸಾಧಕರಿಗೆ ಪ್ರದಾನ ಮಾಡಲಾಯಿತು. ಇಲಾಖೆಯ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ್, ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಸಚಿವ ಶಿವರಾಜ ತಂಗಡಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಇಲಾಖೆ ಕಾರ್ಯದರ್ಶಿ ಎನ್.ಮಂಜುಳಾ ಪಾಲ್ಗೊಂಡಿದ್ದರು
– ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಅಪಘಾತ: ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಕಾರ್ತಿಕ್ ಸಾವು

ಪ್ರಜಾವಾಣಿ ವಾರ್ತೆ


ಜೆ.ಕಾರ್ತಿಕ್

ಹೊಸಪೇಟೆ (ವಿಜಯನಗರ): ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಜೆ.ಕಾರ್ತಿಕ್ (46) ಅವರು ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಬುಧವಾರ ಹುಬ್ಬಳ್ಳಿಯ ಆಸ್ಪತ್ರೆಯಲ್ಲಿ ಮೃತಪಟ್ಟರು. ಅವರಿಗೆ ತಾಯಿ, ಪತ್ನಿ ಮತ್ತು ಪುತ್ರ ಇದ್ದಾರೆ.

'ಕೊಪ್ಪಳ ತಾಲ್ಲೂಕು ಶಹಾಪುರ ಕ್ರಾಸ್ ಟೋಲ್ ಗೇಟ್ ಬಳಿ ಮಂಗಳವಾರ ಕಾರ್ತಿಕ್ ಅವರು ಬುಲೆಟ್ ಬೈಕ್‌ನಲ್ಲಿ ಹೊಸಪೇಟೆಯತ್ತ ಬರುತ್ತಿದ್ದಾಗ ಹಿಂದಿನಿಂದ ಐಷರ್ ಕ್ಯಾಂಟರ್ ಡಿಕ್ಕಿ ಹೊಡೆಯಿತು. ಹೆಲ್ಮೆಟ್ ಧರಿಸಿದ್ದರೂ ಕಾರ್ತಿಕ್ ಅವರ ತಲೆಗೆ ಗಾಯವಾಯಿತು' ಎಂದು ಮುನಿರಾಬಾದ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದ ರೈತ ಸಂಘದಲ್ಲಿ 15 ವರ್ಷ ಇದ್ದ ಕಾರ್ತಿಕ್, ರಾಜ್ಯ ಪ್ರಧಾನ ಕಾರ್ಯದರ್ಶಿಯೂ ಆಗಿದ್ದರು. ಅದರಿಂದ ಹೊರಬಂದು ಕೆಲ ತಿಂಗಳ ಹಿಂದೆ ಪ್ರತ್ಯೇಕ ಸಂಘ ಸ್ಥಾಪಿಸಿದ್ದರು.



ಧಾರವಾಡದ ದ.ರಾ.ಬೇಂದ್ರೆ ಭವನದಲ್ಲಿ ಬುಧವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಬಸವರಾಜ ಕಲ್ಗುಡಿ ಅವರಿಗೆ 'ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಿ.ವಿ. ಪರಮಶಿವಮೂರ್ತಿ, ದ.ರಾ.ಬೇಂದ್ರೆ ಟ್ರಸ್ಟ್ ಕಾರ್ಯದರ್ಶಿ ಪ್ರಕಾಶ್ ಬಾಳಿಕಾಯಿ, ಅಧ್ಯಕ್ಷ ಡಿ.ಎಂ.ಹಿರೇಮಠ, ಪ್ರೊ.ಬಸವರಾಜ ಡೋಣೂರ, ಪ್ರೊ ಕೃಷ್ಣನಾಯಕ ಪಾಲ್ಗೊಂಡಿದ್ದರು
—ಪ್ರಜಾವಾಣಿ ಚಿತ್ರ

'ರಾಮ್‌ಸರ್' ಪಟ್ಟಿಗೆ 'ಜೌಗು'ತ್ರಯಗಳು!

ಅಂಕಸಮುದ್ರ ತಾಣ, ಮಾಗಡಿ ಕೆರೆ, ಅಘನಾಶಿನಿಗೆ ಮಾನ್ಯತೆ


ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ವಿಜಯನಗರ ಜಿಲ್ಲೆಯ ಅಂಕಸಮುದ್ರ ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶ, ಗದಗ ಜಿಲ್ಲೆಯ ಮಾಗಡಿ ಕೆರೆ ಹಾಗೂ ಉತ್ತರ ಕನ್ನಡ ಜಿಲ್ಲೆಯ ಅಘನಾಶಿನಿ ನದಿಮುಖಜ ಪ್ರದೇಶ (ಅಳಿವೆ) ಸೇರಿದಂತೆ ದೇಶದ ಐದು ಜೌಗು ಪ್ರದೇಶಗಳು 'ರಾಮ್‌ಸರ್' ಪಟ್ಟಿಗೆ ಸೇರ್ಪಡೆಯಾಗಿವೆ.

ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಮಾನ ಬದಲಾವಣೆ ಸಚಿವಾಲಯವು ಬುಧವಾರ ಈ ಮಾಹಿತಿಯನ್ನು ಹಂಚಿಕೊಂಡಿದೆ.

ಜೌಗುಪ್ರದೇಶಗಳನ್ನು ಉಳಿಸಲು 1971ರ ಫೆಬ್ರುವರಿ 2ರಂದು ಇರಾನ್‌ನ ಕ್ಯಾಸ್ಪಿಯನ್ ಸಮುದ್ರತೀರದ 'ರಾಮ್‌ಸರ್'ನಲ್ಲಿ ಪ್ರಥಮ ಬಾರಿಗೆ ಒಪ್ಪಂದ ಏರ್ಪಟ್ಟಿತ್ತು. ಆ ಒಪ್ಪಂದದ ಬಳಿಕ, ನೈಸರ್ಗಿಕವಾಗಿ ರೂಪುಗೊಂಡ ಜೌಗು ಪ್ರದೇಶಗಳಿಗೆ ಅಂತರ ರಾಷ್ಟ್ರೀಯ ಮಾನ್ಯತೆ ನೀಡಲಾಗುತ್ತಿದ್ದು, ಅಂತಹ ಪ್ರದೇಶಗಳನ್ನು 'ರಾಮ್‌ಸರ್ ತಾಣ'ಗಳೆಂದು ಗುರುತಿಸಲಾಗುತ್ತದೆ.

ರಾಜ್ಯದ ಮೂರೂ ಜೌಗು ಪ್ರದೇಶಗಳನ್ನು 'ರಾಮ್‌ಸರ್ ಪಟ್ಟಿ'ಗೆ ಸೇರಿಸಬೇಕು ಎಂದು ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಮಾನ ಬದಲಾವಣೆ ಸಚಿವಾಲಯಕ್ಕೆ ಕರ್ನಾಟಕ ಸರ್ಕಾರ ಕಳೆದ ವರ್ಷ ಶಿಫಾರಸು ಮಾಡಿತ್ತು.


ಗದಗ ಜಿಲ್ಲೆಯ ಮಾಗಡಿ ಕೆರೆ

ಈಗ ಆ ಮಾನ್ಯತೆ ಸಿಕ್ಕಿದೆ. ದೇಶದಲ್ಲಿನ 'ರಾಮ್‌ಸರ್ ತಾಣ'ಗಳ ಸಂಖ್ಯೆ 80ಕ್ಕೆ ಏರಿದೆ. ರಂಗನತಿಟ್ಟು ಪಕ್ಷಿಧಾಮವನ್ನು 2022ರ ಆಗಸ್ಟ್‌ನಲ್ಲಿ ಈ ಪಟ್ಟಿಗೆ ಸೇರಿಸಲಾಗಿತ್ತು.

ಅಂಕಸಮುದ್ರ ಪಕ್ಷಿ ಸಂರಕ್ಷಣಾ ಪ್ರದೇಶಕ್ಕೆ ಶತಮಾನದ ಹಿನ್ನೆಲೆ ಇದೆ. ಅಂಕಸಮುದ್ರ ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ಈ ತಾಣವು 244 ಎಕರೆ ಪ್ರದೇಶದಲ್ಲಿ ವಿಸ್ತರಿಸಿದೆ. ಇಲ್ಲಿ 210 ಜಾತಿಯ ಸಸ್ಯಗಳು, 8 ಜಾತಿಯ ಸಸ್ತನಿಗಳು, 25 ಜಾತಿಯ ಸರೀಸೃಪಗಳು, 240 ಜಾತಿಯ ಪಕ್ಷಿಗಳು, 41 ಜಾತಿಯ ಮೀನುಗಳು, 3 ಜಾತಿಯ ಕಪ್ಪೆಗಳು, 27 ಜಾತಿಯ ಚಿಟ್ಟೆಗಳು ಇವೆ.

4,801 ಹೆಕ್ಟೇರ್ ಪ್ರದೇಶದಲ್ಲಿ ಹರಡಿರುವ ಅಘನಾಶಿನಿ ಅಳಿವೆಯು ಅಘನಾಶಿನಿ ನದಿಯು ಅರಬ್ಬೀ ಸಮುದ್ರದೊಂದಿಗೆ ಸೇರುವ ಸ್ಥಳದಲ್ಲಿ ರೂಪುಗೊಂಡಿದೆ. ಈ ಪ್ರದೇಶದಲ್ಲಿ ಮೀನುಗಾರಿಕೆ, ಕೃಷಿ, ಏಡಿಗಳ ಸಂಗ್ರಹ, ಸಿಗಡಿ ಸಾಕಣೆ, ಸಾಂಪ್ರದಾಯಿಕ ಮೀನು ಸಾಕಣೆ ನಡೆಯುತ್ತಿದ್ದು, ಸುಮಾರು 7,500 ಕುಟುಂಬಗಳ ಜೀವನೋಪಾಯಕ್ಕೆ ಈ ಚಟುವಟಿಕೆಗಳು ನೆರವಾಗಿವೆ.

ಮಾಗಡಿ ಕೆರೆ ಸಂರಕ್ಷಣಾ ಮೀಸಲು ಪ್ರದೇಶವು 50 ಹೆಕ್ಟೇರ್‌ನಲ್ಲಿ ಹರಡಿದೆ. ಇದು 166 ಜಾತಿಯ ಪಕ್ಷಿಗಳಿಗೆ ನೆಲೆಯಾಗಿದೆ. ಚಳಿಗಾಲದಲ್ಲಿ ಇಲ್ಲಿಗೆ 8 ಸಾವಿರ ಪಕ್ಷಿಗಳು ಬರುತ್ತವೆ.

ಹನುಮಧ್ವಜ ತೆರವು: ಶಾಂತಿ ಕದಡುವ ಶಕ್ತಿಗಳ ವಿರುದ್ಧ ಆಕ್ರೋಶ

ವಿವಿಧ ಸಂಘಟನೆಗಳಿಂದ 7ಕ್ಕೆ ಮಂಡ್ಯ ಬಂದ್

ಪ್ರಜಾವಾಣಿ ವಾರ್ತೆ

ಮಂಡ್ಯ: 'ಹನುಮ ಧ್ವಜ ತೆರವು ಪ್ರಕರಣದಲ್ಲಿ ಜಿಲ್ಲೆಯ ಶಾಂತಿ, ಸೌಹಾರ್ದಕ್ಕೆ ಧಕ್ಕೆ ತಂದಿರುವ ಶಕ್ತಿಗಳ ವಿರುದ್ಧ' ಫೆ.7ರಂದು ಮಂಡ್ಯ ಬಂದ್ ಮಾಡಲು ಪ್ರಗತಿಪರ ಸಂಘಟನೆಗಳು ಬುಧವಾರ ಕರೆ ನೀಡಿವೆ.

'ಕ್ಷುಲ್ಲಕ ವಿಚಾರಗಳನ್ನು ಮುಂದಿಟ್ಟುಕೊಂಡು ಜಿಲ್ಲೆಯ ಹೋರಾಟ ಪರಂಪರೆಗೆ ಮಸಿ ಬಳಿಯುವ ಪ್ರಯತ್ನ ನಡೆದಿದೆ. ಜನರ ಶಾಂತಿ ಮತ್ತು ನೆಮ್ಮದಿ ಕೆಡಿಸುತ್ತಿರುವ ಶಕ್ತಿಗಳ ವಿರುದ್ಧ ಹೋರಾಡುವುದು ಅನಿವಾರ್ಯವಾಗಿದೆ. ಸಮಾನ ಮನಸ್ಕ ವೇದಿಕೆಯಡಿ ವಿವಿಧ ಸಂಘಟನೆಗಳು ಒಗ್ಗೂಡಿ ಮಂಡ್ಯ ನಗರ ಬಂದ್ ಮಾಡಲಾಗುವುದು' ಎಂದು ವೇದಿಕೆಯ ಮುಖಂಡ ಎಂ.ಬಿ. ನಾಗಣ್ಣಗೌಡ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಕಾನೂನು ಮುರಿಯುವ, ಶಾಂತಿ ಕದಡುವ ಶಕ್ತಿಗಳ ವಿರುದ್ಧ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು. ಪಾದಯಾತ್ರೆ ನೆಪದಲ್ಲಿ ಕುರುಬ ಸಮುದಾಯದ ವಿದ್ಯಾರ್ಥಿ ನಿಲಯಕ್ಕೆ ನುಗ್ಗಿ ದಾಂಧಲೆ ನಡೆಸಿದ ಕಿಡಿಗೇಡಿಗಳನ್ನು ಬಂಧಿಸಬೇಕು. ಜಾತ್ಯತೀತ ತತ್ವ, ಶಾಂತಿ, ಸೌಹಾರ್ದ ಬಯಸುವ ಸಂಘಟನೆಗಳ ಮುಖಂಡರು ಸಾರ್ವಜನಿಕರು ಬಂದ್‌ನಲ್ಲಿ ಭಾಗವಹಿಸಲಿದ್ದಾರೆ' ಎಂದರು.

ಸಭೆ ಇಂದು: 'ಕುವೆಂಪು, ಕೆ.ವಿ. ಶಂಕರಗೌಡ, ಎಚ್.ಕೆ.ವೀರಣ್ಣಗೌಡ, ಜಿ.ಮಾದೇಗೌಡರ ಚಿಂತನೆಗಳು ಜಿಲ್ಲೆಗೆ ಮಾದರಿಯಾಗಿವೆ. ಈ ಪರಂಪರೆಯನ್ನು ಕೆಡಿಸುವ ಶಕ್ತಿಗಳ ವಿರುದ್ಧ ಹೋರಾಟ ನಡೆಸಲಿದ್ದೇವೆ. ರೈತ ಸಂಘ, ದಲಿತ ಸಂಘರ್ಷ ಸಮಿತಿ, ಸಿಐಟಿಯು, ಕರ್ನಾಟಕ ರಕ್ಷಣಾ ವೇದಿಕೆ ಸೇರಿ 20ಕ್ಕೂ ಹೆಚ್ಚು ಸಂಘಟನೆಗಳು ಬಂದ್‌ಗೆ ಬೆಂಬಲ ನೀಡಲಿವೆ. ಈ ಕುರಿತು ಫೆ.1ರಂದು ಸಭೆ ನಡೆಸಲಾಗುವುದು' ಎಂದರು.

ಬಾಲಕ, ಆತನ ತಂದೆಯ ವಿಚಾರಣೆ: ಪಾದಯಾತ್ರೆಯಲ್ಲಿ ಫ್ಲೆಕ್ಸ್ ಹರಿದ ಆರೋಪದ ಮೇಲೆ 9ನೇ ತರಗತಿ ವಿದ್ಯಾರ್ಥಿ ಹಾಗೂ ಆತನ ತಂದೆಯನ್ನು ಕೆರಗೋಡು ಪೊಲೀಸರು ಠಾಣೆಗೆ ಕರೆಸಿ, ವಿಚಾರಣೆ ನಡೆಸಿ ಕಳಿಸಿದರು. ಆ ವಿಚಾರ ತಿಳಿದ ಬಿಜೆಪಿ ಮುಖಂಡರು ಬಾಲಕನ ಮನೆಗೆ ಭೇಟಿ ನೀಡಿ ಸಮಾಧಾನ ಹೇಳಿದರು.

'ಗ್ರಾಮಸ್ಥರು, ಮಕ್ಕಳು, ಮಹಿಳೆಯರು ಯಾವುದೇ ಅಪರಾಧ ಮಾಡಿಲ್ಲ. ನ್ಯಾಯಕ್ಕಾಗಿ ಹೋರಾಟ ನಡೆಸಿದ್ದೇವೆ, ಯಾರೂ ಹೆದರಬೇಕಾಗಿಲ್ಲ' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಇಂದ್ರೇಶ್ ಹೇಳಿದರು. ಭಾನುವಾರ ಪಾದಯಾತ್ರೆ ವೇಳೆ ಗಾಯಗೊಂಡಿದ್ದ ಗ್ರಾಮಸ್ಥರ ಮನೆಗೂ ತೆರಳಿ ಸಾಂತ್ವನ ಹೇಳಿದರು.

ಹೋರಾಟ ಮುಂದುವರಿಕೆ: ಹನುಮ ಧ್ವಜ ತೆರವು ವಿರುದ್ಧ ಬಿಜೆಪಿ ಮುಖಂಡರು ಕೆರಗೋಡು ಗ್ರಾಮದಲ್ಲಿ ಸಭೆ ನಡೆಸಿ ಹೋರಾಟ ಮುಂದುವರಿಸುವ ನಿರ್ಧಾರ ಕೈಗೊಂಡರು. ಹೋರಾಟದ ರೂಪುರೇಷೆಗಳ ಬಗ್ಗೆ ಚರ್ಚೆ ನಡೆಸಿದರು.

ಕೆರಗೋಡು ಗ್ರಾಮಕ್ಕೆ ಗುಪ್ತಚರ ಇಲಾಖೆ ಮೈಸೂರು ವಿಭಾಗದ ಎಸ್‌ಪಿ ಜಯಪ್ರಕಾಶ್ ಭೇಟಿ ನೀಡಿ ಪರಿಶೀಲಿಸಿದರು. ಸ್ಥಳದಲ್ಲಿದ್ದ ಸರ್ಕಲ್ ಇನ್‌ಸ್ಪೆಕ್ಟರ್ ಮಹೇಶ್ ಅವರಿಂದ ಮಾಹಿತಿ ಪಡೆದರು.

'ಘಟನೆ ಸಂಬಂಧ ಮಾಹಿತಿ ಅರಿಯಲು ಗುಪ್ತಚರ ಇಲಾಖೆ ವಿಫಲಗೊಂಡಿದೆ' ಎಂದು ಶಾಸಕ ಗಣಿಗ ರವಿಕುಮಾರ್ ಈಚೆಗೆ ಆರೋಪಿಸಿದ್ದರು.

ಮುಖ್ಯಾಂಶಗಳು

- ಪ್ರಗತಿಪರ ಸಂಘಟನೆಗಳ ಸಭೆ ಇಂದು
- ಹೋರಾಟ ಮುಂದುವರಿಸಲು ಬಿಜೆಪಿ ನಿರ್ಧಾರ

ಮನೆಮನೆಗೂ ಹನುಮ ಧ್ವಜ ಅಳವಡಿಕೆ: ಗ್ರಾಮಸ್ಥರಿಗೆ ಕರೆ

ಹನುಮ ಧ್ವಜ ತೆರವು ಖಂಡಿಸಿ ಬಿಜೆಪಿ ಮುಖಂಡರು ಕೆರಗೂಡು ಗ್ರಾಮದ ಮನೆಮನೆಗೂ ಹನುಮ ಧ್ವಜ ಅಳವಡಿಸುವ ಆಂದೋಲನ ಕೈಗೊಂಡಿದ್ದಾರೆ. ಧ್ವಜ ಹಾರಿಸಿ ಸರ್ಕಾರದ ವಿರುದ್ಧ ಹೋರಾಟ ನಡೆಸುವಂತೆ ಗ್ರಾಮಸ್ಥರಿಗೆ ಕರೆ ಕೊಟ್ಟಿದ್ದಾರೆ.

'108 ಅಡಿ ಧ್ವಜಸ್ತಂಭದಲ್ಲಿ ಹನುಮ ಧ್ವಜ ಹಾರಿಸುವವರೆಗೂ ಹೋರಾಟ ಮುಂದುವರಿಸುತ್ತೇವೆ. ಸರ್ಕಾರ ಹೊರ ಜಿಲ್ಲೆಗಳಿಂದ ಪೊಲೀಸ್ ಸಿಬ್ಬಂದಿ ಕರೆಸಿ ದೌರ್ಜನ್ಯ ಎಸಗುತ್ತಿದೆ. ಗ್ರಾಮದ ಮಕ್ಕಳು, ಮಹಿಳೆಯರಲ್ಲಿ ಭಯದ ವಾತಾವರಣವಿದೆ. ಸರ್ಕಾರದ ವಿರುದ್ಧ ಹೋರಾಟ ಮುಂದುವರಿಯಲಿದೆ' ಎಂದು ಬಿಜೆಪಿ ಮುಖಂಡ ಅಶೋಕ್ ಜಯರಾಂ ಹೇಳಿದರು.

ಶಾಂತಿ ಸಭೆ ನಡೆಸಲು ಮನವಿ

'ನಿಷೇಧಾಜ್ಞೆ ಜಾರಿಯಾಗಿರುವುದರಿಂದ ಅಂಗಡಿಗಳು ಬಂದ್ ಆಗಿದ್ದು ಕೆರಗೋಡು ಗ್ರಾಮದಲ್ಲಿ ಅಶಾಂತಿ ನೆಲೆಸಿದೆ. ಈ ಹಿನ್ನೆಲೆಯಲ್ಲಿ ಶಾಂತಿಸಭೆ ನಡೆಸಿ ವಿವಾದವನ್ನು ಕೊನೆಗೊಳಿಸಬೇಕು' ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

'ರಾಜ್ಯೋತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಮ್ಮೂರಿಗೆ ಬಂದಾಗ 101 ಎತ್ತಿನಗಾಡಿ ಮೂಲಕ ಸ್ವಾಗತ ಕೋರಿದ್ದೆವು. ಅವರು ಈಗ ಗ್ರಾಮದಲ್ಲಿ ಶಾಂತಿ ನೆಲೆಸುವಂತೆ ಕ್ರಮ ವಹಿಸಬೇಕು. ಶಾಂತಿ ಸಭೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಬೇಕು' ಎಂದು ಗ್ರಾಮಸ್ಥರಾದ ಕುಮಾರ್, ಶಿವಾನಂದ್ ಒತ್ತಾಯಿಸಿದರು.

ಶ್ರೀಕಿ ಹ್ಯಾಕ್ ಮಾಡಿ ಸಂಗ್ರಹಿಸಿದ್ದ ಬಿಟ್ ಕಾಯಿನ್ • ಗುಜರಾತ್ ಕಂಪನಿಯಿಂದ ಖರೀದಿ

ಬಿಟ್ ಕಾಯಿನ್ ದೋಚಲು 'ನ್ಯಾನೊ ಲೆಡ್ಜರ್'

• ಸಂತೋಷ ಜಿಗಳಿಕೊಪ್ಪ

ಮುಖ್ಯಾಂಶಗಳು

- ಇನ್‌ಸ್ಪೆಕ್ಟರ್, ಸೈಬರ್ ತಜ್ಞನಿಂದ 250 ಜಿ.ಬಿ ದತ್ತಾಂಶ ಸಂಗ್ರಹ
- ಸಂಶಯಾಸ್ಪದ ಚಾಟಿಂಗ್, ಫೋಟೊಗಳು ಪತ್ತೆ
- ಕೇಂದ್ರ ಕಾರಾಗೃಹದಲ್ಲೂ ಪಂಚನಾಮೆ

ಬೆಂಗಳೂರು: ಅಂತರರಾಷ್ಟ್ರೀಯ ಹ್ಯಾಕರ್ ಎನ್ನಲಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಹಲವು ಸರ್ವರ್‌ಗಳನ್ನು ಹ್ಯಾಕ್ ಮಾಡಿ ಸಂಗ್ರಹಿಸಿದ್ದ ಬಿಟ್ ಕಾಯಿನ್‌ಗಳನ್ನು ದೋಚಲು ಸಿಸಿಬಿ ಪೊಲೀಸರು ಹಾಗೂ ಸೈಬರ್ ತಜ್ಞರು, 'ನ್ಯಾನೊ ಲೆಡ್ಜರ್' (ಹಾರ್ಡ್‌ವೇರ್ ಕ್ರಿಪ್ಟೊ ವ್ಯಾಲೆಟ್) ಬಳಸಿದ್ದರೆಂಬ ಸಂಗತಿಯನ್ನು ಎಸ್‌ಐಟಿ ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ಬಿಟ್ ಕಾಯಿನ್ ಅಕ್ರಮ ಪ್ರಕರಣದ ಸಂಬಂಧ ಸಿಸಿಬಿ ತಾಂತ್ರಿಕ ವಿಭಾಗದ ಇನ್‌ಸ್ಪೆಕ್ಟರ್ ಡಿ.ಎಂ. ಪ್ರಶಾಂತ್‌ಬಾಬು ಹಾಗೂ ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಜಿಸಿಐಡಿ ಟೆಕ್ನಾಲಜೀಸ್ ಕಂಪನಿಯ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ್‌ಕುಮಾರ್ ಅವರನ್ನು ಬಂಧಿಸಿದ್ದ ಎಸ್‌ಐಟಿ ಅಧಿಕಾರಿಗಳು, ಅವರಿಂದ ಹಲವು ಮಾಹಿತಿ ಕಲೆಹಾಕಿದ್ದಾರೆ.

'ಆರೋಪಿಗಳಾದ ಪ್ರಶಾಂತ್‌ಬಾಬು, ಸಂತೋಷ್‌ಕುಮಾರ್ ಹಾಗೂ ಇತರರು, ಶ್ರೀಕಿ ಬಳಿಯ ಬಿಟ್‌ಕಾಯಿನ್‌ಗಳನ್ನು ದೋಚಲು ಸಂಚು ರೂಪಿಸಿದ್ದರು. ಬಿಟ್ ಕಾಯಿನ್‌ಗಳನ್ನು ಸಂಗ್ರಹಿಸಲೆಂದು, ಗುಜರಾತ್‌ನ ಹಲವು ಕಂಪನಿಗಳಿಂದ 3 ನ್ಯಾನೊ ಲೆಡ್ಜರ್‌ಗಳನ್ನು ಖರೀದಿಸಿ ತರಿಸಿದ್ದರು. ಶ್ರೀಕಿಯನ್ನು ಬೆದರಿಸಿ, ಹಲವು ಬಿಟ್‌ಕಾಯಿನ್‌ಗಳನ್ನು ಅಕ್ರಮವಾಗಿ ನ್ಯಾನೊ ಲೆಡ್ಜರ್‌ಗೆ ವರ್ಗಾಯಿಸಿಕೊಂಡಿರುವುದು ಸದ್ಯದ ತನಿಖೆಯಿಂದ ಗೊತ್ತಾಗಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ಪ್ರಕರಣದ ಪ್ರಮುಖ ಆರೋಪಿ ಶ್ರೀಕಿ ಬಳಿ 4 ಸಾವಿರಕ್ಕೂ ಹೆಚ್ಚು ಬಿಟ್ ಕಾಯಿನ್‌ಗಳು ಇದ್ದವೆಂಬ ಮಾಹಿತಿ ಇದೆ. ಇದಕ್ಕೆ ಸಂಬಂಧಪಟ್ಟಂತೆ ಪುರಾವೆಗಳನ್ನು ಪರಿಶೀಲಿಸಲಾಗುತ್ತಿದೆ. ಇಂಥ ಬಿಟ್‌ಕಾಯಿನ್‌ಗಳ ಪೈಕಿ ಹಲವು ಬಿಟ್ ಕಾಯಿನ್‌ಗಳನ್ನು ಸಿಸಿಬಿ ಪೊಲೀಸರು ಹಾಗೂ ಸೈಬರ್ ತಜ್ಞರು ದೋಚಿರುವುದು ಆರೋಪಿಗಳ ವಿಚಾರಣೆಯಿಂದ ಗೊತ್ತಾಗಿದೆ' ಎಂದು ತಿಳಿಸಿವೆ.

'ಮೂರು ನ್ಯಾನೊ ಲೆಡ್ಜರ್‌ಗಳ ಪೈಕಿ ಒಂದು ಲೆಡ್ಜರ್ ಮಾತ್ರ ಆರೋಪಿಗಳ ಬಳಿ ಸಿಕ್ಕಿದೆ. ಎರಡು ಲೆಡ್ಜರ್‌ಗಳು ಎಲ್ಲಿವೆ ಎಂಬುದು ಗೊತ್ತಾಗಿಲ್ಲ. ಗುಜರಾತ್‌ನ ಯಾವ ಕಂಪನಿಯಿಂದ ನ್ಯಾನೊ ಲೆಡ್ಜರ್‌ಗಳನ್ನು ಖರೀದಿಸಲಾಗಿತ್ತು. ಅವುಗಳು ಸದ್ಯ ಎಲ್ಲಿವೆ ಎಂಬ ಮಾಹಿತಿ ಲಭ್ಯವಾಗಿಲ್ಲ. ಈ ಬಗ್ಗೆ ಆರೋಪಿಗಳು ಸುಳಿವು ನೀಡುತ್ತಿಲ್ಲ' ಎಂದೂ ಮೂಲಗಳು ಹೇಳಿವೆ.

'ಕ್ರಿಪ್ಟೊ ಕರೆನ್ಸಿಗಳನ್ನು ಪರಸ್ಪರ ವರ್ಗಾವಣೆ ಮಾಡಿಟ್ಟುಕೊಳ್ಳಲು ನ್ಯಾನೊ ಲೆಡ್ಜರ್‌ಗಳನ್ನು ಬಳಸಲಾಗುತ್ತದೆ. ಈ ಬಗ್ಗೆ ಸಂತೋಷ್‌ಕುಮಾರ್‌ಗೆ ಹೆಚ್ಚಿನ ಮಾಹಿತಿ ಇತ್ತು. ಈತನ ಮೂಲಕವೇ ಇತರೆ ಆರೋಪಿಗಳು ಲೆಡ್ಜರ್ ಖರೀದಿಸಿ ಬಿಟ್‌ಕಾಯಿನ್‌ಗಳನ್ನು ವರ್ಗಾಯಿಸಿಕೊಂಡಿರುವುದು ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

250 ಜಿ.ಬಿ ದತ್ತಾಂಶ ಸಂಗ್ರಹ: 'ಬಿಟ್ ಕಾಯಿನ್ ಅಕ್ರಮ ಸಂಬಂಧ ಕಾಟನ್‌ಪೇಟೆ ಹಾಗೂ ಸಿಐಡಿ ಸೈಬರ್ ಕ್ರೈಂ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಇದೇ ಪ್ರಕರಣದಲ್ಲಿ ಇನ್‌ಸ್ಪೆಕ್ಟರ್ ಪ್ರಶಾಂತ್ ಬಾಬು ಹಾಗೂ ಸೈಬರ್ ತಜ್ಞ ಸಂತೋಷ್ ಕುಮಾರ್‌ನನ್ನು ಬಂಧಿಸಲಾಗಿದೆ. ಇವರ ಮೊಬೈಲ್ ಹಾಗೂ ಇತರೆ ಡಿಜಿಟಲ್ ಉಪಕರಣಗಳಿಂದ 250 ಜಿ.ಬಿ ದತ್ತಾಂಶ ಸಂಗ್ರಹಿಸಲಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಚಾಟಿಂಗ್, ಫೋಟೊಗಳು ಸೇರಿದಂತೆ ಸಂಶಯಾಸ್ಪದ ಮಾಹಿತಿಗಳು ದತ್ತಾಂಶದಲ್ಲಿವೆ. ಎಲ್ಲ ದತ್ತಾಂಶವನ್ನು ತಜ್ಞರ ಸಹಾಯದಿಂದ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಕಾರಾಗೃಹದಲ್ಲಿ ಪಂಚನಾಮೆ: ಶ್ರೀಕೃಷ್ಣ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ಸಂದರ್ಭದಲ್ಲೂ ಬಿಟ್ ಕಾಯಿನ್ ವರ್ಗಾವಣೆ ಆಗಿರುವ ಮಾಹಿತಿ ಇದೆ. ಬಂಧಿತ ಆರೋಪಿಗಳನ್ನು ಕೇಂದ್ರ ಕಾರಾಗೃಹ ಹಾಗೂ ಸಿಸಿಬಿ ಕಚೇರಿಗೆ ಕರೆದೊಯ್ದಿದ್ದ ಎಸ್‌ಐಟಿ ಅಧಿಕಾರಿಗಳು, ಪಂಚನಾಮೆ ಪ್ರಕ್ರಿಯೆ ಪೂರ್ಣಗೊಳಿಸಿದ್ದಾರೆ.

ಬಂಧಿತರು ನ್ಯಾಯಾಂಗ ಬಂಧನಕ್ಕೆ

ಆರೋಪಿಗಳಾದ ಪ್ರಶಾಂತ್‌ಬಾಬು ಹಾಗೂ ಸಂತೋಷ್‌ಕುಮಾರ್ ಅವರನ್ನು ವಿಚಾರಣೆಗಾಗಿ ಆರು ದಿನ ಕಸ್ಟಡಿಗೆ ಪಡೆದಿದ್ದ ಎಸ್‌ಐಟಿ ಅಧಿಕಾರಿಗಳು, ಅವಧಿ ಮುಗಿದಿದ್ದರಿಂದ ಬುಧವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

'ಆರೋಪಿಗಳ ಆರೋಗ್ಯ ಸಮಸ್ಯೆಯಿಂದಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಕರೆದೊಯ್ಯಲು ಹೆಚ್ಚಿನ ಸಮಯ ಹೋಗಿದೆ. ನಿಗದಿಯಂತೆ ವಿಚಾರಣೆ ಮಾಡಲು ಆಗಿಲ್ಲ. ಪ್ರಕರಣದಲ್ಲಿ ಮತ್ತಷ್ಟು ಮಹತ್ವದ ಮಾಹಿತಿಗಳನ್ನು ಪರಿಶೀಲಿಸಬೇಕಿದೆ. ಹೀಗಾಗಿ, ಆರೋಪಿಗಳನ್ನು ಮತ್ತಷ್ಟು ದಿನ ವಿಚಾರಣೆಗೆ ಒಳಪಡಿಸಬೇಕು. ಇಬ್ಬರನ್ನೂ ಫೆ. 7 ರವರೆಗೆ ಕಸ್ಟಡಿಗೆ ನೀಡಿ' ಎಂದು ಎಸ್‌ಐಟಿ ಅಧಿಕಾರಿಗಳು ಮನವಿ ಮಾಡಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಆರೋಪಿಗಳ ಪರ ವಕೀಲರು, ಕಸ್ಟಡಿಗೆ ನೀಡದಂತೆ ಕೋರಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಲಯ, ಎಸ್‌ಐಟಿ ಮನವಿ ತಿರಸ್ಕರಿಸಿ ಇಬ್ಬರೂ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

ಎಲ್ಲಿವೆ ಬಿಟ್ ಕಾಯಿನ್ ?

'ಶ್ರೀಕಿಯಿಂದ ಬಿಟ್ ಕಾಯಿನ್ ದೋಚಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಆದರೆ, ದೋಚಿರುವ ಬಿಟ್‌ಕಾಯಿನ್‌ಗಳು ಎಲ್ಲಿವೆ ಎಂಬುದು ಇದುವರೆಗೂ ಗೊತ್ತಾಗಿಲ್ಲ. 'ನ್ಯಾನೊ ಲೆಡ್ಜರ್' ಬಳಸಿ ಬಿಟ್ ಕಾಯಿನ್ ವರ್ಗಾವಣೆ ಮಾಡಿಕೊಂಡಿರುವ ಮಾಹಿತಿಯನ್ನು ಎಸ್‌ಐಟಿ ಅಧಿಕಾರಿಗಳು ಇದೀಗ ಪತ್ತೆ ಮಾಡಿದ್ದಾರೆ. ನ್ಯಾನೊ ಲೆಡ್ಜರ್ ಬಗ್ಗೆ ಹೆಚ್ಚಿನ ತನಿಖೆ ನಡೆದರೆ, ಬಿಟ್ ಕಾಯಿನ್ ಎಲ್ಲಿವೆ? ಅವುಗಳ ವಾರಸುದಾರರು ಯಾರು? ಎಂಬುದು ತಿಳಿಯಲಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಐಎಸ್ ಉಗ್ರ ಸಂಘಟನೆ 'ಟ್ವಿಟರ್' ಖಾತೆ ನಿರ್ವಹಣೆ: 10 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರ ಸಂಘಟನೆಗೆ ಸೇರಿದ್ದ ಟ್ವಿಟರ್ ಖಾತೆ ನಿರ್ವಹಣೆ ಮಾಡುತ್ತಿದ್ದ ಅಪರಾಧಿ ಮೆಹದಿ ಮಸ್ರೂರ್ ಬಿಸ್ವಾಸ್‌ಗೆ (24) 10 ವರ್ಷಗಳ ಜೈಲು ಶಿಕ್ಷೆ ವಿಧಿಸಿ ಎನ್‌ಐಎ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿದೆ.

ಪಶ್ಚಿಮ ಬಂಗಾಳದ ಮೆಹದಿ, ಜಾಲಹಳ್ಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ವಾಸವಿದ್ದ. ಆಹಾರ ಉತ್ಪನ್ನ ತಯಾರಿ ಕಂಪನಿಯೊಂದರಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ. 2014ರಲ್ಲಿ ಈತನನ್ನು ಬೆಂಗಳೂರು ಪೊಲೀಸರು ಬಂಧಿಸಿದ್ದರು. ನಂತರ, ಎನ್‌ಐಎ ಅಧಿಕಾರಿಗಳು ಪ್ರಕರಣದ ತನಿಖೆ ನಡೆಸಿದ್ದರು.

ಕೃತ್ಯದ ಸಂಬಂಧ ಪುರಾವೆಗಳನ್ನು ಸಂಗ್ರಹಿಸಿದ್ದ ಎನ್‌ಐಎ ಅಧಿಕಾರಿಗಳು, ಮೆಹದಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಸಿ.ಎಂ. ಗಂಗಾಧರ್, ಅಪರಾಧಿಗೆ ಶಿಕ್ಷೆ ಹಾಗೂ ದಂಡ ವಿಧಿಸಿ ಆದೇಶ ಹೊರಡಿಸಿದ್ದಾರೆ.

'ಪಶ್ಚಿಮ ಬಂಗಾಳದ ಗೋಪಾಲಪುರದಲ್ಲಿ ಜನಿಸಿದ್ದ ಮೆಹದಿ, ಎಂಜಿನಿಯರಿಂಗ್ ಪದವೀಧರ. ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿದ್ದ ಈತ, ಇಸ್ಲಾಮಿಕ್ ಸ್ಟೇಟ್ ಸಂಘಟನೆಯ ಉಗ್ರರ ಜೊತೆ ಒಡನಾಟ ಬೆಳೆಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತಂತ್ರಜ್ಞಾನದಲ್ಲಿ ಪರಿಣಿತಿ ಪಡೆದಿದ್ದ ಈತ, ಐಎಸ್ ಸಂಘಟನೆಯ ಟ್ವಿಟರ್ ಖಾತೆಯನ್ನು ನಿರ್ವಹಣೆ ಮಾಡುವ ಜವಾಬ್ದಾರಿ ವಹಿಸಿಕೊಂಡಿದ್ದ. ಸಿರಿಯಾ, ಟರ್ಕಿ, ಇಸ್ರೇಲ್, ಪ್ಯಾಲೆಸ್ಟೀನ್, ಗಾಝಾ ಪಟ್ಟಿ ಹಾಗೂ ಇತರೆಡೆಯ ವಿದ್ಯಮಾನಗಳನ್ನು ಗಮನಿಸಿ, ನಿರಂತರವಾಗಿ ಟ್ವೀಟ್ ಮಾಡುತ್ತಿದ್ದ. ಇದಕ್ಕಾಗಿ ಈತ ಪ್ರತಿ ತಿಂಗಳು 60 ಜಿ.ಬಿ ಅಂತರ್ಜಾಲ ಬಳಸುತ್ತಿದ್ದ. ಈತ ಪೋಸ್ಟ್‌ಗಳನ್ನು ಹಲವರು ಹಂಚಿಕೊಳ್ಳುತ್ತಿದ್ದರು. ಭಯೋತ್ಪಾದನೆಗೆ ಪ್ರಚೋದಿಸುತ್ತಿದ್ದರು.'

'ಯುವಕರನ್ನು ಪ್ರಚೋದಿಸಿ ಉಗ್ರ ಸಂಘಟನೆಗೆ ಸೇರಿಸಲು ಮೆಹದಿ ಯತ್ನಿಸುತ್ತಿದ್ದ. 2009ರಲ್ಲಿ ಟ್ವಿಟರ್‌ನಲ್ಲಿ 'ಎಲ್ ಸಾರ್ಟಡಾರ್' ಹೆಸರಿನಲ್ಲಿ ಖಾತೆ ತೆರೆದಿದ್ದ ಮೆಹದಿ, ಪ್ರಚೋದನಾಕಾರಿ ಪೋಸ್ಟ್ ಪ್ರಕಟಿಸುತ್ತಿದ್ದ. ನಂತರ, 2013ರಲ್ಲಿ 'ಶಮ್ಮಿ ವಿಟ್ನೆಸ್' ಹೆಸರಿನಲ್ಲಿ ಖಾತೆ ತೆರೆದು ಐಎಸ್ ಪರ ಟ್ವೀಟ್ ಮಾಡುತ್ತಿದ್ದ. ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯಡಿ (ಯುಎಪಿಎ) ಈತನ ವಿರುದ್ಧ ಪ್ರಕರಣ ದಾಖಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಪದವೀಧರ ಸೇರಿ ಮೂವರ ಬಂಧನ

ಹೈದರಾಬಾದ್‌ನಿಂದ ಬಂದು ಕಳ್ಳತನ • ರಂಗೋಲಿ ಹಾಕಿರದ ಮನೆಗಳೇ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಎಂಬಿಎ ಪದವೀಧರ ಸೇರಿದಂತೆ ಮೂವರನ್ನು ಮಡಿವಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಹೈದರಾಬಾದ್‌ನ ಮೊಹಮ್ಮದ್ ಅವೇಜ್ (42), ಶೇಕ್ ಅಬು ತಾಲಿಬ್ (22) ಮತ್ತು ಅಬ್ದುಲ್ ರಿಯಾಜ್ (22) ಬಂಧಿತರು. ಇವರಿಂದ 50 ಗ್ರಾಂ ಚಿನ್ನಾಭರಣ, 157 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ ಕಾರು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಂಬಿಎ ಪದವೀಧರನಾದ ಅವೇಜ್, ಇತರೆ ಆರೋಪಿಗಳ ಜೊತೆ ಸೇರಿ ಕಳ್ಳತನಕ್ಕೆ ತಂಡ ಕಟ್ಟಿದ್ದ. ಎಲ್ಲ ಆರೋಪಿಗಳು, ಹೈದರಾಬಾದ್‌ನಿಂದ ಕಾರಿನಲ್ಲಿ ಆಗಾಗ ಬೆಂಗಳೂರಿಗೆ ಬರುತ್ತಿದ್ದರು. ವಸತಿ ಪ್ರದೇಶದ ಪಾರ್ಕಿಂಗ್ ಸ್ಥಳದಲ್ಲಿ ಕಾರು ನಿಲ್ಲಿಸಿ, ಸುತ್ತಾಡುತ್ತಿದ್ದರು. ಬೀಗ ಹಾಕಿರುತ್ತಿದ್ದ, ಅಂಗಳದಲ್ಲಿ ಕಸ ಬಿದ್ದಿರುತ್ತಿದ್ದ ಹಾಗೂ ರಂಗೋಲಿ ಹಾಕಿರದ ಮನೆಗಳನ್ನು ಗುರುತಿಸುತ್ತಿದ್ದರು.'

'ರಾತ್ರಿ ಮನೆಗಳಿಗೆ ನುಗ್ಗುತ್ತಿದ್ದ ಆರೋಪಿಗಳು, ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದರು. ಇತ್ತೀಚೆಗೆ ಮಾರುತಿನಗರದಲ್ಲಿ ಆರೋಪಿಗಳು ಕೃತ್ಯ ಎಸಗಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಆರೋಪಿಗಳ ಕೃತ್ಯ ಸೆರೆಯಾಗಿತ್ತು. ಅದನ್ನು ಆಧರಿಸಿ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು' ಎಂದು ಪೊಲೀಸರು ತಿಳಿಸಿದರು.

'ಕಳ್ಳತನದಿಂದ ಬಂದ ಹಣವನ್ನು ಆರೋಪಿಗಳು ಮೋಜು–ಮಸ್ತಿಗೆ ಖರ್ಚು ಮಾಡುತ್ತಿದ್ದರು. ಹಣ ಖಾಲಿಯಾಗುತ್ತಿದ್ದಂತೆ ಪುನಃ ಕಳ್ಳತನಕ್ಕೆ ಇಳಿಯುತ್ತಿದ್ದರು. ಆರೋಪಿಗಳ ವಿರುದ್ಧ ಕರ್ನಾಟಕ ಹಾಗೂ ಆಂಧ್ರಪ್ರದೇಶ ವಿವಿಧ ಠಾಣೆಗಳಲ್ಲಿ 100ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿರುವ ಮಾಹಿತಿ ಇದೆ' ಎಂದರು.

ರೈಲಿನಲ್ಲಿ ಗಾಂಜಾ ತಂದು ಮಾರಾಟ ಯತ್ನ: ಬಂಧನ

ಮೈಸೂರು: ಒಡಿಶಾದಿಂದ ರೈಲಿನಲ್ಲಿ 85 ಕೆ.ಜಿ 730 ಗ್ರಾಂ ಗಾಂಜಾ ತಂದು ನಗರದಲ್ಲಿ ಮಾರಾಟಕ್ಕೆ ಯತ್ನಿಸಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ನಗರದ ಸಾತಗಳ್ಳಿಯಲ್ಲಿ ಬೊಲೆರೊ ವಾಹನದಲ್ಲಿ ಗಾಂಜಾ ಸಾಗಿಸುತ್ತಿರುವ ಬಗ್ಗೆ ಮಾಹಿತಿ ಮೇರೆಗೆ ಪರಿಶೀಲಿಸಿದಾಗ ಪ್ರಕರಣ ಬೆಳಕಿಗೆ ಬಂತು. ಗಾಂಜಾ ಮೌಲ್ಯ ₹ 40 ಲಕ್ಷವೆಂದು ಅಂದಾಜಿಸಲಾಗಿದ್ದು, ಚಿಲ್ಲರೆ ಮಾರಾಟಕ್ಕೆ ಮುಂದಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಕೃತ್ಯಕ್ಕೆ ಬಳಸಿದ್ದ ವಾಹನ, ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಜ.16ರಂದು ಸಿಸಿಬಿ ಪೊಲೀಸರು ₹ 20 ಲಕ್ಷ ಮೌಲ್ಯದ 57.8 ಕೆ.ಜಿ ಗಾಂಜಾ ವಶಕ್ಕೆ ಪಡೆದು, ಇಬ್ಬರನ್ನು ಬಂಧಿಸಿದ್ದರು. ಅಲ್ಲಿಂದ ದೊರೆತ ಸುಳಿವಿನ ಮೇರೆ ಈಗ ಮತ್ತಿಬ್ಬರನ್ನು ಬಂಧಿಸಿದ್ದಾರೆ. 15 ದಿನದಲ್ಲಿ 139 ಕೆ.ಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ.

ಡಿಸಿಪಿ ಎಸ್.ಜಾಹ್ನವಿ, ಎಸಿಪಿ ಎಸ್.ಸಂದೇಶ್, ಇನ್‌ಸ್ಪೆಕ್ಟರ್ ಎಂ.ಮೋಹನ್ ಕುಮಾರ್, ಪಿಎಸ್‌ಐಗಳಾದ ಮಾರುತಿ ಅಂತರಗಟ್ಟಿ, ಕಿರಣ್, ಎಎಸ್‌ಐ ಅಸ್ಗರ್ ಖಾನ್, ಸಿಬ್ಬಂದಿ ಸಲೀಂಪಾಷಾ, ರಾಮಸ್ವಾಮಿ, ಲಕ್ಷ್ಮಿಕಾಂತ, ರಮ್ಯಾ, ಮಮತಾ ಸೇರಿದಂತೆ ಹಲವರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಸ್ನೇಹಿತರ ಜೊತೆ ಸವಾಲು: ಹೋಟೆಲ್‌ನಲ್ಲಿ ನಡೆದ ಪ್ರಕರಣ

ದೌರ್ಜನ್ಯ ಎಸಗಿ ಜೈಲುಪಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲೊಂದಕ್ಕೆ ಹೋಗಿದ್ದ ಮಹಿಳೆಯ ಅಂಗಾಂಗವನ್ನು ಮುಟ್ಟಿ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಚಂದನ್ ಅವರನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ಹಂಪಿನಗರ ನಿವಾಸಿ ಚಂದನ್, ಅಡುಗೆ ಅನಿಲ ಸಿಲಿಂಡರ್ ಪೂರೈಸುವ ಡೆಲಿವರಿ ಬಾಯ್. ಸ್ನೇಹಿತರ ಜೊತೆ ಹೋಟೆಲ್‌ಗೆ ಹೋಗಿದ್ದ. ಸ್ನೇಹಿತರ ಜೊತೆ ಸವಾಲು ಕಟ್ಟಿ ಮಹಿಳೆಯ ಅಂಗಾಂಗ ಮುಟ್ಟಿದ್ದ. ಕೃತ್ಯದ ಬಗ್ಗೆ ದೂರು ದಾಖಲಿಸಿಕೊಂಡು ಆರೋಪಿಯನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಹಿಳೆ ಡಿ. 30ರಂದು ಸಂಜೆ ತಿಂಡಿ ತಿನ್ನಲೆಂದು ಹೋಟೆಲ್‌ಗೆ ಹೋಗಿದ್ದರು. ಅದೇ ಹೋಟೆಲ್‌ಗೆ ಚಂದನ್ ಹಾಗೂ ಸ್ನೇಹಿತರು ತೆರಳಿದ್ದರು. ಹೋಟೆಲ್‌ನ ನಗದು ಸ್ವೀಕರಿಸುವ ಜಾಗದ ಬಳಿ ದೂರುದಾರ ಮಹಿಳೆ ನಿಂತಿದ್ದರು. ಅದೇ ಸ್ಥಳಕ್ಕೆ ಹೋಗಿದ್ದ ಆರೋಪಿ, ಹಿಂಬದಿಯಿಂದ ಅಂಗಾಂಗಗಳನ್ನು ಮುಟ್ಟಿ ಲೈಂಗಿಕ ಕಿರುಕುಳ ನೀಡಿದ್ದ.'

'ಆರೋಪಿ ಕೃತ್ಯದಿಂದ ಮಹಿಳೆ ಗಾಬರಿಗೊಂಡಿದ್ದರು. ಕೃತ್ಯವನ್ನು ಪ್ರಶ್ನಿಸಿ ಯುವಕನನ್ನು ತರಾಟೆಗೆ ತೆಗೆದುಕೊಂಡಿದ್ದರು. ಗ್ರಾಹಕರು ಸೇರುತ್ತಿದ್ದಂತೆ ಆರೋಪಿ ಹಾಗೂ ಸ್ನೇಹಿತರು ಸ್ಥಳದಿಂದ ಪರಾರಿಯಾಗಿದ್ದರು' ಎಂದು ಪೊಲೀಸರು ತಿಳಿಸಿದರು.

ಕ್ಯಾಮೆರಾದಲ್ಲಿ ಸೆರೆ: 'ಆರೋಪಿಗಳ ಕೃತ್ಯ ಹೋಟೆಲ್ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಕೃತ್ಯದ ಸಂಬಂಧ ಮಹಿಳೆ ಹೇಳಿಕೆ ದಾಖಲಿಸಿಕೊಳ್ಳಲಾಗಿತ್ತು. ಕ್ಯಾಮೆರಾ ದೃಶ್ಯ ಆಧರಿಸಿ ತನಿಖೆ ಕೈಗೊಂಡು ಆರೋಪಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡ' ಎಂದು ಪೊಲೀಸರು ಹೇಳಿದರು. 'ಮಹಿಳೆಯನ್ನು ಮುಟ್ಟಿ ಬರುವಂತೆ ಸ್ನೇಹಿತರು ಸವಾಲು ಕಟ್ಟಿದ್ದರು. ಇದೇ ಕಾರಣಕ್ಕೆ ಮಹಿಳೆಯ ಅಂಗಾಂಗಗಳನ್ನು ಮುಟ್ಟಿದ್ದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ' ಎಂದರು.

ಅಸಭ್ಯ ವರ್ತನೆ: ವ್ಯಕ್ತಿ ಬಂಧನ

ಬೆಂಗಳೂರು: ಸ್ನೇಹಿತರಿಗಾಗಿ ಕಾಯುತ್ತ ಕಾರಿನಲ್ಲಿ ಕುಳಿತಿದ್ದ ಮಹಿಳೆ ಬಳಿ ಹೋಗಿ ಅಸಭ್ಯವಾಗಿ ವರ್ತಿಸಿದ್ದ ಆರೋಪದಡಿ ಸುನೀಲ್‌ಕುಮಾರ್ ಶರ್ಮಾ (35) ಅವರನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಯಾದ ಆರೋಪಿ ಜ.3ರಂದು ರಾತ್ರಿ ಕೃತ್ಯ ಎಸಗಿದ್ದ. ಮಹಿಳೆ ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಮಹಿಳೆ, ಸ್ನೇಹಿತರ ಜೊತೆ ಊಟ ಮಾಡಲೆಂದು ಹೊರವರ್ತುಲ ರಸ್ತೆ ಬಳಿ ಬಂದಿದ್ದರು. ಸ್ನೇಹಿತರು ಬರುವುದು ತಡವಾಗಿತ್ತು. ಅವರಿಗಾಗಿ ಕಾಯುತ್ತ ಕಾರಿನೊಳಗೆ ಕುಳಿತಿದ್ದರು.'

'ಕಾರಿನ ಬಳಿ ಬಂದಿದ್ದ ಆರೋಪಿ, ಕೈ ಸನ್ನೆ ಮಾಡಿದ್ದ. ಕಾರಿನ ಗಾಜು ಇಳಿಸುವಂತೆ ಒತ್ತಾಯಿಸಿದ್ದ. ಗಾಜು ತೆಗೆಯದಿದ್ದಾಗ ಅಸಭ್ಯವಾಗಿ ವರ್ತಿಸಿದ್ದ. ಗಾಬರಿಗೊಂಡ ಮಹಿಳೆ, ಸ್ನೇಹಿತರಿಗೆ ವಿಷಯ ತಿಳಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದರು' ಎಂದು ತಿಳಿಸಿದರು.

ಕಾಲೇಜು ಕಟ್ಟಡದಿಂದ ಬಿದ್ದು ಬಿಬಿಎ ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಬಳಿಯ ಕಾಲೇಜೊಂದರ ಕಟ್ಟಡದ 6ನೇ ಮಹಡಿಯಿಂದ ಬಿದ್ದು ವಿದ್ಯಾರ್ಥಿ ವಿಘ್ನೇಶ್ (19) ಮೃತಪಟ್ಟಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

'ತಮಿಳುನಾಡಿನ ವಿಘ್ನೇಶ್, ಪೋಷಕರ ಜೊತೆ ಬೇಗೂರಿನಲ್ಲಿ ವಾಸವಿದ್ದರು. ಕಾಲೇಜಿನಲ್ಲಿ ಬಿಬಿಎ ಮೊದಲ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರು' ಎಂದು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಹೇಳಿದರು.

'ಮಂಗಳವಾರ ಕಾಲೇಜಿಗೆ ಬಂದಿದ್ದ ವಿಘ್ನೇಶ್, ತರಗತಿಗಳಿಗೆ ಹಾಜರಾಗಿದ್ದರು. ಮಧ್ಯಾಹ್ನ ಕಾಲೇಜಿನ ಕ್ಯಾಂಟೀನ್‌ನಲ್ಲಿ ಸ್ನೇಹಿತರ ಜೊತೆ ಮಾತನಾಡುತ್ತಿದ್ದರು. ಸಂಜೆ ಸಹಪಾಠಿಗಳು ಮನೆಗೆ ಹೋಗಿದ್ದರು. ಆದರೆ, ವಿಘ್ನೇಶ್ ಕಾಲೇಜಿನಲ್ಲಿದ್ದರು.' 'ಮಧ್ಯಾಹ್ನ 4 ಗಂಟೆ ಸುಮಾರಿಗೆ ಕಾಲೇಜು ಕಟ್ಟಡದ 6ನೇ ಮಹಡಿಗೆ ಹೋಗಿದ್ದ ವಿಘ್ನೇಶ್, ಅಲ್ಲಿಂದ ಜಿಗಿದಿದ್ದರು. ತೀವ್ರ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದರು. ಇದೊಂದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆದರೆ, ಕಾರಣ ತಿಳಿದುಬಂದಿಲ್ಲ. ವಿಘ್ನೇಶ್ ಸಾವಿನ ಬಗ್ಗೆ ಪೋಷಕರು ಹೇಳಿಕೆ ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ರಸ್ತೆ ಅಪಘಾತ: ಬೈಕ್ ಸವಾರ ಸಾವು

ಬೆಂಗಳೂರು: ನೈಸ್ ರಸ್ತೆಯ ದೊಡ್ಡಬೆಲೆ ಟೋಲ್ ಗೇಟ್ ಸಮೀಪದಲ್ಲಿ ಕಂಟೇನರ್ ಲಾರಿ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಸವಾರ ಜಯರಾಮ್ (43) ಮೃತಪಟ್ಟಿದ್ದಾರೆ.

'ಕುಂದಾಪುರದ ಜಯರಾಮ್, ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಬನ್ನೇರುಘಟ್ಟದಲ್ಲಿ ವಾಸವಿದ್ದರು. ಮೈಸೂರು ಮುಖ್ಯರಸ್ತೆ ಕಡೆಯಿಂದ ಹೊಸೂರು ರಸ್ತೆ ಕಡೆಗೆ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಕೆಂಗೇರಿ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಕಂಟೇನರ್ ಲಾರಿಯನ್ನು ಚಾಲಕ ನಿರ್ಲಕ್ಷ್ಯದಿಂದ ಅತೀ ವೇಗದಲ್ಲಿ ಚಲಾಯಿಸಿದ್ದ. ಇದರಿಂದಾಗಿ ಬೈಕ್‌ಗೆ ಲಾರಿ ಡಿಕ್ಕಿ ಹೊಡೆದಿತ್ತು. ಬೈಕ್ ಸಮೇತ ಉರುಳಿಬಿದ್ದಿದ್ದ ಜಯರಾಮ್ ಅವರ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ಪ್ರಜ್ಞೆ ತಪ್ಪಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ತಪಾಸಣೆ ನಡೆಸಿದ್ದ ವೈದ್ಯರು, ಜಯರಾಮ್ ಮೃತಪಟ್ಟಿರುವುದಾಗಿ ಹೇಳಿದರು.'

'ಕಂಟೇನರ್ ಲಾರಿ (ಕೆಎ 51 7173) ಚಾಲಕನಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ಕಟೌಟ್ ಉರುಳಿ ಬಿದ್ದು ಗಾಯ

ಬೆಂಗಳೂರು: ಅಯೋಧ್ಯೆಯಲ್ಲಿ ಶ್ರೀರಾಮ ವಿಗ್ರಹ ಪ್ರತಿಷ್ಠಾಪನೆ ನಿಮಿತ್ತ ನಗರದ ಎಚ್‌ಎಎಲ್ ವಿಮಾನ ನಿಲ್ದಾಣ ರಸ್ತೆಯಲ್ಲಿ ಅಳವಡಿಸಿದ್ದ ಕಟೌಟ್ ಉರುಳಿ ಬಿದ್ದಿದ್ದು, ಮೂವರು ಗಾಯಗೊಂಡಿರುವುದಾಗಿ ತಿಳಿದುಬಂದಿದೆ. ಸ್ಥಳೀಯರು ಹಾಗೂ ಕೆಲ ಮುಖಂಡರು, ರಸ್ತೆ ಪಕ್ಕದ ಸ್ಥಳದಲ್ಲಿ ಶ್ರೀರಾಮ ಕಟೌಟ್ ಹಾಕಿಸಿದ್ದರು. ಹಲವು ದಿನವಾದರೂ ಕಟೌಟ್ ತೆರವು ಮಾಡಿರಲಿಲ್ಲ. ಅದನ್ನು ತೆರವು ಮಾಡುವಂತೆ ಸಂಬಂಧಪಟ್ಟ ಸಿಬ್ಬಂದಿಗೆ ಮುಖಂಡರು ಹೇಳಿದ್ದರು.

ಮಹಿಳೆ ವಿವಸ್ತ್ರ ಪ್ರಕರಣ: ಮದುವೆ ನೋಂದಣಿ ಮಾಡಿಸಿದ ಪ್ರೇಮಿಗಳು

ಬೆಳಗಾವಿ: ಮನೆ ಬಿಟ್ಟು ಹೋಗಿದ್ದ ತಾಲ್ಲೂಕಿನ ಹೊಸ ವಂಟಮೂರಿಯ ಪ್ರೇಮಿಗಳ ಮದುವೆ ಮಂಗಳವಾರ (ಜ.30) ನೋಂದಣಿಯಾಗಿದೆ. ಪ್ರೇಮಿಗಳು ಮನೆ ಬಿಟ್ಟು ಹೋದರು ಎಂಬ ಕಾರಣಕ್ಕೆ ಯುವಕನ ತಾಯಿಯನ್ನು ಬೆತ್ತಲೆಗೊಳಿಸಿ, ವಿದ್ಯುತ್ ಕಂಬಕ್ಕೆ ಕಟ್ಟಿ ಹಲ್ಲೆ ಮಾಡಲಾಗಿತ್ತು. ಈ ಸಂಬಂಧ 13 ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಹಲ್ಲೆ ನಡೆದ ದಿನ (2023ರ ಡಿ.11) ಪ್ರೇಮಿಗಳು ದೇವಸ್ಥಾನದಲ್ಲಿ ಮದುವೆಯಾಗಿದ್ದರು. ಜನವರಿ 30ರಂದು ಅವರ ಮದುವೆಯನ್ನು ಬೆಳಗಾವಿಯ ಉದ್ಯಮಭಾಗದ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಮಾಡಿಸಿದ್ದಾರೆ. ಸಂಬಂಧಿ ಮಹಿಳೆಯರು ಇದಕ್ಕೆ ಸಾಕ್ಷಿ ಸಹಿ ಕೂಡ ಮಾಡಿದ್ದಾರೆ.

ಸಂತ್ರಸ್ತ ಮಹಿಳೆಯ ಪುತ್ರ ಹಾಗೂ ಪ್ರಮುಖ ಆರೋಪಿಯ ಪುತ್ರಿ ಡಿಸೆಂಬರ್ 10ರ ರಾತ್ರಿ ಮನೆ ಬಿಟ್ಟು ಹೋಗಿದ್ದರು. ಈ ಸಿಟ್ಟಿನಿಂದ ಡಿಸೆಂಬರ್ 11ರ ಬೆಳಿಗ್ಗೆ ಯುವತಿಯ ಮನೆಯವರು ಯುವಕನ ತಾಯಿಯನ್ನು ಬೆತ್ತಲೆ ಮಾಡಿ, ಅಮಾನುಷವಾಗಿ ಹಲ್ಲೆ ಮಾಡಿದ್ದರು.

ಕರ್ನಾಟಕ ಹೈಕೋರ್ಟ್ ಕೂಡ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿತ್ತು. ಬಳಿಕ ರಾಜ್ಯ ಸರ್ಕಾರ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಿದೆ. ಘಟನೆಯಿಂದ ತೀವ್ರ ಜರ್ಜರಿತರಾದ ಸಂತ್ರಸ್ತ ಮಹಿಳೆಗೆ ಇಲ್ಲಿನ ಜಿಲ್ಲಾಸ್ಪತ್ರೆಯ ಸಖಿ ಘಟಕದಲ್ಲಿ ಚಿಕಿತ್ಸೆ ನೀಡಲಾಗಿದ್ದು, ಸದ್ಯ ಅವರು ಆಸ್ಪತ್ರೆಯಿಂದ ಬಿಡುಗಡೆಗೊಂಡಿದ್ದಾರೆ.

ನವದಂಪತಿ ಹಾಗೂ ಸಂತ್ರಸ್ತೆ ಬೇರೆಬೇರೆ ಕಡೆಗಳಲ್ಲಿ ವಾಸವಾಗಿದ್ದು, ಅವರಿಗೆ ಪೊಲೀಸ್ ರಕ್ಷಣೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಫ್ಲಾಸ್ಕ್‌ನಲ್ಲಿ ಅಡಗಿಸಿಟ್ಟ ಚಿನ್ನದ ಪುಡಿ ವಶ

ದೇವನಹಳ್ಳಿ: ಸೌದಿ ಅರೇಬಿಯಾದ ಜೆಡ್ಡಾದಿಂದ ಜನವರಿ 28ರಂದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಯಾಣಿಕ ಕುಡಿಯುವ ನೀರಿನ ಫ್ಲಾಸ್ಕ್‌ಗೆ ಲೇಪನ ಮಾಡಿಕೊಂಡು ತಂದಿದ್ದ ಚಿನ್ನದ ಪುಡಿಯನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಫ್ಲಾಸ್ಕ್ ಒಳಭಾಗದ ಮೇಲ್ಮೈಗೆ ಇತರ ವಸ್ತುಗಳ ಮಿಶ್ರಣದೊಂದಿಗೆ ಚಿನ್ನದ ಪುಡಿಯನ್ನು ಬೆರಸಿ ಲೇಪನ ಮಾಡಲಾಗಿತ್ತು.

₹7.52 ಲಕ್ಷ ಮೌಲ್ಯದ 122 ಗ್ರಾಂ ಚಿನ್ನದ ಪುಡಿಯನ್ನು ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ವಾಹನ ಡಿಕ್ಕಿ: ಕರಡಿ ಸಾವು



ರಾಮನಗರ: ತಾಲ್ಲೂಕಿನ ಗೊಲ್ಲರದೊಡ್ಡಿ ಬಳಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಮಂಗಳವಾರ ವಾಹನವೊಂದು ಡಿಕ್ಕಿ ಹೊಡೆದು ಹತ್ತು ವರ್ಷದ ಕರಡಿಯೊಂದು ಮೃತಪಟ್ಟಿದೆ.

ದೊಡ್ಡಮಣ್ಣುಗುಡ್ಡೆ ಅರಣ್ಯ ಪ್ರದೇಶದಿಂದ ಆಹಾರ ಅರಸಿ ಬಂದಿರುವ ಕರಡಿ ಬೆಳಗ್ಗೆ ರಸ್ತೆ ದಾಟುವಾಗ ವೇಗವಾಗಿ ಬಂದ ವಾಹನ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕರಡಿಯ ಬಾಯಿ, ಮುಖ ಮತ್ತು ದೇಹದ ಕೆಲ ಭಾಗಗಳು ಛಿದ್ರವಾಗಿವೆ. ಘಟನೆ ಬಳಿಕ ಚಾಲಕ ವಾಹನ ನಿಲ್ಲಿಸದೆ ಪರಾರಿಯಾಗಿದ್ದಾನೆ.

ಸಾರ್ವಜನಿಕರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿದರು. ಕರಡಿಯ ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಿ, ಯಂಗಯ್ಯನ ಕೆರೆ ಪ್ರದೇಶದಲ್ಲಿ ಶವ ಸುಡಲಾಯಿತು. ವಲಯ ಅರಣ್ಯಾಧಿಕಾರಿ ದಿನೇಶ್, ಉಪ ವಲಯ ಅರಣ್ಯಾಧಿಕಾರಿ ವಾಸು ಇದ್ದರು.



ಟೂರ್ನಿಯಲ್ಲಿ ಪಾಲ್ಗೊಂಡಿದ್ದ ಪೊಲೀಸರು

ಆರ್ಚರಿ ಚಾಂಪಿಯನ್‌ಷಿಪ್ ಟೂರ್ನಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಆಯೋಜಿಸಲಾಗಿರುವ '12ನೇ ಅಖಿಲ ಭಾರತ ಪೊಲೀಸ್ ಆರ್ಚರಿ ಚಾಂಪಿಯನ್‌ಷಿಪ್ ಟೂರ್ನಿ'ಗೆ ಗೃಹ ಸಚಿವ ಜಿ. ಪರಮೇಶ್ವರ ಅವರು ಮಂಗಳವಾರ ಚಾಲನೆ ನೀಡಿದರು.

ರಾಜ್ಯ ಪೊಲೀಸ್ ಇಲಾಖೆ ವತಿಯಿಂದ ಕೋರಮಂಗಲದಲ್ಲಿರುವ ರಾಜ್ಯ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) ಮೈದಾನದಲ್ಲಿ ಟೂರ್ನಿ ಹಮ್ಮಿಕೊಳ್ಳಲಾಗಿದೆ. ಫೆಬ್ರುವರಿ 4ರವರೆಗೂ ಟೂರ್ನಿ ನಡೆಯಲಿದೆ. ಕರ್ನಾಟಕ, ಅಸ್ಸಾಂ, ಬಿಹಾರ, ಗುಜರಾತ್, ತಮಿಳುನಾಡು, ತೆಲಂಗಾಣ ಸೇರಿ ದೇಶದ 24 ರಾಜ್ಯಗಳ ಪೊಲೀಸ್ ತಂಡಗಳು ಟೂರ್ನಿಯಲ್ಲಿ ಭಾಗವಹಿಸಿವೆ.

ಪರಮೇಶ್ವರ್ ಮಾತನಾಡಿ, 'ಇದೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಟೂರ್ನಿ ಆಯೋಜನೆ ಮಾಡಿರುವುದು ಹೆಮ್ಮೆಯ ವಿಷಯ. ಆರ್ಚರಿಯಲ್ಲಿ ಕರ್ನಾಟಕದ ತಂಡ ಇರಲಿಲ್ಲ. ರಾಜ್ಯ ಪೊಲೀಸ್ ಮಹಾನಿರ್ದೇಶಕರು, ಇಲಾಖೆಯಲ್ಲಿರುವ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಿ ಟೂರ್ನಿಯಲ್ಲಿ ಪಾಲ್ಗೊಳ್ಳುವಂತೆ ಮಾಡಿದ್ದಾರೆ' ಎಂದರು.

ಕುಲಪತಿಗಳ ಹುದ್ದೆ ಭರ್ತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಕುಲಪತಿ ಹುದ್ದೆಗಳಿಗೆ ಕೂಡಲೇ ನೇಮಕ ಮಾಡಬೇಕು ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಒತ್ತಾಯಿಸಿದರು.

ಇದಕ್ಕೆ ಸಂಬಂಧಿಸಿದ ಕಡತಗಳನ್ನು ತಕ್ಷಣವೇ ರಾಜ್ಯಪಾಲರಿಗೆ ರವಾನಿಸಬೇಕು. ಏಳು ವಿಶ್ವವಿದ್ಯಾಲಯಗಳಿಗೆ ಕೂಡಲೇ ಹಣವನ್ನು ಬಿಡುಗಡೆ ಮಾಡಬೇಕು ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಉನ್ನತ ಶಿಕ್ಷಣ ಕ್ಷೇತ್ರವನ್ನು ಕಡೆಗಣಿಸಿದೆ. ಅನಗತ್ಯ ಗೊಂದಲ ನಿರ್ಮಾಣ ಮಾಡುತ್ತಿದೆ. ಕಾಲಕಾಲಕ್ಕೆ ತೆಗೆದುಕೊಳ್ಳಬೇಕಾದ ನಿರ್ಣಯಗಳನ್ನು ಮರೆತು ರಾಜಕೀಯ ಪ್ರೇರಿತವಾಗಿ ಸಮಯ ವ್ಯರ್ಥ ಮಾಡುತ್ತಿದೆ ಎಂದು ಅವರು ಆರೋಪಿಸಿದರು.

ವಿದ್ಯಾರ್ಥಿಗಳಿಂದ ನಾಟಕ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಅಂದ್ರಹಳ್ಳಿಯ ವಿದ್ಯಾಮಾನ್ಯ ವಿದ್ಯಾಕೇಂದ್ರ ಶಿಕ್ಷಣ ಸಂಸ್ಥೆಯ 700ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಎರಡು ದಿನಗಳಲ್ಲಿ 9 ಘಂಟೆಗಳ ಕಾಲ ಶ್ರೀರಾಮನ ಕತೆಯಾಧಾರಿತ 'ಶ್ರೀರಾಮ ಕಥಾಮೃತ' ಎಂಬ ದೃಶ್ಯ ಕಾವ್ಯ ನಾಟಕ ಪ್ರದರ್ಶಿಸಿದರು.

ಶಾಲೆಯ 21ನೇ ವಾರ್ಷಿಕೋತ್ಸವದ ಅಂಗವಾಗಿ ನಡೆದ ಪ್ರದರ್ಶನ, ಧ್ವನಿ ಬೆಳಕಿನ ವಿಶೇಷ ಸಂಯೋಜನೆಯಲ್ಲಿ ಆಕರ್ಷಕವಾಗಿ ಮೂಡಿಬಂತು.

ರಂಗ ನಿರ್ದೇಶಕ ವಿಧು ಉಚ್ಚಿಲ್ ಮಾತನಾಡಿ, 'ಇದೊಂದು ದೊಡ್ಡ ರಂಗ ಪ್ರಯೋಗ. ವಿದ್ಯಾರ್ಥಿಗಳು ಆಸಕ್ತಿ ಮತ್ತು ಸಂಯಮದಿಂದ ಕಿರೀಟ, ಗದೆ, ಬಿಲ್ಲುಬಾಣ, ಬತ್ತಳಿಕೆ, ಶಿವ ಧನಸ್ಸು, ಕೇಶವಿನ್ಯಾಸ, ವೇಷ ಭೂಷಣಗಳು, ಅಲಂಕಾರಿಕ ಸಾಮಗ್ರಿಗಳನ್ನು ತಾವೇ ತಯಾರಿಸಿ, ಕಲಿತು ನಾಟಕ ಪ್ರಯೋಗ ಮಾಡಿದರು' ಎಂದರು.

ರಂಗಕರ್ಮಿ ಪ್ರಕಾಶ್ ಬೆಳವಾಡಿ ಮಾತನಾಡಿ, 'ವರ್ಷದಲ್ಲಿ ಕೆಲವು ದಿನಗಳಾದರೂ ರಂಗ ಚಟುವಟಿಕೆಗೆ ಅವಕಾಶ ನೀಡಬೇಕು. ಮಕ್ಕಳಿಗೆ ತಮ್ಮ ಆಯ್ಕೆಯಂತೆಯೇ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಬೇಕು' ಎಂದರು.



ಅಂದ್ರಹಳ್ಳಿಯ ವಿದ್ಯಾಮಾನ್ಯ ವಿದ್ಯಾಕೇಂದ್ರ ಶಿಕ್ಷಣ ಸಂಸ್ಥೆಯಲ್ಲಿ ನಡೆದ 'ಶ್ರೀರಾಮ ಕಥಾಮೃತ' ನಾಟಕ ಪ್ರದರ್ಶನ

ಸಂಸ್ಥೆಯ ಕಾರ್ಯದರ್ಶಿ ಭರತ್ ಸೌಂದರ್ಯ ಮಾತನಾಡಿ, 'ಇಡೀ ಶಾಲೆಯನ್ನೇ ವೇದಿಕೆ ಮಾಡಿ ನೂತನ ಪ್ರಯೋಗ ಪ್ರಸ್ತುತ ಪಡಿಸಿದ್ದೇವೆ' ಎಂದರು.

ರಾಮನ ಪಾತ್ರಧಾರಿ ರೋಹಿತ್ ಮಾತನಾಡಿದರು. ಸಂಸ್ಥೆಯ ಸಂಸ್ಥಾಪಕ ರಮೇಶ್ ಸೌಂದರ್ಯ, ಶಾಲೆಯ ನಿರ್ದೇಶಕ ಭರತ್ ಸೌಂದರ್ಯ, ಸ್ವದೇಶಿ ಜಾಗರಣ್ ಮಂಚ್‌ನ ಜಗದೀಶ್, ಆದಾಯ ತೆರಿಗೆ ಇಲಾಖೆಯ ಉಪ ಆಯುಕ್ತರಾದ ಅಶ್ವಿನ್ ಡಿ. ಗೌಡ, ಕರ್ನಾಟಕ ಶಾಲಾ ಶಿಕ್ಷಣ ಮಂಡಳಿ ಉಪ ಆಯುಕ್ತ ಎಸ್.ಆಕಾಶ್ ಪಾಲ್ಗೊಂಡಿದ್ದರು.



'ಶ್ರೀರಾಮ ಕಥಾಮೃತ' ನಾಟಕದ ದೃಶ್ಯ.

ಚಾಂದಿನಿ ಚೌಕ್‌ನಲ್ಲಿ ಹಸಿರು ಧ್ವಜ ತೆರವು

ಬೆಂಗಳೂರು: ಶಿವಾಜಿನಗರದ ಚಾಂದಿನಿ ಚೌಕ್‌ನಲ್ಲಿರುವ ಹೈಮಾಸ್ಟ್ ವಿದ್ಯುತ್ ದೀಪ ಕಂಬಕ್ಕೆ ಕಟ್ಟಲಾಗಿದ್ದ ಹಸಿರು ಧ್ವಜಕ್ಕೆ ಆಕ್ಷೇಪ ವ್ಯಕ್ತವಾಗುತ್ತಿದ್ದಂತೆ, ಪೊಲೀಸರು ಧ್ವಜವನ್ನು ತೆರವುಗೊಳಿಸಿ ಪರಿಸ್ಥಿತಿ ತಿಳಿಗೊಳಿಸಿದ್ದಾರೆ.

ಧ್ವಜದ ಫೋಟೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದ ಹಲವರು, 'ಹಸಿರು ಧ್ವಜವನ್ನು ತೆಗೆಸುವ ತಾಕತ್ ನಿಮಗೆ ಇಲ್ಲವೇ?' ಎಂದು ಪ್ರಶ್ನಿಸಿದ್ದರು. ಇದನ್ನೇ ಬಿಜೆಪಿ ಮುಖಂಡರು, ತಮ್ಮ ಖಾತೆಗಳಲ್ಲಿ ಹಂಚಿಕೊಂಡಿದ್ದರು. ವಿಷಯ ಗೊತ್ತಾಗುತ್ತಿದ್ದಂತೆ ಸ್ಥಳಕ್ಕೆ ಹೋಗಿದ್ದ ಪೊಲೀಸರು, ಹಸಿರು ಧ್ವಜವನ್ನು ತೆರವುಗೊಳಿಸಿದರು.

ಹಳೇ ಫೋಟೊ ಪೋಸ್ಟ್: 'ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿರುವ ಜಗಜೀವನ್‌ರಾಮ್ ನಗರ ಠಾಣೆ ಬಳಿ ಸಾರ್ವಜನಿಕ ಸ್ಥಳದಲ್ಲಿ ಹಸಿರು ಧ್ವಜ ಹಾರಿಸಲಾಗಿದೆ' ಎಂದು ಕೆಲವರು ಸಾಮಾಜಿಕ ಮಾಧ್ಯಮಗಳಲ್ಲಿ ಮಂಗಳವಾರ ಪೋಸ್ಟ್ ಪ್ರಕಟಿಸಿದ್ದರು.

ಪರಿಶೀಲನೆ ನಡೆಸಿದ ಪೊಲೀಸರು, 'ಇದೊಂದು ಹಳೇ ಫೋಟೊ. ಸ್ಥಳದಲ್ಲಿ ಯಾವುದೇ ಧ್ವಜವಿಲ್ಲ. ಶಾಂತಿಗೆ ಧಕ್ಕೆ ತರಲು ಕಿಡಿಗೇಡಿಗಳು ಈ ರೀತಿ ಪೋಸ್ಟ್ ಪ್ರಕಟಿಸಿದ್ದಾರೆ' ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕ್ರಮಕ್ಕೆ ಸಾಂಸ್ಕೃತಿಕ ವಲಯದಲ್ಲಿ ಅಸಮಾಧಾನ

ರವೀಂದ್ರ ಕಲಾಕ್ಷೇತ್ರ: ಆಧುನೀಕರಣಕ್ಕೆ ಆಕ್ಷೇಪ

• ವರುಣ ಹೆಗಡೆ

ಬೆಂಗಳೂರು: ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ ರವೀಂದ್ರ ಕಲಾಕ್ಷೇತ್ರಕ್ಕೆ ಆಧುನಿಕ ಸ್ಪರ್ಶ ಒದಗಿಸುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕ್ರಮಕ್ಕೆ ಸಾಂಸ್ಕೃತಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ.

ವಜ್ರ ಮಹೋತ್ಸವದ ಸಂಭ್ರಮದಲ್ಲಿರುವ ರವೀಂದ್ರ ಕಲಾಕ್ಷೇತ್ರಕ್ಕೆ ಕೇಂದ್ರೀಕೃತ ಹವಾನಿಯಂತ್ರಣ ವ್ಯವಸ್ಥೆ ಸೇರಿ ವಿವಿಧ ಅತ್ಯಾಧುನಿಕ ಸೌಲಭ್ಯಗಳ ಅಳವಡಿಕೆಗೆ ಇಲಾಖೆ ಮುಂದಾಗಿದ್ದು, ಈ ನವೀಕರಣಕ್ಕೆ ₹24 ಕೋಟಿ ವೆಚ್ಚವಾಗಲಿದೆಯೆಂದು ಲೋಕೋಪಯೋಗಿ ಇಲಾಖೆ ಅಂದಾಜಿಸಿದೆ. ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನೂ ಸಲ್ಲಿಸಿದೆ. ಸಚಿವ ಸಂಪುಟದ ಅನುಮೋದನೆ ದೊರೆತ ಬಳಿಕ ನವೀಕರಣ ಪ್ರಕ್ರಿಯೆ ಪ್ರಾರಂಭವಾಗಲಿದೆ. ಸಮಗ್ರ ನವೀಕರಣ ನಡೆಸುವ ಇಲಾಖೆಯ ಈ ಕ್ರಮ ರಂಗಕರ್ಮಿಗಳು, ಕಲಾವಿದರ ಅಸಮಾಧಾನಕ್ಕೆ ಕಾರಣವಾಗಿದೆ.

ಹೊಸ ರಂಗಮಂದಿರ ನಿರ್ಮಿಸಿ: ಇಲಾಖೆಯ ಕ್ರಮದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿಯೂ ಕಲಾವಿದರು ಹಾಗೂ ರಂಗಕರ್ಮಿಗಳು ಅಸಮಾಧಾನ ವ್ಯಕ್ತಪಡಿಸಿದ್ದು, 'ಇಷ್ಟೊಂದು ಮೊತ್ತದಲ್ಲಿ ರವೀಂದ್ರ ಕಲಾಕ್ಷೇತ್ರವನ್ನು ನವೀಕರಣ ಮಾಡುವ ಬದಲು, ಸೂಕ್ತ ತಂತ್ರಜ್ಞರನ್ನು ನೇಮಿಸಿ ಅವರಿಗೆ ವೇತನ ನೀಡಲಿ. ಈಗಿರುವ ಧ್ವನಿ–ಬೆಳಕಿನ ವ್ಯವಸ್ಥೆಯನ್ನೇ ನವೀಕರಿಸಿ ಪ್ರದರ್ಶನಗಳಿಗೆ ಅನುವು ಮಾಡಿಕೊಡಲಿ. ₹ 24 ಕೋಟಿಯಲ್ಲಿ ಹೊಸ ರಂಗಮಂದಿರಗಳನ್ನೇ ನಿರ್ಮಿಸಲಿ' ಎಂದು ಹೇಳಿದ್ದಾರೆ.

'ರಿಪೇರಿ ನೆಪದಲ್ಲಿ ಖರ್ಚು ಮಾಡುವ ಹಣವನ್ನು ತಾತ್ಕಾಲಿಕವಾಗಿ ನೇಮಿಸಿಕೊಂಡಿರುವ ತಂತ್ರಜ್ಞರು, ಕಲಾವಿದರು ಹಾಗೂ ಸಿಬ್ಬಂದಿಗೆ ವೇತನದ ರೂಪದಲ್ಲಿ ನೀಡಿದರೆ ರಿಪೇರಿಯ ಅಗತ್ಯ ಬೀಳುವುದಿಲ್ಲ' ಎಂದು ರಂಗಕರ್ಮಿ ಮಂಡ್ಯ ರಮೇಶ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಂಸ್ಕೃತಿ ಇಲಾಖೆಗೆ ಒಳಪಡುವ ಮಲ್ಲತ್ತಹಳ್ಳಿಯ ಕಲಾಗ್ರಾಮದ ಸಾಂಸ್ಕೃತಿಯ ಸಮುಚ್ಚಯ 2018ರಲ್ಲಿ ಶಾರ್ಟ್ ಸರ್ಕಿಟ್‌ನಿಂದ ಅಗ್ನಿ ಅವಘಡಕ್ಕೆ ಒಳಗಾಗಿತ್ತು. ಧ್ವನಿ–ಬೆಳಕಿನ ವ್ಯವಸ್ಥೆ ಸಂಪೂರ್ಣ ಸುಟ್ಟು ಕರಕಲಾಗಿತ್ತು.

ಮೂರು ತಿಂಗಳಲ್ಲಿ ಸಿದ್ಧಗೊಳಿಸುವುದಾಗಿ ಭರವಸೆ ನೀಡಿದ್ದ ಇಲಾಖೆ, ಮೂರೂವರೆ ವರ್ಷಗಳ ಬಳಿಕ ಸಿದ್ಧಪಡಿಸಿತ್ತು. ಇದರಿಂದಾಗಿ ಅಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಸ್ತಬ್ಧವಾಗಿದ್ದವು. ಈ ಅವಧಿಯಲ್ಲಿ ಕಲಾವಿದರು ಸಾಂಸ್ಕೃತಿಕ ಸಮುಚ್ಚಯ ಪುನರಾರಂಭಕ್ಕೆ ಪ್ರತಿಭಟನೆಯನ್ನೂ ನಡೆಸಿದ್ದರು.

ಈಗ ಇಲಾಖೆಯು ರವೀಂದ್ರ ಕಲಾಕ್ಷೇತ್ರದ ಸಮಗ್ರ ನವೀಕರಣಕ್ಕೆ ಪ್ರಸ್ತಾವ ಸಲ್ಲಿಸಿರುವುದು ರಂಗಕರ್ಮಿಗಳ ಆತಂಕಕ್ಕೆ ಕಾರಣವಾಗಿದೆ.

ಈ ನವೀಕರಣ ಕಾಮಗಾರಿ ಪ್ರಾರಂಭವಾದಲ್ಲಿ ವರ್ಷಾನುಗಟ್ಟಲೆ ಕಲಾಕ್ಷೇತ್ರ ಬಂದ್ ಆಗುವ ಸಾಧ್ಯತೆಯಿದೆ. ಇದರಿಂದ ನಾಟಕ ಹಾಗೂ ವಿವಿಧ ಕಲಾ ಪ್ರದರ್ಶನಗಳಿಗೆ ಸಮಸ್ಯೆಯಾಗಲಿದೆ.


ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರ

'ಕಲಾಕ್ಷೇತ್ರ ಕನ್ನಡಿಗರಿಗೆ ಸಿಗುವುದಿಲ್ಲ'

ಇಲಾಖೆ ನಡೆಸಿದ ಸಭೆಯಲ್ಲಿ ರವೀಂದ್ರ ಕಲಾಕ್ಷೇತ್ರದ ಸಮಗ್ರ ನವೀಕರಣದ ಬಗ್ಗೆ ಚರ್ಚಿಸಿರಲಿಲ್ಲ. ಈ ನವೀಕರಣವೂ ಅಗತ್ಯವಿಲ್ಲ. ನವೀಕರಣದ ಹೆಸರಿನಲ್ಲಿ ಬಾಡಿಗೆ ಹೆಚ್ಚಿಸಿದರೆ ಕಲಾಕ್ಷೇತ್ರ ಕನ್ನಡಿಗರಿಗೆ ಸಿಗದಂತೆ ಆಗುತ್ತದೆ. ಹಾಲಿ ಧ್ವನಿ ಮತ್ತು ಬೆಳಕಿನ ವ್ಯವಸ್ಥೆ ಉತ್ತಮವಾಗಿದೆ. ವೇದಿಕೆಯ ಮರದ ಹಾಸುಗಳನ್ನು ಪಾಲಿಶ್ ಮಾಡಿಸಿದರೆ ಸಾಕಾಗುತ್ತದೆ. ವೇದಿಕೆಯ ಮೇಲಿರುವ ಕಬ್ಬಿಣದ ಲೈಟ್ ಬಾರ್‌ಗಳನ್ನು ಕೆಳಗೆ ಇಳಿಸುವ ಹಾಗೂ ಮೇಲಕ್ಕೆ ಎತ್ತುವ ವ್ಯವಸ್ಥೆ ಈಗಾಗಲೇ ಇದ್ದು, ಅದನ್ನು ಕಲಾವಿದರಿಗೆ ಬಳಸಲು ಅನುಕೂಲ ಮಾಡಿಕೊಡಬೇಕು. ನಿರ್ವಹಣೆಗೆ ಸಂಬಂಧಿಸಿದಂತೆ ಧ್ವನಿ ಹಾಗೂ ಬೆಳಕಿನಲ್ಲಿ ಅನುಭವ ಹಾಗೂ ರಂಗಶಿಕ್ಷಣ ಪಡೆದಿರುವ ವ್ಯಕ್ತಿಗಳನ್ನು ಕಾಯಂ ಸಿಬ್ಬಂದಿಯಾಗಿ ನೇಮಿಸಿಕೊಳ್ಳಬೇಕು.

ಶಶಿಧರ್ ಭಾರಿಘಾಟ್, ರಂಗಕರ್ಮಿ

ಬಾಡಿಗೆ ಹೆಚ್ಚಳದ ಕಳವಳ

ಸಂಸ್ಕೃತಿ ಇಲಾಖೆಯು 2022ರಲ್ಲಿ ರಂಗಮಂದಿರಗಳ ಬಾಡಿಗೆಯನ್ನು ಪರಿಷ್ಕರಿಸಿ, ಆದೇಶ ಹೊರಡಿಸಿತ್ತು. ಪ್ರತಿ ವರ್ಷ ಬಾಡಿಗೆ ದರವನ್ನು ಶೇ 5 ರಷ್ಟು ಏರಿಕೆ ಮಾಡಬೇಕೆಂದು ಆದೇಶದಲ್ಲಿ ತಿಳಿಸಲಾಗಿತ್ತು. ಸರ್ಕಾರಿ ಆದೇಶದ ಅನ್ವಯ ರವೀಂದ್ರ ಕಲಾಕ್ಷೇತ್ರದ ಬಾಡಿಗೆಯನ್ನು ಕಳೆದ ವರ್ಷ ಶೇ 5 ರಷ್ಟು ಹೆಚ್ಚಳ ಮಾಡಲಾಗಿತ್ತು. ಸದ್ಯ, ಒಂದು ಪಾಳಿಗೆ ₹5 ಸಾವಿರ ಠೇವಣಿ ಹಾಗೂ ಜಿಎಸ್‌ಟಿ ಸಹಿತ ₹ 12,434 ಬಾಡಿಗೆಯಿದ್ದು, ಠೇವಣಿ ಹಣವನ್ನು ಮರಳಿಸಲಾಗುತ್ತದೆ. ಕೇಂದ್ರೀಕೃತ ಹವಾನಿಯಂತ್ರಣ ವ್ಯವಸ್ಥೆ, ಅತ್ಯಾಧುನಿಕ ಧ್ವನಿ–ಬೆಳಕಿನ ವ್ಯವಸ್ಥೆ ಸೇರಿ ವಿವಿಧ ಸೌಲಭ್ಯಗಳ ಅಳವಡಿಕೆ ಬಳಿಕ ಮತ್ತೆ ಬಾಡಿಗೆಯನ್ನು ಪರಿಷ್ಕರಿಸುವ ಸಾಧ್ಯತೆಯ ಬಗ್ಗೆಯೂ ಸಾಂಸ್ಕೃತಿಕ ವಲಯದಲ್ಲಿ ಕಳವಳ ವ್ಯಕ್ತವಾಗಿದೆ.

'ನವೀಕರಣದ ಬಳಿಕ ಇಲಾಖೆ ಬಾಡಿಗೆ ಹೆಚ್ಚಿಸಲು ಮುಂದಾಗುತ್ತದೆ. ಈಗಾಗಲೇ ಪುರಭವನ ಹಣ ಇರುವವರ ಪಾಲಾಗಿದೆ. ರವೀಂದ್ರ ಕಲಾಕ್ಷೇತ್ರವೂ ಆ ರೀತಿ ಆಗಬಾರದು. ಅತ್ಯಂತ ಕಡಿಮೆ ಖರ್ಚಿನಲ್ಲಿ ಅಗತ್ಯ ವಸ್ತುಗಳನ್ನು ನವೀಕರಣ ಮಾಡಲಿ' ಎಂದು ಗಾಯಕ ಆನಂದ ಮಾದಲಗೆರೆ ಆಗ್ರಹಿಸಿದ್ದಾರೆ.

ಕಡಿಮೆ ಖರ್ಚಿನಲ್ಲಿ ನವೀಕರಣ: ಸಿ.ಎಂ

ಬೆಂಗಳೂರು: 'ರವೀಂದ್ರ ಕಲಾಕ್ಷೇತ್ರ ಮತ್ತು ಸಂಸ ಬಯಲು ರಂಗಮಂದಿರ ನವೀಕರಣಕ್ಕೆ ಸರ್ಕಾರವು ₹24 ಕೋಟಿ ಖರ್ಚು ಮಾಡುತ್ತಿದೆ ಎಂಬುದು ಸುಳ್ಳು. ಕಲಾಕ್ಷೇತ್ರವನ್ನು ದುರಸ್ತಿ ಮಾಡುವುದು ಅಗತ್ಯ. ಕಡಿಮೆ ಖರ್ಚಿನಲ್ಲಿ ನವೀಕರಣ ಮಾಡಲು ಆಲೋಚನೆ ಮಾಡಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಬುಧವಾರ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಾಹಿತಿ ಕೆ.ಮರುಳಸಿದ್ದಪ್ಪ ಅವರು 'ಕಲಾವಿದರು ಹಾಗೂ ಸಾಹಿತಿಗಳ ಇಚ್ಛೆಗೆ ವಿರುದ್ಧವಾಗಿ ರವೀಂದ್ರ ಕಲಾಕ್ಷೇತ್ರವನ್ನು ₹24 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗುತ್ತಿದೆ. ರಾಜ್ಯದಲ್ಲಿ ಬರ ಪರಿಸ್ಥಿತಿಯಿದೆ. ಕಡಿಮೆ ವೆಚ್ಚದಲ್ಲಿ ಕಲಾಕ್ಷೇತ್ರವನ್ನು ಅಭಿವೃದ್ಧಿ ಪಡಿಸಲಿ' ಎಂಬ ಮಾತಿಗೆ, ಸಿದ್ದರಾಮಯ್ಯ ಅವರು ಈ ರೀತಿ ಪ್ರತಿಕ್ರಿಯಿಸಿದರು.

'ಸಮಗ್ರ ನವೀಕರಣ ಅಗತ್ಯವಿಲ್ಲ'

ರವೀಂದ್ರ ಕಲಾಕ್ಷೇತ್ರ ಮಾತ್ರ ಕಲಾವಿದರಿಗೆ ಕೈಗೆಟಕುವಂತಹ ರಂಗಮಂದಿರ. ಇಲಾಖೆ ನಡೆಸಿದ ಸಭೆಯಲ್ಲಿ ಬಾಡಿಗೆ ದರವನ್ನು ವಾರ್ಷಿಕ ಶೇ 5ರಷ್ಟು ಏರಿಕೆ ಮಾಡದಂತೆ ತಿಳಿಸಲಾಗಿತ್ತು. ಸಂಸ ಬಯಲು ರಂಗಮಂದಿರದಲ್ಲಿ ನಡೆಯುವ ಕಾರ್ಯಕ್ರಮಗಳ ಧ್ವನಿವರ್ಧಕದಿಂದ ಕಲಾಕ್ಷೇತ್ರದ ಒಳಗೆ ನಡೆಯುವ ಕಾರ್ಯಕ್ರಮಕ್ಕೆ ಆಗುವ ತೊಂದರೆಗಳ ಬಗ್ಗೆ ತಿಳಿಸಿ, ಈ ರಂಗಮಂದಿರಗಳ ನಡುವೆ ಇರುವ ರೋಲಿಂಗ್ ಶಟರ್ ಬದಲು ಒಂದು ಪೂರ್ಣ ಪ್ರಮಾಣದ ಶಾಶ್ವತ ಗೋಡೆಯನ್ನು ಕಟ್ಟುವ ಬಗ್ಗೆ ಮನವಿ ಮಾಡಲಾಗಿತ್ತು. ಕಲಾಕ್ಷೇತ್ರದ ಕುರ್ಚಿಗಳು ಉತ್ತಮವಾಗಿವೆ. ಸಮಗ್ರ ನವೀಕರಣ ಅಗತ್ಯವಿಲ್ಲ.

ಜೆ. ಲೋಕೇಶ್, ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ

'ಭೂಸುರಕ್ಷಾ ಶೀಘ್ರ ಆರಂಭ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕಂದಾಯ ಇಲಾಖೆಯ ದಾಖಲೆಗಳನ್ನು ಡಿಜಿಟಲೀಕರಣ ಮಾಡಲು ಮತ್ತು ಸುಳ್ಳು ದಾಖಲೆ ಸೃಷ್ಟಿಸುವುದನ್ನು ತಡೆಯಲು 'ಭೂಸುರಕ್ಷಾ' ಯೋಜನೆಯನ್ನು ವಾರದೊಳಗೆ ರಾಜ್ಯದಾದ್ಯಂತ ಆರಂಭಿಸಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

'ಕಂದಾಯ ಇಲಾಖೆಯಲ್ಲಿನ ಹಳೆಯ ದಾಖಲೆಗಳು ಶಿಥಿಲಗೊಂಡಿದ್ದು, ಅವುಗಳನ್ನು ಪಡೆಯಲು ಜನರಿಗೆ ತೊಂದರೆ ಆಗಿದೆ. ಅದಕ್ಕೆ ದಾಖಲೆಗಳನ್ನು ಶಾಶ್ವತವಾಗಿ ಸಂರಕ್ಷಿಸಿಡಲು 31 ಜಿಲ್ಲೆಗಳ ತಲಾ ಒಂದು ತಾಲ್ಲೂಕಿನಲ್ಲಿ ಪ್ರಥಮ ಹಂತದಲ್ಲಿ ಯೋಜನೆಗೆ ಚಾಲನೆ ಕೊಡಲಾಗುವುದು. ಎಲ್ಲ ದಾಖಲೆಗಳನ್ನು 100 ದಿನಗಳಲ್ಲಿ ಡಿಜಿಟಲೀಕರಣ ಮಾಡಲಾಗುವುದು' ಎಂದು ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಭೂಮಾಪನ ಇಲಾಖೆಯಲ್ಲಿನ ಕೆಲಸಗಳಿಗೆ ವೇಗ ನೀಡಲು ಫೆಬ್ರುವರಿಯಲ್ಲಿ 750 ಪರವಾನಗಿ ಭೂಮಾಪಕರನ್ನು (ಲೈಸೆನ್ಸ್ ಸರ್ವೆಯರ್ಸ್) ತಾಲ್ಲೂಕು ಕೇಂದ್ರಗಳಲ್ಲಿ ನಿಯೋಜಿಸಲಾಗುವುದು. 357 ಸರ್ಕಾರಿ ಸರ್ವೆಯರ್‌ಗಳು ಮತ್ತು ಸಹಾಯಕ ನಿರ್ದೇಶಕರ ನೇಮಕಾತಿಗೆ ಅನುಮೋದನೆ ಸಿಕ್ಕಿದ್ದು, ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕ ಪ್ರಕ್ರಿಯೆ ಕೈಗೊಳ್ಳಲಾಗುವುದು. ಖಾಲಿ ಇರುವ 592 ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಲಾಗುವುದು' ಎಂದರು.

'ನಾನು ಕಂದಾಯ ಸಚಿವನಾದ ಬಳಿಕ ಕಚೇರಿಗಳಲ್ಲಿ ತ್ವರಿತವಾಗಿ ಪ್ರಕರಣ ಇತ್ಯರ್ಥವಾಗುತ್ತಿವೆ. ತಹಶೀಲ್ದಾರ್ ನ್ಯಾಯಾಲಯದಲ್ಲಿ ಬಾಕಿ ಇದ್ದ 2,215 ಪ್ರಕರಣಗಳಲ್ಲಿ ಈಗ 107 ಮಾತ್ರ ಉಳಿದಿವೆ. ಉಪವಿಭಾಗಾಧಿಕಾರಿ ನ್ಯಾಯಾಲಯಗಳಲ್ಲಿನ 60 ಸಾವಿರಕ್ಕೂ ಅಧಿಕ ಪ್ರಕರಣಗಳಲ್ಲಿ 34,377 ಇತ್ಯರ್ಥವಾಗಿವೆ' ಎಂದರು.

'ಜಾತಿ ಗಣತಿಗೆ ಸಂಬಂಧಿಸಿ ಸಚಿವ ಸಂಪುಟದಲ್ಲಿ ಒಂದೆರಡು ಬಾರಿ ಅನೌಪಚಾರಿಕ ಮಾತುಕತೆ ಆಗಿದೆ. ಇದರ ನಿರ್ಧಾರವನ್ನು ಸರ್ಕಾರವೇ ತಿಳಿಸಲಿದೆ' ಎಂದರು.



₹30 ಕೋಟಿ ವೆಚ್ಚದಲ್ಲಿ ರಾಜ್ಯದಲ್ಲಿ ಸರ್ವೆಯರ್‌ಗಳಿಗೆ ಉಪಕರಣ ಒದಗಿಸಲಾಗುವುದು. ಇದರಿಂದ ನಿಗದಿತ ಸಮಯದಲ್ಲಿ ಸಿಬ್ಬಂದಿ ಹೆಚ್ಚಿನ ಸಮೀಕ್ಷೆ ಕೈಗೊಳ್ಳಬಹುದು.

ಕೃಷ್ಣ ಬೈರೇಗೌಡ, ಕಂದಾಯ ಸಚಿವ

ಮೈಸೂರು ವಿ.ವಿ ಸಿಂಡಿಕೇಟ್‌ಗೆ ಪಿಎಚ್‌.ಡಿ ವಿದ್ಯಾರ್ಥಿ ನೇಮಕ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯ ಸರ್ಕಾರವು ಮೈಸೂರು ವಿಶ್ವವಿದ್ಯಾಲಯದ ಪಿಎಚ್‌ಡಿ ವಿದ್ಯಾರ್ಥಿಯನ್ನು ಅದೇ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡುವ ಮೂಲಕ 'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ'ಯನ್ನು ಉಲ್ಲಂಘಿಸಿದೆ ಎಂಬ ಆರೋಪ ಕೇಳಿ ಬಂದಿದೆ.

ರಾಜ್ಯಶಾಸ್ತ್ರ ವಿಭಾಗದ ಪಿಎಚ್‌ಡಿ ಸಂಶೋಧನಾ ವಿದ್ಯಾರ್ಥಿ ಎಚ್.ಎಸ್. ನಟರಾಜು ಅವರನ್ನು ಇತ್ತೀಚೆಗೆ ಪರಿಶಿಷ್ಟ ಜಾತಿ ಮೀಸಲಿನಲ್ಲಿ ಸಿಂಡಿಕೇಟ್‌ಗೆ ನಾಮನಿರ್ದೇಶನ ಮಾಡಿ ಸರ್ಕಾರವು ಆದೇಶ ಹೊರಡಿಸಿದೆ. ಈ ಕುರಿತು ಶಿಕ್ಷಣ ತಜ್ಞರು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರ ಗಮನವನ್ನೂ ಸೆಳೆದಿದ್ದಾರೆ.

'ನೇಮಕವು ವಿಶ್ವವಿದ್ಯಾಲಯದ ಆಡಳಿತ ವ್ಯವಸ್ಥೆಯ ಸೋಲು. ವಿಶ್ವವಿದ್ಯಾಲಯದೊಂದಿಗೆ ಯಾವುದೇ ಸಂಬಂಧವನ್ನೂ ಹೊಂದಿರದವರು ಸಿಂಡಿಕೇಟ್ ಸದಸ್ಯರಾಗಬೇಕು ಎಂದು ಕೆಎಸ್‌ಯು ಕಾಯ್ದೆ ಸ್ಪಷ್ಟವಾಗಿ ಹೇಳಿದೆ. ಅಭ್ಯರ್ಥಿಯ ಹಿನ್ನೆಲೆ ಬಗ್ಗೆ ವಿಶ್ವವಿದ್ಯಾಲಯದ ಆಡಳಿತಕ್ಕೆ ತಿಳಿದಿದೆ. ಕಾಯ್ದೆ ಉಲ್ಲಂಘಿಸಿ ನಡೆದಿರುವ ನಾಮನಿರ್ದೇಶನ ತಪ್ಪೆಂದು ಕುಲಸಚಿವರು ಹಾಗೂ ಕುಲಪತಿಗಳು ಸರ್ಕಾರಕ್ಕೆ ಪತ್ರ ಬರೆಯಬೇಕು' ಎನ್ನುತ್ತಾರೆ ಸಿಂಡಿಕೇಟ್‌ನ ಮಾಜಿ ಸದಸ್ಯ ಇ.ಸಿ.ನಿಂಗರಾಜೇಗೌಡ.

'ನಾಮನಿರ್ದೇಶಿತ ಸದಸ್ಯರು ಫೆಲೋಶಿಪ್ ನಿರಾಕರಿಸಿದ್ದಾರೆ. ಆದರೆ, ಪಿಎಚ್‌ಡಿ ಪದವಿ ಅವರಿಗೆ ಇನ್ನೂ ದೊರೆತಿಲ್ಲ. ಈಗಲೂ ಅವರು ಸಂಶೋಧನಾ ವಿದ್ಯಾರ್ಥಿಯೇ ಆಗಿದ್ದಾರೆ. ಶೈಕ್ಷಣಿಕ ಚಟುವಟಿಕೆಗಳು, ಪಿಎಚ್‌ಡಿ ಪದವಿ ಅಂಗೀಕಾರ, ಘಟಿಕೋತ್ಸವ ಸೇರಿದಂತೆ ಎಲ್ಲ ನಿರ್ಣಯಗಳನ್ನು ಸಿಂಡಿಕೇಟ್ ತೆಗೆದುಕೊಳ್ಳುತ್ತದೆ. ಇದೊಂದು ಹಿತಾಸಕ್ತಿ ಸಂಘರ್ಷ' ಎಂದು ಮತ್ತೊಬ್ಬ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ನಟರಾಜು, 'ಸಂಶೋಧನೆ ಕೊನೆ ಹಂತದಲ್ಲಿದೆ. ಕೆಲವೇ ತಿಂಗಳಲ್ಲಿ ಪಿಎಚ್‌ಡಿಯೂ ಮುಗಿಯಲಿದೆ. ಪಿಎಚ್‌ಡಿ ಫೆಲೋಶಿಪ್ ಬೇಡವೆಂಬ ಮನವಿಯನ್ನು ರಾಜ್ಯಶಾಸ್ತ್ರ ಅಧ್ಯಯನ ಕೇಂದ್ರದ ಮೂಲಕ ಪರಿಶಿಷ್ಟ ಜಾತಿ ಮತ್ತು ಪಂಗಡ ವಿಶೇಷ ಘಟಕದ ವಿಶೇಷಾಧಿಕಾರಿಗೆ ಸಲ್ಲಿಸಿದ್ದು, ಅದನ್ನು ಅವರು ಪುರಸ್ಕರಿಸಿ ಜ.1ರಿಂದಲೇ ಶಿಷ್ಯ ವೇತನದಿಂದ ಬಿಡುಗಡೆ ಮಾಡಿದ್ದಾರೆ' ಎಂದು ತಿಳಿಸಿದರು.

'ನಾನು ಯಾವುದೇ ಸೌಲಭ್ಯವನ್ನು ವಿಶ್ವವಿದ್ಯಾಲಯದಿಂದ ತೆಗೆದುಕೊಳ್ಳುತ್ತಿಲ್ಲ' ಎಂದರು.

ಸುದ್ದಿ 2 ನಿಮಿಷ

ಕೆಎಫ್‌ಡಿ: ಕಣ್ಗಾವಲಿಗೆ ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಮಂಗನ ಕಾಯಿಲೆ (ಕ್ಯಾಸನೂರು ಫಾರೆಸ್ಟ್ ಡಿಸೀಸ್- ಕೆಎಫ್‌ಡಿ) ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸುತ್ತೋಲೆ ಹೊರಡಿಸಿರುವ ಆರೋಗ್ಯ ಇಲಾಖೆ, ಶಂಕಿತ ಪ್ರಕರಣಗಳನ್ನು ಗುರುತಿಸುವ ಜತೆಗೆ ಅಗತ್ಯ ಚಿಕಿತ್ಸೆಗೆ ಕ್ರಮವಹಿಸಬೇಕು ಎಂದು ಕೆಎಫ್‌ಡಿ ಬಾಧಿತ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚಿಸಿದೆ.

ಶಿವಮೊಗ್ಗ, ಉತ್ತರ ಕನ್ನಡ ಸೇರಿ ಕೆಲವೆಡೆ ಮಂಗನ ಕಾಯಿಲೆ ಪ್ರಕರಣಗಳು ವರದಿಯಾಗಿರುವುದರಿಂದ ರೋಗದ ನಿರ್ವಹಣೆಗೆ ಅಗತ್ಯ ಕ್ರಮವಹಿಸುವಂತೆ ಇಲಾಖೆ ತಿಳಿಸಿದೆ.

'ಈ ಕಾಯಿಲೆಗೆ ನಿರ್ದಿಷ್ಟ ಚಿಕಿತ್ಸೆಯಿಲ್ಲ. ಲಕ್ಷಣವನ್ನು ಆಧರಿಸಿ ಚಿಕಿತ್ಸೆ ಒದಗಿಸಬೇಕಾಗುತ್ತದೆ. ಸೋಂಕಿತ ಮಂಗನ ರಕ್ತ ಹೀರುವ ಉಣ್ಣೆಗಳು ವೈರಾಣುವನ್ನು ಮನುಷ್ಯನಿಗೆ ದಾಟಿಸುತ್ತವೆ. ಈ ವೈರಾಣು ಕಾಣಿಸಿಕೊಂಡವರಿಗೆ ಹಠಾತ್ ಜ್ವರ ಹಾಗೂ ತೀವ್ರ ಮೈಕೈ ನೋವು ಕಾಣಿಸಿಕೊಳ್ಳುತ್ತದೆ. ಕೆಎಫ್‌ಡಿ ಬಾಧಿತ ಜಿಲ್ಲೆಗಳಲ್ಲಿ ಎಲ್ಲ ಜ್ವರ ಪ್ರಕರಣಗಳೂ ಶಂಕಿತ ಕೆಎಫ್‌ಡಿ ಪ್ರಕರಣಗಳೇ ಆಗಿರುತ್ತವೆ. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿ, ಚಿಕಿತ್ಸೆ ನೀಡಿದಲ್ಲಿ ರೋಗದ ನಿರ್ವಹಣೆ ಸುಲಭಸಾಧ್ಯ' ಎಂದು ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದ್ದಾರೆ.

'ಮಂಗಗಳ ಅಸಹಜ ಸಾವು ವರದಿಯಾದಲ್ಲಿ ಸೋಂಕು ಶಂಕಿತರ ಮೇಲೆ ಕಣ್ಗಾವಲು ಪ್ರಕ್ರಿಯೆ ಪ್ರಾರಂಭಿಸಿ, ರಕ್ತದ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಬೇಕು. ಮಂಗಗಳಿಗೆ ಅಥವಾ ಮನುಷ್ಯರಿಗೆ ಸೋಂಕು ದೃಢಪಟ್ಟಲ್ಲಿ 5 ಕಿ.ಮೀ. ಸುತ್ತಮುತ್ತಲಿನ ಪ್ರದೇಶದ ಮೇಲೆ ಕಣ್ಗಾವಲು ವಹಿಸಬೇಕು. ಸೋಂಕು ಶಂಕಿತರ ಮಾದರಿ ಸಂಗ್ರಹ, ಪರೀಕ್ಷೆ ಹಾಗೂ ಚಿಕಿತ್ಸೆಗೆ ಆದ್ಯತೆ ನೀಡಬೇಕು' ಎಂದು ಹೇಳಿದ್ದಾರೆ.

'ಸೋಂಕಿತರು ಕಡ್ಡಾಯವಾಗಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಬೇಕು. ಚಿಕಿತ್ಸೆಗೆ ಅಗತ್ಯವಿರುವ ಔಷಧಗಳ ದಾಸ್ತಾನನ್ನು ಖಚಿತಪಡಿಸಿಕೊಳ್ಳಬೇಕು' ಎಂದು ತಿಳಿಸಿದ್ದಾರೆ.

ಮುಸ್ಲಿಮರಿಂದ ಪ್ರತಿಭಟನೆ



ಸಿರವಾರ (ರಾಯಚೂರು ಜಿಲ್ಲೆ): ಇಲ್ಲಿಯ ಮಟನ್ ಮಾರ್ಕೆಟ್ ಸಮೀಪದ ಟಿಪ್ಪು ಸುಲ್ತಾನ್ ಭಾವಚಿತ್ರವಿರುವ ನಾಮಫಲಕಕ್ಕೆ ಅಪಮಾನ ಮಾಡಿದ್ದರಿಂದ ಪಟ್ಟಣದಲ್ಲಿ ಬುಧವಾರ ಬಿಗುವಿನ ವಾತಾವರಣ ನಿರ್ಮಾಣಗೊಂಡಿತ್ತು.

ಟಿಪ್ಪು ಸುಲ್ತಾನ್ ವೃತ್ತದಲ್ಲಿ ಇರುವ ನಾಮಫಲಕಕ್ಕೆ ಚಪ್ಪಲಿ ಹಾರ ಹಾಕಿದ್ದನ್ನು ಖಂಡಿಸಿ ಮುಸ್ಲಿಂ ಸಮುದಾಯದವರು ಬೆಳಿಗ್ಗೆ ದಿಢೀರ್ ರಸ್ತೆ ತಡೆ ನಡೆಸಿದರು. ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಘೋಷಣೆ ಕೂಗಿದರು.

ಜಿಲ್ಲೆಯಲ್ಲಿ ಕೋಮು ಸೌಹಾರ್ದ ಕದಡುತ್ತಿರುವ ಕಿಡಿಗೇಡಿಗಳನ್ನು ಪತ್ತೆ ಮಾಡಿ ತಕ್ಷಣ ಬಂಧಿಸಬೇಕು ಎಂದು ಒತ್ತಾಯಿಸಿದರು. ಸ್ಥಳಕ್ಕೆ ಬಂದು ಪೊಲೀಸರು, 'ತನಿಖೆ ನಡೆಸಿ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಪ್ರತಿಭಟನೆ ಹಿಂದಕ್ಕೆ ಪಡೆಯಿರಿ' ಎಂದು ಮನವಿ ಮಾಡಿದರು. ಆದರೆ, ಯುವಕರು ಪ್ರತಿಭಟನೆ ಮುಂದುವರಿಸಿದ ಕಾರಣ ಪೊಲೀಸರು ಪರ್ಯಾಯ ಮಾರ್ಗಗಳ ಮೂಲಕ ವಾಹನಗಳ ಸಂಚಾರಕ್ಕೆ ವ್ಯವಸ್ಥೆ ಮಾಡಿದರು.

ಮಧ್ಯಾಹ್ನ ತಹಶೀಲ್ದಾರ್ ರವಿ ಅಂಗಡಿ ಸ್ಥಳಕ್ಕೆ ಬಂದು ಅಹವಾಲು ಆಲಿಸಿದರು. ನಂತರ ವೃತ್ತದ ಒಂದು ಬದಿಗೆ ಬಂದು ಪ್ರತಿಭಟನೆ ಮುಂದುವರಿಸಿದರು. ಪೊಲೀಸ್ ಅಧಿಕಾರಿಗಳ ಮನವಿ ಮೇರೆಗೆ ಮಧ್ಯಾಹ್ನದ ಬಳಿಕ ಪ್ರತಿಭಟನೆ ಅಂತ್ಯಗೊಳಿಸಿದರು.

ಕುದುರೆ ಫಾರ್ಮ್ ರಕ್ಷಣೆಗೆ ಹೋರಾಟ

ಪ್ರಜಾವಾಣಿ ವಾರ್ತೆ

ಕುಣಿಗಲ್: ಕುಣಿಗಲ್ ಸ್ಟಡ್ ಫಾರ್ಮ್ ರಕ್ಷಣೆಗಾಗಿ ಹೋರಾಟ ಮಾಡುತ್ತಿರುವವರನ್ನು 'ನಿರುದ್ಯೋಗಿ ರಾಜಕಾರಣಿಗಳು' ಎಂದಿರುವ ಶಾಸಕ ಡಾ.ರಂಗನಾಥ್ ಅವರ ಹೇಳಿಕೆ ಖಂಡಿಸಿ ಸ್ಟಡ್ ಫಾರ್ಮ್ ರಕ್ಷಣಾ ಸಮಿತಿ ಪದಾಧಿಕಾರಿಗಳು ಸಭೆ ಸೇರಿ ಶಾಸಕರ ಕ್ಷಮೆಯಾಚಿಸಲು ಒತ್ತಾಯಿಸಿದರು.

ಕನ್ನಡ ಭವನದಲ್ಲಿ ಬುಧವಾರ ನಡೆದ ಸಭೆಯಲ್ಲಿ ಪದಾಧಿಕಾರಿಗಳು ಹೋರಾಟ ತೀವ್ರಗೊಳಿಸುವ ನಿರ್ಧಾರ ಕೈಗೊಂಡರು.

ತಾಲ್ಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಬಿ.ಬಿ. ರಾಮಸ್ವಾಮಿಗೌಡ ಮಾತನಾಡಿ, 'ಅಧಿಕಾರದಲ್ಲಿದ್ದರೆ ಮಾತ್ರ ಉದ್ಯೋಗಿ ರಾಜಕಾರಣಿಗಳಲ್ಲ. ಶಾಸಕ ಡಾ.ರಂಗನಾಥ್ ವೈದ್ಯರಾಗಿ ಉದ್ಯೋಗದಲ್ಲಿದ್ದರೂ, ತಾಲ್ಲೂಕಿಗೆ ರಾಜಕಾರಣಿಯಾಗಿ ಬಂದು ಜನಸೇವೆ ಮಾಡುವ ಬದಲು ವ್ಯವಹಾರ ಮಾಡುತ್ತಿದ್ದಾರೆ. ಆರು ವರ್ಷ ಅಧಿಕಾರದಲ್ಲಿದ್ದರೂ ಅಭಿವೃದ್ಧಿ ಮಾಡುವಲ್ಲಿ ವಿಫಲರಾಗಿದ್ದಾರೆ' ಎಂದು ಆರೋಪಿಸಿದರು.

'ಕಳೆದ ಸರ್ಕಾರದಲ್ಲಿ ಮಂಜೂರಾದ ಕಾಮಗಾರಿ ಸ್ಥಗಿತಗೊಂಡಿವೆ. ಕುದುರೆ ಫಾರ್ಮ್ ಉಳಿವಿಗಾಗಿ ಹೋರಾಟ ನಿರಂತರವಾಗಿರುತ್ತದೆ. ಯಾವುದೇ ಕಾರಣಕ್ಕೂ ಇಂಟಿಗ್ರೇಟೆಡ್ ಟೌನ್‌ಶಿಪ್‌ಗೆ ಅವಕಾಶ ನೀಡುವುದಿಲ್ಲ. ಏಕಾಂಗಿಯಾದರೂ ಹೋರಾಟ ಮುಂದುವರೆಸುತ್ತೇನೆ' ಎಂದರು.

ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಬಿ.ಎನ್.ಜಗದೀಶ್ ಮಾತನಾಡಿ, ತಾಲ್ಲೂಕಿನಲ್ಲಿ ಹೋರಾಟ ತೀವ್ರವಾಗುತ್ತಿದ್ದಂತೆ ಶಾಸಕ ಡಾ.ರಂಗನಾಥ್ ಗೊಂದಲ ಸೃಷ್ಟಿಸುತ್ತಿದ್ದಾರೆ. ನಿಲುವು ಸ್ಪಷ್ಟಪಡಿಸಲು ಶಾಸಕರು ವಿಫಲರಾಗುತ್ತಿದ್ದಾರೆ. ಶಾಸಕ, ಸಂಸದರ ಸೂಚನೆ ಮೇರೆಗೆ ರಾಜ್ಯಮಟ್ಟದಲ್ಲಿ ಕಡತ, ದಾಖಲೆ ಸಿದ್ಧವಾಗುತ್ತಿವೆ ಎಂದು ಟೀಕಿಸಿದರು.

ತಾಲ್ಲೂಕಿಗೆ 2018ರಲ್ಲಿ ರಾಜಕಾರಣಿಯಾಗಿ ಉದ್ಯೋಗ ಮಾಡಲು ಬಂದ ಶಾಸಕರು, ಬಂಡವಾಳ ಹೂಡಿ ವ್ಯವಹಾರ ಮಾಡುತ್ತಾ ವ್ಯವಹಾರಸ್ಥ, ರಾಜಕಾರಣಿಯಾಗಿದ್ದಾರೆ ಎಂದು ಲೇವಡಿ ಮಾಡಿದರು.

ಬಿಜೆಪಿ ಮುಖಂಡ ರಾಜೇಶ್ ಗೌಡ, 'ಶಾಸಕರು ವೈದ್ಯಕೀಯ ವೃತ್ತಿಯಲ್ಲಿದ್ದು, ಸೇವೆಯ ನೆಪದಲ್ಲಿ ರಾಜಕಾರಣಕ್ಕೆ ಬಂದು ಕಲ್ಲುಗಣಿಗಾರಿಕೆ ನಡೆಸುತ್ತಿದ್ದಾರೆ. ಈಗ ಸರ್ಕಾರಿ ಭೂಮಿಯ ಮೇಲೂ ಕಣ್ಣು ಹಾಕಿದ್ದಾರೆ. ಕುದುರೆ ಫಾರ್ಮ್ ಬಗ್ಗೆ ಅವರು ನಿಲುವು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ಸಮಿತಿ ಪದಾಧಿಕಾರಿಗಳಾದ ಜಿ.ಕೆ.ನಾಗಣ್ಣ, ಶಿವಶಂಕರ್, ವರದರಾಜು, ಅಬ್ದುಲ್ ಮುನಾಫ್, ಬಿಜೆಪಿ ತಾಲ್ಲೂಕು ಅಧ್ಯಕ್ಷ ಬಲರಾಮ, ಅಮ್ ಆದ್ಮಿಯ ಜಯರಾಮಯ್ಯ, ರೈತ ಸಂಘದ ಕರಿಗೌಡ, ವೆಂಕಟೇಶ್, ಕರವೇ ಅಧ್ಯಕ್ಷ ಮಂಜುನಾಥ್, ಬಜರಂಗದಳದ ಗಿರೀಶ್ ಸಭೆಯಲ್ಲಿ ಭಾಗವಹಿಸಿದ್ದರು.

ಸೊರೇನ್ ಸೆರೆ; ಚಂಪೈ ಹೊಸ ಸಿ.ಎಂ

ಒಂದನೇ ಪುಟದಿಂದ...

ವಿಧಾನಸಭೆಯ ಅವಧಿಯ ಕೊನೆಯ ವರ್ಷದಲ್ಲಿ ಉಪಚುನಾವಣೆ ನಡೆಸುವಂತಿಲ್ಲ ಮತ್ತು ಕಲ್ಪನಾ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಹೆಸರಿಸಿದರೂ ಅವರನ್ನು ಶಾಸಕರನ್ನಾಗಿ ಆಯ್ಕೆ ಮಾಡಲು ಸಾಧ್ಯವಿರಲಿಲ್ಲ. ನವೆಂಬರ್‌ನಲ್ಲಿ ವಿಧಾನಸಭೆಗೆ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಅವರ ಹೆಸರನ್ನು ಅಂತಿಮವಾಗಿ ಕೈಬಿಡಲಾಯಿತು ಎಂದು ಮೂಲಗಳನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ.

ಏಳು ತಾಸು ವಿಚಾರಣೆ: ಬಿಗಿ ಭದ್ರತೆ ನಡುವೆ ಬುಧವಾರ ಇ.ಡಿ ಅಧಿಕಾರಿಗಳು ಹೇಮಂತ್ ಅವರನ್ನು ಅವರ ಅಧಿಕೃತ ನಿವಾಸದಲ್ಲಿ ಏಳು ತಾಸಿಗೂ ಹೆಚ್ಚು ಸಮಯ ವಿಚಾರಣೆ ನಡೆಸಿದರು. ಹೆಚ್ಚಿನ ವಿಚಾರಣೆಗೆ ರಾಂಚಿಯಲ್ಲಿನ ಇ.ಡಿ ಕಚೇರಿಗೆ ಕರೆದೊಯ್ಯಲಾಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎತ್ತಂಗಡಿ: ಹಿರಿಯ ಐಎಎಸ್ ಅಧಿಕಾರಿ ಅವಿನಾಶ್ ಕುಮಾರ್ ಅವರನ್ನು ಜಾರ್ಖಂಡ್ ಸರ್ಕಾರದ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯಿಂದ ಬುಧವಾರ ತೆಗೆದುಹಾಕಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಮುಖ್ಯ ಕಾರ್ಯದರ್ಶಿ ಎಲ್.ಖಿಯಾಂಗ್ಟೆ ಅವರಿಗೆ ಗೃಹ, ಬಂದೀಖಾನೆಯ ಹೆಚ್ಚುವರಿ ಜವಾಬ್ದಾರಿ ವಹಿಸಲಾಗಿದೆ. ಹೇಮಂತ್ ಅವರ ವಿಚಾರಣೆ ನಡೆಯುತ್ತಿರುವಂತೆಯೇ ಗೃಹ ಕಾರ್ಯದರ್ಶಿಯನ್ನು ಬದಲಾಯಿಸಲಾಯಿತು. ಕುಮಾರ್ ಅವರಿಗೆ ಇನ್ನೂ ಹುದ್ದೆ ತೋರಿಸಿಲ್ಲ.

ಹಂಪಿ ಉತ್ಸವ ನಾಳೆಯಿಂದ



ಹೊಸಪೇಟೆ (ವಿಜಯನಗರ): ವಿಶ್ವ ಪಾರಂಪರಿಕ ತಾಣ ಹಂಪಿಯಲ್ಲಿ ಶುಕ್ರವಾರದಿಂದ (ಫೆಬ್ರುವರಿ 2) ಮೂರು ದಿನ ಹಂಪಿ ಉತ್ಸವ ನಡೆಯಲಿದೆ.

ಕಲಾವಿದ ಅರುಣ್ ಸಾಗರ್ ಪರಿಕಲ್ಪನೆಯಲ್ಲಿ ಬೃಹತ್ ವೇದಿಕೆ ನಿರ್ಮಿಸಲಾಗಿದೆ. ಕಲ್ಲಿನ ರಥ, ವಿರೂಪಾಕ್ಷ ದೇಗುಲ ಸೇರಿ ಹಲವು ದೇವಸ್ಥಾನಗಳ ಗೋಪುರಗಳು, ಆನೆಗಳು, ಸೈನಿಕರ ಪ್ರತಿಕೃತಿಗಳನ್ನು ವೇದಿಕೆ ಒಳಗೊಂಡಿದೆ. ಶುಕ್ರವಾರ ರಾತ್ರಿ 8ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಂಪಿ ಉತ್ಸವಕ್ಕೆ ಚಾಲನೆ ನೀಡುವರು.

'ಹೆಲಿಕಾಪ್ಟರ್‌ನಲ್ಲಿ ಹಂಪಿಯ ಸ್ಮಾರಕಗಳನ್ನು ನೋಡುವ ಅವಕಾಶ ಗುರುವಾರದಿಂದ ಲಭಿಸಲಿದೆ. ಪ್ರಧಾನ ವೇದಿಕೆಯಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕಲಾವಿದರು, ನಟ, ನಟಿಯರು ಕಾರ್ಯಕ್ರಮ ಪ್ರದರ್ಶಿಸುವರು. 5 ಲಕ್ಷಕ್ಕೂ ಹೆಚ್ಚು ಮಂದಿ ಉತ್ಸವ ವೀಕ್ಷಿಸುವ ನಿರೀಕ್ಷೆ ಇದೆ' ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ಮಾನವ ಹಕ್ಕುಗಳು–ಮಾಧ್ಯಮ ವಿಚಾರ ಸಂಕಿರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಮೂಹ ಸಂವಹನ ವಿಭಾಗದ ವತಿಯಿಂದ 'ಮಾನವ ಹಕ್ಕುಗಳು ಮತ್ತು ಮಾಧ್ಯಮ' ಬಗ್ಗೆ ಬುಧವಾರ ವಿಚಾರ ಸಂಕಿರಣ ನಡೆಯಿತು.

ಕಾಮನ್ ವೆಲ್ತ್ ಮಾನವ ಹಕ್ಕುಗಳ ಸಂಘದ ನಿರ್ದೇಶಕ ವೆಂಕಟೇಶ ನಾಯಕ್ ಮಾತನಾಡಿ, 'ಮಾನವ ಹಕ್ಕುಗಳ ಸಂರಕ್ಷಣೆಯಲ್ಲಿ ಮಾಧ್ಯಮದ ಪಾತ್ರ ಬಹಳ ಮಹತ್ವದ್ದು. ಮಾಹಿತಿ ಹಕ್ಕು ಕಾಯ್ದೆ ಮತ್ತು ಪತ್ರಿಕಾ ಸ್ವಾತಂತ್ರ್ಯದ ಪರಿಣಾಮಕಾರಿ ಬಳಕೆ ಮಾನವ ಹಕ್ಕುಗಳ ಸಂರಕ್ಷಣೆಗೆ ಪೂರಕವಾಗಬಲ್ಲದು. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘೋಷಣೆಗೆ ಅನುಗುಣವಾಗಿ ಭಾರತ ಜಾರಿಗೊಳಿಸಿರುವ ಕಾಯ್ದೆಯ ಬಗ್ಗೆ ಜನಜಾಗೃತಿ ಮೂಡಿಸಬೇಕಿದೆ' ಎಂದು ಹೇಳಿದರು.

ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಜೊತೆಗೆ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಅನುಷ್ಠಾನದ ಬಗ್ಗೆ ಸರ್ಕಾರದ ವಿಶೇಷ ಗಮನ ಸೆಳೆಯಬೇಕಿದೆ ಎಂದು ಹೇಳಿದರು.

ಕುಲಪತಿ ಲಿಂಗರಾಜ ಗಾಂಧಿ ಮಾತನಾಡಿ, 'ಜಗತ್ತಿನಾದ್ಯಂತ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆ ವಿಕಾಸಗೊಂಡಿರುವುದರಿಂದ ಮಾನವ ಹಕ್ಕುಗಳ ಸಂರಕ್ಷಣೆ ಹೆಚ್ಚಿನ ಪ್ರಾಮುಖ್ಯ ಪಡೆದುಕೊಂಡಿದೆ' ಎಂದು ವಿವರಿಸಿದರು.

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎನ್. ನರಸಿಂಹಮೂರ್ತಿ ಉಪಸ್ಥಿತರಿದ್ದರು. ಇತಿಹಾಸ, ರಾಜ್ಯಶಾಸ್ತ್ರ, ಸಮಾಜ ಕಾರ್ಯ ವಿಭಾಗಗಳ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಸಂವಾದದಲ್ಲಿ ಪಾಲ್ಗೊಂಡರು.


ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎನ್. ನರಸಿಂಹಮೂರ್ತಿ, ಕುಲಪತಿ ಲಿಂಗರಾಜ ಗಾಂಧಿ, ಕಾಮನ್ ವೆಲ್ತ್ ಮಾನವ ಹಕ್ಕುಗಳ ಸಂಘದ ನಿರ್ದೇಶಕ ವೆಂಕಟೇಶ ನಾಯಕ್ ಉಪಸ್ಥಿತರಿದ್ದರು.

ಬಜೆಟ್ ಮಂಡನೆ ವೇಳೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ನಾಯಕ ಹೇಮಂತ್ ಸೊರೇನ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿರುವುದನ್ನು ವಿರೋಧಿಸಿ ಸಂಸತ್‌ನಲ್ಲಿ ಬಜೆಟ್ ಮಂಡನೆ ವೇಳೆ ತೀವ್ರ ಪ್ರತಿಭಟನೆ ನಡೆಸಲು ವಿರೋಧ ಪಕ್ಷಗಳು ನಿರ್ಧರಿಸಿವೆ ಎಂದು ಮೂಲಗಳು ಬುಧವಾರ ಹೇಳಿವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದ ಕೆಲ ವಿರೋಧ ಪಕ್ಷಗಳ ನಾಯಕರು, ಸೊರೇನ್ ಬಂಧನದ ಹಿನ್ನೆಲೆಯಲ್ಲಿ ನಡೆದ ಬೆಳವಣಿಗೆಗಳ ಕುರಿತು ಚರ್ಚಿಸಿದರು ಎಂದು ತಿಳಿಸಿವೆ.

ಎನ್‌ಸಿಪಿ ವರಿಷ್ಠ ಶರದ್ ಪವಾರ್, ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ಡಿಎಂಕೆ ನಾಯಕ ಟಿ.ಆರ್.ಬಾಲು ಸಭೆಯಲ್ಲಿ ಇದ್ದರು.

ಖರ್ಗೆಯಿಂದ ಮತ್ತೊಂದು ಸಭೆ: ಬಜೆಟ್ ಮಂಡನೆಗೂ ಮುನ್ನ, ವಿರೋಧ ಪಕ್ಷಗಳ ಸದನ ನಾಯಕರೊಂದಿಗೆ ಮಲ್ಲಿಕಾರ್ಜುನ ಖರ್ಗೆ ಅವರು ಹೋರಾಟದ ಕಾರ್ಯತಂತ್ರ ಕುರಿತು ಚರ್ಚಿಸಲು ಸಭೆ ನಡೆಸುವರು ಎಂದೂ ಮೂಲಗಳು ಹೇಳಿವೆ.

ರಾಹುಲ್ ಗಾಂಧಿ ಪೋಸ್ಟ್: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕೂಡ ಹೇಮಂತ್ ಸೊರೇನ್ ಅವರ ಬಂಧನವನ್ನು ಟೀಕಿಸಿ, 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಇ.ಡಿ, ಸಿಬಿಐ, ಐಟಿ ಇಲಾಖೆಗಳು ಸರ್ಕಾರದ ಸಂಸ್ಥೆಗಳಾಗಿ ಉಳಿದಿಲ್ಲ. ಅವು ಈಗ, ಬಿಜೆಪಿಯ 'ವಿಪಕ್ಷ ನಿರ್ಮೂಲನೆ ವಿಭಾಗ'ವಾಗಿವೆ' ಎಂದಿದ್ದಾರೆ.


'ಭ್ರಷ್ಟಾಚಾರದಲ್ಲಿ ಮುಳುಗಿರುವ ಬಿಜೆಪಿಗೆ ಅಧಿಕಾರದಲ್ಲಿರುವ ಗೀಳು. ಇದಕ್ಕಾಗಿ ಅದು ಪ್ರಜಾತಂತ್ರ ವ್ಯವಸ್ಥೆಯನ್ನು ಹಾಳು ಮಾಡುತ್ತಿದೆ' ಎಂದು ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಭ್ರಷ್ಟಾಚಾರದ ಮತ್ತೊಂದು ಗರಿ: ಬಿಜೆಪಿ

ಜೆಎಂಎಂ ನಾಯಕ ಹೇಮಂತ್ ಸೊರೇನ್ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಿರುವುದಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿ, 'ಸೊರೇನ್ ಬಂಧನದಿಂದ ವಿಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದ ಕಿರೀಟಕ್ಕೆ ಭ್ರಷ್ಟಾಚಾರ ಎಂಬ ಮತ್ತೊಂದು ಗರಿ ಸೇರಿದಂತಾಗಿದೆ' ಎಂದು ಹೇಳಿದೆ.

'ಈ ಹಿಂದೆ, ಲಾಲು ಪ್ರಸಾದ್, ಹೇಮಂತ್ ಸೊರೇನ್, ಸೋನಿಯಾ ಗಾಂಧಿ ಅವರನ್ನು ಬಂಧಿಸುವಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಒತ್ತಾಯಿಸುತ್ತಿದ್ದರು. ಅಬಕಾರಿ ನೀತಿ ಹಗರಣದ ಸೂತ್ರಧಾರರಾಗಿರುವ ಅವರೇ (ಕೇಜ್ರಿವಾಲ್) ಈಗ ಇವರೆಲ್ಲರ ಬೆಂಬಲಕ್ಕೆ ನಿಂತಿದ್ದಾರೆ' ಎಂದು ಬಿಜೆಪಿಯ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬಿಜೆಪಿ ರಾಜ್ಯಸಭಾ ಸದಸ್ಯ ಹಾಗೂ ಪಕ್ಷದ ಜಾರ್ಖಂಡ್ ಘಟಕದ ಮಾಜಿ ಅಧ್ಯಕ್ಷ ದೀಪಕ್ ಪ್ರಕಾಶ್, 'ಜಾರ್ಖಂಡ್ ಜನತೆಗೆ ಇಂದು ನ್ಯಾಯ ಲಭಿಸಿದಂತಾಗಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.



ಜೀವನವೆಂಬುದು ದೊಡ್ಡ ಹೋರಾಟ. ನಾನು ಪ್ರತಿ ಕ್ಷಣವೂ ಹೋರಾಟ ನಡೆಸಿದ್ದೇನೆ, ಮುಂದೆಯೂ ಹೋರಾಡುತ್ತೇನೆ. ರಾಜಿಗಾಗಿ ನಾನು ಗೋಗರೆಯುವುದೂ ಇಲ್ಲ. ಗೆಲುವೋ, ಸೋಲೋ ಯಾವುದಕ್ಕೂ ನಾನು ಹೆದರುವುದಿಲ್ಲ. ನನ್ನ ಜನರು ಅನುಭವಿಸುತ್ತಿರುವ ನೋವು ವ್ಯರ್ಥವಾಗಲು ಬಿಡುವುದಿಲ್ಲ. ನಾನು ಸೋಲು ಒಪ್ಪಿಕೊಳ್ಳುವುದಿಲ್ಲ..ಜೈ ಜಾರ್ಖಂಡ್

ಹೇಮಂತ್ ಸೊರೇನ್, 'ಎಕ್ಸ್'ನಲ್ಲಿ ಮಾಡಿರುವ ಪೋಸ್ಟ್

ಸಹಿಷ್ಣುವಾಗಿದ್ದಕ್ಕೆ ಗಾಂಧಿ ಹತ್ಯೆ: ಉಗ್ರಪ್ಪ


ಹೊಸೂರು ರಸ್ತೆಯ ಬೊಮ್ಮನಹಳ್ಳಿಯಲ್ಲಿ ಮಾನವ ಸರಪಳಿ ರಚಿಸಿದ ಕಾರ್ಯಕರ್ತರು, ಸೌಹಾರ್ದತೆಯ ಸಂದೇಶ ಸಾರಿದರು.

ಬೊಮ್ಮನಹಳ್ಳಿ: 'ಧರ್ಮ, ರಾಜಕಾರಣದೊಳಗೆ ನುಸುಳಬಾರದು, ಧಾರ್ಮಿಕ ಸಹಿಷ್ಣುತೆ ಈ ನೆಲದ ಸೌಂದರ್ಯ ಎಂದು ಪ್ರತಿಪಾದಿಸಿದ ಕಾರಣಕ್ಕಾಗಿಯೇ ಗಾಂಧೀಜಿ ಹತ್ಯೆ ನಡೆಯಿತು' ಎಂದು ಕಾಂಗ್ರೆಸ್ ಮುಖಂಡ ವಿ.ಎಸ್.ಉಗ್ರಪ್ಪ ಪ್ರತಿಪಾದಿಸಿದರು.

ಸೌಹಾರ್ದ ಕನಾಟಕ ವೇದಿಕೆಯು ಹುತಾತ್ಮರ ದಿನದ ಅಂಗವಾಗಿ ಹೆಚ್‌ಎಸ್‌ಆರ್ ಬಡಾವಣೆಯ ಸ್ವಾಭಿಮಾನಿ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ 'ಗಾಂಧೀಜಿ ಹತ್ಯೆ – ತೆರೆಯ ಹಿಂದಿನ ಕರಾಳತೆ' ಎಂಬ ಸಂವಾದ ಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ಲ ಧರ್ಮೀಯರು ಪಾಲ್ಗೊಳ್ಳುವಂತೆ ಮಾಡುವಲ್ಲಿ ಗಾಂಧೀಜಿ ಮಹತ್ವದ ಪಾತ್ರ ವಹಿಸಿದ್ದರು. ಇದು ಬ್ರಿಟಿಷರಿಗೆ ನುಂಗಲಾರದ ತುತ್ತಾಗಿತ್ತು. ಹೀಗಾಗಿಯೇ ಧರ್ಮದ ಆಧಾರದಲ್ಲಿ ಒಡೆದಾಳುವ ನೀತಿಗೆ ಕೈಹಾಕಿದರು. ಇದನ್ನು ಬೆಂಬಲಿಸಿದ ಅಂದಿನ ಮತೀಯವಾದಿ ಶಕ್ತಿಗಳು ಬ್ರಿಟಿಷರ ಪರವಾಗಿ ನಿಂತಿದ್ದಲ್ಲದೇ, ಆ ಗುಂಪಿಗೆ ಸೇರಿದ ನಾಥೂರಾಂ ಗೋಡ್ಸೆ ಗಾಂಧೀಜಿಯನ್ನು ಹತ್ಯೆ ಮಾಡಿದ' ಎಂದರು.

ಸಿಪಿಐ(ಎಂ) ರಾಜ್ಯ ಮುಖಂಡ ಡಾ.ಕೆ.ಪ್ರಕಾಶ್ ಮಾತನಾಡಿ 'ವೈವಿಧ್ಯವೇ ಈ ನೆಲದ ಸೌಂದರ್ಯ. ಗಾಂಧೀಜಿಯವರು ಇದನ್ನೇ ಪ್ರತಿಪಾದಿಸುತ್ತಿದ್ದರು. ವಿಚಾರಭೇದದ ಕಾರಣಕ್ಕಾಗಿ ವ್ಯಕ್ತಿಯನ್ನು ಕೊಲೆ ಮಾಡುವ ಹಂತಕ್ಕೆ ತಲುಪುವುದು ಫ್ಯಾಸಿಸ್ಟ್ ಪ್ರವೃತ್ತಿಯಾಗಿದೆ. ಈ ಮತಾಂಧ ಶಕ್ತಿಗಳೇ ಬಾಪುವನ್ನು ಹತ್ಯೆಗೈದರು' ಎಂದರು.

‘ಆಗದಿದ್ದರೆ ಬಿಟ್ಟು ಹೋಗಿ’ • ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಸಿದ್ದರಾಮಯ್ಯ ಸೂಚನೆ

ಜಾತ್ಯತೀತತೆಗೆ ಬದ್ಧರಾಗಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಸರ್ಕಾರದಲ್ಲಿ ಜಾತ್ಯತೀತತೆಗೆ ಮತ್ತು ಸಂವಿಧಾನಕ್ಕೆ ಅಧಿಕಾರಿಗಳು ಸಂಪೂರ್ಣ ಬದ್ಧರಾಗಿರಬೇಕು. ಇಲ್ಲದಿದ್ದರೆ ಅಂಥವರಿಗೆ ಇಲ್ಲಿ ಮುಂದುವರಿಯಲು ಅವಕಾಶ ಇಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

ವಿಧಾನಸೌಧದಲ್ಲಿ ಬುಧವಾರ ನಡೆದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ, ‘ಜಿಲ್ಲಾಧಿಕಾರಿಗಳಿಗೆ ಜಾತ್ಯತೀತತೆ ಬಗ್ಗೆ ಬದ್ಧತೆ ಇರಬೇಕು. ಸಂವಿಧಾನದ ಬಗ್ಗೆ ಗೌರವ ಇರಬೇಕು. ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಅಂತಹ ಅಧಿಕಾರಿಗಳಿಗೆ ಇಲ್ಲಿ ಮುಂದುವರಿಯುವ ಹಕ್ಕಿಲ್ಲ. ಅವಕಾಶವೂ ಇಲ್ಲ’ ಎಂದರು.

‘ನಿಮ್ಮ ಅನುಭವಗಳು ಜಿಲ್ಲಾಡಳಿತಕ್ಕೆ ನೆರವಾಗಬೇಕು. ಸರ್ಕಾರದ ಯೋಜನೆಗಳು, ಕಾರ್ಯಕ್ರಮಗಳು ಜನರಿಗೆ ತಲುಪಲು, ಜಿಲ್ಲಾಮಟ್ಟದ ಅಧಿಕಾರಿಗಳು ತ್ವರಿತವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳಲು ನೆರವಾಗಬೇಕು ಎನ್ನುವ ಕಾರಣಕ್ಕೆ ನಿಮ್ಮನ್ನು ನೇಮಿಸಲಾಗಿದೆ’ ಎಂದರು.

> **ಸರ್ಕಾರದ ಗ್ಯಾರಂಟಿ ಯೋಜನೆಗಳು ತಾಂತ್ರಿಕ ಕಾರಣಗಳಿಂದ ತಲುಪದ ಕೆಲವರು, ಆ ಬಗ್ಗೆ ಹೆಚ್ಚು ಹೇಳಿಕೊಂಡು ತಿರುಗುತ್ತಿದ್ದಾರೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಜಿಲ್ಲೆಗಳಿಗೆ ಭೇಟಿ ನೀಡಬೇಕು: ‘ತಿಂಗಳಲ್ಲಿ ಕನಿಷ್ಠ ಎರಡು ಬಾರಿಯಾದರೂ ಉಸ್ತುವಾರಿ ಜಿಲ್ಲೆಗಳಿಗೆ ಕಡ್ಡಾಯವಾಗಿ ಭೇಟಿ ನೀಡಬೇಕು. ಬರದಿಂದಾಗಿ ಮಾರ್ಚ್, ಏಪ್ರಿಲ್, ಮೇ ತಿಂಗಳಿನಲ್ಲಿ ಸಮಸ್ಯೆ ಎದುರಾಗಬಹುದು. ಅದಕ್ಕೆ ಈಗಲೇ ಸಿದ್ಧತೆ ಮಾಡಿಕೊಳ್ಳಬೇಕು’ ಎಂದು ಮುಖ್ಯಮಂತ್ರಿ ಸಲಹೆ ನೀಡಿದರು.

‘ಕುಡಿಯುವ ನೀರು, ಮೇವು, ಜನರು ಗುಳೆ ಹೋಗದಂತೆ ನೋಡಿಕೊಳ್ಳುವುದು ಮತ್ತು ಇನ್‌ಪುಟ್ ಸಬ್ಸಿಡಿ ವಿತರಣೆ ಈ ನಾಲ್ಕು ಅಂಶಗಳಿಗೆ ಹೆಚ್ಚಿನ ಒತ್ತು ನೀಡಬೇಕು. ಮೇವು ಕೊರತೆ ಆಗದಂತೆ ಎಚ್ಚರ ವಹಿಸಬೇಕು. ರೇಷ್ಮೆ, ತೋಟಗಾರಿಕೆ ಹಾಗೂ ಪಶುಸಂಗೋಪನಾ ಇಲಾಖೆಯ ಫಾರಂಗಳಲ್ಲಿ ಮೇವು ಬೆಳೆಯಲು ಕ್ರಮ ಕೈಗೊಳ್ಳಬೇಕು. ₹20 ಕೋಟಿ ಮೊತ್ತದಲ್ಲಿ ಮೇವು ಮಿನಿ ಕಿಟ್ ವಿತರಣೆಗೆ ಸಚಿವ ಸಂಪುಟ ಸಭೆಗೆ ಪ್ರಸ್ತಾವ ಸಲ್ಲಿಸಬೇಕು’ ಎಂದು ಸೂಚಿಸಿದರು.

‘ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಡೈರಿ ನಿರ್ವಹಿಸಬೇಕು’ ಎಂದು ಸಲಹೆ ನೀಡಿದ ಮುಖ್ಯಮಂತ್ರಿ, ‘ಜಿಲ್ಲಾಮಟ್ಟದ ಪ್ರಗತಿ ಪರಿಶೀಲನೆಯನ್ನು ಸಮಗ್ರವಾಗಿ ಮಾಡಬೇಕು. ಸಾರಿಗೆ ನಿಗಮದ ಅಧಿಕಾರಿಗಳ ಸಭೆ ನಡೆಸಿ, ಬಸ್‌ಗಳ ಕೊರತೆ, ಸ್ಥಗಿತಗೊಳಿಸಿರುವ ಮಾರ್ಗಗಳು, ಬಸ್ ಸೇವೆಯಲ್ಲಿನ ವ್ಯತ್ಯಯ ಮತ್ತಿತರ ವಿಷಯಗಳ ಕುರಿತು ಚರ್ಚಿಸಿ, ಸಮಸ್ಯೆಗಳನ್ನು ಬಗೆಹರಿಸಬೇಕು’ ಎಂದರು.

ತಾಂತ್ರಿಕ ಸಮಸ್ಯೆಯಿಂದಾಗಿ ಸರ್ಕಾರದ ‘ಗ್ಯಾರಂಟಿ’ ಯೋಜನೆಗಳು ಕೆಲವರಿಗೆ ತಲುಪದಿರುವುದಕ್ಕೆ ಗರಂ ಆದ ಮುಖ್ಯಮಂತ್ರಿ, ‘ತಾಂತ್ರಿಕ ಸಮಸ್ಯೆ ಮೊದಲು ಬಗೆಹರಿಸಬೇಕು. ಅನರ್ಹ ಫಲಾನುಭವಿಗಳಿಗೆ ಮಾಹಿತಿ ನೀಡಿ, ಅರ್ಜಿಗಳನ್ನು ತಿರಸ್ಕರಿಸಬೇಕು’ ಎಂದರು.

ಮುಖ್ಯಮಂತ್ರಿಯಿಂದ ಪ್ರಶ್ನೆಗಳ ಸುರಿಮಳೆ: ‘ತಹಶೀಲ್ದಾರ್, ಎಸಿ, ಡಿಸಿ ಕಚೇರಿಗಳಿಗೆ ಜನರ ಅಲೆದಾಟ ಕಡಿಮೆ ಆಗಿದೆಯೇ? ಜನರ ಸಮಸ್ಯೆಗಳಿಗೆ ಪರಿಹಾರ ಸಿಗುತ್ತಿದೆಯೇ? ಅರ್ಜಿಗಳು ಎಷ್ಟು ದಿನಗಳಿಂದ ಬಾಕಿ ಇವೆ? ಎಷ್ಟು ಇತ್ಯರ್ಥ ಆಗಿವೆ? ಎಷ್ಟು ಆಸ್ಪತ್ರೆಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೀರಿ? ಡಯಾಲಿಸಿಸ್ ಕೇಂದ್ರಗಳಲ್ಲಿ ಸಮರ್ಪಕ ಸೇವೆ ಸಿಗುತ್ತಿದೆಯೇ? ಉಸ್ತುವಾರಿ ವಹಿಸಿಕೊಂಡ ಬಳಿಕ ಆಡಳಿತಾತ್ಮಕವಾಗಿ ಏನು ಬದಲಾವಣೆ ಆಗಿದೆ? ನಿಮ್ಮಿಂದ ಜಿಲ್ಲಾಡಳಿತಕ್ಕೆ ಏನು ಸಲಹೆ ಸಿಕ್ಕಿದೆ’ ಎಂದು ಉಸ್ತುವಾರಿ ಕಾರ್ಯದರ್ಶಿಗಳನ್ನು ಪ್ರಶ್ನಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಗೋವಿಂದ ರಾಜು, ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್, ಮುಖ್ಯಮಂತ್ರಿಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಸಿ.ಎಂ ಕಾರ್ಯದರ್ಶಿ ತ್ರಿಲೋಕ್ ಚಂದ್ರ ಸಭೆಯಲ್ಲಿದ್ದರು.

ಪ್ರಗತಿ ವೀಕ್ಷಣೆಗೆ ‘ಪ್ರಗತಿ’ ತಂತ್ರಾಂಶ

‘ಜಿಲ್ಲಾ ಮಟ್ಟದ ಎಲ್ಲ ಇಲಾಖೆಗಳಲ್ಲಿ ಅನುಷ್ಠಾನವಾಗುವ ಯೋಜನೆಗಳ ಕ್ಷೇತ್ರಮಟ್ಟದ ಪ್ರಗತಿ ವೀಕ್ಷಣೆಗೆ ಪೂರಕವಾಗಿ ಅಭಿವೃದ್ಧಿಪಡಿಸಿರುವ ‘ಪ್ರಗತಿ’ ಮೊಬೈಲ್ ಅಪ್ಲಿಕೇಶನ್ ತಂತ್ರಾಂಶಕ್ಕೆ ಮುಖ್ಯಮಂತ್ರಿ ಬುಧವಾರ ಚಾಲನೆ ನೀಡಿದರು.

ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನಗಳ ಪರಿಣಾಮಕಾರಿ ಮೇಲ್ವಿಚಾರಣೆಗೆ ಈ ತಂತ್ರಾಂಶ ಸಹಾಯ ಮಾಡಲಿದೆ. ವೇಳಾಪಟ್ಟಿ ಪ್ರಕಾರ ಅಧಿಕಾರಿಗಳು ಸಂಸ್ಥೆಗಳಿಗೆ ಭೇಟಿ ನೀಡಲು ಮತ್ತು ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಪರಿಹರಿಸಲು ಈ ತಂತ್ರಾಂಶ ಸಹಾಯ ಮಾಡುತ್ತದೆ. ಯೋಜನೆಗಳಿಗೆ ಸಂಬಂಧಿಸಿದಂತೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಮತ್ತು ನಿಧಿಯ ಪರಿಣಾಮಕಾರಿ ಬಳಕೆಗೂ ಇದು ಸಹಾಯ ಮಾಡಲಿದೆ.

ಖಾಸಗೀಕರಣ: ಸಂಸತ್ತಿಗೂ ಹೊರಗುತ್ತಿಗೆ?

ನಿವೃತ್ತ ನ್ಯಾ. ಎಚ್.ಎನ್.ನಾಗಮೋಹನ್ ದಾಸ್ ಅಭಿಮತ

ಪ್ರಜಾವಾಣಿ ವಾರ್ತೆ



ಬೆಂಗಳೂರಿನಲ್ಲಿ ಬುಧವಾರ ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ ಆಯೋಜಿಸಿದ್ದ ‘ಸಂವಿಧಾನದ ಆಶಯಗಳು’ ಸಂವಾದ ಕಾರ್ಯಕ್ರಮದಲ್ಲಿ ನ್ಯಾ. ನಾಗಮೋಹನ ದಾಸ್ ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು. ಚೇತನ್ ಅಹಿಂಸಾ, ಕೋಟಿಗಾನಹಳ್ಳಿ ರಾಮಯ್ಯ, ಎಸ್‌.ಆರ್‌. ಹಿರೇಮಠ್, ಬಿ.ಚನ್ನಕೃಷ್ಣಪ್ಪ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ದೇಶದ ಎಲ್ಲ ಕ್ಷೇತ್ರಗಳನ್ನೂ ಖಾಸಗೀಕರಣ ಮಾಡಲಾಗುತ್ತಿದೆ. ಮುಂದೊಂದು ದಿನ ಸಂಸತ್ ನಿರ್ವಹಣೆಯನ್ನೂ ಹೊರಗುತ್ತಿಗೆ ನೀಡುವ ಸಾಧ್ಯತೆ ಇದೆ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಹೇಳಿದರು.

ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ ಬುಧವಾರ ಹಮ್ಮಿಕೊಂಡಿದ್ದ ‘ಸಂವಿಧಾನದ ಆಶಯಗಳು’ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತದ ಪ್ರತಿ ಹಳ್ಳಿಯೂ ವಿಭಿನ್ನ, ಹಲವು ಜಾತಿ, ಧರ್ಮ, ಭಾಷೆಯ ಜನರು ಇರುವ ದೇಶದಲ್ಲಿ ಎಲ್ಲರಲ್ಲೂ ಭಾರತೀಯರು ಎನ್ನುವ ಭಾವನೆ ನೆಲೆಸಲು, ಶಾಂತಿ, ಸೌಹಾರ್ದದ ಬದುಕು ಸಾಗಿಸಲು ಸಂವಿಧಾನವೇ ಕಾರಣ. ಸ್ವಾತಂತ್ರ್ಯ ಚಳವಳಿಯ ಮೌಲ್ಯಗಳು ಹಾಗೂ ಸ್ವಾತಂತ್ರ್ಯ ಪೂರ್ವದಲ್ಲೇ ರಚನೆಯಾದ ಸಂವಿಧಾನ ರಚನಾ ಸಭೆಯ ಆಶಯಗಳ ಮಿಳಿತ, ಅಂಬೇಡ್ಕರ್ ಅವರಂತಹ ಪ್ರತಿಭಾವಂತರ ಶ್ರಮದ ಫಲವಾಗಿ ವಿಶ್ವದ ಶ್ರೇಷ್ಠ ಸಂವಿಧಾನ ಹೊಂದಲು ಸಾಧ್ಯವಾಯಿತು ಎಂದರು.

ಸ್ವಾತಂತ್ರ್ಯಪೂರ್ವದ ಯಾವ ಕಾಲಘಟ್ಟದಲ್ಲೂ ಅಖಂಡ ಭಾರತ ಎಂಬುದೇ ಇರಲಿಲ್ಲ. ಸ್ವಾತಂತ್ರ್ಯ ನಂತರ ಎಲ್ಲ ಸಂಸ್ಥಾನಗಳು ಒಗ್ಗೂಡಿ ಅಖಂಡ ಭಾರತ ನಿರ್ಮಾಣವಾಯಿತು. ಸಂವಿಧಾನ ಸಾಮಾಜಿಕ, ಆರ್ಥಿಕ ಸಮಾನತೆಯ ಆಶಯಗಳನ್ನು ಒಳಗೊಂಡಿದೆ. ಆದರೆ, ಸಂವಿಧಾನ ಜಾರಿಯಾಗಿ 74 ವರ್ಷಗಳು ಮುಗಿದರೂ, ಆಶಯಗಳು ಸಾಕಾರವಾಗಿಲ್ಲ ಎಂದರು.

ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಪ್ರಾಸ್ತಾವಿಕ ಮಾತನಾಡಿದರು. ನಟ ಚೇತನ್ ಅಹಿಂಸಾ, ಜನಾಂದೋಲನ ಮಹಾಮೈತ್ರಿ ಕರ್ನಾಟಕದ ಅಧ್ಯಕ್ಷ ಎಸ್.ಆರ್.ಹಿರೇಮಠ, ರೈತ ಮುಖಂಡ ವೀರಸಂಗಯ್ಯ ಉಪಸ್ಥಿತರಿದ್ದರು. ಒಕ್ಕೂಟದ ಅಧ್ಯಕ್ಷ ಬಿ.ಚನ್ನಕೃಷ್ಣ ಅಧ್ಯಕ್ಷತೆ ವಹಿಸಿದ್ದರು.


ನಿಧನ ಸುದ್ದಿ

ಶಾಂತಾರಾಮ ಹೆಗಡೆ



ಶಿರಸಿ: ಹಿರಿಯ ಸಹಕಾರಿ ಧುರೀಣ, ತೋಟಗಾರ್ಸ್ ಕೋ–ಆಪರೇಟಿವ್ ಸೇಲ್ ಸೊಸೈಟಿ (ಟಿಎಸ್‌ಎಸ್) ಸಂಸ್ಥೆಯ ಮಾಜಿ ಅಧ್ಯಕ್ಷ ಶಾಂತಾರಾಮ ಹೆಗಡೆ ಶೀಗೇಹಳ್ಳಿ (79) ಬುಧವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಇಬ್ಬರು ಪುತ್ರಿಯರು ಇದ್ದಾರೆ. ಗುರುವಾರ ಶೀಗೇಹಳ್ಳಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

1995ರಿಂದ 22 ವರ್ಷ ಟಿಎಸ್‌ಎಸ್ ಸಂಸ್ಥೆಯ ಅಧ್ಯಕ್ಷರಾಗಿದ್ದ ಅವರು, ರೈತಪರ ಯೋಜನೆ ಅನುಷ್ಠಾನಗೊಳಿಸಿದ್ದರು. ಮುಂಡಗನಮನೆ ಸಹಕಾರಿ ಸಂಘದ ಅಧ್ಯಕ್ಷ, ನಂತರದಲ್ಲಿ ಕೆಡಿಸಿಸಿ ಬ್ಯಾಂಕ್, ಮಾಡರ್ನ್ ಎಜುಕೇಷನ್ ಸೊಸೈಟಿ ಅಧ್ಯಕ್ಷ, ಅರೇಕಾನಟ್ ರೀಸರ್ಚ್ ಫೌಂಡೇಶನ್ ಧರ್ಮದರ್ಶಿಯಾಗಿ, ತೋಟಗಾರರ ಸೇವಾ ಸಮಿತಿ, ಕರ್ನಾಟಕ ರಾಜ್ಯ ಸಹಕಾರಿ ಅಡಿಕೆ ಮಾರಾಟ ಮಂಡಳದ ಸಂಸ್ಥಾಪಕ ಅಧ್ಯಕ್ಷ ಮತ್ತು ತೋಟಗಾರರ ಸಂಘದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಉತ್ತರ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ 13 ವರ್ಷ ಕಾರ್ಯ ನಿರ್ವಹಿಸಿದ್ದ ಅವರು 2018ರಲ್ಲಿ ಕೆಪಿಸಿಸಿ ಕಾರ್ಯದರ್ಶಿಯಾಗಿ ನೇಮಕವಾಗಿದ್ದರು. ಶ್ರೇಷ್ಠ ಸಹಕಾರಿ, ಸಹಕಾರಿ ರತ್ನ, ಪ್ರಶಂಸನಾ ಪುರಸ್ಕಾರ, ಸಹಕಾರ ವಿಶ್ವ ಸ್ವರ್ಣಶ್ರೀ ಅಂತಾರಾಷ್ಟ್ರೀಯ ಪ್ರಶಸ್ತಿ, ಕೆ.ಎಚ್.ಪಾಟೀಲ ಗ್ರಾಮಾಭಿವೃದ್ಧಿ ರಾಷ್ಟ್ರೀಯ ಪ್ರಶಸ್ತಿ ಅವರಿಗೆ ಸಂದಿವೆ.



ಬೆಂಗಳೂರಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಫಾಯಿ ಕರ್ಮಚಾರಿಗಳ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಫಾಯಿ ಕರ್ಮಚಾರಿಗಳಿಗೆ ನಗದು ಸಹಾಯಧನ ವಿತರಿಸಿದರು. ಎಚ್‌.ಸಿ.ಮಹದೇವಪ್ಪ, ಕೆ.ಎಸ್‌. ಬಸವಂತಪ್ಪ, ಎನ್‌. ಶ್ರೀನಿವಾಸಯ್ಯ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ.

‘ಶೌಚದ ಗುಂಡಿಗೆ ಇಳಿಸಿದರೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಫಾಯಿ ಕರ್ಮಚಾರಿಗಳನ್ನು ಶೌಚದ ಗುಂಡಿಗೆ ಇಳಿಸಿ, ಕೆಲಸ ಮಾಡಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ ಬುಧವಾರ ಹಮ್ಮಿಕೊಂಡಿದ್ದ ಸಫಾಯಿ ಕರ್ಮಚಾರಿಗಳಿಗೆ ಸಹಾಯಧನ ವಿತರಣೆ ಮತ್ತು ಪುನರ್ವಸತಿ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ಪೌರ ಕಾರ್ಮಿಕರು ಘನತೆಯಿಂದ ಬದುಕು ಕಟ್ಟಿಕೊಳ್ಳಬೇಕು ಎನ್ನುವುದು ಕಾಂಗ್ರೆಸ್ ಪಕ್ಷ ಹಾಗೂ ರಾಜ್ಯ ಸರ್ಕಾರದ ಆಶಯ. ಅದಕ್ಕಾಗಿಯೇ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸಫಾಯಿ ಕರ್ಮಚಾರಿಗಳ ವೇತನವನ್ನು ₹7 ಸಾವಿರದಿಂದ ₹17 ಸಾವಿರಕ್ಕೆ ಹೆಚ್ಚಳ ಮಾಡಲಾಯಿತು. ಮನೆ ಕಟ್ಟಿಕೊಳ್ಳಲು ₹7.50 ಲಕ್ಷ ನೆರವು ನೀಡುವ ಕಾರ್ಯಕ್ರಮ ಜಾರಿಗೆ ತರಲಾಯಿತು ಎಂದರು.

‘ಅಂಬೇಡ್ಕರ್ ಅವರು ಈ ದೇಶಕ್ಕೆ ಸಮಾನತೆಯ ಸಂವಿಧಾನ ನೀಡದೆ ಹೋಗಿದ್ದರೆ ನಾನು ಮುಖ್ಯಮಂತ್ರಿ ಆಗುತ್ತಲೇ ಇರಲಿಲ್ಲ. ಸಂವಿಧಾನ ವಿರೋಧಿಗಳು ನಮ್ಮೆಲ್ಲರ ವಿರೋಧಿಗಳು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಅಂಥವರನ್ನು ಜನರು ತಿರಸ್ಕರಿಸಬೇಕು’ ಎಂದು ಕೋರಿದರು.

ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಮಾತನಾಡಿ, ಇತಿಹಾಸದಲ್ಲೇ ಮೊದಲ ಬಾರಿ 101 ಶೋಷಿತ ಸಮುದಾಯಗಳ ಪಟ್ಟಿಯಲ್ಲಿ ಕೊನೆಯಲ್ಲಿ ಗುರುತಿಸಿಕೊಂಡಿರುವ ಸಫಾಯಿ ಕರ್ಮಚಾರಿಗಳ ಬದುಕಿಗೆ ನೇರವಾಗಿ ಹಣಕಾಸಿನ ನೆರವು ನೀಡಲಾಗಿದೆ. 4 ಸಾವಿರ ಸಫಾಯಿ ಕರ್ಮಚಾರಿಗಳಿಗೆ ತಲಾ ₹40 ಸಾವಿರ ಸಹಾಯಧನ ವಿತರಿಸಲಾಗಿದೆ ಎಂದರು.

‘ಸುಗ್ರೀವಾಜ್ಞೆ ತಿರಸ್ಕರಿಸಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿರುವ ಎಲ್ಲ ಅಂಗಡಿ, ಹೋಟೆಲ್, ವಾಣಿಜ್ಯ ಸಂಕೀರ್ಣ, ಕೈಗಾರಿಕೋದ್ಯಮಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಕೆ ಕಡ್ಡಾಯ ಮಾಡಿ ಹೊರಡಿಸಿದ್ದ ಸುಗ್ರೀವಾಜ್ಞೆಯನ್ನು ತಿರಸ್ಕರಿಸಿಲ್ಲ. ಅದರ ಬದಲು ವಿಧಾನಮಂಡಲ ಅಧಿವೇಶನದಲ್ಲಿ ಮಸೂದೆ ಮಂಡಿಸುವಂತೆ ಸಲಹೆ ನೀಡಿ ಹಿಂದಿರುಗಿಸಲಾಗಿದೆ’ ಎಂದು ರಾಜ್ಯಪಾಲರು ಸ್ಪಷ್ಟನೆ ನೀಡಿದ್ದಾರೆ.

‘ಸುಗ್ರೀವಾಜ್ಞೆಗೆ ಅಂಕಿತ ಹಾಕದೆ ರಾಜ್ಯಪಾಲರು ವಾಪಸು ಮಾಡಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಂಗಳವಾರ ಹೇಳಿದ್ದರು.

ಈ ಹಿನ್ನೆಲೆಯಲ್ಲಿ ರಾಜ್ಯಪಾಲರ ಪರವಾಗಿ ಪ್ರಕಟಣೆ ನೀಡಿರುವ ವಿಶೇಷ ಕಾರ್ಯದರ್ಶಿ, ‘ಫೆ. 12ರಿಂದ ವಿಧಾನಮಂಡಲ ಅಧಿವೇಶನ ಕರೆಯಲು ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ. ಹೀಗಾಗಿ, ಸುಗ್ರೀವಾಜ್ಞೆಯನ್ನು ಹಿಂದಿರುಗಿಸಲಾಗಿದೆ’ ಎಂದಿದ್ದಾರೆ.

ಮಸೂದೆ ಮಂಡನೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಮಾತನಾಡಿ, ‘ಕನ್ನಡ ಬಳಕೆ ಕಡ್ಡಾಯದ ಬಗ್ಗೆ ಸುಗ್ರೀವಾಜ್ಞೆಗೆ ಅಂಕಿತ ಹಾಕಲು ರಾಜ್ಯಪಾಲರಿಗೆ ಕಳುಹಿಸಲಾಗಿತ್ತು. ಆದರೆ, ಸುಗ್ರೀವಾಜ್ಞೆಗೆ ರಾಜ್ಯಪಾಲರು ಅಂಕಿತ ಹಾಕುವ ಮೊದಲೇ ಅಧಿವೇಶನ ಆರಂಭದ ಅಧಿಸೂಚನೆ ಹೊರಡಿಸಿರುವ ಕಾರಣ ವಾಪಸು ಕಳುಹಿಸಿದ್ದಾರೆ. ವಿಧಾನ ಮಂಡಲ ಅಧಿವೇಶನದಲ್ಲಿ ಮಸೂದೆ ಮಂಡಿಸಲಾಗುವುದು’ ಎಂದರು.

ರಾಜಕಾರಣ ಮಾಡುವ ಅಗತ್ಯವಿಲ್ಲ: ‘ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ತಿದ್ದುಪಡಿ ಸುಗ್ರೀವಾಜ್ಞೆ ರಾಜ್ಯಪಾಲರಿಂದ ವಾಪಸ್ ಬಂದಿರುವುದಕ್ಕೆ ಯಾವುದೇ ರಾಜಕೀಯ ಕಾರಣಗಳು ಇಲ್ಲ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹೇಳಿದರು.

‘ಸುಗ್ರೀವಾಜ್ಞೆಗೆ ಯಾರಿಂದಲೂ ವಿರೋಧವಿಲ್ಲ. ಬಜೆಟ್ ಅಧಿವೇಶನದ ದಿನಾಂಕ ನಿಗದಿಯಾಗಿರುವುದರಿಂದ ಎರಡೂ ಸದನಗಳಲ್ಲಿ ಮಸೂದೆ ಮಂಡಿಸಿ ಒಪ್ಪಿಗೆ ಪಡೆಯುವಂತೆ ರಾಜ್ಯಪಾಲರು ಸುಗ್ರೀವಾಜ್ಞೆಯನ್ನು ವಾಪಸ್ ಕಳುಹಿಸಿದ್ದಾರೆ. ನಾವು ಅಧಿವೇಶನದ ದಿನ ನಿಗದಿಪಡಿಸುವ ಮೊದಲೇ, ಜ.5ರಂದೇ ಸುಗ್ರೀವಾಜ್ಞೆಯನ್ನು ರಾಜ್ಯಪಾಲರಿಗೆ ಕಳುಹಿಸಿದ್ದೆವು. ಆದರೆ, ರಾಜ್ಯಪಾಲರ ಅನಾರೋಗ್ಯ ಮತ್ತು ಅವರು ಊರಲ್ಲಿ ಇಲ್ಲದ ಕಾರಣ ಸಹಿ ಹಾಕುವುದು ತಡ ಆಗಿದೆ. ಎರಡೂ ಸದನಗಳಲ್ಲಿ ಮಸೂದೆ ಮಂಡಿಸಿ ಒಪ್ಪಿಗೆ ಪಡೆಯಲಾಗುವುದು ಎಂದರು.

ಪ್ರಾದೇಶಿಕ ಭಾಷಾ ಗುಣಾತ್ಮಕ ಚಲನಚಿತ್ರಗಳ ಆಯ್ಕೆ ಸಮಿತಿ ಅಧ್ಯಕ್ಷರಾಗಿ ಬಿ.ಎಲ್.ವೇಣು

ಬೆಂಗಳೂರು: ಸಾಹಿತಿ ಬಿ.ಎಲ್. ವೇಣು ಅವರನ್ನು 2022ನೇ ಸಾಲಿನ ಕನ್ನಡ ಹಾಗೂ ಕರ್ನಾಟಕ ಪ್ರಾದೇಶಿಕ ಭಾಷಾ ಗುಣಾತ್ಮಕ ಚಲನಚಿತ್ರಗಳ ಆಯ್ಕೆ ಸಮಿತಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಪತ್ರಕರ್ತ ಗುರುರಾಜ್, ಛಾಯಾಗ್ರಾಹಕ ವಿಶ್ವನಾಥ್ ಸುವರ್ಣ, ನಿರ್ದೇಶಕ ಎಸ್.ಮಹೇಂದರ್, ನಟಿ ವೀಣಾ ಸುಂದರ್, ನಟ ಕರಿಸುಬ್ಬು (ಸದಸ್ಯರು) ಹಾಗೂ ವಾರ್ತಾ ಇಲಾಖೆ ಆಯುಕ್ತರನ್ನು (ಸದಸ್ಯ ಕಾರ್ಯದರ್ಶಿ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಮಿತಿಗೆ ನೇಮಿಸಿದೆ.

‘ಲೂಟಿ ಮಾಡಲೆಂದೇ ಕಡಿಮೆ ವಿವರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯವನ್ನು ಲೂಟಿ ಮಾಡಲೆಂದೇ ನೀರಾವರಿ ಇಲಾಖೆಯ ಹಲವು ಕಾಮಗಾರಿಗಳ ಅಂದಾಜುಪಟ್ಟಿಯ ಷರತ್ತಿನಲ್ಲಿ ಕಡಿಮೆ ವಿವರಗಳನ್ನು ನೀಡಿರುತ್ತಾರೆ’ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್‌ನ (ಇಂಡಿಯಾ) ಬೆಂಗಳೂರು ಕೇಂದ್ರ ಬುಧವಾರ ಆಯೋಜಿಸಿದ್ದ, ‘ಕರ್ನಾಟಕ ವೃತ್ತಿಪರ ಸಿವಿಲ್ ಎಂಜಿನಿಯರ್ ಕಾಯ್ದೆ ರಚನೆಯ ಸಲಹಾ ಸಭೆ’ಯಲ್ಲಿ ಅವರು ಮಾತನಾಡಿದರು.

‘ನಮ್ಮ ರಾಜ್ಯದ ಹಲವು ಭಾಗಗಳಲ್ಲಿ ನೀರಾವರಿ ಯೋಜನೆಗಳ ಕಾಮಗಾರಿಗಳು 10, 20, 25 ವರ್ಷಗಳು ಕಳೆದರೂ ಮುಗಿಯುವುದಿಲ್ಲ. ಆ ಗುತ್ತಿಗೆಯನ್ನು ನಿಲ್ಲಿಸಿ ಮತ್ತೊಬ್ಬರಿಗೆ ಕೊಡುತ್ತಿಲ್ಲ.



ಎಚ್‌.ಕೆ. ಪಾಟೀಲ

ಅಂದಾಜು ಪಟ್ಟಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಹೋಗುತ್ತಿದೆ. ಇದನ್ನು ಯಾರೂ ಪ್ರಶ್ನಿಸುವುದಿಲ್ಲ. ಏಕೆಂದರೆ ಇದರಲ್ಲಿ ಎಲ್ಲರೂ ಫಲಾನುಭವಿಗಳೇ ಆಗಿರುತ್ತಾರೆ’ ಎಂದರು.

‘ಅಂದಾಜು ಪಟ್ಟಿಯಲ್ಲಿ ‘ಬ್ಲಾಸ್ಟಿಂಗ್ ಆ್ಯಂಡ್ ಕಂಟ್ರೋಲ್ಡ್ ಬ್ಲಾಸ್ಟಿಂಗ್ ವೆಚ್ಚ’ ಎಂದು ನಮೂದಿಸಲಾಗಿರುತ್ತದೆ. ಇದರ ಷರತ್ತುಗಳ ವಿವರಗಳೇ ಇರುವುದಿಲ್ಲ. ವೆಚ್ಚದ ಮೊತ್ತ ಮಾತ್ರ ಹೆಚ್ಚಾಗಿರುತ್ತದೆ. ಇದು ಒಂದು ಉದಾಹರಣೆ ಅಷ್ಟೇ. ಕಾಮಗಾರಿಗಳ ಸಾಮಗ್ರಿಗಳಿಗೆ ಸರ್ಕಾರ ನಿಗದಿಪಡಿಸುವ ‘ಎಸ್.ಆರ್ ದರ’ ಮಾರುಕಟ್ಟೆಗಿಂತ ಶೇ 20ರಷ್ಟು ಹೆಚ್ಚಿರುತ್ತದೆ. ಖಾಸಗಿ ಎಂಜಿನಿಯರಿಂಗ್ ಸಂಸ್ಥೆಗಳು ಸೇರಿದಂತೆ ಯಾರೂ ಇದನ್ನು ಪ್ರಶ್ನಿಸುವುದಿಲ್ಲ. ಈ ಬಗ್ಗೆ ನಾಗರಿಕರಿಗೆ ಮಾಹಿತಿ ನೀಡುವ ಕೆಲಸವನ್ನೂ ಮಾಡುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ರಾಷ್ಟ್ರ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುವ ಎಂಜಿನಿಯರ್‌ಗಳು, ಐಎಎಸ್ ಅಧಿಕಾರಿಗಳು ಹೇಳಿದ ಕಾಮಗಾರಿಗಳನ್ನು ಚಾಚೂತಪ್ಪದೆ ಮಾಡುತ್ತಿದ್ದಾರೆ. ತಮ್ಮ ತಾಂತ್ರಿಕ ನೈಪುಣ್ಯವನ್ನು ಮರೆಯುತ್ತಿದ್ದಾರೆ. ಇದರಿಂದಲೇ ಸರ್ಕಾರಿ ಹಾಗೂ ಖಾಸಗಿ ಕಟ್ಟಡ– ಕಾಮಗಾರಿಗಳ ವಿನ್ಯಾಸ, ಗುಣಮಟ್ಟದಲ್ಲಿ ಬಹಳ ವ್ಯತ್ಯಾಸ ಇರುತ್ತದೆ’ ಎಂದರು.

‘ಸರ್ಕಾರದ ಇಲಾಖೆಗಳಲ್ಲಿ ಎಂಜಿನಿಯರ್‌ಗಳು ಒತ್ತಡಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ವೈದ್ಯರು, ವಕೀಲರಿಗೆ ಇರುವಂತಹ ವೃತ್ತಿಪರ ಕಾಯ್ದೆ ಎಂಜಿನಿಯರ್‌ಗಳಿಗೂ ಅಗತ್ಯವಿದೆ. ಎಸಿಸಿಇ (ಐ) ಸಂಸ್ಥೆ ರಾಜ್ಯದ ಎಲ್ಲ ಭಾಗಗಳ ಎಂಜಿನಿಯರ್‌ಗಳ ಸಲಹೆಗಳನ್ನು ಕ್ರೋಡೀಕರಿಸಿ ನೀಡುತ್ತಿದೆ. ಇದನ್ನು ಕಾನೂನು ಇಲಾಖೆ ಅಧಿಕಾರಿ ಗಳೊಂದಿಗೆ ಚರ್ಚಿಸಿ, ಇತರೆ ರಾಜ್ಯಗಳಲ್ಲಿರುವ ಕಾಯ್ದೆಗಳನ್ನು ಪರಾಮರ್ಶಿಸಿ, ಸಚಿವ ಸಂಪುಟದ ಒಪ್ಪಿಗೆ ಪಡೆದು ಮುಂದಿನ ವಿಧಾನಮಂಡಲ ಅಧಿವೇಶನದಲ್ಲಿ ಮಸೂದೆ ಮಂಡಿಸಲಾಗುವುದು’ ಎಂದರು.

ಎಸಿಸಿಇ (ಐ) ಬೆಂಗಳೂರು ಕೇಂದ್ರದ ಅಧ್ಯಕ್ಷ ನಾಗೇಶ್ ಪುಟ್ಟಸ್ವಾಮಿ, ಕಾರ್ಯದರ್ಶಿ ಗುರುರಾಜ ಹೆಗ್ಡೆ, ಖಜಾಂಚಿ ಟಿ.ಎಸ್. ರಾಜಗೋಪಾಲನ್ ಭಾಗವಹಿಸಿದ್ದರು.

‘ಪ್ರಜಾವಾಣಿ’ಯ 9 ಪತ್ರಕರ್ತರಿಗೆ ಕೆಯುಡಬ್ಲ್ಯುಜೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ನೀಡುವ 2022-23ನೇಸಾಲಿನವಾರ್ಷಿಕ ಪ್ರಶಸ್ತಿಗಳಿಗೆ ‘ಪ್ರಜಾವಾಣಿ’ಯ ಒಂಬತ್ತು ಪತ್ರಕರ್ತರು ಭಾಜನರಾಗಿದ್ದಾರೆ.

ಚಂದ್ರಹಾಸ ಹಿರೇಮಳಲಿ– ಬಿ.ಎಸ್. ವೆಂಕಟರಾಂ ಪ್ರಶಸ್ತಿ (ಅತ್ಯುತ್ತಮ ಸ್ಕೂಪ್ ವರದಿ), ಎಂ.ಎನ್.ಯೋಗೇಶ್– ಪಟೇಲ್ ಭೈರಹನುಮಯ್ಯ ಪ್ರಶಸ್ತಿ (ಅತ್ಯುತ್ತಮ ಮಾನವೀಯ ವರದಿ), ಶಶಿಕಾಂತ್ ಎಸ್.ಶಂಬಳ್ಳಿ ಹಾಗೂ ಪ್ರಕಾಶ್ ಬಾಳಕ್ಕನವರ್–ಬಿ.ಜಿ.ತಿಮ್ಮಪ್ಪಯ್ಯ ಪ್ರಶಸ್ತಿ (ಆರ್ಥಿಕ ದುರ್ಬಲ ವರ್ಗದವರ ಕುರಿತ ವರದಿ), ಸಿದ್ದು ಆರ್.ಜಿ.ಹಳ್ಳಿ–ಟಿ.ಕೆ. ಮಲಗೊಂಡ ಪ್ರಶಸ್ತಿ (ಅತ್ಯುತ್ತಮ ತನಿಖಾ ವರದಿ), ರಾಘವೇಂದ್ರ ತೊಗರ್ಸಿ–ಮಂಗಳ ಎಂ.ಸಿ.ವರ್ಗಿಸ್ ಪ್ರಶಸ್ತಿ (ವಾರ ಪತ್ರಿಕೆ ವಿಭಾಗ), ತಾಜುದ್ದೀನ್ ಅಜಾದ್–ಬಂಡಾಪುರ ಮುನಿರಾಜು ಸ್ಮಾರಕ ಪ್ರಶಸ್ತಿ (ಅತ್ಯುತ್ತಮ ಸುದ್ದಿ ಛಾಯಾಚಿತ್ರಕ್ಕೆ), ಪವನ್ ಕುಮಾರ್. ಎಚ್–ಕೆ.ಎನ್.ಸುಬ್ರಮಣ್ಯ ಪ್ರಶಸ್ತಿ (ಇಂಗ್ಲಿಷ್ ಪತ್ರಿಕೆಯ ವರದಿ), ಪ್ರಕಾಶ್ ಮಸ್ಕಿ–ವಿಶೇಷ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ವನ್ಯಪ್ರಾಣಿಗಳ ಕುರಿತ ಅತ್ಯುತ್ತಮ ಲೇಖನಕ್ಕೆ ಪರಿಸರವಾದಿ ಅಖಿಲೇಶ್ ಚಿಪ್ಪಳಿ ಅವರಿಗೆ ಆರ್.ಎಲ್. ವಾಸುದೇವರಾವ್ ಪ್ರಶಸ್ತಿ ಲಭಿಸಿದೆ. ದಾವಣಗೆರೆಯಲ್ಲಿ ಫೆ.3 ಮತ್ತು 4ರಂದು ನಡೆಯುವ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಎಂದು ತಿಳಿಸಿದ್ದಾರೆ.

‘ಶ್ವೇತ ಪತ್ರ’ಕ್ಕೆ ಸರ್ಕಾರ ತಯಾರಿ

ಒಂದನೇ ಪುಟದಿಂದ

ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ನೇತೃತ್ವದ ಅಧಿಕಾರಿಗಳ ತಂಡ 2018ರಿಂದ ಈವರೆಗಿನ ಆರ್ಥಿಕ ಪರಿಸ್ಥಿತಿಗೆ ಸಂಬಂಧಿಸಿದ ಅಂಕಿಅಂಶಗಳ ಶೋಧದಲ್ಲಿ ತೊಡಗಿದೆ.

ಅನ್ಯಾಯ ಬಿಂಬಿಸುವ ಮಾಹಿತಿ: ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರಬೇಕಿದ್ದ ಅನುದಾನ ಮತ್ತು ನೆರವಿನಲ್ಲಿ ಆಗಿರುವ ಕಡಿತ, ತೆರಿಗೆ ಹಂಚಿಕೆಯಲ್ಲೂ ಆಗಿರುವ ಅನ್ಯಾಯವನ್ನು ಶ್ವೇತಪತ್ರ ಪ್ರಮುಖವಾಗಿ ಬಿಂಬಿಸಲಿದೆ.


2018ರಲ್ಲಿ ಕೇಂದ್ರ ಸರ್ಕಾರದ ಬಜೆಟ್ ಗಾತ್ರ ₹25 ಲಕ್ಷ ಕೋಟಿಗಳಷ್ಟಿತ್ತು. ಆಗ, ಕರ್ನಾಟಕಕ್ಕೆ ಕೇಂದ್ರದಿಂದ ₹50,000 ಕೋಟಿ ಅನುದಾನ ದೊರಕಿತ್ತು. ಈಗ ಕೇಂದ್ರದ ಬಜೆಟ್ ಗಾತ್ರ ₹45 ಲಕ್ಷ ಕೋಟಿ ತಲುಪಿದೆ. ಈಗಲೂ ಕೇಂದ್ರದಿಂದ ಕರ್ನಾಟಕಕ್ಕೆ ಲಭಿಸುತ್ತಿರುವ ಅನುದಾನದ ಮೊತ್ತ ₹50,000 ಕೋಟಿಯ ಆಸುಪಾಸಿನಲ್ಲೇ ಇದೆ. ಬಜೆಟ್ ಗಾತ್ರದ ಹೆಚ್ಚಳಕ್ಕೆ ತಕ್ಕಂತೆ ಅನುದಾನವೂ ಏರಿಕೆಯಾಗಬೇಕಿತ್ತು. ಈ ವಿಷಯದಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯ ಏನು ಎಂಬ ಮಾಹಿತಿ ಶ್ವೇತಪತ್ರದಲ್ಲಿ ಇರಲಿದೆ ಎಂದು ಮೂಲಗಳು ತಿಳಿಸಿವೆ.

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಗೆ ತರುವ ಮುನ್ನ ರಾಜ್ಯದ ತೆರಿಗೆ ಬೆಳವಣಿಗೆ ದರ ಶೇಕಡ 16ರಷ್ಟಿತ್ತು. ಜಿಎಸ್‌ಟಿ ಜಾರಿಯಾದ ಬಳಿಕ ತೆರಿಗೆ ಬೆಳವಣಿಗೆ ದರ ಶೇ 9ಕ್ಕೆ ಕುಸಿದಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಆರ್ಥಿಕವಾಗಿ ನಷ್ಟವಾಗಿದೆ. ಈ ನಷ್ಟವನ್ನು ಭರಿಸಬೇಕಿದ್ದ ಕೇಂದ್ರ ಸರ್ಕಾರ, ರಾಜ್ಯದ ನ್ಯಾಯಯುತ ಜಿಎಸ್‌ಟಿ ಪಾಲನ್ನೂ ನೀಡದೆ ವಂಚಿಸುತ್ತಿದೆ ಎಂಬುದನ್ನು ಬಿಂಬಿಸುವ ಮಾಹಿತಿಯೂ ಶ್ವೇತಪತ್ರದಲ್ಲಿ ಇರಲಿದೆ ಎಂದು ಗೊತ್ತಾಗಿದೆ.

‘ಜಯದೇವ’ ಪ್ರಭಾರ ನಿರ್ದೇಶಕರಾಗಿ ರವೀಂದ್ರನಾಥ್

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ ಡಾ.ಕೆ.ಎಸ್. ರವೀಂದ್ರನಾಥ್ ನೇಮಕಗೊಂಡಿದ್ದಾರೆ.

ಡಾ.ಸಿ.ಎನ್. ಮಂಜುನಾಥ್ ಅವರ ಅವಧಿ ಜ.31ರಂದು ಮುಕ್ತಾಯಗೊಂಡಿರುವುದರಿಂದ ಸರ್ಕಾರ ಈ ನೇಮಕಾತಿ ಮಾಡಿ, ಆದೇಶ ಹೊರಡಿಸಿದೆ. ಈ ನೇಮಕಾತಿ ಮುಂದಿನ ಆದೇಶದವರೆಗೆ ಜಾರಿಯಲ್ಲಿ ಇರಲಿದೆ. ಡಾ.ಕೆ.ಎಸ್.ರವೀಂದ್ರನಾಥ್ ಅವರು ಈ ಹಿಂದೆ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ಕುಲಪತಿಯಾಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ್ದರು. ಸದ್ಯ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಂಸ್ಥೆಯ ನಿರ್ದೇಶಕ ಹುದ್ದೆಗೆ ಜ.12ರಂದು ಪ್ರಕಟಣೆ ಹೊರಡಿಸಿದ್ದ ವೈದ್ಯಕೀಯ ಶಿಕ್ಷಣ ಇಲಾಖೆ, ಅರ್ಜಿ ಸಲ್ಲಿಕೆಗೆ ಜ.19 ರವರೆಗೆ ಕಾಲಾವಕಾಶ ನೀಡಿತ್ತು. ಒಟ್ಟು 22 ಅರ್ಜಿಗಳಲ್ಲಿ 11 ಅರ್ಜಿಗಳ ಕಿರು ಪಟ್ಟಿಯನ್ನು ಇಲಾಖೆ ತಯಾರಿಸಿತ್ತು. ಆದರೆ, ಪೂರ್ಣಾವಧಿ ನಿರ್ದೇಶಕರ ನೇಮಕಾತಿ ಪ್ರಕ್ರಿಯೆ ನಡೆಸಿಲ್ಲ.



ಸುಭಾಷಿತ

ನಿಮ್ಮ ಜೀವನದ ಅತ್ಯಂತ ಸುಂದರ ದಿನವಾಗುವುದಕ್ಕೆ ಪ್ರತಿ ದಿನಕ್ಕೂ ಒಂದು ಅವಕಾಶ ಕೊಡಿ.

-ಮಾರ್ಕ್ ಟ್ವೈನ್

ಕೆಪಿಎಸ್‌ಸಿ: ಹಳಿ ತಪ್ಪಿದ ಆಡಳಿತ ತುರ್ತು ಕ್ರಮ ಅಗತ್ಯ

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಕಾರ್ಯವೈಖರಿ, ಸುಧಾರಿಸಲು ಸಾಧ್ಯವಿಲ್ಲ ಎನ್ನುವ ಮಟ್ಟಿಗೆ ಹದಗೆಟ್ಟಿದೆ. ಸ್ವಜನಪಕ್ಷಪಾತ, ಪರೀಕ್ಷಾ ಅಕ್ರಮ, ನೇಮಕಾತಿಯಲ್ಲಿ ಎಡವಟ್ಟುಗಳಂತಹ ಕಾರಣಗಳಿಗಾಗಿಯೇ ಆಯೋಗವು ಸದಾ ಸುದ್ದಿಯಲ್ಲಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಯಾವುದೇ ನೇಮಕಾತಿ ಪ್ರಕ್ರಿಯೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಿದ ನಿದರ್ಶನಗಳು ಇಲ್ಲ. ಯಾವ ನೇಮಕಾತಿ ಪ್ರಕ್ರಿಯೆಯೂ ವಿವಾದದಿಂದ ಹೊರತಾಗಿಲ್ಲ ಮತ್ತು ನ್ಯಾಯಾಲಯದ ಮೆಟ್ಟಿಲೇರುವ ಪ್ರಕರಣಗಳೇ ಹೆಚ್ಚು. ಇವುಗಳೊಂದಿಗೆ ಈಗ ಅಂತಃಕಲಹವೂ ಸೇರಿಕೊಂಡಿದೆ. ಆಯೋಗದ ಆಯಕಟ್ಟಿನ ಸ್ಥಾನಗಳಲ್ಲಿ ಕುಳಿತವರ ನಡುವಣ ಒಳಜಗಳ ತಾರಕಕ್ಕೆ ಏರಿದೆ. ಅಧ್ಯಕ್ಷ, ಸದಸ್ಯರು ಮತ್ತು ಕಾರ್ಯದರ್ಶಿ ಮಧ್ಯದ ಮುಸುಕಿನ ಗುದ್ದಾಟ ಬೀದಿಗೆ ಬಂದಿದೆ. ಅವರ ವಿರುದ್ಧ ಇವರು, ಇವರ ವಿರುದ್ಧ ಅವರು ದೂರು ನೀಡುವುದು ಸಾಮಾನ್ಯ ಎಂಬಂತಾಗಿದೆ. ಸಾಂವಿಧಾನಿಕ ಸಂಸ್ಥೆಯೊಂದರ ಆಡಳಿತ ಈ ಮಟ್ಟಿಗೆ ಹಳಿ ತಪ್ಪುವುದು ಆ ಸಂಸ್ಥೆಗೆ ಮತ್ತು ಸರ್ಕಾರಕ್ಕೆ ಶೋಭೆ ತರುವ ವಿಚಾರ ಅಲ್ಲ. ಆಯೋಗದ ಕಾರ್ಯದರ್ಶಿ ಮತ್ತು ಅಧ್ಯಕ್ಷರ ನಡುವೆ ಈ ಹಿಂದೆಯೂ ಶೀತಲಸಮರ ನಡೆದಿತ್ತು. ಪರಿಣಾಮವಾಗಿ, ಕಾರ್ಯದರ್ಶಿಯವರನ್ನು ವರ್ಗಾವಣೆ ಮಾಡಲಾಗಿತ್ತು. ಆ ನಂತರವೂ ಆಯೋಗದ ಆರೋಗ್ಯ ಸುಧಾರಿಸಿಲ್ಲ. ಬದಲಿಗೆ ಮತ್ತಷ್ಟು ಕೆಟ್ಟಿದೆ. ಉದ್ಯೋಗ ಆಕಾಂಕ್ಷಿಗಳ ಹಿತದೃಷ್ಟಿಯಿಂದ ಈ ಒಳಜಗಳಕ್ಕೆ ಕಡಿವಾಣ ಹಾಕುವುದು ಸರ್ಕಾರದ ತಕ್ಷಣದ ಆದ್ಯತೆಯಾಗಬೇಕು. ಕರ್ನಾಟಕ ಲೋಕಸೇವಾ ಆಯೋಗದ ಬಗ್ಗೆ ಯುವಪೀಳಿಗೆ ಈಗಾಗಲೇ ವಿಶ್ವಾಸ ಕಳೆದುಕೊಂಡಿದೆ. ಅವರಲ್ಲಿ ಪುನಃ ವಿಶ್ವಾಸ ಚಿಗುರಬೇಕು ಎಂದಾದರೆ ಕೆಪಿಎಸ್‌ಸಿಗೆ ಮಹತ್ತರವಾದ ಶಸ್ತ್ರಚಿಕಿತ್ಸೆಯನ್ನೇ ಮಾಡಬೇಕಾಗಿದೆ. ಆಯೋಗವನ್ನು ಈಗಿರುವ ಸ್ಥಿತಿಯಲ್ಲಿಯೇ ಉಳಿಸಿಕೊಳ್ಳುವುದರ ಬದಲು ಅದರ ಬಾಗಿಲು ಮುಚ್ಚುವುದು ಒಳಿತು ಎಂದು ಹೇಳಬೇಕಾಗಿ ಬಂದಿರುವುದು ದುರದೃಷ್ಟಕರ.



ಕರ್ನಾಟಕ ಲೋಕಸೇವಾ ಆಯೋಗದ ಶುದ್ಧೀಕರಣ ಕೆಲಸವನ್ನು ಪೂರ್ಣಗೊಳಿಸಲು ಈಗಲಾದರೂ ಇಚ್ಛಾಶಕ್ತಿ ತೋರಬೇಕಿದೆ

ಈಗ ಆಯೋಗದ ಕಾರ್ಯದರ್ಶಿ ಕೆ.ಎಸ್. ಲತಾಕುಮಾರಿ ಅವರು ರಾಜ್ಯಪಾಲರಿಗೆ ಪತ್ರ ಬರೆದು, ಆಯೋಗದ ಅಧ್ಯಕ್ಷ ಮತ್ತು ನಾಲ್ಕು ಮಂದಿ ಸದಸ್ಯರನ್ನು ವಜಾ ಮಾಡುವಂತೆ ಒತ್ತಾಯಿಸಿದ್ದಾರೆ. ಸಂವಿಧಾನದ ವಿಧಿ 317ರ ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ ಎಂದು ವರದಿಯಾಗಿದೆ. ಲೋಕಸೇವಾ ಆಯೋಗದ ಕಾರ್ಯದರ್ಶಿಯೊಬ್ಬರು ಅಧ್ಯಕ್ಷ ಮತ್ತು ಸದಸ್ಯರ ವಜಾಕ್ಕೆ ಒತ್ತಾಯಿಸಿ ರಾಜ್ಯಪಾಲರಿಗೆ ದೂರು ನೀಡಿರುವುದು ಇತಿಹಾಸದಲ್ಲಿ ಇದೇ ಮೊದಲು. ಆಯೋಗದ ಕಾರ್ಯದರ್ಶಿಯವರು ಅಧ್ಯಕ್ಷ ಮತ್ತು ಸದಸ್ಯರ ವಿರುದ್ಧ ಮಾಡಿರುವ ಆರೋಪಗಳು ಅತ್ಯಂತ ಗುರುತರವಾಗಿವೆ. ಆಯ್ಕೆಪಟ್ಟಿಗೆ ಅನುಮೋದನೆ ನೀಡದಿರುವುದರಿಂದ ಹಿಡಿದು ಪರೀಕ್ಷೆಗಳಲ್ಲಿ ದುರಾಚಾರ ತಡೆಗಟ್ಟಲು ಕಾರ್ಯದರ್ಶಿ ಕೈಗೊಳ್ಳುವ ಕ್ರಮಗಳಿಗೆ ಒಪ್ಪಿಗೆ ಸೂಚಿಸದೇ ಇರುವವರೆಗೆ ಅಧ್ಯಕ್ಷ ಮತ್ತು ಕೆಲವು ಸದಸ್ಯರು ತೊಡರುಗಾಲಾಗಿದ್ದಾರೆ, ಇದರಿಂದಾಗಿ ನೇಮಕಾತಿ ಪ್ರಕ್ರಿಯೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ ಎಂದು ಕಾರ್ಯದರ್ಶಿ ದೂರು ನೀಡಿದ್ದು, ಇವೆಲ್ಲವೂ ನಿಜವಾಗಿದ್ದರೆ ಆಯೋಗದ ಅಧ್ಯಕ್ಷ ಮತ್ತು ಸದಸ್ಯರ ನಡವಳಿಕೆ ಕಾನೂನುಬಾಹಿರ ಮತ್ತು ಕರ್ತವ್ಯಲೋಪದ ವ್ಯಾಪ್ತಿಗೆ ಒಳಪಡುತ್ತದೆ. ಅಧ್ಯಕ್ಷ ಮತ್ತು ಸದಸ್ಯರ ಇಂತಹ ನಡವಳಿಕೆಯಲ್ಲಿ ಉದ್ಯೋಗ ಆಕಾಂಕ್ಷಿಗಳ ಹಿತ ಲವಲೇಶವೂ ಕಾಣುತ್ತಿಲ್ಲ. ಈ ಬಗ್ಗೆ ರಾಜ್ಯಪಾಲರು, ರಾಜ್ಯ ಸರ್ಕಾರ ಕಠಿಣ ತೀರ್ಮಾನ ಕೈಗೊಳ್ಳುವುದು ಅನಿವಾರ್ಯ. ಅಧ್ಯಕ್ಷ ಮತ್ತು ಸದಸ್ಯರ ವಿರುದ್ಧ ಕಾರ್ಯದರ್ಶಿ ಮಾಡಿರುವ ಆರೋಪಗಳು ಕೂಡ ನಿಕಷಕ್ಕೆ ಒಳಪಡಬೇಕು. ಸತ್ಯಾಂಶ ಹೊರಬರಬೇಕು. ಇದೇನೇ ಇರಲಿ, ಆಯೋಗದ ಈ ವಿದ್ಯಮಾನಗಳ ಬಗ್ಗೆ ತಕ್ಷಣ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುವುದು ಸರ್ಕಾರದ ಕರ್ತವ್ಯ. ಲೋಕಸೇವಾ ಆಯೋಗವನ್ನು ಸರಿದಾರಿಗೆ ತರದೇ ಇದ್ದರೆ ಕರ್ನಾಟಕದ ಮರ್ಯಾದೆ ಹರಾಜಾಗುವುದರಲ್ಲಿ ಅನುಮಾನವಿಲ್ಲ.

ಸಾಂವಿಧಾನಿಕ ಸಂಸ್ಥೆಯೊಂದರಲ್ಲಿ ಹೀಗೆಲ್ಲ ನಡೆಯುವುದು ಅಕ್ಷಮ್ಯ. ರಾಜ್ಯದ ಲಕ್ಷಾಂತರ ಯುವಕ-ಯುವತಿಯರ ಆಶಾಕಿರಣವಾಗಬೇಕಿದ್ದ ಆಯೋಗವು ಅವರ ಭವಿಷ್ಯಕ್ಕೆ ಕಂಟಕವಾಗಿ ಪರಿಣಮಿಸಿರುವುದು ವಿಷಾದನೀಯ. ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಇರುವಂತೆ ನೋಡಿಕೊಳ್ಳುವುದು, ಅದನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವುದು, ಭ್ರಷ್ಟಾಚಾರ ನುಸುಳದಂತೆ ಎಚ್ಚರ ವಹಿಸುವುದು, ಪರೀಕ್ಷೆಗಳಲ್ಲಿ ಅಕ್ರಮಗಳನ್ನು ತಡೆಯುವುದು ಆಯೋಗದ ಆದ್ಯ ಕರ್ತವ್ಯ. ಅದಕ್ಕೆ ತಿಲಾಂಜಲಿ ಕೊಟ್ಟು, ಉದ್ಯೋಗ ಆಕಾಂಕ್ಷಿಗಳ ನಿದ್ದೆಗೆಡಿಸುತ್ತಿರುವುದು ಅತ್ಯಂತ ಬೇಸರದ ಸಂಗತಿ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಮೊದಲ ಅವಧಿಯಲ್ಲಿ ಆಯೋಗಕ್ಕೆ ಕಾಯಕಲ್ಪ ನೀಡುವುದಕ್ಕಾಗಿಯೇ ಪಿ.ಸಿ.ಹೋಟಾ ಸಮಿತಿ ರಚಿಸಿದ್ದರು. ಆ ಸಮಿತಿಯ ಶಿಫಾರಸುಗಳನ್ನು ಬಹುತೇಕ ಒಪ್ಪಿಕೊಂಡಿದ್ದರು. ಈಗ ಪುನಃ ಅವರೇ ಮುಖ್ಯಮಂತ್ರಿಯಾಗಿದ್ದಾರೆ. ಶುದ್ಧೀಕರಣ ಕೆಲಸವನ್ನು ಈಗಲಾದರೂ ಪೂರ್ಣಗೊಳಿಸಿ, ಹೊಸ ಶಕೆಗೆ ನಾಂದಿ ಹಾಡಬೇಕಿದೆ.

ಬಿಹಾರ ರಾಜಕಾರಣದಲ್ಲಿ ಬಿಜೆಪಿ, ಆರ್‌ಜೆಡಿ ಎರಡಕ್ಕೂ ಈ 'ಪಲ್ಟು ಕುಮಾರ್' ಅನಿವಾರ್ಯ

ನಿತೀಶ್ ನಡೆ ಹೇಳುವುದೇನು?



ವಿಶ್ಲೇಷಣೆ

ಬಿ.ಎಸ್.ಅರುಣ್

ಅಧಿಕಾರಕ್ಕಾಗಿ ಬೇರೆ ಬೇರೆ ಪಕ್ಷಗಳ ಜೊತೆ ಪದೇಪದೇ ಹೊಂದಾಣಿಕೆ ಮಾಡಿಕೊಳ್ಳುವ ಜೆಡಿಯು ಅಧ್ಯಕ್ಷ ಹಾಗೂ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್, ಈಗ ಮತ್ತೆ ಬಿಜೆಪಿ ನೇತೃತ್ವದ ಎನ್‌ಡಿಎ ಕೈ ಹಿಡಿದಿದ್ದಾರೆ. ಹಾಗೆ ನೋಡಿದರೆ, ಈ ಬೆಳವಣಿಗೆಯಿಂದ ಪ್ರಸಕ್ತ ಚುನಾವಣಾ ಸಮಯದಲ್ಲಿ ಹಾಗೂ ರಾಜಕೀಯ ಚದುರಂಗದಾಟದಲ್ಲಿ ಬಿಜೆಪಿಗೇ ಹೆಚ್ಚು ಅನುಕೂಲ. ಇಂಗ್ಲಿಷ್‌ನಲ್ಲಿ ವಿನ್-ವಿನ್ ಸಿಚುಯೇಷನ್ ಎನ್ನುತ್ತಾರಲ್ಲ, ಹಾಗೆ.

ಮುಖ್ಯಮಂತ್ರಿಯಾಗಿ ಜ. 28ರಂದು ಒಂಬತ್ತನೇ ಬಾರಿಗೆ ಪ್ರಮಾಣವಚನ ಸ್ವೀಕರಿಸಿದ ನಿತೀಶ್, ಹಿಂದಿನ 10 ವರ್ಷಗಳಲ್ಲಿ 5 ಬಾರಿ ತಮ್ಮ ಮಿತ್ರಪಕ್ಷಗಳನ್ನು ಬದಲಿಸಿದ್ದಾರೆ. ಇದಕ್ಕಾಗಿಯೇ ಅವರನ್ನು 'ಪಲ್ಟು ಕುಮಾರ್' (ಮತ್ತೆ ಮತ್ತೆ ಪಕ್ಷಾಂತರ ಮಾಡುವವನು) ಎಂದು ಹಿಂದಿಯಲ್ಲಿ ಮೂದಲಿಸಲಾಗುತ್ತದೆ. ಆದರೆ ತಾನು ಬೇರೆ ಪಕ್ಷಗಳಂತಲ್ಲ (ಪಾರ್ಟಿ ವಿಥ್ ಎ ಡಿಫರೆನ್ಸ್) ಎಂದು ಕರೆದುಕೊಳ್ಳುವ ಬಿಜೆಪಿ, ಈಗಿನದೂ ಸೇರಿದಂತೆ ಎರಡು ಬಾರಿ ಜೆಡಿಯು ಸಖ್ಯ ಬೆಳೆಸಿದೆ. ಲಾಲೂ ಪ್ರಸಾದ್ ಅವರ ಆರ್‌ಜೆಡಿ ಕೂಡ ನಿತೀಶ್ ಅವರ ಜೊತೆ ಎರಡು ಬಾರಿ ಕೈ ಜೋಡಿಸಿದೆ.

ನಿತೀಶ್ ಜೊತೆಗಿನ ಮೈತ್ರಿಯಿಂದ ಬಿಜೆಪಿಗೆ ಹೇಗೆ ಅನುಕೂಲವಾಗುತ್ತದೆ? ಒಂದು, ಲೋಕಸಭೆ ಚುನಾವಣೆಗೆ ಕೆಲವೇ ವಾರಗಳು ಬಾಕಿ ಇರುವಾಗ, ಉತ್ತರ ಭಾರತದ ಹಿಂದಿ ಮಾತನಾಡುವ ಪ್ರಮುಖ ರಾಜ್ಯದಲ್ಲಿ ಬಿಜೆಪಿಗೆ ಅಧಿಕಾರದಲ್ಲಿ ಪಾಲು ಸಿಕ್ಕಿದೆ. ಎರಡು, ಈ ಬೆಳವಣಿಗೆಯಿಂದ ಬಿಹಾರದಲ್ಲಿ ಬಿಜೆಪಿ- ಜೆಡಿಯು ಮೈತ್ರಿಕೂಟಕ್ಕೆ ಲೋಕಸಭೆ ಚುನಾವಣೆಯಲ್ಲಿ ಒಳ್ಳೆಯ ಫಲಿತಾಂಶ ದೊರೆಯುವ ಸಾಧ್ಯತೆಯಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಒಟ್ಟು 40 ಸ್ಥಾನಗಳ ಪೈಕಿ 39ರಲ್ಲಿ ಈ ಕೂಟ ಜಯಭೇರಿ ಬಾರಿಸಿತ್ತು. ತಾನು ಸ್ಪರ್ಧಿಸಿದ್ದ ಎಲ್ಲಾ 17 ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿದ್ದರೆ, ಜೆಡಿಯು ಸ್ಪರ್ಧಿಸಿದ್ದ 17ರಲ್ಲಿ 16 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಈ ಮೈತ್ರಿಕೂಟವನ್ನು ನಿತೀಶ್ 2020ರಲ್ಲಿ ತೊರೆದಾದ ನಂತರ ಬಿಹಾರದಲ್ಲಿ ಬಿಜೆಪಿಯ ಸ್ಥಿತಿ ಅಷ್ಟೇನೂ ಆಶಾದಾಯಕವಾಗಿ ಇರಲಿಲ್ಲ ಎಂದೇ ಹೇಳಲಾಗುತ್ತಿತ್ತು. ಆದರೆ ಈಗ ನಿತೀಶ್ ಅವರ 'ಸ್ವಿಚ್ ಶಾಟ್'ನಿಂದ ಪರಿಸ್ಥಿತಿ ಬದಲಾಗಲಿದೆ ಎನ್ನಲಾಗಿದೆ.

ಮೂರನೆಯದು, ಜೆಡಿಯುವನ್ನು ತನ್ನೆಡೆಗೆ ಸೆಳೆದ ಎನ್‌ಡಿಎ, ಪ್ರತಿಸ್ಪರ್ಧಿ 'ಇಂಡಿಯಾ' ಮೈತ್ರಿಕೂಟಕ್ಕೆ ಭಾರಿ ಹೊಡೆತ ಕೊಡುವುದರಲ್ಲಿ ಯಶಸ್ವಿ ಆಗಿದೆ. ಈ ಏಟಿನಿಂದ ಚೇತರಿಸಿಕೊಳ್ಳಲು ಮಿತ್ರಕೂಟಕ್ಕೆ ಖಂಡಿತ ಕಷ್ಟವಾಗಲಿದೆ. ಅಷ್ಟೇ ಅಲ್ಲ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ 'ಪೂರ್ವದಿಂದ ಪಶ್ಚಿಮಕ್ಕೆ' ಯಾತ್ರೆಗೂ ಹಿನ್ನಡೆಯಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಈ ಬೆಳವಣಿಗೆಯು ಇಂಡಿಯಾ ಬಣದ ಸದಸ್ಯರ ಸಂಖ್ಯೆಯನ್ನು ತಗ್ಗಿಸಿರುವುದಷ್ಟೇ ಅಲ್ಲ ವಿರೋಧಿ ನಾಯಕರ ಮನಃಸ್ಥೈರ್ಯವನ್ನೂ ಕುಗ್ಗಿಸಿದೆ.

ಕೊನೆಯದಾಗಿ, ಈ ಹೊಸ ಅಧ್ಯಾಯದಿಂದ, ವಿಭಿನ್ನ ಪ್ರಾದೇಶಿಕ ಪಕ್ಷಗಳು ಒಟ್ಟಿಗೇ ಇರಲು ಸಾಧ್ಯವಿಲ್ಲ ಹಾಗೂ ಕಾಂಗ್ರೆಸ್‌ಗೆ ಮೈತ್ರಿಕೂಟವನ್ನು ಮುನ್ನಡೆಸುವ ಸಾಮರ್ಥ್ಯ ಇಲ್ಲ ಎಂದು ಬಿಜೆಪಿ ಪ್ರಚಾರದಲ್ಲಿ ತೊಡಗುವುದು ನಿಶ್ಚಿತ. ಹಾಗೆಂದು, ಈ ಪಲ್ಟಿಯ ಲಾಭಕಾರ ಬರೇ ಬಿಜೆಪಿಯಲ್ಲ, ನಿತೀಶ್ ಕೂಡ ಹೌದು. 72 ವರ್ಷ ವಯಸ್ಸಿನ ನಿತೀಶ್ 2014ರಲ್ಲಿ ಕೆಲವು ತಿಂಗಳು ಹೊರತು-ಪಡಿಸಿದರೆ, 2005ರಿಂದಲೂ ಬಿಹಾರದ ಮುಖ್ಯಮಂತ್ರಿಯಾಗಿದ್ದಾರೆ. ಈಗಲೂ ಮುಖ್ಯಮಂತ್ರಿಯಾಗಿ ಮುಂದುವರಿಯುವುದರ ಜೊತೆಗೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ ಒಳ್ಳೆಯ ಫಲಿತಾಂಶವನ್ನು ಅವರು ಎದುರು ನೋಡಬಹುದು.

ಆದರೆ ಇಲ್ಲಿ ಒಂದು ಪ್ರಶ್ನೆಯಿದೆ. ಒಂದು ವೇಳೆ ಮುಂಬರುವ ಲೋಕಸಭಾ ಚುನಾವಣಾ ಅಖಾಡದಲ್ಲಿ ಬಿಜೆಪಿ ಜಯಭೇರಿ ಬಾರಿಸಿದ್ದೇ ಆದರೆ, ಚುನಾವಣೆ ನಂತರವೂ ನಿತೀಶ್ ಮುಖ್ಯಮಂತ್ರಿಯಾಗಿ ಮುಂದುವರಿಯುವರೇ? ಈ ಬಗ್ಗೆ ಸ್ಪಷ್ಟತೆ ಇಲ್ಲ. ಕೇಂದ್ರದಲ್ಲಿ ಮತ್ತೆ ಅಧಿಕಾರ ಹಿಡಿಯುವ ನಿರೀಕ್ಷೆಯಲ್ಲಿ-ರುವ ಬಿಜೆಪಿ, ಆಗ 'ಕೇಂದ್ರ ಸಚಿವರಾಗಿ ಬನ್ನಿ' ಎಂದು ನಿತೀಶ್ ಅವರ ಮೇಲೆ ಒತ್ತಡ ಹೇರಬಹುದು. ಇದು, ಬಿಹಾರದಲ್ಲಿ ಪ್ರಥಮ ಬಾರಿಗೆ ಬಿಜೆಪಿ ನಾಯಕರೊಬ್ಬರು ಮುಖ್ಯಮಂತ್ರಿ ಆಗುವುದಕ್ಕೆ ದಾರಿಯನ್ನು ಸುಗಮವಾಗಿ-ಸುತ್ತದೆ. ಬಿಹಾರ ವಿಧಾನಸಭೆಯ 243 ಸದಸ್ಯ ಬಲದಲ್ಲಿ ಬಿಜೆಪಿ 78 ಹಾಗೂ ಜೆಡಿಯು 45 ಸದಸ್ಯರನ್ನು ಹೊಂದಿವೆ.

ಬಿಹಾರ ರಾಜಕಾರಣದಲ್ಲಿ ನಿತೀಶ್ ಕುಮಾರ್ ಯಾಕಿಷ್ಟು ಪ್ರಮುಖರಾಗುತ್ತಾರೆ? ಯಾಕೆಂದರೆ, 1974-75ರ ಜೆ.ಪಿ. ಚಳವಳಿಯಿಂದ ಹೊರಹೊಮ್ಮಿದ ಈ ನಾಯಕನಿಲ್ಲದೇ ಬಿಜೆಪಿ ಅಥವಾ ಆರ್‌ಜೆಡಿಗೆ ಅಧಿಕಾರದ ಗದ್ದುಗೆ ಏರಲು 2000ದಿಂದ ಈಚೆಗೆ ಈವರೆಗೂ ಸಾಧ್ಯವಾಗಿಲ್ಲ. ಮುಖ್ಯಮಂತ್ರಿಯಾಗಿ 2005ರಿಂದಲೂ ಬಿಜೆಪಿ ಸಖ್ಯದಲ್ಲಿದ್ದ ನಿತೀಶ್, 2013ರಲ್ಲಿ ಕೇಸರಿ ಪಕ್ಷವನ್ನು ಬದಿಗೊತ್ತಿ 2014ರ ಲೋಕಸಭಾ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿದರು. ಅವರ ಜೆಡಿಯು ಉತ್ತಮ ಎನ್ನಬಹುದಾದ ಶೇ 15.8ರಷ್ಟು ಮತ ಗಳಿಸಿ, ತನಗೂ ಅಸ್ತಿತ್ವವಿದೆ ಎಂಬುದನ್ನು ಸಾಬೀತು ಮಾಡಿತು. ಅಷ್ಟೇ ಅಲ್ಲ, ತನ್ನ ಜೊತೆ ಹೊಂದಾಣಿಕೆ ಮಾಡಿಕೊಂಡರೆ ಜೆಡಿಯು ಪಾಲಿನ ಮತಗಳು ಮಿತ್ರಪಕ್ಷಕ್ಕೂ ಬರುವಂತೆ ಮಾಡುವುದಾಗಿ ನಿತೀಶ್ ತೋರಿಸಿಕೊಟ್ಟರು. ಇದರಿಂದ, ಇತರ ಎರಡು ಪಕ್ಷಗಳಲ್ಲಿ ಯಾವುದೇ ಪಕ್ಷ ಅಧಿಕಾರಕ್ಕೆ ಬರಲು ತಾನು ಅತ್ಯಗತ್ಯ ಎಂದು ಮನವರಿಕೆ ಮಾಡಿದರು. 2019ರ ಲೋಕಸಭೆ ಹಾಗೂ 2020ರ ವಿಧಾನಸಭೆ ಚುನಾವಣೆಗಳು ಇದನ್ನು ಸಾಬೀತು ಮಾಡಿವೆ.

ಬಿಹಾರದಲ್ಲಿ ನಿತೀಶ್ ಅವರನ್ನು 'ಸುಶಾಸನ್ ಬಾಬು' (ಒಳ್ಳೆಯ ಆಡಳಿತಗಾರ) ಎಂದೂ ಈ ಹಿಂದೆ ಕರೆದಿದ್ದುಂಟು. ತಮ್ಮ 2005- 10ರ ಅಧಿಕಾರದ ಅವಧಿಯಲ್ಲಿ ಈ ಸಮಾಜವಾದಿ ನಾಯಕ ಒಳ್ಳೆಯ ಆಡಳಿತವನ್ನು ಕೊಟ್ಟಿದ್ದರು. ಹಿಂದುಳಿದ ಕುರ್ಮಿ ಸಮುದಾಯದ ಈ ನಾಯಕ, ಯಾದವರನ್ನು ಹೊರತುಪಡಿಸಿದ ಹಿಂದುಳಿದ ವರ್ಗಗಳು, ಆರ್ಥಿಕವಾಗಿ ಹಿಂದುಳಿದವರು ಹಾಗೂ ಅತಿ ಹಿಂದುಳಿದ ಪರಿಶಿಷ್ಟ ಜಾತಿಗಳ ಮತಗಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಬಿಜೆಪಿ ಜೊತೆಗಿನ ಹೊಂದಾಣಿಕೆ ಈ ಬಣಕ್ಕೆ ಮೇಲ್ವರ್ಗದ ಮತ್ತು ಕೆಲವು ಬೇರೆ ಸಮುದಾಯಗಳ ಮತಗಳನ್ನು ತರುತ್ತದೆ. ಜೆಡಿಯು ಏನಾದರೂ ಆರ್‌ಜೆಡಿ ಜೊತೆ ಹೋದರೆ, ಆ ಗುಂಪಿಗೆ ಮುಸ್ಲಿಂ-ಯಾದವ ಸಮುದಾಯದ ಮತಗಳು (ಶೇ 30) ಸೇರ್ಪಡೆಯಾಗುತ್ತವೆ. ಹೀಗಾಗಿ, ನಿತೀಶ್ ಅವರನ್ನು ಈ ಎರಡೂ ಪಕ್ಷಗಳು ನಿರ್ಲಕ್ಷಿಸುವುದಿಲ್ಲ.

2000ನೇ ಇಸವಿಯಲ್ಲಿ ಬಿಹಾರವನ್ನು ವಿಭಜಿಸಿ ಜಾರ್ಖಂಡ್ ರಾಜ್ಯವನ್ನು ಸ್ಥಾಪಿಸಿದ ನಂತರ ಬಿಹಾರದಲ್ಲಿ ಎಂದೂ ಬಹುಮತದ ಸರ್ಕಾರ ಅಧಿಕಾರಕ್ಕೆ ಬಂದಿಲ್ಲ. ಇಲ್ಲಿ ಯಾವಾಗಲೂ ಅಧಿಕಾರಕ್ಕಾಗಿ ಮೂರು ಕುದುರೆಗಳ ಓಟ ನಡೆದೇ ಇರುತ್ತದೆ. ತಮ್ಮ ದೀರ್ಘ ಅಧಿಕಾರದ ಅವಧಿಯಲ್ಲಿ ಈ ಬತ್ತಳಿಕೆ ಅಥವಾ ದೌರ್ಬಲ್ಯವನ್ನು ಈ ನಾಯಕ ಚೆನ್ನಾಗಿಯೇ ಬಳಸಿಕೊಂಡಿದ್ದಾರೆ. ಅಲ್ಲದೆ, ತಮ್ಮ ಸುದೀರ್ಘ ಅಧಿಕಾರದ ಅವಧಿಯ ಹಾಗೂ ತಮ್ಮ ಪಕ್ಷದ ಕುಸಿಯುತ್ತಿರುವ ಬಲದ ಹೊರತಾಗಿಯೂ, ಜೆಡಿಯುವನ್ನು ಒಟ್ಟಿಗೇ ನಡೆಸುವಲ್ಲಿ ನಿತೀಶ್ ಯಶಸ್ವಿಯಾಗಿದ್ದಾರೆ.

ಮುಖ್ಯಮಂತ್ರಿಯಾಗುವ ಮುನ್ನ, ಎ.ಬಿ.ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಸಚಿವರಾಗಿದ್ದ ಈ ನಾಯಕ, ಹೋದ ವರ್ಷ ಇಂಡಿಯಾ ಗುಂಪು ಅಸ್ತಿತ್ವಕ್ಕೆ ಬರುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ತಾವು ಈ ಕೂಟದ ಅಧ್ಯಕ್ಷ ಅಥವಾ ಸಂಚಾಲಕ ಆಗಬಹುದು ಎಂದುಕೊಂಡಿದ್ದರು. ಅವರಿಗೆ ಪ್ರಧಾನಿ ಪದವಿಯ ಮೇಲೆ ಕಣ್ಣಿದ್ದಿರಲೂಬಹುದು. ಆದರೆ ಅವರ ಭಾನುವಾರದ ನಡೆ ಈ ಆಕಾಂಕ್ಷೆಗೆ ತೆರೆ ಎಳೆದಿದೆ.

ನಿತೀಶ್ ಪ್ರಥಮ ಬಾರಿಗೆ ಮುಖ್ಯಮಂತ್ರಿಯಾದದ್ದು 2000ನೇ ಇಸವಿಯಲ್ಲಿ. ಆದರೆ 7 ದಿನಗಳಲ್ಲೇ ಅವರು ಪದವಿ ತ್ಯಜಿಸಬೇಕಾಯಿತು. ನಂತರ 2005ರಲ್ಲಿ ಬಿಜೆಪಿ ಜೊತೆಗೆ ಸಂಬಂಧ ಬೆಳೆಸಿ ಮುಖ್ಯಮಂತ್ರಿಯಾದರು. 2013ರಲ್ಲಿ ಲಾಲೂ ಸಖ್ಯ ಬೆಳೆಸಿದರು. 2014ರಲ್ಲಿ ಏಕಾಂಗಿಯಾಗೇ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದರಾದರೂ 2015ರಲ್ಲಿ ಲಾಲೂ ಜೊತೆಗೆ ವಿಧಾನಸಭೆ ಚುನಾವಣೆ ಎದುರಿಸಿದರು. 2017ರಲ್ಲಿ ಮತ್ತೆ ಎನ್‌ಡಿಎ ತೆಕ್ಕೆಗೆ ಬಂದ ಅವರು, ಲಾಲೂ ಪ್ರಸಾದ್ ಅವರ ಪುತ್ರ ತೇಜಸ್ವಿ ಅವರ ವಿರುದ್ಧ ಭ್ರಷ್ಟಾಚಾರದ ಪ್ರಕರಣ ದಾಖಲಿಸಿದರು. 2019ರ ಲೋಕಸಭೆ ಹಾಗೂ 2020ರ ವಿಧಾನಸಭೆ ಚುನಾವಣೆಗಳನ್ನು ಕೇಸರಿ ಪಕ್ಷದ ಜೊತೆಗೂಡಿ ಎದುರಿಸಿದರು. ಆದರೆ ಬಳಿಕ ಬಿಜೆಪಿ ಸಖ್ಯ ತೊರೆದು ಆರ್‌ಜೆಡಿ ಜೊತೆ ಸೇರಿ ಅಧಿಕಾರಕ್ಕೆ ಬಂದರು. ಈಗ 2024ರಲ್ಲಿ ಲೋಕಸಭಾ ಚುನಾವಣೆಯ ಹೊತ್ತಿನಲ್ಲಿ, ಇಂಡಿಯಾ ಗುಂಪಿನಿಂದ ನೇರವಾಗಿ ಎನ್‌ಡಿಎ ಅಂಗಳಕ್ಕೆ ಜಿಗಿದಿದ್ದಾರೆ.



ಬಿಹಾರದಲ್ಲಿ ಮುಂದಿನ ವಿಧಾನಸಭೆ ಚುನಾವಣೆ 2025ರ ಕೊನೆಯಲ್ಲಿ ನಡೆಯಲಿದೆ. ಆಗ 'ಪಲ್ಟು ಕುಮಾರ್' ಮತ್ತೆ ಎನ್‌ಡಿಎ ತೊರೆದು ಆರ್‌ಜೆಡಿ ಜೊತೆಗೂಡುವರೇ? ಅವರು ನಡೆದುಬಂದಿರುವ ರಾಜಕೀಯ ಹಾದಿಯನ್ನು ನೋಡಿದರೆ ಅಂತಹ ಸಾಧ್ಯತೆಯೂ ಇಲ್ಲದಿಲ್ಲ!

ಚುರುಮುರಿ



ನಿದ್ದೆ ಗೆದ್ದ ಇಲಿ

• ನಾರಾಯಣ ರಾಯಚೂರ್

'ರೀ... ಈ ವರ್ಷದ ಫೆಬ್ರುವರಿ ತಿಂಗಳ ವಿಶೇಷ ಏನು ಹೇಳಿ?'

'ಕಾಲೇಜಿನ ದಿನಗಳಾಗಿದ್ದರೆ, ವ್ಯಾಲೆಂಟೈನ್ಸ್ ಡೇ ಬರೋ ತಿಂಗಳು ಅಂತ ಹೇಳ್ತಿದ್ದೆ. ಈಗ, ಗಿಂಬಳದ ರೂಪದಲ್ಲಿ ದಿನದ ಮೇಲಾದಾಯ ಬರೋರಿಗೆ ಇದು ಕಡಿಮೆ ಆದಾಯ ತರೋ ತಿಂಗಳು ಅಂತ ಹೇಳೋದನ್ನು ಕೇಳಿಸಿಕೊಂಡಿದ್ದೇನೆ'.

'ಅದಲ್ಲಾರೀ... ಇದು 'ಲೀಪ್ ಇಯರ್' ಅಲ್ವೇನ್ರೀ?! ಈ ಸಾರಿ ಇಪ್ಪತ್ತೊಂಬತ್ತು ದಿನ- ಒಂದು ದಿನ ಬೋನಸ್. ಹಾಗೆ ನೋಡಿದರೆ ಅವರೂ ಖುಷಿ ಪಡೋ ವರ್ಷಾನೇ ಇದು. ಕೇಂದ್ರ, ರಾಜ್ಯದ ಬಜೆಟ್ ಮಂಡನೆ ಆಗೋ ತಿಂಗಳು ಇದು. ನಮ್ಮ ನಿರ್ಮಲಕ್ಕ ಈ ಬಾರಿ ಯಾವ್ ಸೀರೆ ಉಟ್ಕೊಂಡು ಬರ್ತಾರೋ ನೋಡ್ಬೇಕು'.

'ಈ ಬಜೆಟ್ಟು, ಘರ್‌ವಾಪ್ಸಿ, ಪಕ್ಷಾಂತರ ಪರ್ವ... ಇವೆಲ್ಲ ಸಾಕಾಗಿದೆ. ಇಲ್ಲಿ ನೋಡು ಒಂದು ಇಂಟರೆಸ್ಟಿಂಗ್ ಮಾಹಿತಿ- ಆಸ್ಟ್ರೇಲಿಯಾದಲ್ಲಿ ಒಂದು ವಿಶಿಷ್ಟ ತಳಿಯ ಇಲಿ, ತನ್ನ ಪ್ರೇಯಸಿಗಾಗಿ ನಿದ್ದೆಯನ್ನೇ ತ್ಯಾಗ ಮಾಡುತ್ತಂತೆ!'

'ಪ್ರಾಣ ಕೊಡ್ತೀನಿ ಅಂತ ಹೇಳೋ ಪ್ರಿಯಕರರ ದಂಡೇ ಇರುತ್ತೆ. ಕೊಡ್ತಾರೋ ಬಿಡ್ತಾರೋ, ನಿದ್ದೆ ಬಿಡೋದು ಅಷ್ಟು ಸುಲಭ ಅಲ್ಲಾರೀ. ಪರವಾಗಿಲ್ಲ ಈ ಇಲಿಗೆ ಒಂದ್ ಲೈಕ್ ಕೊಡಲೇಬೇಕು'.

'ಪ್ರಾಣಿಗಳಲ್ಲಿ ನಿದ್ದೆ ಬಿಡೋ, ಕಡಿಮೆ ನಿದ್ದೆ ಮಾಡೋ ಪ್ರಾಣಿಗಳು ಇವೆಯಂತೆ. ಆದರೆ ಇದರಂತೆ ಪ್ರೇಯಸಿಗಾಗಿಯೇ ನಿದ್ದೆ ಬಿಡೋ ಪ್ರಾಣಿಗಳು ಅತಿ ವಿರಳವಂತೆ'.

'ಗ್ರೇಟ್ ರ್‍ಯಾಟ್ ರೀ ಅದು. ನೀವೂ ಇದ್ದೀರ, ಕುಂಭಕರ್ಣ. ನಿದ್ದೆ ಬಿಡೋದಿರ್‍ಲಿ, ಗೊರ್ಕೆ ಹೊಡೆದೂ ಹೊಡೆದೂ ಪಕ್ಕದಲ್ಲಿರೋರ ನಿದ್ದೆಗೂ ತೊಂದ್ರೆ ಮಾಡ್ತೀರ'.

'ನಮ್ಮ ಹಾಗೆ ದಿನವಿಡೀ ಧಾವಂತ, ಟ್ರಾಫಿಕ್ಕು, ಆಫೀಸಿನ ರಗಳೆ ಎಲ್ಲ ಅನುಭವಿಸಿದ್ದರೆ ಗೊತ್ತಾಗು-ತ್ತಿತ್ತು ಆ ಇಲಿಯ ಗ್ರೇಟ್‌ನೆಸ್ಸು. ವಿಜ್ಞಾನಿಗಳು ಈ ಗಂಡು ಇಲಿ ಬಗ್ಗೆ ಮಾತ್ರ ಹೇಳಿದಾರೆ, ಆ ತಳಿಯ ಹೆಣ್ಣು ಇಲಿಗಳ ಗುಣಗಳನ್ನೂ ತಿಳಿಸಿದ್ದರೆ...'

'ಇನ್ನೇನು ತಿಳಿಸೋದು, ಒಳ್ಳೆಯ ರೂಪ, ಗುಣ ಇರೋದಕ್ಕೇ ಫಾಲೋ ಮಾಡ್ಕೊಂಡು ಬರೋದು, ನಿದ್ದೇನೂ ಬಿಟ್ಟು!'

ದಿನದ ಟ್ವೀಟ್


ವಿಚಾರಣೆ ಪಾರದರ್ಶಕವಾಗಿರಲಿ



ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ರಾಜೀನಾಮೆಯು ಜಾರ್ಖಂಡ್‌ಗೆ ಮಾತ್ರವಲ್ಲ, ಇಡೀ ದೇಶಕ್ಕೆ ತೀವ್ರ ಚಿಂತೆ ಉಂಟುಮಾಡುವಂತಹ ಸಂಗತಿ. ದೇಶದ ಕೆಲವೇ ರಾಜ್ಯಗಳಲ್ಲಿ ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ನೇತೃತ್ವದ ಸರ್ಕಾರಗಳಿವೆ, ಇ.ಡಿ. ಮತ್ತು ಸಿಬಿಐ ಬೆದರಿಕೆಯೊಡ್ಡಿ ಅವುಗಳನ್ನು ಉರುಳಿಸುವ ಪ್ರಯತ್ನಗಳು ನಡೆಯುತ್ತಿವೆ.

ಹರ್ಷವರ್ಧನ್ ತಿವಾರಿ, ಕವಿ

ಕಿಡಿನುಡಿ



ಅರಣ್ಯಗಳಲ್ಲಿ ಯಾವುದೇ ರೀತಿಯ 'ಅಭಿವೃದ್ಧಿ' ನಮಗೆ ಬೇಡ. ಅಂತಹ ಮಹಾನ್ ಐಡಿಯಾಗಳನ್ನು ಯಾರು ಹೊತ್ತು ತರುತ್ತಾರೋ ಮತ್ತು ಆ ಐಡಿಯಾಗಳನ್ನು ಸಾರಾಸಗಟಾಗಿ ತಿರಸ್ಕರಿಸುವ ಬದಲು ಅನುಮತಿ ನೀಡುವ ಕುರಿತು ಇಲಾಖೆಯು ಯೋಚನೆಯನ್ನಾದರೂ ಹೇಗೆ ಮಾಡುತ್ತದೆಯೋ?

(ಬಂಡೀಪುರ ಅರಣ್ಯ ವ್ಯಾಪ್ತಿಯಲ್ಲಿ ರಾತ್ರಿ ವೇಳೆ ವಾಹನ ಸಂಚಾರಕ್ಕೆ ವಿಧಿಸಿರುವ ನಿಷೇಧವನ್ನು ಸಡಿಲಿಸಲು ಸರ್ಕಾರ ಚಿಂತನೆ ನಡೆಸಿದೆ ಎಂಬ ಹೇಳಿಕೆಗೆ ಪ್ರತಿಕ್ರಿಯೆ)

ಮಂಜಿತ್, ಒಳಾಂಗಣ ವಿನ್ಯಾಸಕಾರ

25 ವರ್ಷಗಳ ಹಿಂದೆ

ಸೋಮವಾರ, 1-2-1999

• **ಗೌಡರಿಗೆ ಪರೋಕ್ಷ ಸವಾಲು**

ಬೆಂಗಳೂರು, ಜ. 31– ಮಂತ್ರಿಮಂಡಲವನ್ನು ಪುನರ್‌ರಚಿಸದೆ ತಮ್ಮ ಮಾತಿನಂತೆ ವಿಸ್ತರಣೆ ಮಾತ್ರ ಮಾಡಿ, ಅದರಲ್ಲೂ ಪದಚ್ಯುತ ಅಧ್ಯಕ್ಷ ಬಿ.ಎಲ್. ಶಂಕರ್ ಅವರೊಬ್ಬರನ್ನೇ ಸೇರ್ಪಡೆ ಮಾಡಿಕೊಳ್ಳುವ ಮೂಲಕ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಮಾಜಿ ಮುಖ್ಯಮಂತ್ರಿ ಎಚ್.ಡಿ. ದೇವೇಗೌಡ ಅವರಿಗೆ ಪರೋಕ್ಷವಾಗಿ ಸವಾಲು ಹಾಕಿದ್ದಾರೆ.

ಹಣಕಾಸು ಖಾತೆ ಹೊಂದಿರುವ ಉಪಮುಖ್ಯಮಂತ್ರಿ ಹಾಗೂ ಪಕ್ಷದ ನೂತನ ಅಧ್ಯಕ್ಷ ಸಿದ್ದರಾಮಯ್ಯ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರದ ಮಾಜಿ ಸಚಿವ ಎಸ್.ಆರ್. ಬೊಮ್ಮಾಯಿ ಅವರು ಶಂಕರ್ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಗೈರುಹಾಜರಾಗಿದ್ದುದು ಜನತಾದಳ ಮತ್ತು ಅದರ ನೇತೃತ್ವದ ಸರ್ಕಾರ ಮುಂದೆ ಎತ್ತ ಸಾಗಬಹುದು ಎಂಬುದಕ್ಕೆ ದಿಕ್ಸೂಚಿಯಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 1-2-1974

• **ಶಾಸಕರ ಇತಿಮಿತಿ ಇಲ್ಲದ ಬಯಕೆ**

ಸೊಂಡೂರು, ಜ. 31– ಬಯಸಿದವರನ್ನೆಲ್ಲಾ ತೃಪ್ತಿಪಡಿಸಬೇಕಾದರೆ ಮುಖ್ಯಮಂತ್ರಿ ದೇವರಾಜ ಅರಸು ಅವರು ಕನಿಷ್ಠ 100 ಮಂದಿ ಸದಸ್ಯರ ಮಂತ್ರಿಮಂಡಲವನ್ನಾದರೂ ರಚಿಸಬೇಕಾಗುತ್ತದೆ.

ಮಂತ್ರಿ ಏಕಾಗಬೇಕು? ಮಂತ್ರಿ ಆಗಲು ಏನೇನು ವಿಷಯಾನುಭವ ಹಾಗೂ ತಿಳಿವಳಿಕೆ ಇರಬೇಕು ಎಂಬ ಬಗ್ಗೆ ಯಾರ ಗಮನವೂ ಇಲ್ಲ.

ಮುಖ್ಯಮಂತ್ರಿ ರೀತ್ಯ 'ನಾನೂ ಮಂತ್ರಿಯಾಗಬೇಕು' ಎಂಬುದು ಬಹುತೇಕ ಶಾಸಕರಲ್ಲಿರುವ ಆಸೆ. ಸೊಂಡೂರು ಪುರಸಭೆ ನೀಡಿದ ಬಿನ್ನವತ್ತಳೆಗೆ ಉತ್ತರವಾಗಿ ಮುಖ್ಯಮಂತ್ರಿಯವರು ಮಾಡಿದ ಭಾಷಣದಲ್ಲಿ 'ಸಮಾಜದ ಎಲ್ಲ ರಂಗದಲ್ಲೂ ಅನಾಯಕತ್ವವೇ ಹೆಚ್ಚುತ್ತಿದೆ' ಎಂಬ ವಿಷಯವನ್ನು ಸಮಗ್ರ ದೃಷ್ಟಿಯಿಂದ ವಿಶ್ಲೇಷಿಸಿದರು.

ಇತರ ಯಾವ ಉದ್ಯೋಗಕ್ಕೇ ಆಗಲಿ, ಒಂದು ಕನಿಷ್ಠ ಅರ್ಹತೆ ನಿಗದಿಯಾಗಿದ್ದರೂ ರಾಜಕಾರಣಿಗೆ ಯಾವ ಅರ್ಹತೆ ಅಥವಾ ತರಬೇತಿ ನಿಗದಿ ಆಗದಿರುವುದೇ ಈ ಪರಿಸ್ಥಿತಿಗೆ ಮೂಲ ಕಾರಣ ಎಂದು ಅವರು ಅಭಿಪ್ರಾಯಪಟ್ಟರು.

ಅನಾಯಕತ್ವ ಹೆಚ್ಚುತ್ತಿದೆ ಎಂಬ ವಿಷಯದ ವಿಶ್ಲೇಷಣೆ ಕಾಲದಲ್ಲಿ ಎಲ್ಲ ಹಂತಗಳಲ್ಲೂ ವಿಚಾರವಂತ ನಾಯಕರು ರೂಪಿತವಾಗಬೇಕೆಂದು ಅವರು ಒತ್ತಿ ಹೇಳಿದರು.

• **ಮುಂಬೈನಲ್ಲಿ ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆಗೆ ಸರ್ವ ಕ್ರಮ**

ಮುಂಬೈ, ಜ. 31– ಮಹಾರಾಷ್ಟ್ರದಲ್ಲಿ ಭಾಷಾ ಅಲ್ಪಸಂಖ್ಯಾತರ ಹಿತ ಸಂರಕ್ಷಿಸಲು ತಮ್ಮ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುವುದಕ್ಕೂ ಸಿದ್ಧವಾಗಿದೆ ಎಂದು ಮುಖ್ಯಮಂತ್ರಿ ವಿ.ಪಿ. ನಾಯಕ್ ಅವರು ಆಶ್ವಾಸನೆ ನೀಡಿದರು.

ಯಾವುದೇ ರಾಜ್ಯಕ್ಕೆ ಸೇರಿದವರಾಗಿರಲಿ, ತಮ್ಮ ರಾಜ್ಯ ಮತ್ತು ಮುಂಬೈ ನಗರದಲ್ಲಿ ತಮ್ಮ ತಮ್ಮ ಉದ್ಯಮ, ವಾಣಿಜ್ಯ ಚಟುವಟಿಕೆಗಳಲ್ಲಿ ತೊಡಗಬಹುದೆಂದು ಎ.ಪಿ.ಎಂ.ಸಿ ಸರ್ವ ಸದಸ್ಯರ ಸಭೆ ಉದ್ದೇಶಿಸಿ ಭಾಷಣ ಮಾಡುತ್ತಾ ಅವರು ಸ್ಪಷ್ಟಪಡಿಸಿದರು.

ಸಂಗತ

ಚಿಕಿತ್ಸೆಗೆ ಬೇಕು ನಂಬಿಕೆಯ ಅಡಿಪಾಯ

ವೈದ್ಯ– ರೋಗಿಯ ನಡುವೆ ಎದ್ದಿರುವ ಅಪನಂಬಿಕೆ ಎಂಬ ಅಡ್ಡಗೋಡೆಯು ಚಿಕಿತ್ಸೆಯ ಮೇಲೆ ವ್ಯಾಪಕ ಪರಿಣಾಮ ಬೀರುತ್ತಿದೆ

• ಡಾ. ಕೆ.ಎಸ್.ಪವಿತ್ರ

ಲಿವರ್ ಕ್ಯಾನ್ಸರ್‌ನಿಂದ ತಂದೆಯನ್ನು ಕಳೆದುಕೊಂಡ ಮಹಿಳೆಯೊಬ್ಬರು ಖಿನ್ನತೆಗೊಳಗಾಗಿ ಚಿಕಿತ್ಸೆಗೆಂದು ಬಂದಿದ್ದರು. ಆಗ ಅವರು ಹೇಳಿದ ಮಾತು- 'ನಮ್ಮ ತಂದೆಗೆ ಕ್ಯಾನ್ಸರ್ ಅಂತ ಗೊತ್ತಾದ ತಕ್ಷಣ ಪರಿಣತ ವೈದ್ಯರಿಂದ ಚಿಕಿತ್ಸೆ ಕೊಡಿಸಿದೆವು. ಔಷಧಿ ಕೊಟ್ಟಿದ್ದೇ ಸ್ಥಿತಿ ಗಂಭೀರವಾಗಿ ಇಪ್ಪತ್ತೇ ದಿನಗಳಲ್ಲಿ ತೀರಿಕೊಂಡರು. ಆ ಡಾಕ್ಟರ ಹತ್ತಿರ ಕರೆದುಕೊಂಡು ಹೋಗದಿದ್ದರೆ, ಅವರು ಕೆಲವು ತಿಂಗಳುಗಳಾದರೂ ಬದುಕಿರುತ್ತಿದ್ದರೇನೋ ಅನ್ನಿಸುತ್ತಿದೆ. ಔಷಧಿಯಿಂದ ಹೀಗಾಗಬಹುದು ಅಂತ ಆ ಡಾಕ್ಟರ್ ನಮಗೆ ಮೊದಲೇ ಹೇಳಬೇಕಿತ್ತು'.


ವೈದ್ಯಕೀಯ ಕ್ಷೇತ್ರದಲ್ಲಿ ಇಂತಹ ದೂರುಗಳು, ದೂಷಣೆ, ಅನುಮಾನ ದಿನೇದಿನೇ ಹೆಚ್ಚಾಗುತ್ತಿವೆ. ವಿಶ್ವಾಸ, ನಂಬಿಕೆ, ಭರವಸೆಯ ಆಧಾರದ ಮೇಲೆ ರೋಗಿ- ವೈದ್ಯನ ಸಂಬಂಧ ನಿರ್ಧಾರವಾಗುತ್ತದೆ ಎಂದು ಪ್ರತಿಪಾದಿಸುತ್ತಿದ್ದ ಅಧ್ಯಯನಗಳನ್ನು ಕೇಳುವವರೇ ಇಲ್ಲದಂತಾಗಿದೆ. ಅಪನಂಬಿಕೆಯ ಅಡ್ಡಗೋಡೆ ವೈದ್ಯ-ರೋಗಿಯ ನಡುವೆ ಅಡ್ಡಾದಿಡ್ಡಿ ಬೆಳೆದು ನಿಂತು ಚಿಕಿತ್ಸೆಯ ಅಡಿಪಾಯವನ್ನು ಅಲ್ಲಾಡಿಸುತ್ತಿದೆ.

ವೈದ್ಯರು ನೀಡುವ ಔಷಧಿ, ಸೂಚಿಸುವ ಶಸ್ತ್ರಚಿಕಿತ್ಸೆ, ಸಾವು, ಅಂಗವೈಕಲ್ಯದಂತಹ ಅಪಾಯದ ಸೂಚನೆ, ಕಾಯಿಲೆಯ ಮಾಹಿತಿಯ ಬಗೆಗೆ ಜನರಿಗೆ ಇಂದು ಭರವಸೆಯೇ ಕಡಿಮೆ. ಎಂತಹ ಪರಿಣತ, ಅನುಭವಿ ವೈದ್ಯ ನೀಡುವ ಮಾಹಿತಿಯನ್ನೂ ಅರ್ಧ ಮಾತ್ರ ನಂಬುವ ಜನ ಅಪಾರ ಸಂಖ್ಯೆಯಲ್ಲಿದ್ದಾರೆ. ಅವರೆಲ್ಲ ತತ್‌ಕ್ಷಣ ಮೊರೆ ಹೋಗುವುದು 'ಗೂಗಲ್ ಡಾಕ್ಟರ್' ಅನ್ನೇ. ಇದರ ನೇರ ಪರಿಣಾಮವೆಂದರೆ, ಅತಿ ಅವಶ್ಯವಾದ, ಕಡಿಮೆ ಖರ್ಚಿನಲ್ಲಿ ಮಾಡುವ ರಕ್ತದಲ್ಲಿನ ಸಕ್ಕರೆಯ ಅಂಶದ ಪರೀಕ್ಷೆಗೆ ಸೂಚಿಸಿದ್ದಾಗ್ಯೂ, 6 ತಿಂಗಳ ಹಿಂದಿನ ಪರೀಕ್ಷೆಯ ಚೀಟಿಯನ್ನು ಎದುರು ಹಿಡಿದು 'ಇದೇ ಸಾಕಾಗದೇ?' ಎನ್ನುವವರೇ ಹೆಚ್ಚು. ಅವರಿಗೆ 'ಕೆಲವೇ ದಿನಗಳ ಹಿಂದಿನ ರಕ್ತ ಪರೀಕ್ಷೆ 'ನಾರ್ಮಲ್' ಇದ್ದಾಗ್ಯೂ ಇಂದು ಈ ಸಮಸ್ಯೆ ರಕ್ತದಲ್ಲಿ ಕಾಣಿಸಲು ಸಾಧ್ಯವಿದೆ. ನಿಮ್ಮ ದೇಹಾರೋಗ್ಯದ ಲಕ್ಷಣಗಳು ಇಂತಹ ನಿರ್ದಿಷ್ಟ ಕಾಯಿಲೆಯನ್ನು ಸೂಚಿಸುತ್ತಿವೆ, ಅದನ್ನು ಖಚಿತಪಡಿಸಿಕೊಳ್ಳಲು ಪರೀಕ್ಷೆ ಬೇಕೇ ಬೇಕು' ಎಂದು ಒಪ್ಪಿಸಬೇಕಾಗುತ್ತದೆ. ಆಗ ತಲೆಯಲ್ಲಾಡಿಸಿದರೂ ಮುಖದಲ್ಲಿ ಅಪನಂಬಿಕೆಯ ಭಾವ ಒಡೆದು ಕಾಣುತ್ತಿರುತ್ತದೆ! ಅಂದರೆ, ವೈದ್ಯರೆಂದರೆ ಲಾಭಕ್ಕಾಗಿ ಏನೂ ಮಾಡಬಲ್ಲವರು, ವಿನಾಕಾರಣ ಔಷಧಿ, ಪರೀಕ್ಷೆ ಎಂದು ದುಡ್ಡು ವಸೂಲು ಮಾಡುವವರು ಎಂಬ ಭಾವನೆ ಜನರಲ್ಲಿ ಬೆಳೆಯತೊಡಗಿದೆ.

ಸಮಾಜದ ಇಂತಹ ಭಾವನೆಗಳು ವೈದ್ಯ ಕ್ಷೇತ್ರದ ಒಟ್ಟು ನಡವಳಿಕೆಯನ್ನೂ ಕ್ರಮೇಣ ಬದಲಿಸಿದೆ. ಹಿಂದೆ ರೋಗಿಯ ಹಿತದೃಷ್ಟಿಯಿಂದ, ಅದು ತನ್ನ ಸ್ವಂತ ಜವಾಬ್ದಾರಿ ಎಂಬಂತೆ ರೋಗಿಯನ್ನು, ಆತನ ಮನೆಯವರನ್ನು ಕುಳ್ಳಿರಿಸಿ, ಅವರ ಮನವೊಲಿಸಿ ಚಿಕಿತ್ಸೆ ನೀಡುವುದು ವೈದ್ಯರ ನಿತ್ಯದ ಕಾಯಕವಾಗಿತ್ತು. ಆದರೆ ಇಂದು ಇದ್ದದ್ದನ್ನು ಇದ್ದ ಹಾಗೆ ಸ್ಪಷ್ಟವಾಗಿ ಹೇಳುವುದು, ನಿರ್ಧಾರವನ್ನು ಪೂರ್ತಿಯಾಗಿ ರೋಗಿ ಮತ್ತು ಆತನ ಮನೆಯವರಿಗೇ ಬಿಟ್ಟುಬಿಡುವುದು ವೈದ್ಯರ ಸ್ವಹಿತ ಚಿಂತನೆಯ ಪ್ರವೃತ್ತಿಯಾಗಿ ಬದಲಾಗಿದೆ.

ರೋಗಿಗಳು, ಅವರ ಮನೆಯವರು ತಮ್ಮನ್ನು ನಂಬುವುದಿಲ್ಲ, ಏನಾದರೂ ಹೆಚ್ಚುಕಡಿಮೆಯಾದರೆ ಗಲಾಟೆ ಮಾಡಿಯೇ ಮಾಡುತ್ತಾರೆ, ಇರುವ ಅಪಾಯವನ್ನು ಎಷ್ಟು ವಿವರಿಸಿದರೂ 'ಮತ್ತೆ ಇನ್ನೇನೂ ತೊಂದರೆ ಇಲ್ವಲ್ಲಾ ಡಾಕ್ಟ್ರೇ?' ಎಂದೇ ಕೇಳುತ್ತಾರೆ, ಒಬ್ಬರಿಗೆ ಪೂರ್ತಿ ವಿವರಿಸಿಯಾಗಿದ್ದರೂ ಮತ್ತೊಬ್ಬರು ಸಂಬಂಧಿ ಮತ್ತೆ ಮೊದಲಿನಿಂದ ಕೇಳುತ್ತಾರೆ, ತಮ್ಮ ಕಡೆಯ ಯಾವುದೋ ಊರು ಅಥವಾ ದೇಶದಲ್ಲಿರುವ ವೈದ್ಯರಿಂದ ಕರೆ ಮಾಡಿಸಿ ವಿವರ ಕೇಳುತ್ತಾರೆ ಎಂಬುವು ಇಂದು ವೈದ್ಯಕೀಯ ವಲಯದಲ್ಲಿ ಆಗಾಗ್ಗೆ ಕೇಳಿಬರುವ ಅಳಲುಗಳು.

ಆಧುನಿಕ ತಂತ್ರಜ್ಞಾನದಲ್ಲಿ ಪರಿಣತರಾದ ಇಂದಿನ ಯುವಜನರಂತೂ ಬಹುಬಾರಿ 'ಯಾವ ವೈದ್ಯರನ್ನು ನೋಡಬೇಕು?' ಎಂಬ ನಿರ್ಧಾರಕ್ಕೆ 'ಗೂಗಲ್ ರಿವ್ಯೂ'ಗಳ ಮೊರೆ ಹೋಗುತ್ತಾರೆ. ಅವರ ಇಂತಹ ರೂಢಿಯನ್ನು ಅನುಸರಿಸಿ ಆಸ್ಪತ್ರೆಗಳು, ಇಂದು ತಮ್ಮ ಗೂಗಲ್ ರೇಟಿಂಗ್ ಕಾಯ್ದುಕೊಳ್ಳುವುದನ್ನು ಕಲಿಯುತ್ತಿವೆ. ಯಾರೂ, ಏನನ್ನೂ ಬರೆಯಬಹುದಾದ ತಾಂತ್ರಿಕ ಸ್ವಾತಂತ್ರ್ಯದ ಈ ಯುಗದಲ್ಲಿ ಆರೋಗ್ಯ, ಆಹಾರ ಯಾವುದಕ್ಕೂ ಗೂಗಲ್ ರಿವ್ಯೂಗಳ ಅಧಿಕೃತತೆ ಕೆಲವು ಬಾರಿ ಪ್ರಶ್ನಾರ್ಹ ಎಂಬುದನ್ನು ಜನ ಗಮನಿಸುವ ಸಾಧ್ಯತೆ ಕಡಿಮೆ.



ಶಿಕ್ಷಕನಿಗೆ ಹೆದರುವ ವಿದ್ಯಾರ್ಥಿಯು ಶಿಕ್ಷಣವನ್ನು ಪ್ರೀತಿಸಲಾರ, ಸಮರ್ಥವಾಗಿ ಕಲಿಯಲಾರ. ಅದೇ ರೀತಿ ವೈದ್ಯನಿಗೆ ಹೆದರುವ, ಆತನನ್ನು ನಂಬದ ರೋಗಿ ತನ್ನ ಆರೋಗ್ಯವನ್ನು ಪಡೆದುಕೊಳ್ಳುವುದು ಕಷ್ಟವೆನಿಸಬಹುದು. ರೋಗಿಗೆ ಹೆದರುವ, ಆತನಿಂದ ದೂರ ಓಡುವ ವೈದ್ಯ ಪರಿಣತನೇ ಆಗಿದ್ದರೂ, ತನ್ನ ಪರಿಣತಿಯನ್ನು ಪೂರ್ಣ ಪ್ರಮಾಣದಲ್ಲಿ ರೋಗಿಗಾಗಿ ಬಳಸುವುದು ಕಷ್ಟಸಾಧ್ಯ. ಇಂದು ನಾವಿರುವುದು ದೀರ್ಘಕಾಲಿಕ ಕಾಯಿಲೆಗಳ ಕಾಲ. ಇಂತಲ್ಲಿ, ಅಪನಂಬಿಕೆ, ಹೆದರಿಕೆ ಎರಡೂ ಚಿಕಿತ್ಸೆಯ ಎಲ್ಲ ಹಂತಗಳಲ್ಲಿ ತಡೆಯೊಡ್ಡುವ ಸಾಧ್ಯತೆ ಇದೆ ಎಂಬ ಅರಿವು ವೈದ್ಯ- ರೋಗಿ ಇಬ್ಬರಿಗೂ ಅಗತ್ಯ.

ರೋಗಿಗೆ 'ವೈದ್ಯನೂ ಮನುಷ್ಯ, ವಿಶ್ವಾಸಕ್ಕೆ ಅರ್ಹ' ಎಂಬ ಭಾವ, ವೈದ್ಯನಿಗೆ ತನ್ನ ಆತ್ಮಸಾಕ್ಷಿಯಿಂದ ಸರಿಯಾದ ಕ್ರಮ ತೆಗೆದುಕೊಳ್ಳುವ, ಅದನ್ನು ಸ್ಪಷ್ಟವಾಗಿ ರೋಗಿಗೆ ವಿವರಿಸುವ, ಬರಹದಲ್ಲಿ ದಾಖಲಿಸುವ ಕೌಶಲಗಳು ಮಾತ್ರ ಈ ಅಡ್ಡಗೋಡೆಯನ್ನು ನಿವಾರಿಸಿ ಆರೋಗ್ಯದ ದಾರಿಯನ್ನು ಸುಗಮವಾಗಿಸಬಲ್ಲವು.

ಲೇಖಕಿ: ಮನೋವೈದ್ಯೆ

ವಾಚಕರ ವಾಣಿ

ಸ್ವಚ್ಛತೆಗೆ ಸಿಗಲಿ ಸಾಮೂಹಿಕ ಸ್ಪರ್ಶ

ಸ್ವಚ್ಛತೆಯು ಆಂದೋಲನವಾಗಬೇಕು ಎಂದು ಎಚ್.ಬಿ.ಚಂದ್ರಶೇಖರ್ ಅವರು ಅಭಿಪ್ರಾಯಪಟ್ಟಿರುವುದು (ಸಂಗತ, ಜ. 31) ಸರಿಯಾಗಿದೆ. ಗ್ರಾಮಗಳನ್ನು ಬಯಲು ಬಹಿರ್ದೆಸೆಮುಕ್ತ ಮಾಡುವ ಸಲುವಾಗಿ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದರೂ ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಾಣವಾಗುವ ಕೆಲವು ಶೌಚಾಲಯಗಳು ಸರ್ಕಾರದ ಸಹಾಯಧನ ಪಡೆಯುವುದಕ್ಕಷ್ಟೇ ಸೀಮಿತವಾಗಿರುವುದು ದುರ್ದೈವ. ಅವು ಕುರಿ, ಕೋಳಿ, ನಾಯಿಯ ಗೂಡುಗಳಾಗಿ, ಸೌದೆ, ಕೃಷಿ ಯಂತ್ರೋಪಕರಣ ಇಡುವ ತಾಣಗಳಾಗಿ ಪರಿವರ್ತನೆಯಾಗುತ್ತಿವೆ. ಶಾಲಾ ಸ್ವಚ್ಛತಾ ಕೆಲಸಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವ ಬಗ್ಗೆ ಪರ, ವಿರೋಧದ ಚರ್ಚೆ ಏನೇ ಇದ್ದರೂ 90ರ ದಶಕದವರೆಗೂ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಶಾಲಾ ಆವರಣದ ಸ್ವಚ್ಛತೆ ಮಕ್ಕಳಿಂದಲೇ ನಡೆಯುತ್ತಿತ್ತು. ಅಲ್ಲದೆ ಅದೊಂದು ಸಾಮಾನ್ಯ ವಿಷಯವಾಗಿತ್ತು. ಪೋಷಕರು ಸಹ ಅದನ್ನು ಪ್ರಶ್ನಿಸುತ್ತಿರಲಿಲ್ಲ.

ಗ್ರಾಮದ ಜನರೆಲ್ಲರೂ ಸೇರಿ ವಾರದಲ್ಲಿ ಒಂದು ದಿನ ಗ್ರಾಮವನ್ನು ಸ್ವಚ್ಛ ಮಾಡುವಂತಹ ಪರಿಪಾಟ ಕೆಲವು ಹಳ್ಳಿಗಳಲ್ಲಿ ಒಂದು ಕಾಲದಲ್ಲಿ ರೂಢಿಯಲ್ಲಿತ್ತು. ಅಂದು ಸ್ವಚ್ಛತೆಗೆ ಸಿಗುತ್ತಿದ್ದ ಸಾಮೂಹಿಕ ಸ್ಪರ್ಶ ಇಂದು ಕಾಣದಂತಾಗಿದೆ. ನಮ್ಮ ಮನೆಯ ಮುಂದೆ ನಾವೇ ಸೃಷ್ಟಿಸಿದ ಅನೈರ್ಮಲ್ಯವನ್ನು ಪೌರಕಾರ್ಮಿಕರು ಬಂದು ಸ್ವಚ್ಛಗೊಳಿಸಲಿ ಎಂಬ ಮನೋಭಾವ ಹೆಚ್ಚಾಗುತ್ತಿದೆ. ಇದನ್ನು ಹೋಗಲಾಡಿಸಿ, ನೈರ್ಮಲ್ಯದ ಬಗ್ಗೆ ಸರ್ವರಲ್ಲೂ ಸಾಮೂಹಿಕ ಪ್ರಜ್ಞೆಯನ್ನು ಜಾಗೃತಗೊಳಿಸುವುದು ಶಿಕ್ಷಣದ ಗುರಿಯಾಗಬೇಕು. ಆಗ ಮಾತ್ರ ಸ್ವಚ್ಛತೆಯು ಆಂದೋಲನವಾಗಿ ರೂಪುಗೊಳ್ಳಲು ಸಾಧ್ಯ.

ಸಿ.ಎಸ್.ಸುರೇಶ್, ಚನ್ನರಾಯಪಟ್ಟಣ

ಸಾಂವಿಧಾನಿಕ ಮುಖ್ಯಸ್ಥರಿಂದಲೇ ಪ್ರತಿಭಟನೆ!

ಕೇರಳದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಎಸ್‌ಎಫ್‌ಐ ಕಾರ್ಯಕರ್ತರು ತಮ್ಮ ವಿರುದ್ಧ ಕಪ್ಪುಬಾವುಟ ಪ್ರದರ್ಶಿಸಿದ್ದನ್ನು ಖಂಡಿಸಿ, ರಸ್ತೆಬದಿಯಲ್ಲಿ ಕುಳಿತು ಪ್ರತಿಭಟನೆ ನಡೆಸಿದ್ದು ವರದಿಯಾಗಿದೆ. ಹೀಗೆ ರಾಜ್ಯಪಾಲರು ಸ್ವಯಂ ಪ್ರತಿಭಟನೆಗೆ ಮುಂದಾಗಿದ್ದು ಸರಿಯಲ್ಲ. ರಾಜ್ಯದ ಸಾಂವಿಧಾನಿಕ ಮುಖ್ಯಸ್ಥರಾಗಿ ಕರ್ತವ್ಯ ನಿರ್ವಹಿಸುವ ರಾಜ್ಯಪಾಲರು ಪ್ರತಿಭಟನೆಗೆ ಇಳಿಯುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮ. ಹೆಚ್ಚೆಂದರೆ ಅವರು ಈ ವಿಚಾರವನ್ನು ಮುಖ್ಯಮಂತ್ರಿ ಅಥವಾ ಗೃಹ ಸಚಿವರ ಗಮನಕ್ಕೆ ತಂದು, ವಿದ್ಯಾರ್ಥಿಗಳ ವಿರುದ್ಧ ಸೂಕ್ತ ಕ್ರಮಕ್ಕೆ ಸೂಚಿಸಬಹುದಿತ್ತು. ಭಾರತದ ರಾಜಕೀಯದ ಇತಿಹಾಸದಲ್ಲಿ ರಾಜ್ಯಪಾಲರು ತಾವೇ ಪ್ರತಿಭಟನೆಗೆ ಇಳಿದಿದ್ದು ಬಹುಶಃ ಇದೇ ಮೊದಲು ಇರಬೇಕು!

ಕೆ.ವಿ.ವಾಸು, ಮೈಸೂರು

ವೈಯಕ್ತಿಕ ದ್ವೇಷ ಈ ಮಟ್ಟಕ್ಕೂ ಇಳಿಸುತ್ತದೆ!

ಬೀದರ್ ಲೋಕಸಭಾ ಕ್ಷೇತ್ರಕ್ಕೆ ಈ ಬಾರಿ ಹಾಲಿ ಸಂಸದ ಭಗವಂತ ಖೂಬಾ ಅವರ ಬದಲು ಬೇರೆ ಅಭ್ಯರ್ಥಿಗೆ ಟಿಕೆಟ್ ನೀಡಬೇಕೆಂದು ಒತ್ತಾಯಿಸಿ, ಔರಾದ್ ಶಾಸಕ ಪ್ರಭು ಚವಾಣ್ ಅವರು ಸಾರ್ವಜನಿಕ ಸಮಾರಂಭದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಕಾಲಿಗೆ ಎರಗಿರುವುದು ಅವರ ಆಷಾಢಭೂತಿತನವನ್ನು ತೋರಿಸುತ್ತದೆ. ತಮಗಿಂತ ವಯಸ್ಸಿನಲ್ಲಿ ಚಿಕ್ಕವರಾಗಿದ್ದರೂ ಸಾವಿರಾರು ಜನರ ಮುಂದೆ ಕಾಲಿಗೆ ಬೀಳುವುದು ಅವರ ಬಲಹೀನತೆಯನ್ನು ಜಗಜ್ಜಾಹೀರು ಮಾಡಿದೆ. ಇಂತಹ ನಡೆಯು ಹಿಂದಿನ ರಾಜರ ಆಡಳಿತವನ್ನು ನೆನಪಿಸುತ್ತದೆ. ವೈಯಕ್ತಿಕ ದ್ವೇಷ ಯಾವ ಮಟ್ಟಕ್ಕೆ ತನ್ನ ಸ್ವಾಭಿಮಾನವನ್ನು ಮರೆಸುತ್ತದೆ ಎಂಬುದು ತಿಳಿಯುತ್ತದೆ.

ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು. ತಂದೆ, ತಾಯಿ, ಗುರು, ಹಿರಿಯರಿಗೆ ಪಾದ ಸ್ಪರ್ಶಿಸಿ ನಮಸ್ಕರಿಸುವುದು ಸಂಪ್ರದಾಯ. ಆದರೆ ಶಾಸಕರ ಈ ನಡೆಯು ನೋಡುವವರಲ್ಲಿ ಅಸಹ್ಯ ಹುಟ್ಟಿಸುವಂತಿತ್ತು.

ಮಲ್ಲತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಸಹನೆಗೆ ಸವಾಲೊಡ್ಡುತ್ತಿದೆ ತ್ಯಾಜ್ಯ ಪರ್ವತ

ಸಂಘಟನೆಯೊಂದು ತುಮಕೂರಿನಿಂದ ಬೆಂಗಳೂರಿನವರೆಗೆ ಇತ್ತೀಚೆಗೆ ಆಯೋಜಿಸಿದ್ದ ಪಾದಯಾತ್ರೆಯಲ್ಲಿ ಭಾಗವಹಿಸಿದ್ದೆ. ಸಿಲಿಕಾನ್ ಸಿಟಿ, ಉದ್ಯಾನನಗರಿ ಎಂದೆಲ್ಲ ನಾವು ಹೊಗಳಿಕೊಳ್ಳುವ ಬೆಂಗಳೂರಿಗೆ ಪ್ರವೇಶಿಸುವ ಹಂತದಲ್ಲಿ ಸಿಗುವ ಊರುಗಳನ್ನು ನೋಡಿ ಗಾಬರಿಯಾಯಿತು. ರಸ್ತೆಯ ಆಚೀಚೆ, ಚರಂಡಿಗಳಲ್ಲಿ ಪ್ಲಾಸ್ಟಿಕ್ಕಿನ ರಾಶಿ. ಮುಖ್ಯವಾಗಿ, ನೆಲಮಂಗಲ ಪಟ್ಟಣದ ಮುಖ್ಯರಸ್ತೆಯ ಆಚೀಚೆ ಕಸದ ಪರ್ವತಗಳನ್ನು ನೋಡಿ ದಿಗ್ಭ್ರಮೆ ಆಯಿತು. ಅದರಲ್ಲೂ ಇವು ದೇವಸ್ಥಾನ, ಮಸೀದಿಯಂತಹ ಧಾರ್ಮಿಕ ಸ್ಥಳಗಳ ಮುಂದೆ ಇರುವುದನ್ನು ಕಂಡು ಅಚ್ಚರಿಯಾಯಿತು.

ಇಂತಹ ಕಸದ ರಾಶಿಗಳ ಆಚೀಚೆ ಬದುಕುವ, ಇವು ಹೊರಸೂಸುವ ದುರ್ಗಂಧ, ತರುವ ರೋಗರುಜಿನಗಳನ್ನು ಸಹಿಸಿಕೊಳ್ಳುತ್ತಿರುವ ನಾಗರಿಕರ ಅಪಾರ ತಾಳ್ಮೆ, ಸಹನೆ ನೋಡಿ ಸೋಜಿಗವೆನಿಸಿತು. ಇಂತಹ ವಾತಾವರಣ ನಿರ್ಮಾಣದಲ್ಲಿ ನಾಗರಿಕರ ಪಾಲೂ ದೊಡ್ಡದಿದೆ. ರಾಜ್ಯದ ನಗರಾಭಿವೃದ್ಧಿ ಸಚಿವರು ಮತ್ತು ಆರೋಗ್ಯ ಸಚಿವರು ಪಾದಯಾತ್ರೆ ಕೈಗೊಳ್ಳುವ ಮೂಲಕ ವಸ್ತುಸ್ಥಿತಿಯನ್ನು ಅರಿತು, ನಗರ, ಪಟ್ಟಣಗಳನ್ನು ಸ್ವಚ್ಛವಾಗಿಡಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

ಸರ್ಜಾಶಂಕರ್ ಹರಳಿಮಠ, ಶಿವಮೊಗ್ಗ

ಗ್ಯಾರಂಟಿಗೂ ಲೋಕಸಭಾ ಚುನಾವಣೆಗೂ ಸಂಬಂಧವಿಲ್ಲ

ರಾಜ್ಯದ ಜನರಿಗೆ ಐದು ಗ್ಯಾರಂಟಿ ಯೋಜನೆಗಳನ್ನು ಕೊಟ್ಟರೂ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಹೆಚ್ಚು ಸ್ಥಾನಗಳನ್ನು ಪಡೆಯದಿದ್ದರೆ, ಈಗ ಜಾರಿಯಲ್ಲಿರುವ ಐದು ಗ್ಯಾರಂಟಿಗಳನ್ನು ರದ್ದು ಮಾಡುವುದು ಸೂಕ್ತ ಎಂದು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಅವರು ಅಭಿಪ್ರಾಯ ವ್ಯಕ್ತಪಡಿಸಿರುವುದು ಸರಿಯಲ್ಲ. ಏಕೆಂದರೆ, ರಾಜ್ಯ ವಿಧಾನಸಭಾ ಚುನಾವಣೆಯ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷ ಐದು ಗ್ಯಾರಂಟಿಗಳನ್ನು ತನ್ನ ಕಾರ್ಯಸೂಚಿಯಲ್ಲಿ ಅಳವಡಿಸಿ, ಪಕ್ಷ ಅಧಿಕಾರಕ್ಕೆ ಬಂದರೆ ಈಡೇರಿಸುವುದಾಗಿ ಭರವಸೆ ನೀಡಿತ್ತು. ಅದರಂತೆ ಈಗ ಗ್ಯಾರಂಟಿಗಳು ಜಾರಿಯಲ್ಲಿವೆ. ಇದಕ್ಕೂ ಲೋಕಸಭಾ ಚುನಾವಣೆಗೂ ಸಂಬಂಧವಿಲ್ಲ.

ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ರಾಜ್ಯದ ಜನರ ಮುಂದಿರುವ ಸವಾಲು, ಸಮಸ್ಯೆಗಳೇ ಬೇರೆ. ಪ್ರಸ್ತುತ ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ಗೆಲ್ಲುವ ರಣತಂತ್ರ ರೂಪಿಸಬೇಕು. ಅದುಬಿಟ್ಟು ಗ್ಯಾರಂಟಿ ಯೋಜನೆಗಳನ್ನು ರದ್ದುಪಡಿಸಿದರೆ ಅದು ಜನರಿಗೆ ಮಾಡುವ ವಂಚನೆ ಎಂದೇ ಪರಿಗಣಿಸಬೇಕಾಗುತ್ತದೆ.

ಆರ್.ವೆಂಕಟರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಶಾಲಾ ಶೌಚಾಲಯ ನಿರ್ವಹಣೆ ಅನುದಾನವಿಲ್ಲದೆ ಸಂಕಷ್ಟ

ರಾಜ್ಯದ ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯಗಳನ್ನು ವಿದ್ಯಾರ್ಥಿಗಳಿಂದಲೇ ಶುಚಿಗೊಳಿಸಿದ ಹಲವು ಪ್ರಕರಣಗಳು ಈಚಿನ ತಿಂಗಳಲ್ಲಿ ವರದಿಯಾಗಿವೆ. ಇದಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ವಿದ್ಯಾರ್ಥಿಗಳಿಂದ ಶೌಚಾಲಯ ಶುಚಿಗೊಳಿಸಿದ್ದು ಪತ್ತೆಯಾದರೆ, ಅಂತಹ ಶಾಲೆಯ ಮುಖ್ಯಶಿಕ್ಷಕರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಶಾಲಾ ಶಿಕ್ಷಣ ಇಲಾಖೆಯು ಆದೇಶ ಹೊರಡಿಸಿದೆ. ಆದರೆ ಶೌಚಾಲಯಗಳನ್ನು ಶುಚಿಗೊಳಿಸಲು ಅಗತ್ಯವಾದ ಅನುದಾನ ಲಭ್ಯವಿಲ್ಲ. ಹೀಗಿದ್ದಾಗ ಶೌಚಾಲಯವನ್ನು ಶುಚಿಗೊಳಿಸುವುದು ಹೇಗೆ ಎಂಬುದು ಹಲವು ಶಿಕ್ಷಕರ ಪ್ರಶ್ನೆಯಾದರೆ, ಅನುದಾನವಿಲ್ಲವೆಂದು ಮಕ್ಕಳ ಕೈಯಲ್ಲಿ ಶೌಚಾಲಯ ಶುಚಿಗೊಳಿಸುವುದು ಎಷ್ಟು ಸರಿ ಎಂಬುದು ಕೆಲವು ಶಿಕ್ಷಕರ ಪ್ರಶ್ನೆ

• ಜಯಸಿಂಹ ಆರ್.

ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಶೈಕ್ಷಣಿಕ (ಪಠ್ಯ ಮತ್ತು ಪಠ್ಯೇತರ) ಚಟುವಟಿಕೆ ಮತ್ತು ಕ್ರೀಡಾ ಚಟುವಟಿಕೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಕೆಲಸಗಳಿಗೆ ಬಳಸಿಕೊಳ್ಳುವಂತಿಲ್ಲ ಎನ್ನುತ್ತದೆ ಶಿಕ್ಷಣ ಇಲಾಖೆಯ ಮಾರ್ಗಸೂಚಿ. ಆದರೆ ಶಾಲಾ ಶೌಚಾಲಯಗಳನ್ನು ಶುಚಿಗೊಳಿಸಲು ಮಕ್ಕಳನ್ನು ಬಳಸಿಕೊಳ್ಳಲಾಗುತ್ತಿದೆ.

‘ಇದೇ ಶನಿವಾರವಷ್ಟೇ (27ನೇ ಜನವರಿ) ನಮ್ಮ ಶಾಲೆಯ ಎರಡು ಶೌಚಾಲಯಗಳನ್ನು ಶುಚಿಗೊಳಿಸಿದೆವು. ಒಂದನ್ನು ವಿದ್ಯಾರ್ಥಿಗಳು ಶುಚಿಗೊಳಿಸಿದರೆ, ಇನ್ನೊಂದನ್ನು ನಾನೇ ಶುಚಿಗೊಳಿಸಿದೆ. ಶಾಲಾ ನಿರ್ವಹಣೆಗೆ–ಶುಚಿತ್ವಕ್ಕೆ ಎಂದು ಇಲಾಖೆ ನೀಡುತ್ತಿರುವ ಅನುದಾನ ಯಾವುದಕ್ಕೂ ಸಾಲುವುದಿಲ್ಲ. ಮಕ್ಕಳಿಗೆ ಕೈತೊಳೆಯಲು ಬಳಸುವ ಸಾಬೂನನ್ನೂ ಕೆಲವೊಮ್ಮೆ ನಮ್ಮ ಸ್ವಂತ ದುಡ್ಡಿನಿಂದ ತರಬೇಕಾದ ಪರಿಸ್ಥಿತಿ ಇದೆ. ನಮ್ಮ ತಾಲ್ಲೂಕಿನಲ್ಲಿನ ಬಹುತೇಕ ಶಾಲೆಗಳಲ್ಲಿ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗೇನೂ ಇಲ್ಲ’ ಎನ್ನುತ್ತಾರೆ ರಾಮನಗರದ ಮಾಗಡಿ ತಾಲ್ಲೂಕಿನ ಸೋಲೂರು ಹೋಬಳಿಯ ಪ್ರಾಥಮಿಕ ಶಾಲೆಯ ಶಿಕ್ಷಕರೊಬ್ಬರು.

ರಾಜ್ಯ ಸರ್ಕಾರವು ಪ್ರತಿ ವರ್ಷ ಬಜೆಟ್‌ನಲ್ಲಿ ಶೌಚಾಲಯ ನಿರ್ವಹಣೆ ಮತ್ತು ದುರಸ್ತಿಗೆ (ಲೆಕ್ಕ ಶೀರ್ಷಿಕೆ: 4202–01–201–1–07) ಎಂದು ಪ್ರತ್ಯೇಕ ಅನುದಾನವನ್ನು ತೆಗೆದಿರಿಸುತ್ತದೆ. ಜುಲೈನಲ್ಲಿ ಮಂಡಿಸಲಾದ 2023–24ನೇ ಸಾಲಿನ ಬಜೆಟ್‌ನಲ್ಲಿ ಇದಕ್ಕಾಗಿ ₹30 ಕೋಟಿಯನ್ನು ತೆಗೆದಿರಿಸಲಾಗಿತ್ತು. ಈ ಅನುದಾನವನ್ನು ಶೌಚಾಲಯಗಳ ನಿರ್ವಹಣೆ ಮತ್ತು ದುರಸ್ತಿಗೆ ಬಳಸಬೇಕು. ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳಿಗೆ ಈ ಅನುದಾನವನ್ನು ಸಮನಾಗಿ ಹಂಚಿಕೆ ಮಾಡಿದರೆ ಪ್ರತಿ ಶಾಲೆಗೆ ಸುಮಾರು ₹6,000 ಬರುತ್ತದೆ.

‘ಶಾಲೆಯಲ್ಲಿ ಇರುವ ಶೌಚಾಲಯ ನಿರ್ವಹಣೆಗೆ ವರ್ಷವೊಂದಕ್ಕೆ ಆರು ಸಾವಿರ ರೂಪಾಯಿ ಎಲ್ಲಿ ಸಾಲುತ್ತದೆ’ ಎಂಬುದು ಸೋಲೂರು ಹೋಬಳಿಯ ಶಾಲೆಯ ಶಿಕ್ಷಕರ ಇನ್ನೊಂದು ಪ್ರಶ್ನೆ.

ಶೌಚಾಲಯ ನಿರ್ವಹಣೆ ಮತ್ತು ದುರಸ್ತಿಗೆ ಮೀಸಲಿರಿಸಿದ ಅನುದಾನವನ್ನೇ ಶೌಚಾಲಯ ಶುಚಿಗೊಳಿಸಲೂ ಬಳಸಬೇಕು ಎಂಬುದು ನಿಯಮ. ಆದರೆ ಶಾಲಾ ಶಿಕ್ಷಣ ಇಲಾಖೆಯ ಬಜೆಟ್‌ನಲ್ಲಿ ಈ ಅನುದಾನವನ್ನು ವಿವಿಧ ಉಪಶೀರ್ಷಿಕೆಗಳ ಅಡಿಯಲ್ಲಿ ಹೊಸ ಶೌಚಾಲಯ ನಿರ್ಮಾಣಕ್ಕೆ ಬಳಸಿಕೊಳ್ಳಲಾಗಿದೆ. ಈ ಆರ್ಥಿಕ ವರ್ಷದಲ್ಲಿ ಹೀಗೆ ಈಗಾಗಲೇ ₹20 ಕೋಟಿಯನ್ನು ಬಿಡುಗಡೆ ಮಾಡಲಾಗಿದೆ. ಈ ಅನುದಾನ ಮಾತ್ರವಲ್ಲದೇ, ಶಾಲೆಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರವು ಪ್ರತ್ಯೇಕ ಅನುದಾನವನ್ನು ನೀಡುತ್ತಿದೆ. ಇದರ ಹೊರತಾಗಿಯೂ ಶೌಚಾಲಯ ನಿರ್ವಹಣೆ ಮತ್ತು ದುರಸ್ತಿಗೆ ಮೀಸಲಿರಿಸಿದ ಅನುದಾನವನ್ನು ಹೊಸ ಶೌಚಾಲಯ ನಿರ್ಮಾಣಕ್ಕೆ ಬಳಸಿಕೊಳ್ಳಲಾಗಿದೆ. ಹೀಗಾಗಿಯೇ ಶೌಚಾಲಯ ನಿರ್ವಹಣೆಗೆ ಅನುದಾನ ಇಲ್ಲದೇ ಹೋಗುತ್ತದೆ.

‘ಪರಿಸ್ಥಿತಿ ಸ್ವಲ್ಪ ಬದಲು’

ಮಕ್ಕಳು ಶೌಚಾಲಯಗಳನ್ನು ಶುಚಿಗೊಳಿಸುತ್ತಿದ್ದ ವಿಡಿಯೊ ಮತ್ತು ಚಿತ್ರಗಳು ಬಹಿರಂಗವಾಗಿ, ಅದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಅದರ ಬೆನ್ನಲ್ಲೇ ರಾಜ್ಯ ಸರ್ಕಾರವು ಮಕ್ಕಳ ಮೂಲಕ ಶೌಚಾಲಯ ಶುಚಿಗೊಳಿಸುವುದನ್ನು ನಿಷೇಧಿಸಿ ಆದೇಶ ಹೊರಡಿಸಿತ್ತು. ಆನಂತರ ಹಲವು ಶಾಲೆಗಳಲ್ಲಿ ಆ ಸ್ಥಿತಿ ಬದಲಾಗಿದೆ.

‘ನಮ್ಮ ಶಾಲೆಯಲ್ಲೂ ಈವರೆಗೆ ವಿದ್ಯಾರ್ಥಿಗಳೇ ಶೌಚಾಲಯಗಳನ್ನು ಶುಚಿ ಮಾಡುತ್ತಿದ್ದರು. ಅದನ್ನು ನಿಷೇಧಿಸಿ ಸರ್ಕಾರ ಆದೇಶ ಹೊರಡಿಸಿದ ನಂತರ ವಿದ್ಯಾರ್ಥಿಗಳಿಂದ ಆ ಕೆಲಸ ಮಾಡಿಸುತ್ತಿಲ್ಲ. ಈಗ ಒಂದು ತಿಂಗಳಿಂದ ಹೊರಗಿನಿಂದ ಪೌರ ಕಾರ್ಮಿಕರೊಬ್ಬರನ್ನು ಕರೆಸಿ ಆ ಕೆಲಸ ಮಾಡಿಸಲಾಗುತ್ತಿದೆ’ ಎನ್ನುತ್ತಾರೆ ಬೆಂಗಳೂರು ನಗರ ಜಿಲ್ಲೆಯ ನಾಗರಬಾವಿ ಸಮೀಪದ ಸರ್ಕಾರಿ ಶಾಲೆಯ ಶಿಕ್ಷಕ. ‘ನಮ್ಮ ಶಾಲೆಯಲ್ಲಿ ಆರು ಶೌಚಾಲಯಗಳಿವೆ. ಈ ಹಿಂದೆ ವಿದ್ಯಾರ್ಥಿಗಳು ಸರದಿಯ ಮೇಲೆ ಅವುಗಳನ್ನು ಶುಚಿ ಮಾಡುತ್ತಿದ್ದರು. ಕೆಲವು ಶಿಕ್ಷಕರು ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರೂ, ಏನೂ ಪ್ರಯೋಜನವಾಗಿರಲಿಲ್ಲ. ಶೌಚಾಲಯ ಶುಚಿಮಾಡುವ ವಿದ್ಯಾರ್ಥಿಗಳಿಗೆ ಶಿಕ್ಷಕರು ಚಾಕೊಲೇಟ್‌ಗಳನ್ನು ಕೊಡುತ್ತಿದ್ದರು. ವಿದ್ಯಾರ್ಥಿಗಳೂ ಆ ವಿಷಯವನ್ನು ಹೊರಗೆ ಹೇಳುತ್ತಿರಲಿಲ್ಲ. ಆದರೆ ಈಗ ಸರ್ಕಾರ ಆದೇಶ ಹೊರಡಿಸಿದ ನಂತರ, ಪೋಷಕರೂ ಈ ಬಗ್ಗೆ ಪ್ರಶ್ನಿಸಲು ಆರಂಭಿಸಿದ್ದಾರೆ. ಇದು ಒಳ್ಳೆಯ ಬೆಳವಣಿಗೆ’ ಎಂದು ಅವರು ವಿವರಿಸಿದರು.





ಹೇಳಿದ್ದೊಂದು, ನೀಡಿದ್ದೊಂದು

ಹಿಂದಿನ ರಾಜ್ಯ ಸರ್ಕಾರವು ಶೌಚಾಲಯ ನಿರ್ವಹಣೆ ಮತ್ತು ದುರಸ್ತಿಗೆ ಎಂದು ₹50 ಕೋಟಿ ಅನುದಾನವನ್ನು 2022–23ರ ಬಜೆಟ್‌ನಲ್ಲಿ ಮೀಸಲಿರಿಸಿತ್ತು. ಆದರೆ ಆ ಅನುದಾನವು ಪೂರ್ಣ ಪ್ರಮಾಣದಲ್ಲಿ ಬಿಡುಗಡೆಯಾಗಿರಲಿಲ್ಲ ಮತ್ತು ಬಿಡುಗಡೆಯಾದ ಅನುದಾನವೂ ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಿರಲಿಲ್ಲ ಎಂಬುದನ್ನು ರಾಜ್ಯ ಸರ್ಕಾರದ ದಾಖಲೆಗಳೇ ಹೇಳುತ್ತವೆ.

ಕರ್ನಾಟಕ ಆರ್ಥಿಕ ಸಮೀಕ್ಷೆ 2022–23ರ ಪ್ರಕಾರ, ಸಮೀಕ್ಷೆ ಸಿದ್ದಪಡಿಸುವ ವೇಳೆಗೆ ಶೌಚಾಲಯ ನಿರ್ವಹಣೆ ಮತ್ತು ದುರಸ್ತಿ ಅನುದಾನದಲ್ಲಿ ಬಿಡುಗಡೆಯಾಗಿದ್ದದ್ದು ₹17.50 ಕೋಟಿ ಮಾತ್ರ. ಆ ವೇಳೆಗೆ ಅದರಲ್ಲಿ ಬಳಕೆಯಾಗಿರುವುದು ₹9.08 ಕೋಟಿಯಷ್ಟು ಅನುದಾನ ಎಂದು ಸಮೀಕ್ಷೆಯಲ್ಲಿ ವಿವರಿಸಲಾಗಿದೆ.

ಶಾಲಾ ನಿರ್ವಹಣೆಗೆ ನೀಡುವ ಅನುದಾನವೇ ಬೇರೆ

ಶಾಲಾ ನಿರ್ವಹಣೆಗೆ ಎಂದು ಹಿಂದಿನ ಸರ್ಕಾರವು ಪ್ರತಿ ಶಾಲೆಗೆ ಕನಿಷ್ಠ ₹6,500ರಿಂದ ಗರಿಷ್ಠ ₹9,000ರದವರೆಗೆ ವಾರ್ಷಿಕ ಅನುದಾನವನ್ನು ನೀಡುತ್ತಿತ್ತು. ಪ್ರಾಥಮಿಕ ಶಾಲೆಗಳಿಗೆ ಕಡಿಮೆ ಅನುದಾನ ದೊರೆತರೆ, ಪ್ರೌಢಶಾಲೆಗಳಿಗೆ ಗರಿಷ್ಠ ಮೊತ್ತದ ಅನುದಾನ ಹೋಗುತ್ತಿತ್ತು. 2023–24ನೇ ಸಾಲಿಗೆ ಸಂಬಂಧಿಸಿದಂತೆ ಜುಲೈನಲ್ಲಿ ಈಗಿನ ಸರ್ಕಾರವು ಮಂಡಿಸಿದ ಬಜೆಟ್‌ನಲ್ಲಿ ಈ ಅನುದಾನವನ್ನು ಹೆಚ್ಚಿಸಿತ್ತು.

ಶಾಲೆಗಳಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕನಿಷ್ಠ ₹20,000ದಿಂದ ಗರಿಷ್ಠ ₹45,000ರದವರೆಗೆ ಅನುದಾನವನ್ನು ಹೆಚ್ಚಿಸಲಾಗಿದೆ. ಆದರೆ ಈ ಅನುದಾನವನ್ನು ಶಾಲೆಯ ಎಲ್ಲಾ ಸ್ವರೂಪದ ನಿರ್ವಹಣೆಗೆ ಬಳಸಬೇಕು. ಶಾಲೆಯ ಕೊಠಡಿಗಳು, ಆವರಣವನ್ನು ಶುಚಿಯಾಗಿರಿಸಲು, ಮಧ್ಯಾಹ್ನದ ಬಿಸಿಯೂಟಕ್ಕೂ ಮುನ್ನ ಮಕ್ಕಳು ಕೈತೊಳೆಯಲು ಬಳಸುವ ಸೋಪುಗಳ ಖರೀದಿಗೆ, ಸ್ವಚ್ಛತಾ ಪರಿಕರಗಳ ಖರೀದಿಗೆ ಈ ಅನುದಾನವನ್ನು ಬಳಸಿಕೊಳ್ಳಬೇಕು. ಅದರಲ್ಲೇ ಶೌಚಾಲಯ ಶುಚಿಗೊಳಿಸಲೂ ಸ್ವಲ್ಪ ಅನುದಾನವನ್ನು ಬಳಸಿಕೊಳ್ಳಲು ಅವಕಾಶವಿದೆ.

2023ರ ಡಿಸೆಂಬರ್ 29ರಂದು ಶಾಲಾ ಶಿಕ್ಷಣ ಇಲಾಖೆ ಹೊರಡಿಸಿದ ಸುತ್ತೋಲೆಯಲ್ಲಿ, ಈ ಅನುದಾನವನ್ನು ಶೌಚಾಲಯ ನಿರ್ವಹಣೆಗೆ ಆದ್ಯತೆಯ ಮೇರೆಗೆ ಬಳಸಿಕೊಳ್ಳುವಂತೆ ಸೂಚಿಸಿದೆ. ಅನುದಾನ ಉಳಿದರೆ, ಅದನ್ನು ಶಾಲೆಯ ಇತರ ನಿರ್ವಹಣೆಗೆ ಬಳಸುವಂತೆ ಸೂಚಿಸಲಾಗಿದೆ. ಆದರೆ ಈ ಅನುದಾನವೂ ಶೌಚಾಲಯ ನಿರ್ವಹಣೆಗೆ ಸಾಲುವುದಿಲ್ಲ ಎಂಬುದು ಶಾಲಾ ಶಿಕ್ಷಕರ ಅಳಲು.

‘ನಮ್ಮ ಶಾಲೆಗೆ ಶೌಚಾಲಯ ಶುಚಿಗೊಳಿಸಲು ಬರುವ ವ್ಯಕ್ತಿ ಒಂದು ಶೌಚಾಲಯಕ್ಕೆ ₹50 ಪಡೆದುಕೊಳ್ಳುತ್ತಾರೆ. ಆರು ಶೌಚಾಲಯಕ್ಕೆ ₹300ರಂತೆ ತಿಂಗಳಲ್ಲಿ ಎಂಟು ಬಾರಿ ಶುಚಿಗೊಳಿಸಲು ₹2,400 ಆಗುತ್ತದೆ. 10 ತಿಂಗಳ ಶಾಲಾ ಅವಧಿಯಲ್ಲಿ ಆ ವ್ಯಕ್ತಿಗೆ ಕೂಡಲೇ ₹24,000 ವೆಚ್ಚವಾಗುತ್ತದೆ. ಇನ್ನು ಅದಕ್ಕೆ ಫಿನಾಯಿಲ್, ಪೊರಕೆಗಳ ಖರ್ಚು ಬೇರೆ. ಶಾಲಾ ನಿರ್ವಹಣೆಗೆ ಎಂದು ಸರ್ಕಾರ ನಮ್ಮ ಶಾಲೆಗೆ ₹33,000 ನೀಡಿದೆ. ಅದರಲ್ಲೇ ಡಸ್ಟರ್, ಪೊರಕೆಗಳನ್ನು ಖರೀದಿಸಬೇಕು. ಸೋಪು ಮತ್ತಿತರ ಸಾಮಗ್ರಿಗಳನ್ನು ಖರೀದಿಸಬೇಕು. ₹33,000 ಮೊತ್ತದ ವಾರ್ಷಿಕ ಅನುದಾನ ಈ ಎಲ್ಲಾ ಕೆಲಸಗಳಿಗೆ ಎಲ್ಲಿ ಸಾಲುತ್ತದೆ’ ಎಂಬುದು ಬೆಂಗಳೂರಿನ ಮೈಸೂರು ರಸ್ತೆಯ ಬ್ಯಾಟರಾಯನಪುರದ ಸರ್ಕಾರಿ ಶಾಲೆಯ ಶಿಕ್ಷಕರ ಪ್ರಶ್ನೆ.

ಶುಚಿತ್ವಕ್ಕೆ ಮಾರ್ಗಸೂಚಿ

ಕೇಂದ್ರ ಸರ್ಕಾರವು ಸ್ವಚ್ಛ ಭಾರತ–ಸ್ವಚ್ಛ ವಿದ್ಯಾಲಯ ಅಭಿಯಾನದ ಅಡಿಯಲ್ಲಿ ಶಾಲೆಗಳಲ್ಲಿ ಶುಚಿತ್ವ ನಿರ್ವಹಣೆಗೆ ಮಾರ್ಗಸೂಚಿಗಳನ್ನು 2014ರಲ್ಲಿ ರೂಪಿಸಿತ್ತು. ಆ ಮಾರ್ಗಸೂಚಿಗಳು ಈಗಲೂ ಜಾರಿಯಲ್ಲಿವೆ. ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿರುವ ಕಾರಣ ಕೇಂದ್ರ ಸರ್ಕಾರವು ಯಾವುದೇ ಆದೇಶ ಹೊರಡಿಸಿದರೂ, ರಾಜ್ಯ ಸರ್ಕಾರಗಳು ಪ್ರತ್ಯೇಕವಾಗಿ ಆದೇಶ ಹೊರಡಿಸಬೇಕಾಗುತ್ತದೆ. ಬಹುತೇಕ ರಾಜ್ಯಗಳು ಅಂತಹ ಆದೇಶವನ್ನು ಹೊರಡಿಸಿಲ್ಲ. ಹೀಗಾಗಿ ಈ ಮಾರ್ಗಸೂಚಿಗಳು ಅನುಷ್ಠಾನಕ್ಕೆ ಬಂದಿಲ್ಲ.

ರಾಜಸ್ಥಾನ ಮತ್ತು ಮಧ್ಯಪ್ರದೇಶದಲ್ಲಿ ಈ ಮಾರ್ಗಸೂಚಿಗಳ ಅನ್ವಯ ಶಾಲಾ ಶೌಚಾಲಯಗಳ ನಿರ್ವಹಣೆಗೆ ಎಂದು ಗರಿಷ್ಠ ಮೊತ್ತದ ಅನುದಾನವನ್ನು ನೀಡಲಾಗುತ್ತಿದೆ. ರಾಜಸ್ಥಾನದಲ್ಲಿ ಪ್ರತಿ ಶಾಲೆಗೆ ವಾರ್ಷಿಕ ₹25,000ರಂತೆ ಅನುದಾನವನ್ನು ಶೌಚಾಲಯವನ್ನು ಶುಚಿಗೊಳಿಸಲೆಂದೇ ನೀಡಲಾಗುತ್ತಿದೆ.

- ಶಾಲಾ ಶೌಚಾಲಯಗಳನ್ನು ಪ್ರತಿದಿನ ಶುಚಿಗೊಳಿಸಬೇಕು. ಅದರ ಮೇಲ್ವಿಚಾರಣೆಗೆ ಶಿಕ್ಷಕರೊಬ್ಬರನ್ನು ನಿಯೋಜಿಸಬೇಕು
- ಯಾವುದೇ ರೀತಿಯ ಶುಚಿ ಕಾರ್ಯಕ್ಕೆ ಮಕ್ಕಳನ್ನು ಬಳಸಿಕೊಳ್ಳಬಾರದು
- ಶಾಲಾ ನಿರ್ವಹಣೆಗೆ ವಾರ್ಷಿಕ ಗುತ್ತಿಗೆ ನೀಡಬೇಕು. ಅದರಲ್ಲಿ ಶೌಚಾಲಯ ನಿರ್ವಹಣೆ ಮತ್ತು ದುರಸ್ತಿ ಕಾರ್ಯವನ್ನೂ ಸೇರಿಸಬೇಕು
- ಶೌಚಾಲಯ ನಿರ್ವಹಣೆಗೆ ಅಗತ್ಯವಿರುವ ಬಕೆಟ್, ಪೊರಕೆ, ಬ್ರಷ್ ಮತ್ತು ಫಿನಾಯಿಲ್‌ನಂತಹ ರಾಸಾಯನಿಕಗಳನ್ನು ವಾರ್ಷಿಕ ಗುತ್ತಿಗೆ ಆಧಾರದಲ್ಲೇ ಖರೀದಿಸಬೇಕು
- ಶೌಚಾಲಯ ನಿರ್ವಹಣೆಗೆ ವ್ಯಕ್ತಿಗಳನ್ನು ನೇಮಿಸಿಕೊಳ್ಳಬೇಕು
- ಶೌಚಾಲಯಗಳ ನಿರ್ಮಾಣ ಮತ್ತು ದುರಸ್ತಿ ವೇಳೆ ಫ್ಲಶ್‌ಟ್ಯಾಂಕ್‌ಗಳ ಅಳವಡಿಕೆಗೆ ಒತ್ತು ನೀಡಬೇಕು, ಫ್ಲಶ್‌ಟ್ಯಾಂಕ್‌ಗಳು ಇದ್ದರೆ ಶುಚಿತ್ವ ಕಾಪಾಡಿಕೊಳ್ಳುವುದು ಸುಲಭವಾಗುತ್ತದೆ

ಆಧಾರ: ರಾಜ್ಯ ಬಜೆಟ್ 2022–23 ಮತ್ತು 2023–24, ಕರ್ನಾಟಕ ಆರ್ಥಿಕ ಸಮೀಕ್ಷೆ 2022–23, ಶಾಲಾ ಶಿಕ್ಷಣ ಇಲಾಖೆಯ ಆಂತರಿಕ ಬಜೆಟ್, ಶಾಲಾ ಶಿಕ್ಷಣ ಇಲಾಖೆಯ ಆದೇಶ ಮತ್ತು ಸುತ್ತೋಲೆಗಳು

ಸಿನಿ ಬಿಟ್ಸ್

‘ಮೇಘ’ ಸಂದೇಶ ನೀಡಿದ ಕಿರಣ್ ರಾಜ್

‘ಕನ್ನಡತಿ’ ಧಾರಾವಾಹಿ ಖ್ಯಾತಿಯ ನಟ ಕಿರಣ್ ರಾಜ್ ಹಾಗೂ ಕಾಜಲ್ ಕುಂದರ್ ಜೋಡಿಯಾಗಿ ನಟಿಸಿರುವ ‘ಮೇಘ’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಖ್ಯಾತ ಗೀತರಚನೆಕಾರ ವಿ.ನಾಗೇಂದ್ರ ಪ್ರಸಾದ್ ಚಿತ್ರದ ಟೀಸರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಕೋರಿದರು.

‘ನಾನು ಮೂಲತಃ ಐಟಿ ಉದ್ಯೋಗಿ. ಕೋವಿಡ್ ನಂತರ ಐಟಿ ಕೆಲಸ ಬಿಟ್ಟು ವಿ.ನಾಗೇಂದ್ರಪ್ರಸಾದ್ ಅವರ ಬಳಿ ಸಿನಿಮಾ ಕೆಲಸ ಕಲಿಯಲು ಆರಂಭಿಸಿದೆ. ‘ಮೇಘ’ಗಳು ಆಕಾಶದಲ್ಲಿ ಯಾವಾಗಲೂ ಒಟ್ಟಾಗೆ ಚಲಿಸುತ್ತವೆ. ಆದರೆ ಮಳೆಯನ್ನು ಎಲ್ಲೋ ಸುರಿಸುತ್ತವೆ. ಇದನ್ನೇ ಇಟ್ಟುಕೊಂಡು ಪ್ರೇಮ ಕಥೆ ಸಿದ್ಧಮಾಡಿಕೊಂಡೆ. ನಮ್ಮ ಸಿನಿಮಾದಲ್ಲಿ ‘ಮೇಘ’ ಎಂದರೆ ಪ್ರೀತಿ’’ ಎಂದರು ನಿರ್ದೇಶಕ ಚರಣ್.

ಯತೀಶ್ ಹೆಚ್.ಆರ್ ನಿರ್ಮಾಣ ಮಾಡಿರುವ ಈ ಚಿತ್ರ ಬಿಡುಗಡೆಗೆ ಸಿದ್ಧವಿದೆ. ಐದು ಹಾಡುಗಳಿದ್ದು, ಜೋಯಲ್ ಸಕ್ಕರಿ ಸಂಗೀತ ಸಂಯೋಜಿಸಿದ್ದಾರೆ. ಗೌತಮ್ ನಾಯಕ್ ಛಾಯಾಚಿತ್ರಗ್ರಹಣ ಹಾಗೂ ಸಂಕಲನ ಚಿತ್ರಕ್ಕಿದೆ.


ಕಿರಣ್ ರಾಜ್, ಕಾಜಲ್ ಕುಂದರ್

‘ಮತ್ಸ್ಯಗಂಧ’ನಾದ ಪೃಥ್ವಿ

ಕೋಸ್ಟಲ್‌ವುಡ್‌ನಲ್ಲಿ ಮಿಂಚಿ ಚಂದನವನಕ್ಕೆ ಕಾಲಿಟ್ಟಿದ್ದ ನಟ ಪೃಥ್ವಿ ಅಂಬಾರ್ ಮತ್ತೆ ಕರಾವಳಿ ಮಣ್ಣಿಗೆ ಮರಳಿದ್ದಾರೆ. ಉತ್ತರ ಕನ್ನಡದ ಹೊನ್ನಾವರದ ಹಿನ್ನೆಲೆಯಲ್ಲಿ ನಡೆಯುವ ಕಥೆಯೊಂದನ್ನು ಹೊತ್ತ ‘ಮತ್ಸ್ಯಗಂಧ’ ಸಿನಿಮಾದಲ್ಲಿ ಪೃಥ್ವಿ ಪೊಲೀಸ್ ಅಧಿಕಾರಿಯಾಗಿ ಮಿಂಚಿದ್ದಾರೆ.

ಚಿತ್ರದ ಫಸ್ಟ್‌ಲುಕ್ ಟೀಸರ್ ಇತ್ತೀಚೆಗೆ ತೆರೆಕಂಡಿದೆ. ‘ದಿಯಾ’ ಬಳಿಕ, ‘ಶುಗರ್‌ಲೆಸ್’, ‘ಬೈರಾಗಿ’, ‘ದೂರದರ್ಶನ’ ಸಿನಿಮಾಗಳಲ್ಲಿ ಪೃಥ್ವಿ ಮಿಂಚಿದ್ದರು. ಇವರ ನಟನೆಯ ‘ಫಾರ್ ರಿಜಿಸ್ಟ್ರೇಷನ್’, ‘ಜೂನಿ’, ‘ಭುವನಂ ಗಗನಂ’ ಇನ್ನಷ್ಟೇ ತೆರೆ ಕಾಣಬೇಕಿದೆ. ಜೊತೆಗೆ ‘ಮತ್ಸ್ಯಗಂಧ’ ಸಿನಿಮಾವೂ ಬಿಡುಗಡೆಗೆ ಸಜ್ಜಾಗಿದೆ. ಈ ಸಿನಿಮಾ ಫೆ.23ರಂದು ತೆರೆಕಾಣಲಿದೆ.

ಸಹ್ಯಾದ್ರಿ ಪ್ರೊಡಕ್ಷನ್ಸ್ ಬ್ಯಾನರ್‌ನಡಿ ಬಿ.ಎಸ್ ವಿಶ್ವನಾಥ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಕನ್ನಡ ಪಿಕ್ಚರ್ ಅರ್ಪಿಸುವ ಈ ಸಿನಿಮಾವನ್ನು ದೇವರಾಜ್ ಪೂಜಾರಿ ನಿರ್ದೇಶಿಸಿದ್ದಾರೆ. ಇದು ದೇವರಾಜ್ ಪೂಜಾರಿ ಅವರ ನಿರ್ದೇಶನದ ಎರಡನೇ ಚಿತ್ರ. ದೇವರಾಜ್ ಈ ಹಿಂದೆ ‘ಕಿನಾರೆ’ ಅನ್ನುವ ಸಿನಿಮಾ ಮಾಡಿದ್ದರು. ‘ಮತ್ಸ್ಯಗಂಧ’ ಚಿತ್ರದ ಫಸ್ಟ್‌ಲುಕ್ ಟೀಸರ್‌ನಲ್ಲಿ ಖಡಕ್ ಪೊಲೀಸ್ ಅಧಿಕಾರಿಯಾಗಿ ಪೃಥ್ವಿ ಕಾಣಿಸಿಕೊಂಡಿದ್ದಾರೆ. ಲೋಕಿಸೌರವ್, ಪ್ರಶಾಂತ್ ಸಿದ್ಧಿ, ನಾಗರಾಜ್ ಬೈಂದೂರ್, ಶರತ್ ಲೋಹಿತಾಶ್ವ ಮೈಮ್ ರಾಮದಾಸ್ ಸೇರಿದಂತೆ ಹಲವು ಕಲಾವಿದರು ಚಿತ್ರದಲ್ಲಿದ್ದಾರೆ. ಚಿತ್ರಕ್ಕೆ ಪ್ರಶಾಂತ್ ಸಿದ್ದಿ ಸಂಗೀತ ಸಂಯೋಜನೆ ಮಾಡಿರುವುದು ವಿಶೇಷ.


ಪೃಥ್ವಿ ಅಂಬಾರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

‘ಕೋಡಂಗಿ ಆಯುಷ್ಮಾನ್ ಖುರಾನ ‘ದಿಲ್ ದಿಲ್ ಪಾಕಿಸ್ತಾನ’ ಎಂದು ಹಾಡು ಹೇಳುತ್ತಿದ್ದಾನೆ. ಇದೇ ವೇಳೆ ಪಾಕಿಸ್ತಾನಿಗರು ನಮ್ಮ ಸೈನಿಕರನ್ನು, ನಮ್ಮ ಮುಗ್ಧ ಜನರನ್ನು ಹತ್ಯೆ ಮಾಡುತ್ತಿದ್ದಾರೆ. ರಾಮಮಂದಿರದ ಕುರಿತು ಈತನಿಗೆ ತಲೆಬಿಸಿಯಾಗಿದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಇದೇ ಕಾರಣಕ್ಕೆ ನಾನು ಬಾಲಿವುಡ್ ಮಂದಿಯನ್ನು ನಂಬುವುದಿಲ್ಲ. ಹಣಕ್ಕಾಗಿ ಅವರು ತಮ್ಮ ತಾಯಿಯನ್ನೂ ಮಾರುತ್ತಾರೆ’ ಎಂದು @MrSinha ಎನ್ನುವ ಖಾತೆ ‘ಎಕ್ಸ್’ನಲ್ಲಿ ಪೋಸ್ಟ್ ಹಂಚಿಕೊಂಡಿದೆ. ಇದೇ ಅಭಿಪ್ರಾಯವನ್ನು ಸಾವಿರಾರು ಮಂದಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಬಾಲಿವುಡ್ ನಟ ಆಯುಷ್ಮಾನ್ ಖುರಾನ ಅವರು ವೇದಿಕೆಯೊಂದರಲ್ಲಿ ‘ದಿಲ್ ದಿಲ್ ಪಾಕಿಸ್ತಾನ’ ಎಂದು ಹಾಡಿರುವ ವಿಡಿಯೊವನ್ನು ಪೋಸ್ಟ್‌ನೊಂದಿಗೆ ಹಂಚಿಕೊಳ್ಳಲಾಗುತ್ತಿದೆ. ನಟ ಹಾಡಿರುವುದನ್ನು ತಿರುಚಲಾದ ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ.



ದುಬೈನಲ್ಲಿ 2017ರಲ್ಲಿ ನಡೆದ ಕಾರ್ಯಕ್ರಮದ ವಿಡಿಯೊ ಇದಾಗಿದೆ. ಕಾರ್ಯಕ್ರಮದ ವಿಡಿಯೊವನ್ನು ಆಯುಷ್ಮಾನ್ ಅವರು ತಮ್ಮ ‘ಎಕ್ಸ್’ ಖಾತೆಯಲ್ಲಿಯೂ ಹಂಚಿಕೊಂಡಿದ್ದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ, ಭಾರತದ ವಿವಿಧ ರಾಜ್ಯಗಳ ಜನರನ್ನು ಉದ್ದೇಶಿಸಿ, ಆಯುಷ್ಮಾನ್ ಅವರು ಪಂಜಾಬಿ ಹಾಡನ್ನು ಹಾಡಿದ್ದರು. ಇದೇ ವೇಳೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪಾಕಿಸ್ತಾನದ ಜನರನ್ನು ಉದ್ದೇಶಿಸಿ ‘ದಿಲ್ ದಿಲ್ ಪಾಕಿಸ್ತಾನ’ ಹಾಡನ್ನು ಹಾಡಿದ್ದರು. ಹಲವು ಬಾಲಿವುಡ್ ಚಿತ್ರಗೀತೆಗಳನ್ನು ಹಾಡಿದ್ದರು. ಕೊನೆಯಲ್ಲಿ ‘ಚಕ್ ದೇ ಇಂಡಿಯಾ’ ಹಾಡನ್ನು ಹಾಡಿ ಕಾರ್ಯಕ್ರಮವನ್ನು ಮುಕ್ತಾಯಗೊಳಿದ್ದರು. ರಾಮಮಂದಿರ ಉದ್ಘಾಟನೆಗೆ ಆಯುಷ್ಮಾನ್ ಅವರನ್ನೂ ಆಹ್ವಾನಿಸಲಾಗಿತ್ತು. ಇತರ ಬಾಲಿವುಡ್ ನಟ–ನಟಿಯರೊಂದಿಗೆ ಅವರೂ ಅಯೋಧ್ಯೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ರಾಮಮಂದಿರ ಉದ್ಘಾಟನೆಯಿಂದ ಆಯುಷ್ಮಾನ್ ಅವರಿಗೆ ತಲೆಬಿಸಿಯಾಗಿ, ದಿಲ್ ದಿಲ್ ಪಾಕಿಸ್ತಾನ ಗೀತೆಯನ್ನು ಹಾಡಿದ್ದಾರೆ ಎಂಬುದು ಸುಳ್ಳು ಮಾಹಿತಿ ಎಂದು ‘ದಿ ಕ್ವಿಂಟ್’ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು

ಗಾಸಿಪ್ ಎಂಬ ಕಾಯಿಲೆ


ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಒಂದೂರಲ್ಲಿ ಒಬ್ಬ ವ್ಯಕ್ತಿಯಿದ್ದ. ಬೇರೆಯವರನ್ನು ಟೀಕಿಸುತ್ತ ದೂಷಿಸುತ್ತ ಇರುವುದೇ ಅವನ ಸ್ವಭಾವ. ಒಮ್ಮೆ ಊರಲ್ಲಿ ಯಾವುದೋ ಕಳ್ಳತನವಾದಾಗ ಪಕ್ಕದ ಮನೆಯ ತರುಣನೇ ಕಳ್ಳ ಎಂದು ಸುದ್ದಿ ಹಬ್ಬಿಸಿದ. ತರುಣನನ್ನು ಪೊಲೀಸರು ಬಂಧಿಸಿದರು. ಕೆಲ ದಿನಗಳ ನಂತರ ನಿಜವಾದ ಕಳ್ಳ ಸಿಕ್ಕಿದ ಮತ್ತು ತರುಣ ನಿರಪರಾಧಿ ಎಂದು ಬಿಡುಗಡೆ ಮಾಡಲ್ಪಟ್ಟ.

ಅವಮಾನಿತನಾದ ಯುವಕ ಆ ವ್ಯಕ್ತಿಯ ಮೇಲೆ ಮಾನನಷ್ಟ ಮೊಕದ್ದಮೆ ಹೂಡಿದ. ನ್ಯಾಯಾಲಯದಲ್ಲಿ ಆ ವ್ಯಕ್ತಿ, ‘ನಾನು ಸುಮ್ಮನೆ ಹೇಳಿದ್ದು, ಅದರಿಂದ ಯಾರಿಗೇನೂ ತೊಂದರೆಯಾಗುವುದಿಲ್ಲವಲ್ಲ’ ಎಂದ. ವಿಚಾರಣೆ ಮುಗಿಯಿತು. ಎದ್ದು ಹೋಗುವ ಮುನ್ನ ನ್ಯಾಯಾಧೀಶರು ಆತನಿಗೆ ಹೇಳಿದರು, ‘ನೀನು ಆ ಯುವಕನ ಬಗ್ಗೆ ಹೇಳಿದ ಮಾತುಗಳನ್ನೆಲ್ಲ ಒಂದು ಕಾಗದದ ಮೇಲೆ ಬರಿ, ಕಾಗದವನ್ನು ಚೂರು ಚೂರು ಮಾಡಿ ಮನೆಗೆ ಹೋಗುವಾಗ ರಸ್ತೆಯುದ್ದಕ್ಕೂ ಚೆಲ್ಲುತ್ತ ಹೋಗು, ನಾಳೆ ತೀರ್ಪು ಕೇಳಲು ಬಾ’.

ಮಾರನೇ ದಿನ ತೀರ್ಪು ಕೇಳಲು ಬಂದಾಗ ನ್ಯಾಯಾಧೀಶರು, ‘ನಿನ್ನೆ ನೀನು ಚೆಲ್ಲಿದ ಕಾಗದದ ಚೂರುಗಳನ್ನು ವಾಪಾಸು ತೆಗೆದುಕೊಂಡು ಬಾ’ ಎಂದರು. ಆಗ ಆ ವ್ಯಕ್ತಿ, ‘ಅವು ಈಗ ಎಲ್ಲಿವೆ, ಗಾಳಿಗೆ ಹಾರಿ ಹೋಗಿವೆ. ಅವನ್ನು ಹುಡುಕಿ ತರುವುದು ಸಾಧ್ಯವಿಲ್ಲದ ಮಾತು’ ಎಂದ. ಆಗ ನ್ಯಾಯಾಧೀಶರೆಂದರು, ‘ಅದೇ ರೀತಿ ಸುಮ್ಮನೆ ಒಬ್ಬ ವ್ಯಕ್ತಿಯ ಬಗ್ಗೆ ಆಡಿದ ಮಾತುಗಳು ಆತನ ಘನತೆಗೆ ಹಾನಿ ಮಾಡಬಲ್ಲವು, ಕೆಲವೊಮ್ಮೆ ತಪ್ಪನ್ನು ಸರಿಪಡಿಸಲು ಸಾಧ್ಯವೇ ಇಲ್ಲವಾಗಬಹುದು’. ಆ ವ್ಯಕ್ತಿಗೆ ತಪ್ಪಿನ ಅರಿವಾಗಿ ಯುವಕನ ಹತ್ತಿರ ಕ್ಷಮೆ ಯಾಚಿಸಿದ.

ನಾಲ್ಕು ಮಂದಿಯ ಗುಂಪಿನಲ್ಲಿ ನೀವು ಕುಳಿತಿದ್ದೀರಿ ಎಂದುಕೊಳ್ಳಿ. ನಿಮ್ಮ ಬಗ್ಗೆ ಏನಾದರೂ ಚರ್ಚೆ ಆಗಬೇಕೇ? ಹಾಗಾದರೆ ಅಲ್ಲಿಂದ ಎದ್ದು ಹೋಗಿ ಎಂಬ ನಗೆಹನಿ ವಾಸ್ತವವೇ. ಮತ್ತೊಬ್ಬರ ಬಗ್ಗೆ ಹಿಂದಿನಿಂದ ಮಾತಾಡುವ ಗಾಸಿಪ್ ಎಂಬುದು ಅತ್ಯಂತ ಸಾಮಾನ್ಯ ಸಂಗತಿ. ಸತ್ಯ ಗೊತ್ತಿಲ್ಲದೇ ಯಾರ ಬಗ್ಗೆಯಾದರೂ ಮಾತಾಡುವುದು ತಪ್ಪು. ಈ ಅವಿವೇಕಿತನದ ಕೆಲಸದಿಂದ ಒಬ್ಬರ ವ್ಯಕ್ತಿತ್ವಕ್ಕೆ ಧಕ್ಕೆಯಾಗಬಹುದು. ತಮ್ಮ ತಪ್ಪೇ ಇಲ್ಲದೇ ಅವರು ಶಿಕ್ಷೆ ಅನುಭವಿಸುವಂತಾಗಬಹುದು. ಅದೂ ಅಲ್ಲದೇ, ನಮ್ಮ ಕೈಲಿರುವ ಕೆಂಡ ಬೇರೆಯವರನ್ನು ಸುಡುವ ಮುಂಚೆ ನಮ್ಮನ್ನೇ ಸುಡುವಂತೆ ಇತರರ ಬಗೆಗಿನ ಕೆಟ್ಟ ಮಾತುಗಳು ನಮ್ಮ ವ್ಯಕ್ತಿತ್ವದ ಕನ್ನಡಿಯಾಗುತ್ತವೆ. ಸದಾ ಬೇರೆಯವರ ಬಗ್ಗೆ ಕೆಟ್ಟ ಮಾತುಗಳನ್ನಾಡುವ ವ್ಯಕ್ತಿಯನ್ನು ಯಾರೂ ಗೌರವಿಸುವುದಿಲ್ಲ. ಗಾಸಿಪ್ ಎಂಬುದೊಂದು ರೋಗ, ಅದರಿಂದ ದೂರವಿರುವುದು ನಮಗೂ ಸಮಾಜಕ್ಕೂ ಒಳ್ಳೆಯದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಫೆಬ್ರುವರಿ 1, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಕೃಷ್ಣ ಷಷ್ಠಿ ಗಂ. 14-04 ನಕ್ಷತ್ರ: ಚಿತ್ತಾ ಗಂ. 27-49 ಯೋಗ: ಧೃತಿ ಗಂ. 12-28 ಕರಣ: ವಣಿಜ ಗಂ. 14-04, ಮಕರ ಮಾಸದ 16 ನೇ ದಿನ, ಮಳೆನಕ್ಷತ್ರ: ಶ್ರವಣ 3.

ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 07-01 ಸೂರ್ಯಾಸ್ತ : 06-27

ಮುಸ್ಲಿಂ ದಿನಾಂಕ : 20 ರಜಬ್

ಅದೃಷ್ಟ ಸಂಖ್ಯೆ : 4, 11

ಮೇಷ: ಪ್ರೀತಿಸುವವರ ಮಾರ್ಗದರ್ಶನ ಈ ದಿನ ದೊರೆಯಲಿದ್ದು, ಹೊಸ ಚೈತನ್ಯ ತುಂಬಿಬರಲಿದೆ. ಅಗಾಧ ಜ್ಞಾನ ಶಕ್ತಿ ಹೊರ ಹೊಮ್ಮಿ ಬರಲು ಸೂಕ್ತ ಕಾಲವಿದು. ನೇತ್ರ ಚಿಕಿತ್ಸಕರಿಗೆ ಅಧಿಕ ಲಾಭವಿರುವುದು.

ವೃಷಭ: ಹಲವು ಬಗೆಯ ಖರ್ಚು ವೆಚ್ಚಗಳನ್ನು ಮಾಡಬೇಕಾದರೂ ಆದಾಯದ ಹೊಸ ಮೂಲವೊಂದು ಕುಡಿಯೊಡೆದು ಲಾಭ ಬರುವುದರಿಂದ ಸಂತೋಷ-ಗೊಳ್ಳುವಿರಿ. ಹೊಸ ಕೆಲಸಕ್ಕೆ ಪ್ರಯತ್ನಿಸಬಹುದು.

ಮಿಥುನ: ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿರುವವರಿಗೆ ವ್ಯಾಪಾರಗಳಲ್ಲಿ ಹೇಳುವ ಲಾಭವಿಲ್ಲದ್ದಿದ್ದರೂ ಹೆದರುವ ಅವಶ್ಯಕತೆ ಇರುವುದಿಲ್ಲ. ಅದು ತಾತ್ಕಾಲಿಕವಷ್ಟೇ. ಬದಲಾಗಿ ಪಾಲುದಾರಿಕೆಯಲ್ಲಿ ಲಾಭ ಗಳಿಸುವಿರಿ.

ಕರ್ಕಾಟಕ: ಹಿಡಿತಕ್ಕೆ ಸಿಕ್ಕಿರುವ ಕೆಲಸಗಳನ್ನು ಸಮರ್ಥವಾಗಿ ಕಾರ್ಯರೂಪಕ್ಕೆ ತರುವಲ್ಲಿ ಇಂದಿನ ಪ್ರಯತ್ನ ಯಶಸ್ಸನ್ನು ಉಂಟುಮಾಡುವುದು. ಗುರು ವಾಕ್ಯವನ್ನು ಅಕ್ಷರಶಃ ಪರಿಪಾಲನೆ ಮಾಡುವುದನ್ನು ಮರೆಯದಿರಿ.

ಸಿಂಹ: ಯೋಜನೆ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚೆ ನಡೆಸುವುದರಿಂದ ಫಲಕಾರಿಯಾಗುತ್ತದೆ. ರೈತರಿಗೆ ಲಾಭ ಅದರಲ್ಲೂ ತೆಂಗಿನಕಾಯಿ ಬೆಳೆಗಾರರಿಗೆ ಅಧಿಕ ಬೆಲೆ ಬರುತ್ತದೆ.

ಕನ್ಯಾ: ದಿನದ ಗುತ್ತಿಗೆಯಂಥ ಕೆಲಸದ ವೃತ್ತಿಯವರಿಗೆ ಆಕಸ್ಮಿಕ ರೀತಿಯಲ್ಲಿ ಉದ್ಯೋಗ ದೊರೆತು ಸಂತೋಷ. ಪ್ರಭಾವಿ ವ್ಯಕ್ತಿಯಿಂದ ನಿಮ್ಮ ಕಾರ್ಯಸಾಧನೆ ಹಾಗೂ ಸಾಮಾಜಿಕವಾಗಿ ಅನುಕೂಲ ಆಗಲಿದೆ.

ತುಲಾ: ಮೇಲಿದ್ದ ಆಪಾದನೆಗಳು ದೂರಾಗಿ, ಮೇಲಧಿಕಾರಿಗಳಿಂದ ಗೌರವವನ್ನು ಹಿಂತಿರುಗಿ ಪಡೆಯುವ ಸುದಿನ ಇದಾಗಲಿದೆ. ಸದಾಕಾಲ ಪಕ್ಕದಲ್ಲಿಯೇ ಇರುವ ಪರಿಚಿತರಿಂದ ವಂಚನಾ ಪ್ರಸಂಗ ಇರಲಿದೆ.

ವೃಶ್ಚಿಕ: ಯೋಜನೆಗಳಲ್ಲಿ ಮುಂದಾಳತ್ವ ವಹಿಸಿ ಮತ್ತು ನಿಮ್ಮ ತಂಡ ಎದು-ರಿಸುತ್ತಿರುವ ಪ್ರಮುಖ ವಿಷಯಗಳ ತೊಂದರೆಯನ್ನು ನಿವಾರಣೆ ಮಾಡುವ ಸಾಮರ್ಥ್ಯ ಸಿಗಲಿದೆ. ಮಕ್ಕಳ ಆರೈಕೆಯ ಬಗ್ಗೆ ಅಧಿಕ ಗಮನವಿರಲಿ.

ಧನು: ಪರಮಾಪ್ತರ ಭೇಟಿ ಸಂಭವದಂಥ ಮನಸ್ಸಿಗೆ ಮುದ ನೀಡುವ ಸಂಗತಿಗಳು ನಡೆಯಲಿವೆ. ವರ್ತಕರಿಗೆ ಹೊಸ ವಸ್ತುಗಳ ವ್ಯಾಪಾರದಿಂದ ಲಾಭವಿರಲಿದೆ. ಹೊಸ ಕಾರ್ಯಕ್ರಮ ಹಮ್ಮಿಕೊಳ್ಳಲು ಇದು ಸೂಕ್ತ ಕಾಲ.

ಮಕರ: ಆಸೆ ಆಕಾಂಕ್ಷೆಗಳಿಗೆ ಅಥವಾ ಯೋಜನೆಗಳಿಗೆ ನಿಮ್ಮವರಿಂದಲೇ ಅಡ್ಡಿ ಎದುರಾಗಬಹುದು. ದಾಂಪತ್ಯ ಜೀವನದಲ್ಲಿ ತಾಳ್ಮೆ, ಹೊಂದಾಣಿಕೆಯಿಂದ ಮುಂದುವರಿಯಿರಿ. ಮಕ್ಕಳ ಖುಷಿಗಾಗಿ ಆಟಿಕೆಯ ವಸ್ತು ಕೊಳ್ಳುವಿರಿ.

ಕುಂಭ: ಆಲೋಚಿಸಿದ ರೀತಿಯಲ್ಲಿ ನಿಮ್ಮ ಕೆಲಸಗಳೆಲ್ಲವೂ ನಡೆದು ನೆಮ್ಮದಿ ಕಾಣುವಿರಿ. ಅವಶ್ಯಕತೆಗಿಂತ ಹೆಚ್ಚಾಗಿ ಖರ್ಚುಗಳನ್ನು ಮಾಡಬೇಡಿ. ಕೃಷಿ ಕ್ಷೇತ್ರದಲ್ಲಿನ ತುಸು ಚೇತರಿಕೆಯು ರೈತರಿಗೆ ನೆಮ್ಮದಿ ತರುವುದು.

ಮೀನ: ಸಹೋದರರಲ್ಲಿನ ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದು ತಂದೆಯವರ ಮಾತಿನಂತೆಯೇ ನಡೆಯಲು ಒಪ್ಪುವಿರಿ. ಸಾರ್ಥಕವಾದ ಕಾರ್ಯ ಮಾಡಿ ಮುಗಿಸಿದ ತೃಪ್ತಿ ತೋರಿಬರಲಿದೆ.

ಪದಬಂಧ 5578


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತೆನಾಲಿರಾಮನಿಗಿದ್ದ ಬಿರುದು (5)
4.ಈತ ಸಂಪ್ರದಾಯ ವಿರೋಧಿ (3)
5.ಅವಸರಕ್ಕೊಂದು ಪರ್ಯಾಯ ಪದ (3)
6.ಕೆಸರಿನಲ್ಲಿ ಅರಳಿದ ನೈದಿಲೆ (3)
8.ಅವನ ಜೊತೆಯಲ್ಲಿ ನೋಡಿರುವ ಅರಣ್ಯ (2)
9.ಜಾಗರೂಕತೆಯಿಂದ ವೀಕ್ಷಿಸಿದ ಸ್ಥಳ (2)
10.ಓಬವ್ವನ ಆಯುಧ (3)
14.ಲಂಗ ಧರಿಸಿದಳನ್ನು ಬೆನ್ನಟ್ಟಿದ ದುರಾಚಾರಿ (3)
15.ಉಸಿರಾಡಲು ಕಷ್ಟವಾದ ಸ್ಥಿತಿ (3)
16.ಕಳಿಸಿದರೂ ಹೀಗೆ ಮರಳಿ ಸಂಭವಿಸು! (5)

ಮೇಲಿಂದ ಕೆಳಕ್ಕೆ

1.ಹಾರ ಧರಿಸಿ ವಿನೋದವಾಗಿ ಓಡಾಡುವುದು (3)
2.ತಟಕ್ಕನೆ ತೋರಿದ ಮೋಸಗಾರಿಕೆ! (4)
3.ವಿಧಿಯನ್ನು ಬರೆಯುವಾತ (3)
4.ಪಾಕದಲ್ಲಿರುವ ದೋಷ ಕಾಣುತ್ತಿದೆಯೇ? (3)
7.ಸವತಿಯ ಸುತನಿವನು (4)
8.ವನದಲ್ಲಿರುವ ತೀರ್ಥಂಕರ (4)
9.ಇದು ಜಗತ್ತಿಗೆ ಸಂಬಂಧಿಸಿದ್ದು (4)
11.ಕೆಲವರು ಮಾಡುವ ಕಾರ್ಯ (3)
12.ಮಗನಿಗೆ ಕಾಣಿಸುತ್ತಿರುವ ವೇದ (3)
13.ಯತಿಗೆ ಬಂದಿರುವ ಕೋಪ (3)



5577ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ

1.ಜಾಯಮಾನ 3.ಕಲಗಚ್ಚು 5.ಸುಗುಣ 6.ದ್ರವ 8.ಕಲಹ 10.ಸಂತ್ರಸ್ತ 11.ಅಮಲು 12.ರಮಿಸು 15.ರಸ 17.ಪರೋಕ್ಷ 18.ಅವಭೃಥ 19.ರಸಹೀನ

ಮೇಲಿಂದ ಕೆಳಕ್ಕೆ:

1.ಜಾಲಂದ್ರ 2.ನಸುಕು 3.ಕಣಕ 7.ವರ್ಣಸಂಕರ 9.ಹಲಾಲುಕೋರ 13.ಸುಪಥ 14.ಅಕ್ಷರ 16.ಸದನ

ಸುಡೊಕು 5963

	7			5				8
5		4	1		8			
	8			7			5	4
	6		9	3		1		2
2		5					8	
	3			8	2	5		6
			5		6		2	
3		2					6	
	5			2		4		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5962 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಸಂಸತ್ತಿನ ಬಜೆಟ್ ಅಧಿವೇಶನ: ಉಭಯ ಸದನಗಳನ್ನು ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ

‘ರಾಮಮಂದಿರ: ಶತಮಾನಗಳ ಕನಸು ನನಸು’

ನವದೆಹಲಿ(ಪಿಟಿಐ): ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದೆ. ಅದರಲ್ಲೂ, ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಿಸಬೇಕು ಎಂಬ ದೇಶದ ಜನರ ಶತಮಾನಗಳ ಬಯಕೆ ಈಡೇರಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಬುಧವಾರ ಹೇಳಿದರು.

‘ಬಾಲರಾಮ ಮೂರ್ತಿ ಪ್ರಾಣ ಪ್ರತಿಷ್ಠಾಪನೆಗೊಂಡ ನಂತರದ 5 ದಿನಗಳ ಅವಧಿಯಲ್ಲಿ 13 ಲಕ್ಷ ಭಕ್ತರು ಅಯೋಧ್ಯೆಗೆ ಭೇಟಿ ನೀಡಿದ್ದಾರೆ. ಜ.22ರಂದು ನೆರವೇರಿದ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವು ಹೊಸ ಯುಗ ಆರಂಭಗೊಂಡ ಕ್ಷಣ’ ಎಂದು ಬಣ್ಣಿಸಿದರು.

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಕುರಿತು ರಾಷ್ಟ್ರಪತಿಗಳು ತಮ್ಮ ಭಾಷಣ ಪ್ರಸ್ತಾಪಿಸುತ್ತಿದ್ದಂತೆಯೇ, ಸದನದಲ್ಲಿ ಸದಸ್ಯರ ಕರತಾಡನ ಮಾರ್ದನಿಸಿತು. ಉಭಯ ಸದನಗಳ ಸದಸ್ಯರು ಮೇಜುಗಳನ್ನು ತಟ್ಟಿ ಸಂಭ್ರಮ-ಸಂತೋಷ ವ್ಯಕ್ತಪಡಿಸಿದರು.

ನೂತನ ಸಂಸತ್ ಭವನದಲ್ಲಿ ಆರಂಭವಾದ ಬಜೆಟ್ ಅಧಿವೇಶನದ ಮೊದಲ ದಿನ ಅವರು, ಎರಡೂ ಸದನಗಳ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದರು.

‘ಮುಂದಿನ ಶತಮಾನಗಳಿಗಾಗಿ ಭಾರತವು ಹೊಸ ಹಾದಿ ತುಳಿಯ ಬೇಕಾದ ಸಮಯವಿದು. ನಮ್ಮ ಪೂರ್ವಜರು ಸಾವಿರಾರು ವರ್ಷಗಳ ಭವ್ಯ ಪರಂಪರೆಯನ್ನು ನಮಗೆ ಬಿಟ್ಟು ಹೋಗಿದ್ದಾರೆ. ನಮ್ಮ ಪೂರ್ವಿಕರ ಅಸಾಧಾರಣ ಸಾಧನೆಗಳನ್ನು ಇಂದಿಗೂ ನಾವು ಮೆಲುಕು ಹಾಕುತ್ತೇವೆ. ಇವುಗಳ ಆಧಾರದ ಮೇಲೆ ನಮ್ಮ ಇಂದಿನ ಪೀಳಿಗೆಗಳು ಮುಂಬರುವ ದಿನಗಳಲ್ಲಿ ಯಾರೂ ಮರೆಯಲಾಗದಂತಹ ಪರಂಪರೆಯನ್ನು ನಿರ್ಮಿಸಬೇಕು’ ಎಂದು ಮುರ್ಮು ಪ್ರತಿಪಾದಿಸಿದರು.

75 ನಿಮಿಷಗಳ ತಮ್ಮ ಭಾಷಣದಲ್ಲಿ ಮೋದಿ ಸರ್ಕಾರದ ಸಾಧನೆಗಳನ್ನು ಪಟ್ಟಿ ಮಾಡಿದ ಅವರು, ಭಯೋತ್ಪಾದನೆ ಮತ್ತು ಕೆಲ ದೇಶಗಳ ವಿಸ್ತರಣಾ ವಾದಕ್ಕೆ ಸಶಸ್ತ್ರ ಪಡೆಗಳು ತಕ್ಕ ಉತ್ತರ ನೀಡಿವೆ ಎಂದು ಹೇಳುವ ಮೂಲಕ ಪರೋಕ್ಷವಾಗಿ ಪಾಕಿಸ್ತಾನ ಹಾಗೂ ಚೀನಾ ವಿರುದ್ಧ ಚಾಟಿ ಬೀಸಿದರು.

ಆರ್ಥಿಕ ಸುಧಾರಣೆಗಳು, ಜಿ–20 ಶೃಂಗಸಭೆ ಆತಿಥ್ಯ ಸೇರಿದಂತೆ ಕೇಂದ್ರ ಸರ್ಕಾರದ ಸಾಧನೆಗಳನ್ನು ವಿವರಿಸಿದರು.

‘ದೇಶದ ಹಿತಾಸಕ್ತಿ ರಕ್ಷಣೆಗಾಗಿ ಕಳೆದ 10 ವರ್ಷಗಳಲ್ಲಿ ಸರ್ಕಾರವು ಹಲವಾರು ಮಹತ್ವದ ಯೋಜನೆಗಳನ್ನು ಕಾರ್ಯಗತಗೊಳಿಸಿದೆ. ಸಂವಿಧಾನದ 370ನೇ ವಿಧಿಯಡಿ ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸುವ ಕುರಿತು ಸಂಶಯಗಳು ಮನೆ ಮಾಡಿದ್ದವು. ವಿಶೇಷ ಸ್ಥಾನಮಾನವನ್ನು ಹಿಂತೆಗೆದುಕೊಂಡಿರುವುದು ಈಗ ಇತಿಹಾಸ. ತ್ರಿವಳಿ ತಲಾಖ್ ವಿರುದ್ಧ ಕಠಿಣ ಕಾಯ್ದೆಯನ್ನೂ ಜಾರಿಗೊಳಿಸಲಾಗಿದೆ’ ಎಂದು ಅವರು ಹೇಳಿದರು.

ತಕ್ಕ ಉತ್ತರ: ‘ಭಯೋತ್ಪಾದನೆ ವಿರುದ್ಧ ಜಾಗತಿಕ ಮಟ್ಟದಲ್ಲಿ ಭಾರತ ಧ್ವನಿ ಎತ್ತಿದೆ. ಭಯೋತ್ಪಾದನೆ ಮತ್ತು ಕೆಲ ದೇಶಗಳ ವಿಸ್ತರಣಾ ವಾದಗಳಿಗೆ ನಮ್ಮ ಪಡೆಗಳು ಪ್ರತ್ಯುತ್ತರ ನೀಡಿವೆ’ ಎಂದರು.




ಹಿರಿಯ ಮಾರ್ಷಲ್ ರಾಜೀವ್ ಶರ್ಮ ಅವರು ‘ಸೆಂಗೋಲ್’(ರಾಜದಂಡ) ಹಿಡಿದು ನೇತೃತ್ವ ವಹಿಸಿದ್ದ ಮೆರವಣಿಗೆಯೊಂದಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬುಧವಾರ ನೂತನ ಸಂಸತ್ ಭವನ ಪ್ರವೇಶಿಸಿದರು –ಪಿಟಿಐ ಚಿತ್ರ

ಭಾಷಣದ ಪ್ರಮುಖ ಅಂಶಗಳು

- ಹಲವೆಡೆ ಕಂಡುಬಂದ ದಂಗೆಯನ್ನು ಹತ್ತಿಕ್ಕಲಾಗಿದೆ
- ಹಣದುಬ್ಬರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ
- ಗಡಿಯುದ್ದಕ್ಕೂ ಮೂಲಸೌಕರ್ಯಗಳ ಅಭಿವೃದ್ಧಿಗೆ ಕ್ರಮ. ಇದನ್ನು ಬಹು ವರ್ಷಗಳ ಹಿಂದೆಯೇ ಆದ್ಯತೆ ಮೇಲೆ ಮಾಡಬೇಕಿತ್ತು
- ಜಮ್ಮು–ಕಾಶ್ಮೀರ ಜನರಲ್ಲಿ ಸುರಕ್ಷಿತ ಭಾವನೆ ನೆಲೆಸಿದೆ. ದಾಳಿ, ಬಾಂಬ್ ಸ್ಫೋಟಗಳ ಭೀತಿಯಿಂದಾಗಿ ಈ ಹಿಂದೆ ಮಾರುಕಟ್ಟೆ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಜನರು ಸೇರುತ್ತಿರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ
- ದೇಶದ ಈಶಾನ್ಯ ರಾಜ್ಯಗಳಲ್ಲಿ ಪ್ರತ್ಯೇಕತಾವಾದ ತಗ್ಗಿದೆ. ಬಂಡುಕೋರರು ಶರಣಾಗತರಾಗಿದ್ದು, ಶಾಂತಿ ಸ್ಥಾಪನೆ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದಾರೆ
- ನಕ್ಸಲರ ಅಟ್ಟಹಾಸವನ್ನು ಗಣನೀಯವಾಗಿ ತಗ್ಗಿಸಲಾಗಿದೆ
- ಯುವ ಸಮುದಾಯ, ಮಹಿಳೆ, ರೈತರು ಹಾಗೂ ಬಡವರ ಈ ದೇಶದ ಆಧಾರ ಸ್ತಂಭಗಳು. ಇವರ ಅಭ್ಯುದಯವೇ ದೇಶದ ಅಭಿವೃದ್ಧಿ ಎಂದು ಸರ್ಕಾರ ನಂಬಿದೆ
- ಚಂದ್ರನ ಅಂಗಳದಲ್ಲಿ ಗಗನನೌಕೆಯನ್ನು ಇಳಿಸಲಾಗಿದೆ
- ಏಷ್ಯನ್ ಕ್ರೀಡಾಕೂಟದಲ್ಲಿಯೂ ಭಾರತ ಅಮೋಘ ಸಾಧನೆ ದಾಖಲಿಸಿದೆ
- ‘ಆತ್ಮ ನಿರ್ಭರ ಭಾರತ’ದಿಂದ ಅಭಿವೃದ್ಧಿಗೆ ವೇಗ ಸಿಕ್ಕಿದ್ದರೆ, ‘ಮೇಕ್ ಇನ್ ಇಂಡಿಯಾ’ ಉಪಕ್ರಮದಿಂದ ರಕ್ಷಣಾ ಉತ್ಪಾದನೆ ₹ 1 ಲಕ್ಷ ಕೋಟಿ ಗಡಿ ದಾಟಿದೆ

ಸೆಂಗೋಲ್’ ಜೊತೆ ಮೆರವಣಿಗೆ



ಶಿರವಸ್ತ್ರ, ಪೇಟ ಸೇರಿದಂತೆ ಸಾಂಪ್ರದಾಯಿಕ ವಸ್ತ್ರಧಾರಿಯಾಗಿದ್ದ ಲೋಕಸಭೆಯ ಹಿರಿಯ ಮಾರ್ಷಲ್ ರಾಜೀವ್ ಶರ್ಮ ಅವರು ‘ಸೆಂಗೋಲ್’(ರಾಜದಂಡ) ಹಿಡಿದು ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಮೆರವಣಿಗೆ ಸಂಸತ್‌ನ ಗಜ ದ್ವಾರದ ಬಳಿ ಬಂದಾಗ, ಪ್ರಧಾನಿ ನರೇಂದ್ರ ಮೋದಿ, ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಹಾಗೂ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸ್ವಾಗತಿಸಿದರು.

ಇದರೊಂದಿಗೆ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಲಾಯಿತು. ‘ಸೆಂಗೋಲ್’ ಅನ್ನು ಸರ್ಕಾರದ ಸಾಂಸ್ಕೃತಿಕ ಸಂಕೇತವೆಂದೇ ಸ್ವೀಕರಿಸಲಾಗಿದೆ.

ರಾಷ್ಟ್ರಪತಿ ಅವರು ಲೋಕಸಭೆ ಸಭಾಂಗಣವನ್ನು ಪ್ರವೇಶಿಸಿದ ಸಂದರ್ಭದಲ್ಲಿ, ವಾದ್ಯಗಳು ಮೊಳಗಿದರೆ, ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರು ಜೋರಾದ ಚಪ್ಪಾಳೆಯೊಂದಿಗೆ ಸ್ವಾಗತ ಕೋರಿದರು.

‘ಭಾರತ್ ಮಾತಾ ಕಿ ಜೈ’, ‘ಜೈ ಜೈ ಶ್ರೀರಾಮ್’, ‘ಜೈ ಸಿಯಾರಾಮ್’ ಮತ್ತು ‘ಜೈ ಜಗನ್ನಾಥ’ ಎಂಬ ಘೋಷಣೆಗಳು ಸದನದಲ್ಲಿ ಅನುರಣಿಸಿದವು. ನಂತರ, ರಾಷ್ಟ್ರಪತಿಗಳು ಜಂಟಿ ಸದನ ಉದ್ದೇಶಿಸಿ ಭಾಷಣ ಮಾಡುವವರೆಗೂ ಸೆಂಗೋಲ್ ಅನ್ನು ಅವರ ಪೀಠದಲ್ಲಿಯೇ ಇರಿಸಲಾಗಿತ್ತು. ಭಾಷಣ ಮುಗಿಸಿ ಮುರ್ಮು ಅವರು ನಿರ್ಗಮಿಸಿದ ನಂತರ, ಸ್ವರ್ಣಲೇಪಿತ ಸೆಂಗೋಲ್ ಅನ್ನು ಸ್ಪೀಕರ್ ಪೀಠದ ಪಕ್ಕದಲ್ಲಿ ಇಡಲಾಯಿತು.

ಮೆರವಣಿಗೆಯಲ್ಲಿ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, ಲೋಕಸಭೆಯ ಮಹಾಕಾರ್ಯದರ್ಶಿ ಉತ್ಪಲ್ ಕುಮಾರ್, ರಾಜ್ಯಸಭೆ ಮಹಾಕಾರ್ಯದರ್ಶಿ ಪಿ.ಸಿ.ಮೋಡಿ ಅವರೂ ಇದ್ದರು.

ಇದಕ್ಕೂ ಮುನ್ನ, ರಾಷ್ಟ್ರಪತಿ ಮುರ್ಮು ಅವರು ಆರು ಕುದುರೆಗಳ ಸಾರೋಟದಲ್ಲಿ ನೂತನ ಸಂಸತ್ ಭವನಕ್ಕೆ ಆಗಮಿಸಿದರು.

‘ಬಡತನ ನಿರ್ಮೂಲನೆ: ಕೇಂದ್ರದ ಸಾಧನೆ’

ಬಡತನ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕೈಗೊಂಡ ಕ್ರಮಗಳ ಕುರಿತು ಪ್ರಸ್ತಾಪಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ‘ನಾವು ಚಿಕ್ಕವರಾಗಿದ್ದಾಗ ಗರೀಬಿ ಹಟಾವೋ ಎಂಬ ಘೋಷಣೆಗಳನ್ನು ಕೇಳುತ್ತಿದ್ದೆವು. ಆದರೆ, ಇದೇ ಮೊದಲ ಬಾರಿಗೆ ನಮ್ಮ ಜೀವಿತಾವಧಿಯಲ್ಲಿ, ಬಡತನವನ್ನು ಗಣನೀಯ ಪ್ರಮಾಣದಲ್ಲಿ ನಿರ್ಮೂಲನೆ ಮಾಡಿರುವುದನ್ನು ಕಾಣುತ್ತಿದ್ದೇವೆ’ ಎಂದರು.

‘ನೀತಿ ಆಯೋಗದ ಅಂಕಿ–ಅಂಶಗಳ ಪ್ರಕಾರ, ಕಳೆದ 10 ವರ್ಷಗಳ ಅವಧಿಯಲ್ಲಿ ನನ್ನ ಸರ್ಕಾರವು 25 ಕೋಟಿಯಷ್ಟು ಜನರು ಬಡತನದಿಂದ ಹೊರಬರುವಂತೆ ಮಾಡಿದೆ’ ಎಂದೂ ಹೇಳಿದರು.

ಸ್ವವಿಮರ್ಶೆ: ಸಂಸದರಿಗೆ ಕರೆ



ನರೇಂದ್ರ ಮೋದಿ

ನವದೆಹಲಿ (ಪಿಟಿಐ): ‘ಕಲಾಪಕ್ಕೆ ಅಡ್ಡಿಯುಂಟು ಮಾಡುವ ಸಂಸದರು ಲೋಕಸಭೆ ಚುನಾವಣೆಗೂ ಮುನ್ನ ಸ್ವವಿಮರ್ಶೆ ಮಾಡಿಕೊಳ್ಳಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರ ಸರ್ಕಾರದ ಬಜೆಟ್ ಅಧಿವೇಶನದ ಮೊದಲ ದಿನವಾದ ಬುಧವಾರ ಹೇಳಿದರು.

ಸಂಸತ್ತಿನ ಚಳಿಗಾಲದ ಅಧಿವೇಶನದ ವೇಳೆ ಅಮಾನತುಗೊಂಡಿದ್ದ 146 ಸಂಸದರನ್ನು ಗುರಿಯಾಗಿಸಿಕೊಂಡು ಈ ಹೇಳಿಕೆ ನೀಡಿದ ಅವರು, ‘ಸಂಸತ್ ಕಲಾಪಗಳಿಗೆ ಪದೇಪದೇ ಅಡ್ಡಿಪಡಿಸುವವರು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗಾಳಿಗೆ ತೂರುತ್ತಿದ್ದಾರೆ’ ಎಂದು ಆಕ್ಷೇಪಿಸಿದರು.


ಅಧಿವೇಶನ ಆರಂಭವಾಗುವುದಕ್ಕೂ ಮುನ್ನ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಅಧಿವೇಶನದಲ್ಲಿ ಗದ್ದಲ ಎಬ್ಬಿಸಿದ ಅಥವಾ ಕಲಾಪಕ್ಕೆ ಅಡ್ಡಿಪಡಿಸಿದ ಸಂಸದರನ್ನು ಜನರು ನೆನಪಿಟ್ಟುಕೊಳ್ಳುವುದಿಲ್ಲ. ಸಂಸತ್ತಿನಲ್ಲಿ ಉಪಯುಕ್ತ ಸಲಹೆ ನೀಡಿದವರು, ಅಧಿವೇಶನಗಳನ್ನು ಉತ್ತಮ ರೀತಿಯಲ್ಲಿ ಬಳಸಿಕೊಂಡವರನ್ನು ಜನರು ನೆನಪಿಟ್ಟುಕೊಳ್ಳುತ್ತಾರೆ. ಸಂಸದರು ತಮ್ಮ ಸಂಸತ್ ಕ್ಷೇತ್ರಗಳ ಜನರನ್ನು ವಿಚಾರಿಸಿದರೆ ಈ ಕುರಿತು ಅವರಿಗೇ ತಿಳಿಯುತ್ತದೆ’ ಎಂದು ಮೋದಿ ಹೇಳಿದರು.

ಕಾಂಗ್ರೆಸ್ ಅಸಮಾಧಾನ: ಪ್ರಧಾನಿ ಅವರ ಹೇಳಿಕೆಯನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಲವಾಗಿ ಖಂಡಿಸಿದ್ದಾರೆ. ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸಂವಿಧಾನವನ್ನು ಉಲ್ಲಂಘಿಸುತ್ತಿದೆ ಮತ್ತು ವಿರೋಧ ಪಕ್ಷಗಳ ಧ್ವನಿ ಅಡಗಿಸುತ್ತಿದೆ ಎಂದು ಆರೋಪಿಸಿದ್ದಾರೆ

‘ವಿರೋಧ ಪಕ್ಷಗಳ 146 ಸಂಸದರನ್ನು ಅಮಾನತಿನಲ್ಲಿ ಇರಿಸಿ, ಮೂರು ದಿನಗಳಲ್ಲಿ 14 ಮಸೂದೆಗಳನ್ನು ಸಂಸತ್ತಿನಲ್ಲಿ ಜಾರಿಗೊಳಿಸಲಾಗಿದೆ. ಸಂಸದೀಯ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವಲ್ಲಿ ಅವರ ಸರ್ಕಾರದ ಪಾತ್ರವೇನು ಎಂಬುದನ್ನು ಮೋದಿ ಅವರಿಗೆ ನೆನಪಿಸಲು ಬಯಸುತ್ತೇವೆ’ ಎಂದಿದ್ದಾರೆ.

ಕೇಂದ್ರ ಸರ್ಕಾರದ್ದು ನಿರಂಕುಶ ಪ್ರಭುತ್ವ ಎಂದು ಅವರು ಖರ್ಗೆ ಅವರು ಆಕ್ಷೇಪಿಸಿದ್ದಾರೆ.

ದಿನೇಶ್ ಕುಮಾರ್ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ



ಪಿ.ಎಸ್. ದಿನೇಶ್ ಕುಮಾರ್

ನವದೆಹಲಿ (ಪಿಟಿಐ): ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಅವರನ್ನು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಬುಧವಾರ ನೇಮಕ ಮಾಡಲಾಗಿದೆ. ಅವರು ಫೆಬ್ರುವರಿ 24ರಂದು ಕರ್ತವ್ಯದಿಂದ ನಿವೃತ್ತರಾಗಲಿದ್ದಾರೆ. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಅವರ ಅಧಿಕಾರ ಅವಧಿ ಒಂದು ತಿಂಗಳಿಗೂ ಮೊದಲೇ ಕೊನೆಗೊಳ್ಳಲಿದೆ.

ನ್ಯಾಯಮೂರ್ತಿ ಕುಮಾರ್ ಅವರು ಈಗ ಕರ್ನಾಟಕ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿದ್ದಾರೆ. ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಆಗಿದ್ದ ಪ್ರಸನ್ನ ಬಿ. ವರಾಳೆ ಅವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಈಚೆಗೆ ಪದೋನ್ನತಿ ಪಡೆದಿದ್ದಾರೆ. ನ್ಯಾಯಮೂರ್ತಿ ಕುಮಾರ್ ಅವರನ್ನು ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಬೇಕು ಎಂದು ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಜನವರಿ 19ರಂದು ಶಿಫಾರಸು ಮಾಡಿತ್ತು. ಕಡಿಮೆ ಸೇವಾವಧಿ ಹೊಂದಿದವರನ್ನು ಹೈಕೋರ್ಟ್‌ಗಳಿಗೆ ಮುಖ್ಯ ನ್ಯಾಯಮೂರ್ತಿ ಆಗಿ ನೇಮಕ ಮಾಡಿದ ನಿದರ್ಶನಗಳು ಈ ಹಿಂದೆಯೂ ಇವೆ.

‘ಮೇಯರ್ ಚುನಾವಣೆ; ಸುಪ್ರೀಂಗೆ ಅರ್ಜಿ’

ಚಂಡೀಗಢ (ಪಿಟಿಐ): ಚಂಡೀಗಢ ಮೇಯರ್ ಚುನಾವಣೆಗೆ ಸಂಬಂಧಿಸಿದ ಅರ್ಜಿಯನ್ನು ತ್ವರಿತವಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ಆಮ್ ಆದ್ಮಿ ಪಕ್ಷವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಿದೆ ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಬುಧವಾರ ತಿಳಿಸಿದ್ದಾರೆ.

ಚಂಡೀಗಢ ಮೇಯರ್ ಚುನಾವಣೆಯ ಫಲಿತಾಂಶ ರದ್ದುಪಡಿಸಿ ಹೊಸದಾಗಿ ಚುನಾವಣೆ ನಡೆಸುವಂತೆ ಆಮ್ ಆದ್ಮಿ ಪಕ್ಷವು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಗೆ ನ್ಯಾಯಾಲಯವು ಮಧ್ಯಂತರ ಆದೇಶ ನೀಡಲು ನಿರಾಕರಿಸಿದ ನಂತರ ಅವರು ಹೇಳಿಕೆ ನೀಡಿದ್ದಾರೆ.

ಆಮ್ ಆದ್ಮಿ ಪಕ್ಷದ ಅರ್ಜಿಗೆ ಮೂರು ವಾರಗಳ ಒಳಗೆ ಪ್ರತಿಕ್ರಿಯೆ ನೀಡಲು ಹೈಕೋರ್ಟ್ ಚಂಡೀಗಢ ಆಡಳಿತಕ್ಕೆ ಸೂಚಿಸಿತ್ತು ಹಾಗೂ ಪ್ರಕರಣದ ಮುಂದಿನ ವಿಚಾರಣೆಯನ್ನು ಫೆಬ್ರುವರಿ 26ಕ್ಕೆ ಮುಂದೂಡಿತ್ತು.

‘ವಿರೋಧ ಪಕ್ಷಗಳ ಜೊತೆಗೆ ನಂಟು ಹೊಂದಿರುವುದಾಗಿ ಹೇಳಲು ಒತ್ತಡ’

ಒಂದನೇ ಪುಟದಿಂದ...

ಈ ವಿಚಾರವಾಗಿ ಪೊಲೀಸರಿಂದ ಪ್ರತಿಕ್ರಿಯೆ ಕೇಳಿದ ಕೋರ್ಟ್, ಅರ್ಜಿಯ ವಿಚಾರಣೆಯನ್ನು ಫೆಬ್ರುವರಿ 17ಕ್ಕೆ ಮುಂದೂಡಿದೆ. ಈ ಪ್ರಕರಣದ ಆರನೆಯ ಆರೋಪಿಯಾಗಿರುವ ನೀಲಂ ಆಜಾದ್, ಹಲವು ಖಾಲಿ ಹಾಳೆಗಳ ಮೇಲೆ ಸಹಿ ಹಾಕುವಂತೆ ಪೊಲೀಸರು ತಮ್ಮ ಮೇಲೆ ಒತ್ತಡ ತಂದಿದ್ದರು ಎಂದು ಈ ಹಿಂದೆ ಕೋರ್ಟ್‌ನಲ್ಲಿ ಹೇಳಿದ್ದರು. ನೀಲಂ ಸಲ್ಲಿಸಿರುವ ಅರ್ಜಿಯು ಕೋರ್ಟ್‌ನಲ್ಲಿ ಬಾಕಿ ಇದೆ.

‘ಪಾಲಿಗ್ರಾಫ್/ನಾರ್ಕೊ/ಬ್ರೈನ್ ಮ್ಯಾಪಿಂಗ್ ವೇಳೆ ಪರೀಕ್ಷೆ ನಡೆಸುತ್ತಿದ್ದ ವ್ಯಕ್ತಿಗಳು ಒಂದು ರಾಜಕೀಯ ಪಕ್ಷ/ನಾಯಕನ ಪಾತ್ರದ ಬಗ್ಗೆ ಹೇಳುವಂತೆ ಇಬ್ಬರು ಆರೋಪಿಗಳಿಗೆ ಒತ್ತಡ ತಂದಿದ್ದರು.

‘ತಾವು ಬಳಸುತ್ತಿರುವ ಹಾಗೂ ಹಿಂದೆ ಬಳಸಿದ್ದ ಮೊಬೈಲ್ ಫೋನ್ ಸಂಖ್ಯೆಯ ಬಗ್ಗೆ ಪ್ರತಿಯೊಬ್ಬರಲ್ಲಿಯೂ ಕೇಳಲಾಯಿತು. ಏರ್‌ಟೆಲ್, ಬಿಎಸ್‌ಎನ್‌ಎಲ್, ವೊಡಾಫೋನ್ ಕಚೇರಿಗಳಿಗೆ ಭೇಟಿ ನೀಡಿ ಹಳೆಯ ಸಂಖ್ಯೆಯ ಸಿಮ್ ಕಾರ್ಡ್ ಹಾಗೂ ಹಾಲಿ ಬಳಸುತ್ತಿರುವ ಸಂಖ್ಯೆಯ ಸಿಮ್ ಕಾರ್ಡ್ ಪಡೆಯಲಾಯಿತು. ಇದಕ್ಕೆ ಕಾರಣ ಏನು ಎಂಬುದು ಪ್ರಾಸಿಕ್ಯೂಷನ್‌ಗಷ್ಟೇ ಗೊತ್ತು. ಈ ಕಾನೂನುಬಾಹಿರ ಕ್ರಮದ ಸಂದರ್ಭದಲ್ಲಿ ಸಿಮ್ ಕಾರ್ಡ್‌ಗಾಗಿ ಆರೋಪಿಗಳು ತಮ್ಮ ಬಯೋಮೆಟ್ರಿಕ್ ವಿವರ ಹಾಗೂ ಸಹಿ ನೀಡಿದ್ದಾರೆ’ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಸಾಮಾಜಿಕ ಜಾಲತಾಣ ಖಾತೆಗಳು, ಇಮೇಲ್ ವಿಳಾಸ ಮತ್ತು ಫೋನ್‌ನ ಪಾಸ್‌ವರ್ಡ್ ನೀಡುವಂತೆ ಒತ್ತಡ ತರಲಾಯಿತು ಎಂದು ಕೂಡ ಆರೋಪಿಗಳು ಹೇಳಿದ್ದಾರೆ.

ಡಿಸೆಂಬರ್ 13ರಂದು ಸಂಸತ್ತಿನ ಕಲಾಪ ನಡೆಯುತ್ತಿದ್ದಾಗ ಸಾಗರ್ ಶರ್ಮ ಮತ್ತು ಮನೋರಂಜನ್ ಅವರು ಲೋಕಸಭೆಯ ಅಂಗಳಕ್ಕೆ ಜಿಗಿದಿದ್ದರು. ಅಲ್ಲಿ ಕ್ಯಾನಿಸ್ಟರ್‌ನಿಂದ ಹಳದಿ ಬಣ್ಣ ಹೊಗೆಯನ್ನು ಹಾಕಿದ್ದರು. ಇದೇ ಸಂದರ್ಭದಲ್ಲಿ ಅಮೋಲ್ ಶಿಂದೆ ಮತ್ತು ನೀಲಂ ಅವರು ಸಂಸತ್ ಕಟ್ಟಡದ ಹೊರಗಡೆ ಕ್ಯಾನಿಸ್ಟರ್‌ನಿಂದ ಬಣ್ಣದ ಹೊಗೆ ಹಾಕಿ ‘ಸರ್ವಾಧಿಕಾರ ನಡೆಯುವುದಿಲ್ಲ’ ಎಂಬ ಘೋಷಣೆ ಕೂಗಿದ್ದರು.

ಮಣಿಶಂಕರ್ ಅಯ್ಯರ್‌ಗೆ ಕ್ಷೇಮಾಭಿವೃದ್ಧಿ ಸಂಘದ ಪತ್ರ

‘ಬೇಸರವಿದ್ದರೆ ಹೊರನಡೆಯಿರಿ’

ಪ್ರಜಾವಾಣಿ ವಾರ್ತೆ



ನವದೆಹಲಿ: ‘ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ತಪ್ಪು ಎಂಬುದೇ ನಿಮ್ಮ ನಿಲುವಾದರೆ ಈ ಕಾಲೊನಿಯಿಂದ ಹೊರನಡೆಯಿರಿ’ ಎಂದು ದೆಹಲಿಯ ಜಂಗ್‌ಪುರ ಕಾಲೊನಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘವು, ಕಾಂಗ್ರೆಸ್ ಮುಖಂಡ ಮಣಿ ಶಂಕರ ಅಯ್ಯರ್ ಮತ್ತು ಅವರ ಪುತ್ರಿ ಸುರಣ್ಯಾಗೆ ಸೂಚಿಸಿದೆ.

ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ವಿರೋಧಿಸಿ ಮಣಿ ಶಂಕರ್ ಅಯ್ಯರ್ ಅವರ ಪುತ್ರಿ ಸುರಣ್ಯಾ ಈಚೆಗೆ ಮೂರು ದಿನ ಧರಣಿ ಪ್ರತಿಭಟನೆ ನಡೆಸಿದ್ದರು.

ದಕ್ಷಿಣ ದೆಹಲಿಯ ಜಂಗ್‌ಪುರ ಕಾಲೊನಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (ಆರ್‌ಡಬ್ಲ್ಯುಎ) ಈ ಕುರಿತು ಇತ್ತೀಚೆಗೆ ಅಯ್ಯರ್ ಮತ್ತು ಅವರ ಪುತ್ರಿ ಸುರಣ್ಯಾಗೆ ಪತ್ರ ಬರೆದಿತ್ತು.

ಆದರೆ, ಸುರಣ್ಯಾ ಅವರು ನಾನು ಆ ಕಾಲೊನಿಯ ನಿವಾಸಿಯೇ ಅಲ್ಲ ಎಂದು ಹೇಳಿಕೆ ನೀಡಿದ್ದಾರೆ.

ಪತ್ರವನ್ನು ಬರೆದಿದ್ದ ಆರ್‌ಡಬ್ಲ್ಯುಎ ಅಧ್ಯಕ್ಷ ಕಪಿಲ್ ಕಾಕರ್ ಅವರು, ‘ಪ್ರಾಣ ಪ್ರತಿಷ್ಠಾಪನೆ ಖಂಡಿಸಿ ಮೂರು ದಿನ ಧರಣಿ ನಡೆಸಿದ್ದರ ವಿರುದ್ಧ ನಿವಾಸಿಗಳು ತಮಗೆ ದೂರು ನೀಡಿದ್ದರು’ ಎಂದು ತಿಳಿಸಿದರು.


‘ಕಾಲೊನಿಯಲ್ಲಿ ಶಾಂತಿಯನ್ನು ಕದಡುವ ಮತ್ತು ನಿವಾಸಿಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಇಂತಹ ವರ್ತನೆಯನ್ನು ಆರ್‌ಡಬ್ಲ್ಯುಎ ಸಹಿಸುವುದಿಲ್ಲ. ಧರಣಿ ನಡೆಸಿದ ಪುತ್ರಿಯ ವರ್ತನೆಯನ್ನು ಮಣಿ ಶಂಕರ್ ಅಯ್ಯರ್ ಅವರು ಖಂಡಿಸಬೇಕು. ಅವರು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉಲ್ಲೇಖಿಸಬಹುದು. ಆದರೆ, ಅದು ಪರಿಪೂರ್ಣವಲ್ಲ ಎಂದು ಸುಪ್ರೀಂ ಕೋರ್ಟ್ ಕೂಡಾ ಹೇಳಿದೆ’ ಎಂದು ಆರ್‌ಡಬ್ಲ್ಯುಎ ತನ್ನ ಪತ್ರದಲ್ಲಿ ಉಲ್ಲೇಖಿಸಿದೆ.

ಒಂದು ವೇಳೆ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ನಡೆದುದರ ಕುರಿತು ಅಸಂತೋಷವಿದ್ದರೆ ಕೋರ್ಟ್‌ಗೆ ಹೋಗಬಹುದು. ಧರಣಿ ಮಾಡಿದ್ದು ಸರಿ ಎಂದೇ ಭಾವಿಸುವುದಾದರೆ, ಇಂಥ ನಡವಳಿಕೆಗಳನ್ನು ಸಹಿಸಿಕೊಳ್ಳುವ ನಿವಾಸಿಗಳಿರುವ ಬೇರೊಂದು ಕಾಲೊನಿಗೆ ನೀವು ಹೋಗಬಹುದು ಎಂದು ಪತ್ರದಲ್ಲಿ ಸಲಹೆ ಮಾಡಲಾಗಿದೆ.

‘ವಿದೇಶಕ್ಕೆ ಅಧ್ಯಯನಕ್ಕೆ ಹೋಗಿದ್ದ ಅವಧಿ ಹೊರತುಪಡಿಸಿ ಜೀವನದ ಬಹುತೇಕ ಅವಧಿಯನ್ನು ಇಲ್ಲಿಯೇ ಕಳೆದಿದ್ದೇನೆ. ಅಲ್ಲದೆ, ಹಲವು ಕ್ಷೇತ್ರಗಳಲ್ಲಿ ನಾನು ಕೆಲಸ ಮಾಡಿದ್ದೇನೆ. ನೋಟಿಸ್ ಅನ್ನು ನೀಡುವ ಇಂತಹ ಬೆಳವಣಿಗೆಗಳನ್ನು ತಡೆಯಬೇಕು ಎಂದು ನಿಮಗೆ ಅನ್ನಿಸುವುದಿಲ್ಲವೇ’ ಎಂದು ಸುರಣ್ಯಾ ಈ ಕುರಿತು ಪ್ರತಿಕ್ರಿಯಿಸಿದ್ದಾರೆ.

‘ಪರಸ್ಪರ ಎದುರಾಡುವ, ಕೂಗಾಡುವುದು ಅನಿವಾರ್ಯವಲ್ಲ. ಸುಂದರ ಸಂವಹನದ ಸಂಪ್ರದಾಯವನ್ನೇ ನಾವು ಮರೆತಿದ್ದೇವೆ ಎಂದು ನನಗನ್ನಿಸುತ್ತದೆ. ಹಿಂದೆಯೇ ನನ್ನ ಅಸಮಾಧಾನ ವ್ಯಕ್ತಪಡಿಸಿದ್ದೇನೆ. ನನ್ನ ನೋವನ್ನು ಮನೆಯಲ್ಲಿ ಶಾಂತಿಯುತವಾಗಿ ಧರಣಿ ಮಾಡುವ ಮೂಲಕ ವ್ಯಕ್ತಪಡಿಸಿದ್ದೇನೆ ಎಂದು ಪ್ರತಿಕ್ರಿಯಿಸಿದ್ದಾರೆ.

ಕೇಜ್ರಿವಾಲ್‌ಗೆ 5ನೇ ನೋಟಿಸ್



ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ) ಬುಧವಾರ ಮತ್ತೆ ನೋಟಿಸ್ ನೀಡಿದೆ.

ಫೆಬ್ರುವರಿ 2ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ. ನಾಲ್ಕು ತಿಂಗಳಲ್ಲಿ ಕೇಜ್ರಿವಾಲ್ ಅವರಿಗೆ ಇ.ಡಿ ನೀಡಿದ ಐದನೇ ನೋಟಿಸ್ ಇದಾಗಿದೆ.

ಇದಕ್ಕೂ ಮುನ್ನ 2023ರ ನವೆಂಬರ್ 2, ಡಿಸೆಂಬರ್ 21, 2024ರ ಜನವರಿ 3 ಮತ್ತು ಜನವರಿ 18ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಕೇಜ್ರಿವಾಲ್ ಅವರಿಗೆ ನೋಟಿಸ್ ನೀಡಲಾಗಿತ್ತು. ಆದರೆ, ಈ ಎಲ್ಲ ನೋಟಿಸ್‌ಗಳು ಕಾನೂನುಬಾಹಿರ ಎಂದು ಕೇಜ್ರಿವಾಲ್ ಆರೋಪಿಸಿದ್ದರು.

ಈಗಾಗಲೇ ರದ್ದುಗೊಂಡಿರುವ 2021–22ರ ದೆಹಲಿ ಅಬಕಾರಿ ನೀತಿ ಸಿದ್ಧಪಡಿಸುವ ಸಂಬಂಧ ಈ ಪ್ರಕರಣದ ಆರೋಪಿಗಳು ಕೇಜ್ರಿವಾಲ್ ಅವರ ಜೊತೆ ಸಂಪರ್ಕದಲ್ಲಿದ್ದರು ಎಂದು ಇ.ಡಿ ಆರೋಪಿಸಿದೆ. ಅಲ್ಲದೆ, ಈ ಸಂಬಂಧ ಇ.ಡಿ ಸಲ್ಲಿಸಿರುವ ಆರೋಪಪಟ್ಟಿಗಳಲ್ಲಿ ಕೇಜ್ರಿವಾಲ್ ಹೆಸರು ಹಲವು ಬಾರಿ ಉಲ್ಲೇಖಿಸಲಾಗಿದೆ.

‘ನೋಟಿಸ್ ಅನ್ನು ನಮ್ಮ ಕಾನೂನು ತಂಡ ಅಧ್ಯಯನ ನಡೆಸುತ್ತಿದ್ದು, ಕಾನೂನು ಪ್ರಕಾರ ಮುಂದಿನ ನಿರ್ಧಾರ ಕೈಗೊಳ್ಳುತ್ತೇವೆ. ಈ ಹಿಂದೆ ನೀಡಿದ್ದ ನೋಟಿಸ್‌ಗಳು ಕಾನೂನುಬಾಹಿರವಾಗಿದ್ದು, ಉತ್ತರಿಸುವಂತೆ ಇ.ಡಿಗೆ ಕೋರಿದ್ದೆವು’ ಎಂದು ಎಎಪಿಯ ರಾಷ್ಟ್ರೀಯ ವಕ್ತಾರೆ ಪ್ರಿಯಾಂಕಾ ಕಕ್ಕಡ್ ಹೇಳಿದ್ದಾರೆ.

ಅಯೋಧ್ಯೆ: ಬಾಲರಾಮನ ದರ್ಶನ ಪಡೆದ ಮುಸ್ಲಿಮರು

ಅಯೋಧ್ಯೆ (ಪಿಟಿಐ): ಆರು ದಿನಗಳ ಪಾದಯಾತ್ರೆ ನಡೆಸಿ, ಅಯೋಧ್ಯೆಯ ರಾಮ ಮಂದಿರ ತಲುಪಿದ 350 ಮಂದಿ ಮುಸ್ಲಿಮರು ಬಾಲ ರಾಮನ ದರ್ಶನ ಪಡೆದರು.

ಆರ್‌ಎಸ್‌ಎಸ್ ಬೆಂಬಲಿತ ಮುಸ್ಲಿಂ ರಾಷ್ಟ್ರೀಯ ಮಂಚ್ (ಎಂಆರ್‌ಎಂ) ಸಂಘಟನೆಯ ನೇತೃತ್ವದಲ್ಲಿ ಮುಸ್ಲಿಂ ಭಕ್ತರು ಜನವರಿ 25ರಂದು ಲಖನೌನಿಂದ ಪಾದಯಾತ್ರೆ ಆರಂಭಿಸಿದ್ದರು.

‘ಮುಸ್ಲಿಂ ಭಕ್ತರ ಗುಂಪು ‘ಜೈ ಶ್ರೀರಾಮ್’ ಘೋಷಣೆ ಕೂಗುತ್ತಾ, 150 ಕಿ.ಮೀ. ಪಾದಯಾತ್ರೆ ನಡೆಸಿ ಮಂಗಳವಾರ ಅಯೋಧ್ಯೆ ತಲುಪಿದೆ’ ಎಂದು ಎಂಆರ್‌ಎಂನ ಮಾಧ್ಯಮ ಉಸ್ತುವಾರಿ ಶಾಹಿದ್ ಸಹೀದ್ ಅವರು ತಿಳಿಸಿದರು.

ಪ್ರತಿ ದಿನ 25 ಕಿ.ಮೀ.ವರೆಗೆ ಪಾದಯಾತ್ರೆ ನಡೆಸಿ ರಾತ್ರಿ ವೇಳೆ ವಿಶ್ರಾಂತಿ ಪಡೆದೆವು ಎಂದು ತಿಳಿಸಿದ್ದಾರೆ.

‘ಮುಸ್ಲಿಂ ಭಕ್ತರು ಬಾಲ ರಾಮನ ದರ್ಶನ ಪಡೆಯುವ ಮೂಲಕ ಏಕತೆ, ಸಮಗ್ರತೆ ಮತ್ತು ಸೌಹಾರ್ದತೆಯ ಸಂದೇಶ ಸಾರಿದ್ದಾರೆ ಎಂದು ಶಾಹಿದ್ ಪ್ರತಿಪಾದಿಸಿದರು.

‘ಶ್ರೀರಾಮ ದೇವರು ಎಲ್ಲರಿಗೂ ಮೂಲ ಪುರುಷ’ ಎಂದು ಎಂಆರ್‌ಎಂ ಸಂಚಾಲಕ ರಾಜಾ ರಾಯಿಸ್ ಮತ್ತು ಪ್ರಾಂತೀಯ ಸಂಯೋಜಕ ಶೇರ್ ಅಲಿ ಖಾನ್ ಹೇಳಿದರು.

‘ಶೀಘ್ರ ಯುಸಿಸಿಗೆ ಅಂಗೀಕಾರ’

ಡೆಹ್ರಾಡೂನ್ (ಪಿಟಿಐ): ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಕುರಿತ ಮಸೂದೆಯನ್ನು ಫೆ. 5ರಿಂದ ಆರಂಭವಾಗಲಿರುವ ಉತ್ತರಾಖಂಡ ವಿಧಾನಸಭೆ ಅಧಿವೇಶನದಲ್ಲಿ ಅಂಗೀಕರಿಸಲಾಗುವುದು ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ತಿಳಿಸಿದರು.

ವೈದ್ಯಕೀಯ ಮಂಡಳಿ ನೀಡಿದ ಅಭಿಪ್ರಾಯ ಪರಿಗಣಿಸಿದ ನ್ಯಾಯಾಲಯ

ಗರ್ಭಪಾತಕ್ಕೆ ಇಲ್ಲ ಅವಕಾಶ

ನವದೆಹಲಿ (ಪಿಟಿಐ): 32 ವಾರಗಳ ಗರ್ಭಿಣಿಗೆ ವೈದ್ಯಕೀಯ ಗರ್ಭಪಾತದ ಮೂಲಕ ಭ್ರೂಣವನ್ನು ತೆಗೆಸಲು ಸುಪ್ರೀಂ ಕೋರ್ಟ್ ಬುಧವಾರ ಅವಕಾಶ ನಿರಾಕರಿಸಿದೆ. ಈ ಮಹಿಳೆ ಕಳೆದ ಅಕ್ಟೋಬರ್‌ನಲ್ಲಿ ತನ್ನ ಪತಿಯನ್ನು ಕಳೆದುಕೊಂಡಿದ್ದಾರೆ. ಭ್ರೂಣದಲ್ಲಿ ಅಸಹಜವಾಗಿರುವುದು ಏನೂ ಕಂಡುಬಂದಿಲ್ಲ ಎಂದು ವೈದ್ಯಕೀಯ ಮಂಡಳಿ ತಿಳಿಸಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮಹಿಳೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಪ್ರಸನ್ನ ಬಾಲಚಂದ್ರ ವರಾಳೆ ಅವರು ಇದ್ದ ವಿಭಾಗೀಯ ಪೀಠವು, ದೆಹಲಿ ಹೈಕೋರ್ಟ್ ಜನವರಿ 23ರಂದು ನೀಡಿದ ಆದೇಶದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿತು.

'ಭ್ರೂಣಕ್ಕೆ 32 ವಾರಗಳಾಗಿವೆ. ಇದನ್ನು ತೆಗೆಸುವುದು ಹೇಗೆ ಸಾಧ್ಯ? ಇದು ಸಾಧ್ಯವಿಲ್ಲ ಎಂದು ವೈದ್ಯಕೀಯ ಮಂಡಳಿ ಕೂಡ ಹೇಳಿದೆ. ಇನ್ನು ಎರಡು ವಾರಗಳಷ್ಟೇ. ನಂತರ ನೀವು ಬಯಸಿದರೆ ಶಿಶುವನ್ನು ದತ್ತು ನೀಡಬಹುದು' ಎಂದು ವಿಭಾಗೀಯ ಪೀಠ ಹೇಳಿತು.

ಮುಖ್ಯಾಂಶಗಳು
- ದೆಹಲಿ ಹೈಕೋರ್ಟ್ ಆದೇಶದಲ್ಲಿ ಮಧ್ಯ ಪ್ರವೇಶಿಸಲು ನಕಾರ
- ಭ್ರೂಣ ಬದುಕುವ ಹಕ್ಕನ್ನು ಪರಿಗಣಿಸಲು ಕೋರಿದ್ದ ಕೇಂದ್ರ
- ಶಿಶುವನ್ನು ದತ್ತು ನೀಡಲು ಮಹಿಳೆಗೆ ಮುಕ್ತ ಅವಕಾಶ

ಮಹಿಳೆಯ ಪರವಾಗಿ ವಾದಿಸಿದ ವಕೀಲ ಅಮಿತ್ ಮಿಶ್ರಾ, 'ಮಗುವಿಗೆ ಜನ್ಮ ನೀಡುವುದು ಆಕೆಯ ಇಚ್ಛೆಗೆ ವಿರುದ್ಧವಾದದ್ದು. ಆಕೆ ಜೀವನಪರ್ಯಂತ ಮಾನಸಿಕ ಆಘಾತ ಅನುಭವಿಸಬೇಕಾಗುತ್ತದೆ' ಎಂದು ಹೇಳಿದರು. 'ನಾವು ವೈದ್ಯಕೀಯ ಮಂಡಳಿಯ ಅಭಿಪ್ರಾಯವನ್ನು ಮೀರಲು ಸಾಧ್ಯವಿಲ್ಲ. ಭ್ರೂಣವು ಸಹಜವಾಗಿದೆ ಎಂದು ಮಂಡಳಿ ಹೇಳಿದೆ' ಎಂದು ನ್ಯಾಯಮೂರ್ತಿ ತ್ರಿವೇದಿ ಹೇಳಿದರು. ಅಲ್ಲದೆ, ಗರ್ಭಿಣಿ ಮಹಿಳೆಗೆ ಕೂಡ ಯಾವುದೇ ಅಪಾಯ ಇಲ್ಲ ಎಂದು ಮಂಡಳಿ ಅಭಿಪ್ರಾಯ ನೀಡಿದೆ ಎಂದರು.



'ಮಹಿಳೆಯು ವಿಧವೆ, ಆಕೆ ಜೀವಪರ್ಯಂತ ಆಘಾತದಲ್ಲಿ ಇರಬೇಕಾಗುತ್ತದೆ, ಆಕೆಯ ಹಿತಾಸಕ್ತಿಯನ್ನು ಕೂಡ ಕೋರ್ಟ್ ಪರಿಗಣಿಸಬೇಕು' ಎಂದು ಮಿಶ್ರಾ ವಾದಿಸಿದರು. 'ಆಕೆಯ ಹಿತಾಸಕ್ತಿಯನ್ನಷ್ಟೇ ನಾವು ಏಕೆ ಪರಿಗಣಿಸಬೇಕು' ಎಂದು ತ್ರಿವೇದಿ ಪ್ರಶ್ನಿಸಿದರು. ನಂತರ ಪೀಠವು ಅರ್ಜಿಯನ್ನು ವಜಾಗೊಳಿಸಿತು.

ದೆಹಲಿ ಹೈಕೋರ್ಟ್ ಈ ಮಹಿಳೆಗೆ 29 ವಾರಗಳ ಭ್ರೂಣವನ್ನು ವೈದ್ಯಕೀಯ ಗರ್ಭಪಾತದ ಮೂಲಕ ತೆಗೆಸಿಕೊಳ್ಳಲು ಜನವರಿ 4ರಂದು ಅನುಮತಿ ನೀಡಿತ್ತು. ಜನ್ಮ ನೀಡುವ ಅಥವಾ ನೀಡದಿರುವ ಹಕ್ಕು ಮಹಿಳೆಗೆ ಇರುತ್ತದೆ ಎಂದು ಕೋರ್ಟ್ ಹೇಳಿತ್ತು. ಶಿಶು ಬದುಕುಳಿಯುವ ಸಾಧ್ಯತೆಯು ತೃಪ್ತಿಕರ ಮಟ್ಟದಲ್ಲಿಯೇ ಇದೆ ಎಂದು ಕೇಂದ್ರ ಸರ್ಕಾರವು ಕೋರ್ಟ್‌ಗೆ ತಿಳಿಸಿತ್ತು. 'ಇನ್ನೂ ಜನಿಸದ ಭ್ರೂಣದ ಬದುಕುವ ಹಕ್ಕನ್ನು ಕೂಡ ಕೋರ್ಟ್ ಪರಿಗಣಿಸಬೇಕು. ಈ ಮಹಿಳೆಗೆ ವೈದ್ಯಕೀಯ ಗರ್ಭಪಾತಕ್ಕೆ ನೀಡಿದ್ದ ಅವಕಾಶವನ್ನು ಹಿಂಪಡೆಯಬೇಕು' ಎಂದು ಕೇಂದ್ರ ಸರ್ಕಾರವು ಮನವಿ ಮಾಡಿತ್ತು.

ನಂತರ ಈ ಆದೇಶವನ್ನು ವಾಪಸ್ ಪಡೆದ ಹೈಕೋರ್ಟ್, ಆಗ 32 ವಾರಗಳ ಗರ್ಭಿಣಿಯಾಗಿದ್ದ ಈ ಮಹಿಳೆಯ ಪ್ರಸವಕ್ಕೆ ಕೇಂದ್ರ ಅಥವಾ ರಾಜ್ಯ ಸರ್ಕಾರ ನಡೆಸುವ ಯಾವುದೇ ಆಸ್ಪತ್ರೆ ದಾಖಲಾಗಬಹುದು ಎಂದು ಹೇಳಿತ್ತು. ಶಿಶು ಜನಿಸಿದ ನಂತರದಲ್ಲಿ, ಅದನ್ನು ದತ್ತು ಕೊಡಲು ಮಹಿಳೆ ಮನಸ್ಸು ಮಾಡಿದರೆ, ಅದಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳು ಸುಲಲಿತವಾಗಿ ನಡೆಯುವಂತೆ ಕೇಂದ್ರ ಸರ್ಕಾರ ನೋಡಿಕೊಳ್ಳಬೇಕು ಎಂದು ಸೂಚಿಸಿತ್ತು.

'ಜ್ಞಾನವಾಪಿ'ಯಲ್ಲಿ ಪೂಜೆಗೆ ಅವಕಾಶ

ಒಂದನೇ ಪುಟದಿಂದ

'ಈ ಆದೇಶವು ಐತಿಹಾಸಿಕವಾಗಿದ್ದು, ಕಾಶಿ ವಿಶ್ವನಾಥ ದೇವಸ್ಥಾನ–ಜ್ಞಾನವಾಪಿ ಮಸೀದಿ ವಿವಾದಕ್ಕೆ ಸಂಬಂಧಿಸಿದಂತೆ ಮಹತ್ವದ ತಿರುವಾಗಿದೆ' ಎಂದು ಬಣ್ಣಿಸಿದರು.

'ಈ ಆದೇಶ, 1986ರ ಫೆಬ್ರುವರಿ 1ರಂದು ಅಯೋಧ್ಯೆಯಲ್ಲಿನ ರಾಮಮಂದಿರದ ಬೀಗವನ್ನು ತೆರೆಯುವಂತೆ ಕೋರ್ಟ್ ನೀಡಿದ್ದ ಆದೇಶಕ್ಕೆ ಸಮನಾದುದಾಗಿದೆ. ಕಾಶಿ ವಿಶ್ವನಾಥ ದೇವಸ್ಥಾನವನ್ನು ಸಂಪೂರ್ಣ ಮುಕ್ತಗೊಳಿಸುವ ನಿಟ್ಟಿನಲ್ಲಿ ಇದೊಂದು ಪ್ರಥಮ ಹೆಜ್ಜೆ' ಎಂದು ಅಭಿಪ್ರಾಯಪಟ್ಟರು.

'ಮಸೀದಿಯ ನೆಲಮಾಳಿಗೆಯಲ್ಲಿ 1993ರ ನವೆಂಬರ್‌ವರೆಗೂ ಸೋಮನಾಥ್ ವ್ಯಾಸ್ ಮತ್ತು ಅವರ ಕುಟುಂಬದವರು ಪೂಜೆ ಸಲ್ಲಿಸುತ್ತಿದ್ದರು. ಆ ನಂತರ ಅಂದು ಅಧಿಕಾರದಲ್ಲಿದ್ದ ಮುಲಾಯಂ ಸಿಂಗ್ ಯಾದವ್ ನೇತೃತ್ವದ ರಾಜ್ಯ ಸರ್ಕಾರವು ಪೂಜೆ ಮಾಡದಂತೆ ನಿಷೇಧ ಹೇರಿತ್ತು' ಎಂಬುದು ಹಿಂದೂಗಳ ವಾದವಾಗಿದೆ.

ಮಸೀದಿ ನಿರ್ವಹಣೆ ಹೊಣೆಯನ್ನು ಹೊತ್ತಿರುವ ಅಂಜುಮಾನ್ ಇಂತೆಜಾಮಿಯಾ ಸಮಿತಿಯು, ಈ ವಾದವನ್ನು ಬಲವಾಗಿ ಅಲ್ಲಗಳೆದಿತ್ತು. 'ನೆಲಮಾಳಿಗೆಯು ಮಸೀದಿ ಸಂಕೀರ್ಣದ ಭಾಗವೇ ಆಗಿದೆ. ಹೀಗಾಗಿ, ಅಲ್ಲಿ ಪೂಜೆ ಸಲ್ಲಿಸುವ ಹಕ್ಕನ್ನು ನೀಡಬಾರದು' ಎಂದು ವಾದ ಮಂಡಿಸಿತ್ತು.

ಮಸೀದಿಯ ನೆಲಮಾಳಿಗೆಯಲ್ಲಿನ ನಿರ್ದಿಷ್ಟ ಸ್ಥಳ ಕುರಿತು ಉಭಯ ಧರ್ಮಗಳ ಸಮುದಾಯದವರು ಹೊಂದಿರುವ ಹಕ್ಕು ಪ್ರತಿಪಾದಿಸುತ್ತಿದ್ದಾರೆ. ರಾಮಜನ್ಮಭೂಮಿ ವಿವಾದ ಕುರಿತ ಸುಪ್ರೀಂ ಕೋರ್ಟ್‌ನ ತೀರ್ಪಿನ ಬಳಿಕ ಕೇಸರಿ ಪಡೆಗಳ ಧ್ವನಿಗೆ ಇನ್ನಷ್ಟು ಬಲ ಬಂದಿದೆ.

ಕೋರ್ಟ್‌ನ ಮೆಟ್ಟಿಲೇರಿರುವ ಹಿಂದೂ ಅರ್ಜಿದಾರರು, ದೇವಸ್ಥಾನದ ಭಾಗಗಳು ಸಂಕೀರ್ಣವನ್ನು 17ನೇ ಶತಮಾನದಲ್ಲಿ ಮೊಘಲ್ ದೊರೆ ಔರಂಗಜೇಬ್ ಕಾಲದಲ್ಲಿ ಧ್ವಂಸ ಮಾಡಲಾಗಿದೆ ಎಂದು ವಾದಿಸಿದ್ದಾರೆ. ಮುಸ್ಲಿಂ ಸಮುದಾಯದವರ ಪ್ರಕಾರ, 'ಔರಂಗಜೇಬ್ ದೊರೆಯ ಆಳ್ವಿಕೆ ಆರಂಭವಾಗುವುದಕ್ಕೂ ಮೊದಲೇ ಅಲ್ಲಿ ಮಸೀದಿಯು ಅಸ್ತಿತ್ವದಲ್ಲಿತ್ತು. ಈ ಅಂಶ ದಾಖಲೆಗಳಲ್ಲಿಯೂ ಇದೆ' ಎಂದು ಪ್ರತಿಪಾದಿಸಿದ್ದಾರೆ.

ಜಿಲ್ಲಾ ಕೋರ್ಟ್‌ನ ಆದೇಶದಂತೆ ಮಸೀದಿ ಸ್ಥಳದ ವೈಜ್ಞಾನಿಕ ಸಮೀಕ್ಷೆ ನಡೆಸಿದ್ದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ವರದಿಯಲ್ಲೂ, ಅಲ್ಲಿ ದೇವಸ್ಥಾನವಿದ್ದ ಕುರುಹುಗಳು ಇದ್ದವು ಎಂಬ ಅಂಶವನ್ನು ಉಲ್ಲೇಖಿಸಿದೆ ಎಂದು ಹಿಂದೂ ಅರ್ಜಿದಾರರ ಪರ ವಕೀಲರು ಪ್ರತಿಪಾದಿಸಿದ್ದರು. ಇದನ್ನೂ ಅಲ್ಲಗಳೆದಿದ್ದ ಮುಸ್ಲಿಂ ಅರ್ಜಿದಾರರ ಪರ ವಕೀಲರು, ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ ಹಿಂದೆ ಹಿಂದೂ ದೇಗುಲವಿತ್ತು ಎಂಬುದಕ್ಕೆ 'ಜಖಂಗೊಂಡಿರುವ ಮೂರ್ತಿಗಳೇ ಸಾಕ್ಷ್ಯಗಳಲ್ಲ' ಎಂದಿದ್ದರು.

'ಹೃದಯ ಸಂತಸದಿಂದ ತುಂಬಿದೆ'

ನವದೆಹಲಿ (ಪಿಟಿಐ): ಜ್ಞಾನವಾಪಿ ಮಸೀದಿಯ ನೆಲಮಾಳಿಗೆಯಲ್ಲಿ ಪೂಜೆ ಸಲ್ಲಿಸಲು ಅರ್ಚಕರಿಗೆ ಅವಕಾಶ ಕಲ್ಪಿಸಿದ ಕೋರ್ಟ್ ಆದೇಶದಿಂದ, ಹಿಂದೂಗಳ ಹೃದಯ ಸಂತೋಷದಿಂದ ತುಂಬಿದೆ ಎಂದು ವಿಶ್ವಹಿಂದೂ ಪರಿಷತ್ (ವಿಎಚ್‌ಪಿ) ಪ್ರತಿಕ್ರಿಯಿಸಿದೆ.

ಸೋಮನಾಥ ವ್ಯಾಸ್ ಅವರ ಮೊಮ್ಮಗನಿಗೆ ಪೂಜಿಸುವ ಹಕ್ಕನ್ನು ವಾರಾಣಸಿ ಜಿಲ್ಲಾ ಕೋರ್ಟ್ ನೀಡಿದೆ ಎಂದು ಮಾಹಿತಿ ಹಂಚಿಕೊಂಡಿರುವ ವಿಎಚ್‌ಪಿ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಹೀಗೆ ಪ್ರತಿಕ್ರಿಯಿಸಿದ್ದಾರೆ. 1993ರವರೆಗೂ ಅಲ್ಲಿ ವ್ಯಾಸ್ ಪೂಜೆ ಸಲ್ಲಿಸುತ್ತಿದ್ದರು. ನಿಯಮಿತವಾಗಿ ಪೂಜೆ ಸಲ್ಲಿಸಲು ಅಲ್ಲಿ ಅರ್ಚಕರನ್ನು ನೇಮಿಸಬಹುದು ಎಂದು ಕೋರ್ಟ್ ಹೇಳಿದೆ. 31 ವರ್ಷಗಳ ನಂತರ ಇಂಥದೊಂದು ಬೆಳವಣಿಗೆ ಘಟಿಸಿದೆ ಎಂದು ವಿಎಚ್‌ಪಿ ನಾಯಕ ಅಲೋಕ್ ಕುಮಾರ್ ಹೇಳಿದರು. ಸಾಕ್ಷ್ಯ ಮತ್ತು ವಾಸ್ತವಾಂಶ ಆಧರಿಸಿ ಹಿಂದೂಗಳ ಪರವಾಗಿಯೇ ತೀರ್ಮಾನ ಹೊರಬೀಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿಷಯ ಕೋರ್ಟ್‌ನಲ್ಲಿದೆ: ಬಿಜೆಪಿ ಈ ಬೆಳವಣಿಗೆ ಕುರಿತಂತೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಈ ಕುರಿತು ಪ್ರತಿಕ್ರಿಯಿಸಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ, 'ವಿಷಯ ಕೋರ್ಟ್ ಅಂಗಳದಲ್ಲಿದೆ. ಇಂಥ ವಿಷಯಗಳ ಬಗ್ಗೆ ಮಾತನಾಡುವುದಿಲ್ಲ' ಎಂದು ಹೇಳಿದರು.

ಅಂಜುಮಾನ್ ಸಮಿತಿಗೆ ಹೈಕೋರ್ಟ್ ನೋಟಿಸ್

ಒಂದನೇ ಪುಟದಿಂದ

ಶಿವಲಿಂಗ ಪತ್ತೆಯಾದ ಸ್ಥಳವನ್ನು ಸಂರಕ್ಷಿಸಬೇಕು ಎಂದು ಸುಪ್ರೀಂ ಕೋರ್ಟ್ 2022ರ ಮೇ 17ರಂದು ಆದೇಶಿಸಿತ್ತು. ಹೀಗಾಗಿ, ಆ ಭಾಗದ ಸಮೀಕ್ಷೆ ನಡೆಸಲು ಎಎಸ್‌ಐಗೆ ಸೂಚಿಸುವುದು ತರವಲ್ಲ ಎಂದು ನ್ಯಾಯಾಧೀಶರು ಅರ್ಜಿ ತಿರಸ್ಕಾರಕ್ಕೆ ಕಾರಣ ನೀಡಿದ್ದರು.

ಇದಕ್ಕೂ ಮುನ್ನ ಬುಧವಾರ ಈ ಅರ್ಜಿಯ ವಿಚಾರಣೆ ನಡೆಸುವುದರಿಂದ ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಮನೀಶ್ ನಿಗಮ್ ಅವರು ಹಿಂದೆ ಸರಿದರು. ಬಳಿಕ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ರೋಹಿತ್ ರಂಜನ್ ಅಗರ್‌ವಾಲ್ ಅವರ ಪೀಠಕ್ಕೆ ಒಪ್ಪಿಸಲಾಯಿತು.

ಅಧ್ಯಕ್ಷರಿಗೆ ಸಡ್ಡು, ಆಯ್ಕೆ ಪಟ್ಟಿಗೆ ಅಸ್ತು

ಒಂದನೇ ಪುಟದಿಂದ

'ಬುಧವಾರ ನಿಗದಿಯಾಗಿದ್ದ ಸಭೆಯ ಸೂಚನಾ ಪತ್ರವನ್ನು ಕಾರ್ಯದರ್ಶಿಯು ಎಲ್ಲ ಸದಸ್ಯರಿಗೆ ನೀಡಿದ್ದರು. ಸಭೆ ಆರಂಭವಾಗುತ್ತಿದ್ದಂತೆಯೇ ಅಧ್ಯಕ್ಷರು ಹಾಜರಾಗಿ, ತಾವು ಬೆಳಿಗ್ಗೆ ನೀಡಿದ್ದ ಟಿಪ್ಪಣಿಯನ್ನು ಓದುವಂತೆ ಕಾರ್ಯದರ್ಶಿಗೆ ಸೂಚಿಸಿದರು. ಆ ಟಿಪ್ಪಣಿಯಲ್ಲಿ, 'ಸಭೆ ಆಯೋಜಿಸುತ್ತಿರುವ ವಿಚಾರ ಆಯೋಗದ ಅಧ್ಯಕ್ಷರ ಗಮನಕ್ಕೆ ತಂದಿಲ್ಲ ಮತ್ತು ಅನುಮತಿ ಪಡೆದಿಲ್ಲ. ಸಭೆಯ ಕಾರ್ಯಸೂಚಿಯನ್ನು ಅಧ್ಯಕ್ಷರ ಬಳಿ ಚರ್ಚಿಸಿಲ್ಲ. ಇದು ಸರಿಯಾದ ಕ್ರಮವಲ್ಲ. ಇನ್ನು ಮುಂದೆ ಅಧ್ಯಕ್ಷರ ಒಪ್ಪಿಗೆ ಪಡೆದು, ಕಾರ್ಯಸೂಚಿಗಳ ಬಗ್ಗೆ ಚರ್ಚಿಸಿ ಸಭೆಗಳನ್ನು ಆಯೋಜಿಸಬೇಕು. ಈ ಬಗ್ಗೆ ಆಯೋಗದ ಸಭೆಯ ನಿರ್ಣಯಗಳನ್ನು ಮತ್ತು ಸರ್ಕಾರದ ನಿಯಮಗಳನ್ನು ಪಾಲಿಸಬೇಕು' ಎಂದು ಅಧ್ಯಕ್ಷರು ಉಲ್ಲೇಖಿಸಿದ್ದಾರೆ. ಕಾರ್ಯದರ್ಶಿ ಟಿಪ್ಪಣಿ ಓದಿ ಮುಗಿಸುತ್ತಿದ್ದಂತೆ, 'ಇಂದಿನ ಸಭೆಯನ್ನು ಮುಂದೂಡುವಂತೆ ಸೂಚಿಸಿ ಅಧ್ಯಕ್ಷರು ಸಭೆಯಿಂದ ತೆರಳಿದರು' ಎಂದು ಮೂಲಗಳು ಹೇಳಿವೆ.

ಆದರೆ, ಸಭೆಯಲ್ಲಿದ್ದ ಇತರ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದ ಕಾರ್ಯದರ್ಶಿ, 'ಟಿಪ್ಪಣಿಯಲ್ಲಿ ಅಧ್ಯಕ್ಷರು ತಿಳಿಸಿದ ಎಲ್ಲ ವಿಷಯಗಳನ್ನು ಮೊದಲೇ ಅಧ್ಯಕ್ಷರು ಮತ್ತು ಸದಸ್ಯರಿಗೆ ತಿಳಿಸಿದ್ದೇನೆ. ಅದರ ಅನ್ವಯವೇ ಸಭೆ ಕರೆದಿದ್ದೇನೆ. ಸಭೆಯ ಕಾರ್ಯಸೂಚಿಯಲ್ಲಿ ಅಂತಿಮ ಆಯ್ಕೆ ಪಟ್ಟಿಗಳನ್ನು ಪ್ರಕಟಿಸುವ ಅತ್ಯಂತ ತುರ್ತು ವಿಷಯವೂ ಇದೆ. ಇದು ಜರೂರು ಇರುವುದರಿಂದ ಆಯೋಗದ ಸಭೆಗೆ ಮಂಡಿಸಲಾದ ಅಂತಿಮ ಆಯ್ಕೆ ಪಟ್ಟಿಗೆ ಅನುಮೋದನೆ ನೀಡಬೇಕು ಎಂದು ಕೋರಿದರು. ಸಭೆಯಲ್ಲಿದ್ದ ಎಲ್ಲ ನಾಲ್ವರು (ರೊನಾಲ್ಡ್ ಅನಿಲ್ ಫರ್ನಾಂಡಿಸ್, ಆರ್. ಗಿರೀಶ್, ಬಿ. ಪ್ರಭುದೇವ ಮತ್ತು ಶಾಂತಾ ಹೊಸಮನಿ) ಅನುಮೋದನೆ ನೀಡಿದ್ದಾರೆ' ಎಂದೂ ಗೊತ್ತಾಗಿದೆ.

'ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿದ್ದ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲು ಹಲವು ತಿಂಗಳುಗಳಿಂದ ಬಾಕಿ ಉಳಿದಿತ್ತು. ಅಭ್ಯರ್ಥಿಗಳ ಹಿತದೃಷ್ಟಿಯಿಂದ ಮತ್ತು ಸರ್ಕಾರಕ್ಕೆ ಮುಜುಗರ ಉಂಟಾಗಬಾರದೆಂಬ ಕಾರಣಕ್ಕೆ ಪಟ್ಟಿಗೆ ಸದಸ್ಯರು ಅನುಮೋದನೆ ನೀಡಿದ್ದಾರೆ. ಸಭೆ ಮುಗಿಯುತ್ತಿದ್ದಂತೆ ಅನುಮೋದನೆ ನೀಡಿದ ಆಯ್ಕೆ ಪಟ್ಟಿಗಳನ್ನು ಕೆಪಿಎಸ್‌ಸಿ ವೆಬ್‌ಸೈಟ್‌ನಲ್ಲಿ ಕಾರ್ಯದರ್ಶಿ ಅಪ್‌ಲೋಡ್ ಮಾಡಿದ್ದಾರೆ. ಈ ಪಟ್ಟಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ' ಎಂದೂ ಗೊತ್ತಾಗಿದೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕಾರ್ಯದರ್ಶಿ ಮತ್ತು ಅಧ್ಯಕ್ಷರಿಗೆ ಕರೆ ಮಾಡಿದರೂ ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಏನಿದು ಜಟಾಪಟಿ?: ಕೆಪಿಎಸ್‌ಸಿ ಕಾನೂನು ಕೋಶದ ಮುಖ್ಯಸ್ಥ (ಎಚ್‌ಎಲ್‌ಸಿ) ಅವರ ವಿಷಯದಲ್ಲಿ ಅಧ್ಯಕ್ಷ ಮತ್ತು ಕಾರ್ಯದರ್ಶಿ ನಡುವೆ ಸಂಘರ್ಷ ಆರಂಭವಾಗಿತ್ತು. ತಾವು ಸೂಚಿಸಿದ ಅಭ್ಯರ್ಥಿಯನ್ನು ಎಚ್‌ಎಲ್‌ಸಿ ಆಗಿ ನೇಮಿಸುವಂತೆ ಅಧ್ಯಕ್ಷರು ಪಟ್ಟು ಹಿಡಿದಿದ್ದರು. ಆದರೆ, ಅದಕ್ಕೆ ಕಾರ್ಯದರ್ಶಿ ಒಪ್ಪಿರಲಿಲ್ಲ. ಯಾವುದೇ ನೇಮಕಾತಿ ಅಧಿಸೂಚನೆ ಮತ್ತು ಆಯ್ಕೆ ಪಟ್ಟಿಗಳಿಗೆ ಸಹಿ ಹಾಕುವುದಿಲ್ಲವೆಂದು ಆರು ಸದಸ್ಯರು (ವಿಜಯಕುಮಾರ್ ಡಿ. ಕುಚನೂರೆ, ಎಂ.ಬಿ. ಹೆಗ್ಗಣ್ಣವರ, ಡಾ. ಶಾಂತಾ ಹೊಸಮನಿ, ಡಾ.ಎಚ್.ಎಸ್. ನರೇಂದ್ರ, ಬಿ.ವಿ. ಗೀತಾ, ಮುಸ್ತಫಾ ಹುಸೇನ್ ಸಯ್ಯದ್ ಅಜೀಜ್) ಡಿ. 28ರಂದು ಪತ್ರ ನೀಡಿದ್ದರು. ಕಳೆದ ಒಂದೂವರೆ ತಿಂಗಳಿನಿಂದ ಆಯೋಗದ ಸಭೆ ನಡೆದಿಲ್ಲ.

ಅನುಮೋದನೆಗೊಂಡ ಅಂತಿಮ ಆಯ್ಕೆ ಪಟ್ಟಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ	
ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಗ್ರೇಡ್ 1)	17
ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಗ್ರೇಡ್ 1)	7 (ಹೈ–ಕ)
ಸಹಾಯಕ ಎಂಜಿನಿಯರ್ (ಗ್ರೇಡ್ 1)	229+59 (ಹೈ–ಕ)
ಕಿರಿಯ ಎಂಜಿನಿಯರ್	89+47 (ಹೈ–ಕ)
ನಗರ ಗ್ರಾಮಾಂತರ ಯೋಜನಾ ಇಲಾಖೆ	
ನಗರ ಯೋಜಕರು (ಎಇ)	18+5 (ಹೈ–ಕ)
ಜಲ ಸಂಪನ್ಮೂಲ ಇಲಾಖೆ	
ಕಿರಿಯ ಎಂಜಿನಿಯರ್	169
ಕಾರ್ಮಿಕ ಇಲಾಖೆ	
ಕಾರ್ಮಿಕ ನಿರೀಕ್ಷಕರು	20
ಪೌರಾಡಳಿತ ಇಲಾಖೆ	
ಎಲೆಕ್ಟ್ರಿಷಿಯನ್ (ಗ್ರೇಡ್ 1)	2 (ಹೈ–ಕ)
ರೇಷ್ಮೆ ಇಲಾಖೆ	
ರೇಷ್ಮೆ ವಿಸ್ತರಣಾಧಿಕಾರಿ	4 (ಹೈ–ಕ)

ಹಲವೆಡೆ 'ಲೋಕಾ'ಬಲೆ: ₹23 ಕೋಟಿ ಆಸ್ತಿ ಪತ್ತೆ

ಒಂದನೇ ಪುಟದಿಂದ...

ಶಾಂತಕುಮಾರ್ ಬ್ಯಾಂಕ್ ಉಳಿತಾಯ ಖಾತೆಯಲ್ಲಿ ₹74.77 ಲಕ್ಷ ಇರಿಸಿರುವ ದಾಖಲೆಯನ್ನು ತನಿಖಾ ತಂಡ ಪತ್ತೆ ಹಚ್ಚಿದೆ.

ಜಗನ್ನಾಥ ಅವರ ಬಳಿ ಐದು ನಿವೇಶನ, ಒಂದು ಮನೆ ಇರುವುದು ಶೋಧದ ವೇಳೆ ದೃಢಪಟ್ಟಿದೆ. 5 ಎಕರೆ 9 ಗುಂಟೆ ಜಮೀನನ್ನು ಅಡಮಾನ ಇರಿಸಿರುವ ದಾಖಲೆ ರವಿಕುಮಾರ್ ಮನೆಯಲ್ಲಿ ಸಿಕ್ಕಿದೆ. ತಲಾ ಒಂದು ವಾಸದ ಮನೆ, ನಿವೇಶನ, ವಾಣಿಜ್ಯ ಸಂಕೀರ್ಣ ಮತ್ತು 4 ಎಕರೆ ಕೃಷಿ ಜಮೀನು ಕೂಡ ಇವರ ಬಳಿ ಇವೆ.

ಸಹಾಯಕ ಪ್ರಾಧ್ಯಾಪಕರಾಗಿರುವ ರವಿ ಏಳು ನಿವೇಶನಗಳು ಮತ್ತು ಎರಡು ಮನೆಗಳ ಒಡೆಯ. ಹನುಮಂತರಾಯಪ್ಪ ಬಳಿ ಮೂರು ಮನೆಗಳು ಮತ್ತು ಕೃಷಿ ಜಮೀನು ಇರುವುದು ತಪಾಸಣೆಯಲ್ಲಿ ಪತ್ತೆಯಾಗಿದೆ. ಯಜ್ಞೇಂದ್ರ ನಾಲ್ಕು ನಿವೇಶನ, ಒಂದು ಮನೆ ಮತ್ತು 2 ಎಕರೆ ಕೃಷಿ ಜಮೀನನ್ನು ಹೊಂದಿರುವ ದಾಖಲೆಗಳನ್ನು ತನಿಖಾ ತಂಡ ವಶಪಡಿಸಿಕೊಂಡಿದೆ.

ಲೋಕಾಯುಕ್ತದ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಎಸ್‌ಪಿಗಳು, ಡಿವೈಎಸ್‌ಪಿಗಳು, ಇನ್‌ಸ್ಪೆಕ್ಟರ್‌ಗಳು, ಕಾನ್‌ಸ್ಟೆಬಲ್‌ಗಳು ಸೇರಿದಂತೆ 41 ತಂಡಗಳಲ್ಲಿ 200ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

ಅಧಿಕಾರಿ ಹೆಸರು	ಪತ್ತೆಯಾದ ಆಸ್ತಿ (₹ಕೋಟಿಗಳಲ್ಲಿ)
ಹರ್ಷ ಎಚ್.ಆರ್. (ಇಇ, ಪಿಡಬ್ಲ್ಯುಡಿ, ಮಂಡ್ಯ)	4.50
ರೇಣುಕಮ್ಮ (ವಲಯ ಅರಣ್ಯಾಧಿಕಾರಿ, ಹೂವಿನಹಡಗಲಿ)	2.77
ಎ.ಹನುಮಂತರಾಯಪ್ಪ (ಎಇಇ, ಕೆಆರ್‌ಐಡಿಎಲ್, ಮಧುಗಿರಿ)	2.55
ಶಾಂತಕುಮಾರ್ ಎಚ್.ಎಂ. (ಇಇ, ಮೆಸ್ಕಾಂ, ಮಂಗಳೂರು)	2.44
ಬಿ. ರವಿ (ಸಹಾಯಕ ಪ್ರಾಧ್ಯಾಪಕ, ನಂದಿಹಳ್ಳಿ)	2.16
ವಿ.ರವಿಕುಮಾರ್ (ಎಇಇ, ಗ್ರಾಮೀಣ ಕುಡಿಯುವ ನೀರು ಇಲಾಖೆ, ಹಾಸನ)	2.07
ನೇತ್ರಾವತಿ ಕೆ.ಆರ್. (ವಾಣಿಜ್ಯ ತೆರಿಗೆ ಅಧಿಕಾರಿ, ಚಿಕ್ಕಮಗಳೂರು)	1.98
ಜಗನ್ನಾಥ ಬಿ.ಬಿ. (ಆಹಾರ ನಿರೀಕ್ಷಕ, ಹಾಸನ)	1.90
ಆರ್.ಆರ್. ಭಾಸ್ಕರ್ (ಎಇಇ, ಜೆಸ್ಕಾಂ, ವಿಜಯನಗರ)	1.74
ಎಂ.ಎನ್. ಯಜ್ಞೇಂದ್ರ (ಎಇಇ, ಮುಡಾ, ಮೈಸೂರು)	1.06

ಬ್ಯಾಂಕ್ ಆಫ್ ಬರೋಡಾಗೆ ಶೇ 19ರಷ್ಟು ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ (ಬಿಒಬಿ) 2023–24ನೇ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ₹4,579 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ರ ಮೂರನೇ ತ್ರೈಮಾಸಿಕದಲ್ಲಿ ₹3,853 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 19ರಷ್ಟು ಹೆಚ್ಚಳವಾಗಿದೆ ಎಂದು ಷೇರುಪೇಟೆಗೆ ಬ್ಯಾಂಕ್ ತಿಳಿಸಿದೆ. ಒಟ್ಟು ವರಮಾನವು ₹27,092 ಕೋಟಿಯಿಂದ ₹31,416 ಕೋಟಿಗೆ ಏರಿಕೆಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.


ಚೇತರಿಕೆ ಕಂಡ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಖರೀದಿಗೆ ಹೂಡಿಕೆದಾರರು ಹೆಚ್ಚಿನ ಉತ್ಸಾಹ ತೋರಿದ್ದರಿಂದ ಷೇರುಪೇಟೆಯಲ್ಲಿ ಬುಧವಾರ ಸೂಚ್ಯಂಕ ಗಳು ಶೇ 1ರಷ್ಟು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ(ಬಿಎಸ್‌ಇ) ಸೆನ್ಸೆಕ್ಸ್ 612 ಅಂಶ ಏರಿಕೆ ಯಾಗಿ 71,752ರಲ್ಲಿ ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 203 ಅಂಶ ಹೆಚ್ಚಳವಾಗಿ, 21,725ಕ್ಕೆ ವಹಿವಾಟು ಅಂತ್ಯಗೊಂಡಿತು.

ಸನ್‌ಫಾರ್ಮಾ, ಟಾಟಾ ಮೋಟರ್ಸ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಹೀಂದ್ರ ಆ್ಯಂಡ್ ಮಹೀಂದ್ರ, ಮಾರುತಿ, ಬಜಾಜ್ ಫಿನ್‌ಸರ್ವ್, ಪವರ್‌ಗ್ರಿಡ್ ಮತ್ತು ಅಲ್ಟ್ರಾ ಟೆಕ್ ಸಿಮೆಂಟ್ ಗಳಿಕೆ ಕಂಡಿವೆ. ಲಾರ್ಸೆನ್ ಆ್ಯಂಡ್ ಟೂಬ್ರೊ, ಟೈಟನ್ ಇಳಿದಿವೆ.

ಷೇರುಪೇಟೆ ವಹಿವಾಟು ▲612



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,522
ಇಂದಿನ ಅಂತ್ಯ	21,725
	▲203
ದಿನದ ಗರಿಷ್ಠ	21,741

ವಿನಿಮಯ ದರ

$ ಡಾಲರ್	83.04
£ ಪೌಂಡ್	105.24
€ ಯುರೊ	89.81
¥ ಯೆನ್ (100ಕ್ಕೆ)	56

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1505 (1505)
ಸೋಯಾ (ರಿಫೈನ್ಡ್)	₹870 (880)
ಸೂರ್ಯಕಾಂತಿ (ರಿಫೈನ್ಡ್)	₹910 (915)
ಪಾಮೋಲಿನ್	₹845 (845)

ಲಲಿತಕಲಾ ಕಾಲೇಜು ವಿದ್ಯಾರ್ಥಿಗಳ ಜತೆ ಸಚಿವ ಪ್ರಿಯಾಂಕ್ ಖರ್ಗೆ ಚರ್ಚೆ

‘ಬೋಧಕರ ನೇಮಕಕ್ಕೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ 27 ಲಲಿತಕಲಾ ಕಾಲೇಜುಗಳಲ್ಲಿ ಸರ್ಕಾರ ಡಿಜಿಟಲ್ ಆರ್ಟ್ ಲ್ಯಾಬ್ ತೆರೆದಿದೆ. ಆದರೆ, ಡಿಜಿಟಲ್ ಕಲೆಯ ಕಲಿಕೆಗೆ ಸಂಬಂಧಿಸಿದಂತೆ ಅಗತ್ಯ ಪರಿಕರಗಳಿಲ್ಲ. ವಿದ್ಯಾರ್ಥಿಗಳಿಗೆ ಕಲಿಸಲು ಕಾಯಂ ಬೋಧಕರಿಲ್ಲ’

ನಗರದಲ್ಲಿ ಬುಧವಾರ ನಡೆದ ಜಿಎಎಫ್‌ಎಕ್ಸ್ ಸಮ್ಮೇಳನ ದಲ್ಲಿ ಪಾಲ್ಗೊಂಡಿದ್ದ ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಮುಂದೆ ಕಾಲೇಜುಗಳ ಬೋಧಕರು ಮತ್ತು ವಿದ್ಯಾರ್ಥಿಗಳು ಅಳಲು ತೋಡಿಕೊಂಡಿದ್ದು ಹೀಗೆ.

ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮ್ಸ್ ಮತ್ತು ಕಾಮಿಕ್ಸ್ (ಎವಿಜಿಸಿ) ಬಗ್ಗೆ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಖಾಸಗಿ ಸಂಸ್ಥೆಯಾದ ಎಬಿಎಐ ಜೊತೆಗೆ ಸರ್ಕಾರ ಒಪ್ಪಂದ ಮಾಡಿಕೊಂಡಿದೆ. ಈ ಸಂಸ್ಥೆಯು ಕಾಲೇಜಿನಲ್ಲಿರುವ ಬೋಧಕರಿಗೆ ತರಬೇತಿ ನೀಡುತ್ತದೆ. ತರಬೇತಿ ಪಡೆದವರೇ ವಿದ್ಯಾರ್ಥಿಗಳಿಗೆ ಡಿಜಿಟಲ್ ಕಲೆ ಬಗ್ಗೆ ಕಲಿಸಬೇಕಿದೆ ಎಂದರು.

ಡಿಜಿಟಲ್ ಲ್ಯಾಬ್‌ಗೆ ಕಂಪ್ಯೂಟರ್, ಡಿಜಿಟಲ್ ಕಲೆಗೆ ಸಂಬಂಧಿಸಿದ ಹೊಸ ಸಾಫ್ಟ್‌ವೇರ್‌ಗಳನ್ನು ಅಳವಡಿಸಬೇಕು. ವಿದ್ಯಾರ್ಥಿಗಳಿಗೆ ಟ್ಯಾಬ್, ಲ್ಯಾಪ್‌ಟಾಪ್ ನೀಡಬೇಕು ಎಂದು ಕೋರಿದರು.

ಎರಡು ದಶಕದಿಂದಲೂ ಲಲಿತಕಲಾ ಕಾಲೇಜುಗಳಿಗೆ ಬೋಧಕ ಸಿಬ್ಬಂದಿ ನೇಮಿಸಿಲ್ಲ. ಈ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿ ತರಬೇಕು. ಆಗಷ್ಟೇ ವಿಷಯವಾರು ಬೋಧಕರ ನೇಮಕಕ್ಕೆ ಅನುಕೂಲವಾಗಲಿದೆ ಎಂದು ಮನವಿ ಮಾಡಿದರು. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರನ್ನು ನೇಮಿಸಬೇಕು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಪ್ರಿಯಾಂಕ್ ಖರ್ಗೆ, ‘ಡಿಜಿಟಲ್ ಕಲೆ ಕಲಿತ ಸಾಕಷ್ಟು ವಿದ್ಯಾರ್ಥಿಗಳು ಕಾರ್ಪೊರೇಟ್ ಕಂಪನಿಗಳಲ್ಲಿ ಉದ್ಯೋಗ ದಲ್ಲಿದ್ದಾರೆ. ಡಿಜಿಟಲ್ ಲ್ಯಾಬ್‌ಗಳಿಗೆ ಹಂತ ಹಂತವಾಗಿ ಅಗತ್ಯ ಪರಿಕರಗಳ ಪೂರೈಕೆಗೆ ಕ್ರಮಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

ಹೊಸ ಬೋಧಕರ ನೇಮಕಾತಿ ಸಂಬಂಧ ಸರ್ಕಾರದ ಹಂತದಲ್ಲಿ ಚರ್ಚಿಸಲಾಗುವುದು. ಮಂಜೂರಾಗಿರುವ ಹುದ್ದೆಗಳಿಗೆ ಅನುಗುಣವಾಗಿ ನೇಮಕಾತಿಗೆ ಸರ್ಕಾರ ಕ್ರಮಕೈಗೊಳ್ಳಲಿದೆ ಎಂದರು.



ಬೆಂಗಳೂರಿನಲ್ಲಿ ಬುಧವಾರ ನಡೆದ ಜಿಎಎಫ್‌ಎಕ್ಸ್ ಸಮ್ಮೇಳನದಲ್ಲಿ ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರು, ಲಲಿತಕಲಾ ಕಾಲೇಜಿನ ಬೋಧಕರು ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು –ಪ್ರಜಾವಾಣಿ ಚಿತ್ರ

> **ಡಿಜಿಟಲ್ ಕಲೆ ಕಲಿತ ವಿದ್ಯಾರ್ಥಿಗಳು ಬೋಧನಾ ವೃತ್ತಿಗೆ ಮರಳುವುದಿಲ್ಲ. ಹಾಗಾಗಿ, ಕಾಲೇಜುಗಳಲ್ಲಿ ಈ ವಿಷಯದ ಬೋಧಕರ ಕೊರತೆ ಹೆಚ್ಚಿದೆ**
> **ಬಿ.ಎಲ್. ಚೌಹಾಣ್,** ಅಧ್ಯಕ್ಷ, ಕರ್ನಾಟಕ ರಾಜ್ಯ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿ ಸಂಘ

ಗೇಮಿಂಗ್ ವಲಯದ ಅಭಿವೃದ್ಧಿಗೆ ಒತ್ತು

‘ರಾಜ್ಯದಲ್ಲಿ ಗೇಮಿಂಗ್ ವಲಯದ ಅಭಿವೃದ್ಧಿಗಾಗಿ ಶ್ರೇಷ್ಠತಾ ಕೇಂದ್ರ (ಸಿಒಇ) ಸ್ಥಾಪನೆಗೆ ಸರ್ಕಾರ ಉದ್ದೇಶಿಸಿದೆ. ಹಾರ್ಡ್‌ವೇರ್, ಸಾಫ್ಟ್‌ವೇರ್, ನವೋದ್ಯಮಿಗಳು ಮತ್ತು ಸರ್ಕಾರವು ಒಂದೇ ಸೂರಿನಡಿ ಕಾರ್ಯ ನಿರ್ವಹಿಸಲು ಇದರಿಂದ ಸಹಕಾರಿಯಾಗಲಿದೆ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಸಮ್ಮೇಳನದ ಸಮಾರೋಪದಲ್ಲಿ ಮಾತನಾಡಿದ ಅವರು, ಕರ್ನಾಟಕವು ಎವಿಜಿಸಿ ವಲಯದ ಮುಖ್ಯ ನೆಲೆಯಾಗಬೇಕು ಎಂಬುದು ಸರ್ಕಾರದ ಆಶಯ ಎಂದರು.

ನಟ ಉಪೇಂದ್ರ, ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ, ಎಬಿಎಐ ಅಧ್ಯಕ್ಷ ಬಿರೇನ್ ಘೋಷ್ ಹಾಜರಿದ್ದರು.

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹161
ಆರ್‌ಎಸ್‌ಎಸ್-5	₹156
ಗುಡ್ ಲಾಟ್	₹139

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹232-463
ದ್ವಿತಳಿ (ಬಿ.ವಿ)	₹361-575

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹570
12 ಕ್ಕೆ	₹75
ಮೈಸೂರು	
100ಕ್ಕೆ	₹572

ಮುಂಬೈ ಧಾರಣೆ

ಶೇಂಗಾ
31-1-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1515 (1515)
ಒಂದು ವಾರದ ಡೆಲಿವರಿ	1510 (1510)
ಸೋಯಾ ಕಚ್ಚಾ	835 (855)
ಪಾಮ್ ವಾರದ ಡೆಲಿವರಿ	843 (843)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹62,500 (62,250)
ಬೆಳ್ಳಿ ಕೆ.ಜಿ ₹71,600 (71,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವಿಸ್ಟ್ರಾನ್‌ನಿಂದ ₹1,500 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೈವಾನ್ ಮೂಲದ ವಿಸ್ಟ್ರಾನ್ ಕಂಪನಿಯು ರಾಜ್ಯದಲ್ಲಿ ಲ್ಯಾಪ್‌ಟಾಪ್ ಉತ್ಪಾದನಾ ಘಟಕ ಸ್ಥಾಪನೆಗೆ ₹1,500 ಕೋಟಿ ಹೂಡಿಕೆ ಮಾಡಲಿದ್ದು, ಈ ಸಂಬಂಧ ಸರ್ಕಾರದ ಜತೆಗೆ ಒಡಂಬಡಿಕೆಗೆ ಸಹಿ ಹಾಕಿದೆ.

ನಗರದ ಖನಿಜ ಭವನದಲ್ಲಿ ಬುಧವಾರ ಸಭೆ ನಡೆಯಿತು. ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ಸಮ್ಮುಖದಲ್ಲಿ ರಾಜ್ಯದ ಪರವಾಗಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಮತ್ತು ವಿಸ್ಟ್ರಾನ್ ಕಂಪನಿ ಅಧ್ಯಕ್ಷ ಅಲೆಕ್ ಲಾಯ್ ಒಪ್ಪಂದಕ್ಕೆ ಸಹಿ ಹಾಕಿದರು.

ನಂತರ ಮಾತನಾಡಿದ ಎಂ.ಬಿ. ಪಾಟೀಲ, ‘ಈಗಾಗಲೇ, ವಿಸ್ಟ್ರಾನ್ ಕಂಪನಿಯು ಕೋಲಾರದಲ್ಲಿ ತನ್ನ ಘಟಕ ಹೊಂದಿದೆ. ಈ ಹೂಡಿಕೆ ಮೂಲಕ ರಾಜ್ಯದಲ್ಲಿ ಪ್ರಥಮ ಲ್ಯಾಪ್‌ಟಾಪ್ ತಯಾರಿಕಾ ಘಟಕವೂ ಬರುತ್ತಿದೆ. 2026ರ ಜನವರಿ ವೇಳೆಗೆ ಇಲ್ಲಿ ಉತ್ಪಾದನಾ ಚಟುವಟಿಕೆ ಆರಂಭಿಸಲಿದೆ. ಈ ಯೋಜನೆಯಿಂದ 3,000ಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗಲಿವೆ’ ಎಂದರು.



ಎಂ.ಬಿ. ಪಾಟೀಲ

ಈ ಯೋಜನೆಗೆ ಕಂಪನಿಯು ಬೆಂಗಳೂರಿನ ಸಮೀಪ 32 ಎಕರೆ ಜಮೀನು ಕೇಳಿದೆ. ಒಂದು ವಾರದಲ್ಲಿ ಈ ಪ್ರಕ್ರಿಯೆ ಅಂತಿಮವಾಗಲಿದೆ. ಇಲ್ಲಿ ತಯಾರಾಗುವ ಲ್ಯಾಪ್‌ಟಾಪ್‌ಗಳಲ್ಲಿ ಶೇ 50ರಷ್ಟು ವಿದೇಶಗಳಿಗೆ ರಫ್ತಾಗಲಿವೆ. ಉದ್ದೇಶಿತ ಘಟಕವು ಸಂಪೂರ್ಣ ಆಟೊಮೇಷನ್ ಸೌಲಭ್ಯ ಹೊಂದಿರಲಿದೆ ಎಂದು ತಿಳಿಸಿದರು.

ವಿಸ್ಟ್ರಾನ್ ಲ್ಯಾಪ್‌ಟಾಪ್ ತಯಾರಿಕಾ ಘಟಕವು ಸರ್ವರ್‌ಗಳು, ಐಒಟಿ (ಇಂಟರ್‌ನೆಟ್ ಆಫ್ ಥಿಂಗ್ಸ್), ವಿದ್ಯುತ್ ಚಾಲಿತ ವಾಹನಗಳ ವಲಯಕ್ಕೆ ಸಂಬಂಧಿಸಿದ ಉಪಕರಣಗಳನ್ನೂ ತಯಾರಿಸಲಿದೆ. ಜುಲೈನಲ್ಲಿ ಈ ಘಟಕದ ಕಾಮಗಾರಿ ಆರಂಭವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ವಿಸ್ಟ್ರಾನ್ ಕಂಪನಿಯ ಹಿರಿಯ ನಿರ್ದೇಶಕ ಡೆನಿಸ್ ಹಂಗ್, ಜನರಲ್ ಮ್ಯಾನೇಜರ್ ರಾಚೆಲ್ ಲೂ, ಉನ್ನತಾಧಿಕಾರಿಗಳಾದ ಸಿ. ಸುಧೀರ್, ಪ್ರಿಯವ್ರತ ಪಾಂಡಾ, ಉದ್ಯಮಿ ಸಿ.ಎ. ಸುರೇಶ್, ಕೈಗಾರಿಕಾ ಇಲಾಖೆಯ ಆಯುಕ್ತೆ ಗುಂಜನ್ ಕೃಷ್ಣ ಉಪಸ್ಥಿತರಿದ್ದರು.

ಮೊಬೈಲ್ ಬಿಡಿಭಾಗ ಆಮದು ಸುಂಕ ಕಡಿತ

ನವದೆಹಲಿ (ಪಿಟಿಐ): ಮೊಬೈಲ್ ಬಿಡಿಭಾಗಗಳ ಮೇಲಿನ ಆಮದು ಸುಂಕವನ್ನು ಕೇಂದ್ರ ಸರ್ಕಾರವು ಶೇ 5ರಷ್ಟು ಕಡಿತಗೊಳಿಸಿದೆ.

ಬ್ಯಾಟರಿ ಕವರ್, ಲೆನ್ಸ್ ಸೇರಿದಂತೆ ಇತರೆ ಬಿಡಿಭಾಗಗಳ ಮೇಲೆ ವಿಧಿಸುತ್ತಿದ್ದ ಸುಂಕವನ್ನು ಶೇ 15ರಿಂದ ಶೇ 10ಕ್ಕೆ ಇಳಿಸಲಾಗಿದೆ. ಇದರಿಂದ ಸ್ಥಳೀಯ ಉತ್ಪಾದನೆ ಮತ್ತು ರಫ್ತು ಹೆಚ್ಚಳಕ್ಕೆ ಉತ್ತೇಜನ ಸಿಗಲಿದೆ. ಆ ಮೂಲಕ ಮಾರುಕಟ್ಟೆಯಲ್ಲಿ ಮೊಬೈಲ್‌ಗಳ ಬೆಲೆಯನ್ನು ಕಡಿಮೆಗೊಳಿಸುವುದು ಸರ್ಕಾರದ ಗುರಿಯಾಗಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

‘ಸರ್ಕಾರದ ಈ ಕ್ರಮವು ದೇಶದಲ್ಲಿ ಮೊಬೈಲ್ ಫೋನ್‌ಗಳ ತಯಾರಿಕೆಗೆ ಪೂರಕವಾಗಿದೆ’ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಜಿಎಸ್‌ಟಿ: ₹1.72 ಲಕ್ಷ ಕೋಟಿ ಸಂಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ 2023–24ನೇ ಹಣಕಾಸು ವರ್ಷದ ಜನವರಿಯಲ್ಲಿ ₹1.72 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ.

ಈ ಆರ್ಥಿಕ ವರ್ಷದ ತಿಂಗಳೊಂದರಲ್ಲಿ ಸಂಗ್ರಹವಾಗಿರುವ ಎರಡನೇ ಗರಿಷ್ಠ ಮೊತ್ತ ಇದಾಗಿದೆ.

ಕಳೆದ ಹಣಕಾಸು ವರ್ಷದ ಜನವರಿಯಲ್ಲಿ ಸಂಗ್ರಹವಾಗಿದ್ದ ಮೊತ್ತಕ್ಕೆ ಹೋಲಿಸಿದರೆ ಶೇ 10.4ರಷ್ಟು ಹೆಚ್ಚು ವರಮಾನ ಸಂಗ್ರಹವಾಗಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

ಡಿಸೆಂಬರ್‌ನಲ್ಲಿ ₹1.65 ಲಕ್ಷ ಕೋಟಿ ಸಂಗ್ರಹವಾಗಿತ್ತು. 2023ರ ಏಪ್ರಿಲ್‌ನಿಂದ ಈ ವರ್ಷದ ಜನವರಿವರೆಗೆ ಜಿಎಸ್‌ಟಿ ಸಂಗ್ರಹವು ಶೇ 11.6ರಷ್ಟು ಏರಿಕೆಯಾಗಿದೆ. ಅಲ್ಲದೇ, ಈ ಹಣಕಾಸು ವರ್ಷದಲ್ಲಿ ಮೂರು ಬಾರಿ ₹1.70 ಲಕ್ಷ ಕೋಟಿಗೂ ಹೆಚ್ಚು ಸಂಗ್ರಹವಾಗಿದೆ ಎಂದು ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	560
ಅಡಿಕೆ	
ಬಂಟ್ವಾಳ	
ಕೋಕ	18000-28500
ಹೊಸತು	28500-35000
ಹಳತು	42000-44000
ಕಾರ್ಕಳ	
ಹೊಸತು	25000-35000
ಹಳತು	30000-44500
ಕುಮಟ	
ಚಿಪ್ಪು	24899-31899
ಕೋಕ	16019-28899
ಫ್ಯಾಕ್ಟರಿ	11099-20699
ಹಳೆಚಾಲಿ	36019-38009
ಹೊಸಚಾಲಿ	32099-34079
ಪುತ್ತೂರು	
ಕೋಕ	11500-26000
ಹೊಸತು	26500-35000
ಶಿವಮೊಗ್ಗ	
ಬೆಟ್ಟೆ	40009-54500
ಗೊರಬಲು	20000-36009
ರಾಶಿ	34166-49099
ಸರಕು	53899-78677
ಸಿದ್ದಾಪುರ	
ಬಿಳಿಗೋಟು	28899-31789
ಚಾಲಿ	36299-37299
ಕೋಕ	29299-32019
ಹೊಸಚಾಲಿ	30888-36909
ಕೆಂಪುಗೋಟು	30019-39099
ರಾಶಿ	44559-47599
ತಟ್ಟಿಬೆಟ್ಟೆ	40249-46099
ಶಿರಸಿ	
ಬೆಟ್ಟೆ	38618-44199
ಬಿಳಿಗೋಟು	26100-33892
ಚಾಲಿ	37018-39308
ಕೆಂಪುಗೋಟು	31200-36018
ರಾಶಿ	43698-47909

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	14500	-	194 ಸೆಂಟ್ಸ್
ಎಸಿ	-	7,800	-	
ಆರ್‌ಪಿ	-	12,800	-	ಲಂಡನ್
ಆರ್‌ಸಿ	-	7500	-	3,336 ಡಾಲರ್

ಮಾರುತಿ ಸುಜುಕಿ ಕಂಪನಿಗೆ ₹3,207 ಕೋಟಿ ನಿವ್ವಳ ಲಾಭ

ನವದೆಹಲಿ (ಪಿಟಿಐ): 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಮಾರುತಿ ಸುಜುಕಿ ಕಂಪನಿಯು ₹3,207 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ಕಂಪನಿಯು ₹2,406 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 33ರಷ್ಟು ಏರಿಕೆಯಾಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಈ ತ್ರೈಮಾಸಿಕದಲ್ಲಿ ಒಟ್ಟು ಕಾರ್ಯಾಚರಣೆ ವರಮಾನವು ₹29,251 ಕೋಟಿಯಿಂದ ₹33,513 ಕೋಟಿಗೆ ಏರಿಕೆಯಾಗಿದೆ. ಅಲ್ಲದೇ, ಇದೇ ಅವಧಿಯಲ್ಲಿ 5,01,207 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷ ಈ ಅವಧಿಯಲ್ಲಿ 4,65,911 ಮಾರಾಟವಾಗಿದ್ದವು.

ಹಿಂದಿನ ಹಣಕಾಸು ವರ್ಷದ ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ ಕಂಪನಿಯು ಒಟ್ಟು ₹5,576 ಕೋಟಿ ನಿವ್ವಳ ಲಾಭ ಗಳಿಸಿತ್ತು. 2023–24ರ ಇದೇ ಅವಧಿಯಲ್ಲಿ ₹9,536 ಕೋಟಿಗೆ ಏರಿಕೆಯಾಗಿದೆ. ಕಾರ್ಯಾಚರಣೆ ವರಮಾನವು ₹86,196 ಕೋಟಿಯಿಂದ ₹1.03 ಲಕ್ಷ ಕೋಟಿಗೆ ತಲುಪಿದೆ.

ರಫ್ತು ನಿರ್ಬಂಧ: ರಾಜ್ಯದಲ್ಲಿ ಇಳುವರಿ ಕುಂಠಿತ

ಈರುಳ್ಳಿ ದರ ಕುಸಿತ: ರೈತರು ಕಂಗಾಲು

• ಡಿ.ಕೆ.ಬಸವರಾಜು

ದಾವಣಗೆರೆ: ಕೇಂದ್ರ ಸರ್ಕಾರವು ಈರುಳ್ಳಿ ರಫ್ತು ನಿರ್ಬಂಧಿಸಿರುವುದರಿಂದ ಸ್ಥಳೀಯ ಮಾರುಕಟ್ಟೆಯಲ್ಲಿ ದರ ಕುಸಿದಿದ್ದು, ರೈತರು ಕಂಗಾಲಾಗಿದ್ದಾರೆ.

ರಾಜ್ಯದಲ್ಲಿ ಆವರಿಸಿರುವ ಬರಗಾಲದ ನಡುವೆಯೂ ಬೆಳೆದಿರುವ ಈರುಳ್ಳಿಗೆ ಗಾತ್ರಕ್ಕೆ ತಕ್ಕಂತೆ ಪ್ರತಿ ಕ್ವಿಂಟಲ್‌ಗೆ ₹300ರಿಂದ ₹1,500 ದರ ಸಿಗುತ್ತಿದೆ. ಇದರಿಂದ ಬೆಳೆಗಾರರಿಗೆ ತೀವ್ರ ನಷ್ಟ ಉಂಟಾಗುತ್ತಿದೆ.

ಉತ್ಕೃಷ್ಟ ದರ್ಜೆಯ ಈರುಳ್ಳಿಗೆ ಪ್ರತಿ ಕ್ವಿಂಟಲ್‌ಗೆ ₹1,500, ಉತ್ತಮ ದರ್ಜೆ ಈರುಳ್ಳಿಗೆ ₹1,000–₹1,200, ಮಧ್ಯಮ ಗಾತ್ರದ ಈರುಳ್ಳಿಗೆ ₹700ರಿಂದ ₹800 ಹಾಗೂ ಸಣ್ಣ ಗಾತ್ರದ ಈರುಳ್ಳಿಗೆ ₹300ರಿಂದ ₹400 ದರ ಸಿಗುತ್ತಿದೆ.

ಚಿಲ್ಲರೆ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿ.ಗೆ ₹20ರಿಂದ ₹25ಕ್ಕೆ ಮಾರಾಟವಾಗುತ್ತಿದೆ. ಉತ್ತಮ ದರ ಸಿಗಬಹುದು ಎಂಬ ಆಶಾಭಾವದೊಂದಿಗೆ ಮಾರುಕಟ್ಟೆಗೆ ಬುಧವಾರ ಈರುಳ್ಳಿ ತಂದಿದ್ದ ರೈತರು ಕಂಗಾಲಾದರು. ಇಲ್ಲಿನ ಎಪಿಎಂಸಿಯಲ್ಲಿ 3,000 ಕ್ವಿಂಟಲ್ ಈರುಳ್ಳಿ ಆವಕವಾಗಿತ್ತು.


‘ಎರಡೂವರೆ ಎಕರೆಯಲ್ಲಿ 12 ಕ್ವಿಂಟಲ್ ಈರುಳ್ಳಿ ಬೆಳೆದಿದ್ದು, ಕೇವಲ ₹6,500 ಸಿಕ್ಕಿದೆ. ಸಾಗಣೆ ದರ ಒಂದು ಚೀಲಕ್ಕೆ ₹100, ಹಮಾಲಿಗಳ ಕೂಲಿ ಸೇರಿಸಿದರೆ ರೈತರಿಗೆ ಏನೂ ಲಾಭವಿಲ್ಲ. ಬರಗಾಲದಿಂದ ಈರುಳ್ಳಿ ಇಳುವರಿ ಕುಂಠಿತವಾಗಿದೆ’ ಎಂದು ಕೊಪ್ಪಳ ಜಿಲ್ಲೆಯ ಚಿಕ್ಕೇನಕೊಪ್ಪದ ರೈತ ಶಂಕರಪ್ಪ ಹೇಳಿದರು.

‘ಗ್ರಾಹಕರಿಗೆ ತೊಂದರೆಯಾಗದಿರಲಿ ಎಂದು ಸರ್ಕಾರ ಈರುಳ್ಳಿ ರಫ್ತು ನಿಷೇಧಿಸಿದೆ. ಆದರೆ, ರಫ್ತು ಮಾಡಿದರೆ ಮಾತ್ರ ನಮಗೆ ಉತ್ತಮ ಬೆಲೆ ಸಿಗುತ್ತದೆ. ಸರ್ಕಾರದ ನಿರ್ಧಾರವು ಬರಗಾಲಕ್ಕೆ ಸಿಲುಕಿ ನೊಂದಿರುವ ರೈತನ ಗಾಯದ ಮೇಲೆ ಬರೆ ಎಳೆದಂತಾಗಿದೆ’ ಎಂದು ಹೇಳಿದರು.

‘ನೆರೆಯ ಬಾಂಗ್ಲಾದೇಶ, ಶ್ರೀಲಂಕಾ, ದುಬೈ, ಇಂಡೊನೇಷ್ಯಾ, ಮಲೇಷ್ಯಾ, ಸಿಂಗಪುರ ಸೇರಿದಂತೆ ದೇಶಗಳಿಗೆ ಭಾರತದಿಂದ ಈರುಳ್ಳಿ ರಫ್ತಾಗುತ್ತದೆ. ರಫ್ತು ಮಾಡಲು ಅವಕಾಶ ಕೊಟ್ಟಿದ್ದರೆ ಉತ್ತಮ ದರ ಸಿಗುತ್ತಿತ್ತು’ ಎಂದು ಈರುಳ್ಳಿ ಖರೀದಿದಾರ ಅತಾಉಲ್ಲಾ ತಿಳಿಸಿದರು.

> **ದಾವಣಗೆರೆ, ಚಿತ್ರದುರ್ಗ, ವಿಜಯನಗರ ಜಿಲ್ಲೆಯಿಂದ ಇಲ್ಲಿನ ಮಾರುಕಟ್ಟೆಗೆ ಈರುಳ್ಳಿ ಬರುತ್ತಿದೆ. ಈ ಬಾರಿ ಇಳುವರಿಯೂ ಕುಂಠಿತವಾಗಿದೆ**
> **ಅತಾಉಲ್ಲಾ,** ಈರುಳ್ಳಿ ಖರೀದಿದಾರ, ದಾವಣಗೆರೆ ಎಪಿಎಂಸಿ

ಕ್ರಿಮಿನಲ್‌ಗಳಿಗೆ ಮುಯಿಝು ಆಡಳಿತ ರಕ್ಷಣೆ: ವಿಪಕ್ಷ ಆರೋಪ



ಮೊಹಮ್ಮದ್ ಮುಯಿಝು

ಮಾಲೆ (ಪಿಟಿಐ): ಪ್ರಾಸಿಕ್ಯೂಟರ್ ಜನರಲ್ ಮೇಲೆ ದಾಳಿ ನಡೆದ ಬೆನ್ನಲ್ಲೇ ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರ ಆಡಳಿತವು ಕ್ರಿಮಿನಲ್‌ಗಳ ರಕ್ಷಣೆಗೆ ನಿಂತಿದೆ ಎಂದು ದೇಶದ ಅತಿ ದೊಡ್ಡ ವಿರೋಧ ಪಕ್ಷ ಮಾಲ್ದಿವಿಯನ್ ಡೆಮಾಕ್ರಟಿಕ್ ಪಾರ್ಟಿ (ಎಂಡಿಪಿ) ಬುಧವಾರ ಆರೋಪಿಸಿರುವುದಾಗಿ ಸ್ಥಳೀಯ ಸುದ್ದಿ ಮಾಧ್ಯಮಗಳು ವರದಿ ಮಾಡಿವೆ.

'ಮಾಲೆ ನಗರದ ಬೀದಿಯಲ್ಲಿ ನಸುಕಿನ ವೇಳೆ ಪ್ರಾಸಿಕ್ಯೂಟರ್ ಜನರಲ್ ಹುಸೇನ್ ಶಮೀಮ್ ಮೇಲೆ ದಾಳಿಯಾಗಿದೆ. ಗಾಯಗೊಂಡಿರುವ ಶಮೀಮ್ ಅವರು ಎಡಿಕೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಸನ್.ಎಂವಿ ಸುದ್ದಿ ತಾಣವು ವರದಿ ಮಾಡಿದೆ.

ದಾಳಿಯನ್ನು ಖಂಡಿಸಿದ ಎಂಡಿಪಿ, 'ಸಾಂವಿಧಾನಿಕ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ನಿಭಾಯಿಸುವ ಅಧಿಕಾರಿಗಳಿಗೆ ಸರಿಯಾದ ರಕ್ಷಣೆ ನೀಡಲು ಅಧ್ಯಕ್ಷ ಮುಯಿಝು ಆಡಳಿತ ವಿಫಲವಾಗಿದೆ. ಮಾಲ್ದೀವ್ಸ್‌ನಲ್ಲಿ ಸಕ್ರಿಯವಾಗಿರುವ ಕ್ರಿಮಿನಲ್ ಗುಂಪುಗಳೊಂದಿಗೆ ಉನ್ನತ ಸರ್ಕಾರಿ ಅಧಿಕಾರಿಗಳು ಹೊಂದಿರುವ ನಿಕಟ ಸಂಬಂಧಗಳ ಪರಿಣಾಮವಾಗಿ ಉನ್ನತ ಅಧಿಕಾರಿಗಳ ಮೇಲೆ ನಡೆದಿರುವ ಇಂತಹ ನಿರ್ಭೀತ ದಾಳಿಗಳು ನಡೆಯುತ್ತಿವೆ ಎಂಬುದಾಗಿ ಪಕ್ಷವು ಭಾವಿಸಿದೆ. ಅಲ್ಲದೆ, ಸರ್ಕಾರವು ಇಂತಹ ಕ್ರಿಮಿನಲ್‌ಗಳ ಗುಂಪುಗಳಿಗೆ ರಕ್ಷಣೆ ನೀಡುತ್ತಿದೆ' ಎಂದು ಆರೋಪಿಸಿದೆ.

'ಹಿಂದಿನ ಅಧ್ಯಕ್ಷರ ಆಡಳಿತದ ಅವಧಿಯಲ್ಲಿ ಮಾಲ್ದೀವ್ಸ್‌ನಲ್ಲಿ ಹಿಂಸಾತ್ಮಕ ದಾಳಿಗಳನ್ನು ಯಶಸ್ವಿಯಾಗಿ ಹತ್ತಿಕ್ಕಲಾಗಿತ್ತು. ಮುಯಿಝು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಅಂತಹ ಅಪರಾಧಗಳು ಹೆಚ್ಚುತ್ತಿರುವುದನ್ನು ಪಕ್ಷವು ಗಮನಿಸಿದೆ' ಎಂದು ಎಂಡಿಪಿ ನೀಡಿರುವ ಹೇಳಿಕೆ ಉಲ್ಲೇಖಿಸಿ ಸುದ್ದಿ ತಾಣವು ವರದಿ ಮಾಡಿದೆ.

ಬೈಕಿನಲ್ಲಿ ಬಂದ ಇಬ್ಬರು ವ್ಯಕ್ತಿಗಳು ಶಮೀಮ್ ಅವರ ಮೇಲೆ ಹರಿತ ಆಯುಧದಿಂದ ದಾಳಿ ನಡೆಸಿದ್ದಾರೆ ಎಂದು ಪ್ರಾಸಿಕ್ಯೂಟರ್ ಜನರಲ್ ಅವರ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ.

ಕಲ್ಲು ತೂರಾಟ ನಡೆದಿದೆ: ಪಶ್ಚಿಮ ಬಂಗಾಳ ಕಾಂಗ್ರೆಸ್ ಅಧ್ಯಕ್ಷ ಅಧೀರ್ ರಂಜನ್ ಚೌಧರಿ

ರಾಹುಲ್ ಇದ್ದ ಕಾರಿನ ಗಾಜಿಗೆ ಹಾನಿ

ಮಾಲದಾ, ಪಶ್ಚಿಮ ಬಂಗಾಳ (ಪಿಟಿಐ): 'ಭಾರತ ಜೋಡೊ ನ್ಯಾಯಯಾತ್ರೆ' ಕೈಗೊಂಡಿರುವ ಮುಖಂಡ ರಾಹುಲ್‌ಗಾಂಧಿ ಅವರು ಪ್ರಯಾಣಿಸುತ್ತಿದ್ದ ಕಾರಿನ ಕಿಟಕಿ ಗಾಜು ಹಾನಿಯಾದ ಘಟನೆ ಪಶ್ಚಿಮ ಬಂಗಾಳದ ಮಾಲದಾ ಜಿಲ್ಲೆಯಲ್ಲಿ ನಡೆದಿದೆ.

ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಅಧೀರ್ ರಂಜನ್ ಚೌಧರಿ, 'ರಾಹುಲ್ ಇದ್ದ ಕಾರಿನ ಮೇಲೆ ಕೆಲವರು ಕಲ್ಲು ತೂರಾಟ ನಡೆಸಿದರು' ಎಂದು ಆರೋಪಿಸಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷವು, 'ಮಹಿಳೆ ಅಡ್ಡಬಂದಾಗ ಏಕಾಏಕಿ ಬ್ರೇಕ್ ಹಾಕಿದ್ದು ಘಟನೆಗೆ ಕಾರಣ' ಎಂದು ಸ್ಪಷ್ಟಪಡಿಸಿದೆ.

ಚೌಧರಿ ಅವರ ಆರೋಪದ ಹಿಂದೆಯೇ 'ಎಕ್ಸ್' ಜಾಲತಾಣದಲ್ಲಿ ಸ್ಪಷ್ಟನೆ ನೀಡಿದ ಕಾಂಗ್ರೆಸ್, 'ಮಾಲದಾದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ರಾಹುಲ್ ನೋಡಲು ಬಂದಿದ್ದರು. ಆಗ ಬ್ರೇಕ್ ಹಾಕಿದ್ದರಿಂದ, ಜನರನ್ನು ನಿಯಂತ್ರಿಸಲು ಹಿಡಿದಿದ್ದ ಹಗ್ಗ ತಗುಲಿ ಗಾಜು ಹಾನಿಗೊಂಡಿತು' ಎಂದು ಹೇಳಿದೆ.

'ಜನನಾಯಕ ರಾಹುಲ್‌ಗಾಂಧಿ ನ್ಯಾಯಕ್ಕಾಗಿ, ಜನರಿಗಾದ ಅನ್ಯಾಯದ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ. ಜನರೂ ಅವರೊಂದಿಗೆ ಇದ್ದಾರೆ. ಜನರೇ ಅವರನ್ನು ಸುರಕ್ಷಿತವಾಗಿ ನೋಡಿಕೊಳ್ಳುತ್ತಿದ್ದಾರೆ' ಎಂದು ಪಕ್ಷ ಹೇಳಿದೆ.



ಬಿಹಾರದ ಕಟೀಹಾರ್‌ನಲ್ಲಿ ಬುಧವಾರ 'ಭಾರತ್ ಜೋಡೊ ನ್ಯಾಯಯಾತ್ರೆ'ಯು ಸಾಗಿದ ಸಂದರ್ಭದಲ್ಲಿ ಬೆಂಬಲಿಗರಿಗೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಕೈಮುಗಿದರು –ಪಿಟಿಐ ಚಿತ್ರ

ಇದಕ್ಕೂ ಮೊದಲು ಈ ಸಂಬಂಧ ಹೇಳಿಕೆ ನೀಡಿದ್ದ ಅಧೀರ್ ರಂಜನ್ ಚೌಧರಿ ಅವರು, 'ಕಿಡಿಗೇಡಿಗಳ ಕಲ್ಲು ತೂರಾಟದಿಂದ ಕಾರಿನ ಕಿಟಕಿ ಗಾಜು ಹಾನಿಗೊಂಡಿತು. ಆದರೆ, ರಾಹುಲ್ ಗಾಂಧಿ ಅವರಿಗೆ ಯಾವುದೇ ರೀತಿಯ ಪೆಟ್ಟಾಗಿಲ್ಲ' ಎಂದು ಹೇಳಿದ್ದರು.

ಮಾಲದಾ ಜಿಲ್ಲೆಯಲ್ಲಿ ನಿಯೋಜಿತ ಸ್ಥಳವನ್ನು ತಲುಪಿದ ಬಳಿಕ ಕಾರಿನಿಂದಿಳಿದ ರಾಹುಲ್‌ಗಾಂಧಿ ಅವರು ಜಖಂಗೊಂಡಿದ್ದ ಕಿಟಕಿ ಗಾಜು ಪರಿಶೀಲಿಸುತ್ತಿರುವುದು ಈ ಕುರಿತ ವಿಡಿಯೊದಲ್ಲಿ ದಾಖಲಾಗಿದೆ.

ಬಿಹಾರದಲ್ಲಿ ರೋಡ್ ಶೋ

ಕಟೀಹಾರ್ (ಬಿಹಾರ) ವರದಿ: ಇದಕ್ಕೂ ಮೊದಲು ರಾಹುಲ್‌ಗಾಂಧಿ ಅವರು ಬಿಹಾರದ ಕಟೀಹಾರ್‌ನಲ್ಲಿ ರೋಡ್ ಶೋ ನಡೆಸುವ ಮೂಲಕ ನ್ಯಾಯಯಾತ್ರೆಯನ್ನು ಮುಂದುವರಿಸಿದರು.

ರಾತ್ರಿ ಕಟೀಹಾರ್‌ನಲ್ಲಿಯೇ ವಾಸ್ತವ್ಯ ಹೂಡಿದ್ದರು. ಮಂದಗತಿಯಲ್ಲಿ ಸಾಗುತ್ತಿದ್ದ ವಾಹನದ ಮೇಲೆ ಕುಳಿತು ಅವರು ರಸ್ತೆಯ ಇಕ್ಕೆಲಗಳಲ್ಲಿ ಸೇರಿದ್ದ ಜನಸಮೂಹದತ್ತ ಕೈಬೀಸಿದರು. ಬಿಹಾರದ ಸಿ.ಎಂ ನಿತೀಶ್ ಕುಮಾರ್ ಮೈತ್ರಿಕೂಟವನ್ನು ಬದಲಿಸಿದ ರಾಜಕೀಯ ಬೆಳವಣಿಗೆಯ ಸಂದರ್ಭದಲ್ಲಿಯೇ ನ್ಯಾಯಯಾತ್ರೆ ನಡೆಯುತ್ತಿದೆ. ಬಿಹಾರ ಕಾಂಗ್ರೆಸ್ ಅಧ್ಯಕ್ಷರ ಪ್ರಕಾರ, ಯಾತ್ರೆ ಕೆಲ ದಿನಗಳ ಬಳಿಕ ಜಾರ್ಖಂಡ್ ಮೂಲಕ ಮತ್ತೆ ಬಿಹಾರ ಪ್ರವೇಶಿಸಲಿದೆ.

ಕಲ್ಲು ತೂರಾಟ ನಡೆದಿಲ್ಲ: ಮಮತಾ

ಬೆಹ್ರಾಂಪೊರ್, ಪಶ್ಚಿಮ ಬಂಗಾಳ (ಪಿಟಿಐ): ರಾಹುಲ್ ಗಾಂಧಿ ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ಕಲ್ಲು ತೂರಾಟ ನಡೆದಿದೆ ಎಂಬುದನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಖಂಡಿಸಿದ್ದಾರೆ.

'ಕೃತ್ಯ ಖಂಡನೀಯ. ಆದರೆ, ಇದು ಬಿಹಾರದಲ್ಲಿ ನಡೆದಿದೆ, ಪಶ್ಚಿಮ ಬಂಗಾಳದಲ್ಲಿ ಅಲ್ಲ' ಎಂದೂ ಸ್ಪಷ್ಟಪಡಿಸಿದ್ದಾರೆ.

'ಗಾಜು ಒಡೆದಿರುವಂತೇ ಕಾರು ಪಶ್ಚಿಮ ಬಂಗಾಳ ಪ್ರವೇಶಿಸಿದೆ. ಮಾಹಿತಿ ಬಂದ ಕೂಡಲೇ ಏನಾಗಿದೆ ಎಂದು ಪರಿಶೀಲಿಸಿದ್ದೇನೆ. ಕೃತ್ಯ ಬಿಹಾರದ ಕಟೀಹಾರ್‌ನಲ್ಲಿ ನಡೆದಿದೆ. ಇದು, ನಾಟಕವಲ್ಲದೇ ಇನ್ನೇನೂ ಅಲ್ಲ' ಎಂದಿದ್ದಾರೆ. 'ಬಿಹಾರದಲ್ಲಿ ನಿತೀಶ್ ಕುಮಾರ್ ಇತ್ತೀಚೆಗೆ 'ಇಂಡಿಯಾ' ಮೈತ್ರಿಕೂಟವನ್ನು ತೊರೆದು ಎನ್‌ಡಿಎ ಸೇರಿದ್ದರು. ಅ ಬೆಳವಣಿಗೆಗೆ ಆಕ್ರೋಶದ ರೂಪದಲ್ಲಿಯೂ ಕಲ್ಲು ತೂರಾಟ ನಡೆದಿರಬಹುದು' ಎಂದು ಮಮತಾ ಅವರು ಹೇಳಿದರು.

ಸೈಬರ್ ದಾಳಿಗೆ ಯತ್ನ: ಎಫ್‌ಬಿಐ ನಿರ್ದೇಶಕ

ವಾಷಿಂಗ್ಟನ್ (ರಾಯಿಟರ್ಸ್): ಚೀನಾ ಸರ್ಕಾರದ ಜೊತೆ ನಂಟು ಹೊಂದಿರುವ ಹ್ಯಾಕರ್‌ಗಳು ಅಮೆರಿಕದ ಪ್ರಮುಖ ಮೂಲ ಸೌಕರ್ಯ ಜಾಲಗಳನ್ನು ಗುರಿಯಾಗಿಸಿ ಸೈಬರ್ ದಾಳಿ ನಡೆಸಲು ಯತ್ನಿಸುತ್ತಿದ್ದಾರೆ ಎಂದು ಎಫ್‌ಬಿಐ ನಿರ್ದೇಶಕ ಕ್ರಿಸ್ಟೋಫರ್ ವ್ರೇ ಹೇಳಿದ್ದಾರೆ.

ವಿದ್ಯುತ್ ಗ್ರಿಡ್, ತೈಲ ಮತ್ತು ನೈಸರ್ಗಿಕ ಅನಿಲ ಪೈಪ್‌ಲೈನ್ ಹಾಗೂ ಸಾಗಣೆ ಜಾಲಗಳನ್ನು ಹ್ಯಾಕರ್‌ಗಳು ಮುಖ್ಯವಾಗಿ ಗುರಿಯಾಗಿಸಿದ್ದಾರೆ ಎಂದು ವಿವರಿಸಿದ್ದಾರೆ.

ಈ ಮಾಹಿತಿಯನ್ನು ಕ್ರಿಸ್ಟೋಫರ್ ಅವರು ಅಮೆರಿಕದ ಸಂಸತ್‌ನ ಸಮಿತಿ ಮುಂದೆ ತಿಳಿಸಲಿದ್ದಾರೆ ಎಂದು ಎಫ್‌ಬಿಐ ಹೇಳಿಕೆಯಲ್ಲಿ ತಿಳಿಸಿದೆ.

ಅಮೆರಿಕದ ಸೈಬರ್ ವಿಭಾಗದ ಅಧಿಕಾರಿಗಳ ಜೊತೆಗೆ ಕ್ರಿಸ್ಟೋಫರ್ ಅವರು ಸಮಿತಿಯ ಮುಂದೆ ಹಾಜರಾಗಲಿದ್ದಾರೆ ಎಂದು ಹೇಳಿದೆ.

'ಚೀನಾ ಪ್ರಾಯೋಜಿತ ಹ್ಯಾಕರ್‌ಗಳು ಸೈಬರ್ ದಾಳಿ ನಡೆಸು ತ್ತಿದ್ದಾರೆ ಎಂದು ಅಮೆರಿಕದ ಅಧಿಕಾರಿಗಳು ಸುಳ್ಳು ಆರೋಪ ಮಾಡುತ್ತಿದ್ದಾರೆ' ಎಂದು ಚೀನಾ ಈ ಹಿಂದೆ ಹೇಳಿತ್ತು.

ಪರೀಕ್ಷಾ ಅಕ್ರಮಕ್ಕೆ ತಡೆ: ಮಸೂದೆ ಮಂಡನೆ ಸಾಧ್ಯತೆ

ನವದೆಹಲಿ(ಪಿಟಿಐ): ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ಎಸಗುವವರಿಗೆ ಗರಿಷ್ಠ 10 ವರ್ಷ ಜೈಲು ಹಾಗೂ ₹ 1 ಕೋಟಿ ವರೆಗೆ ದಂಡ ವಿಧಿಸುವುದಕ್ಕೆ ಅವಕಾಶ ಕಲ್ಪಿಸುವ ಹೊಸ ಮಸೂದೆಯನ್ನು ಸರ್ಕಾರ, ಸಂಸತ್‌ನಲ್ಲಿ ಬರುವ ಸೋಮವಾರ ಮಂಡಿಸುವ ಸಾಧ್ಯತೆ ಇದೆ.

ಸಾರ್ವಜನಿಕ ಪರೀಕ್ಷೆ (ಅಕ್ರಮಗಳ ತಡೆ) ಮಸೂದೆ,- 2024ಕ್ಕೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದ್ದು, ಪ್ರಸಕ್ತ ಬಜೆಟ್ ಅಧಿವೇಶನದಲ್ಲಿ ಮಂಡಿಸುವ ಸಾಧ್ಯತೆ ಇದೆ. ಆದರೆ, ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಬೇಕಿದೆ ಎಂದು ಮೂಲಗಳು ಹೇಳಿವೆ.

ವಿದ್ಯಾರ್ಥಿಗಳನ್ನು ಗುರಿಯಾಗಿಸಿ ಈ ಮಸೂದೆಯನ್ನು ಸಿದ್ಧಪಡಿಸಿಲ್ಲ. ಪರೀಕ್ಷಾ ಅಕ್ರಮಗಳಲ್ಲಿ ತೊಡಗುವ ಸಂಘಟಿತ ಗುಂಪುಗಳು, ಮಾಫಿಯಾ ಹಾಗೂ ಇವುಗಳೊಂದಿಗೆ ಕೈಜೋಡಿಸುವ ಸರ್ಕಾರಿ ಅಧಿಕಾರಿ ಗಳ ವಿರುದ್ಧ ಕ್ರಮ ಕೈಗೊಳ್ಳುವ ಉದ್ದೇಶದಿಂದ ಈ ಮಸೂದೆ ಮಂಡಿಸಲಾಗುತ್ತಿದೆ. ರಾಜಸ್ಥಾನದಲ್ಲಿ ಶಿಕ್ಷಕರ ನೇಮಕಾತಿಗಾಗಿ ನಿಗದಿಯಾಗಿದ್ದ ಸಿಇಟಿ, ಹರಿಯಾಣದಲ್ಲಿ ಗ್ರೂಪ್ ಡಿ ಹುದ್ದೆಗಳ ನೇಮಕ, ಗುಜರಾತ್‌ನಲ್ಲಿ ಕಿರಿಯ ಸಹಾಯಕರು, ಬಿಹಾರದಲ್ಲಿ ಕಾನ್‌ಸ್ಟೆಬಲ್‌ಗಳ ನೇಮಕಕ್ಕೆ ನಡೆಯಬೇಕಿದ್ದ ಪರೀಕ್ಷೆಗಳನ್ನು ಇತ್ತೀಚೆಗೆ ರದ್ದು ಮಾಡಲಾಗಿತ್ತು. ಈ ಹಿನ್ನೆಲೆ ಯಲ್ಲಿ ಕೇಂದ್ರ ಸರ್ಕಾರ ಈ ಮಸೂದೆ ಮಂಡಿಸಲು ಮುಂದಾಗಿದೆ ಎನ್ನಲಾಗಿದೆ.

ದುಬಾರಿ ಬೆಲೆಯ ಉಡುಗೊರೆಗಳನ್ನು ಮಾರಾಟ ಮಾಡಿದ ಆರೋಪ

ಇಮ್ರಾನ್ ದಂಪತಿಗೆ 14 ವರ್ಷ ಸಜೆ

ಇಸ್ಲಾಮಾಬಾದ್(ಪಿಟಿಐ): ಅಧಿಕೃತ ರಹಸ್ಯ ಮಾಹಿತಿ ಸೋರಿಕೆ ಪ್ರಕರಣದಲ್ಲಿ 10 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾದ ಮರುದಿನವೇ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮತ್ತು ಅವರ ಪತ್ನಿ ಬುಶ್ರಾ ಬೀಬಿ ಅವರಿಗೆ ತೋಷಖಾನ ಭ್ರಷ್ಟಾಚಾರ ಪ್ರಕರಣದಲ್ಲಿ 14 ವರ್ಷಗಳ ಕಠಿಣ ಶಿಕ್ಷೆಯನ್ನು ಬುಧವಾರ ವಿಧಿಸಲಾಗಿದೆ.

ಫೆಬ್ರುವರಿಯಲ್ಲಿ ನಡೆಯಲಿರುವ ದೇಶದ ಸಾರ್ವತ್ರಿಕ ಚುನಾವಣೆಗೆ ಎಂಟು ದಿನಗಳ ಮುನ್ನ, ಭ್ರಷ್ಟಾಚಾರಗಳ ಪ್ರಕರಣಗಳ ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶ ಮೊಹಮ್ಮದ್ ಬಶೀರ್ ಈ ತೀರ್ಪು ನೀಡಿದ್ದಾರೆ.

ಖಾನ್ ಮತ್ತು ಅವರ ಪತ್ನಿಗೆ 10 ವರ್ಷಗಳ ಕಾಲ ಸರ್ಕಾರದ ಯಾವುದೇ ಸ್ಥಾನಮಾನ ಅಲಂಕರಿಸದಂತೆ ನಿಷೇಧಿಸಲಾಗಿದೆ. ಅಲ್ಲದೆ, ಇಬ್ಬರಿಗೂ ತಲಾ ಸುಮಾರು 78 ಕೋಟಿ ಪಾಕಿಸ್ತಾನಿ ರೂಪಾಯಿ ದಂಡ ವಿಧಿಸಲಾಗಿದೆ.

ರಾವಲ್ಪಿಂಡಿಯ ಅಡಿಯಾಲ ಜೈಲಿನಲ್ಲಿ ಖಾನ್ ಅವರ ವಿಚಾರಣೆ ನಡೆಸಲಾಯಿತು. ಪಾಕಿಸ್ತಾನದ ಪ್ರಧಾನಿಯಾಗಿದ್ದಾಗ ಇಮ್ರಾನ್ ಖಾನ್ ಅವರು ದುಬಾರಿ ಬೆಲೆಯ ಉಡುಗೊರೆಗಳನ್ನು ವೈಯಕ್ತಿಕ ಲಾಭಕ್ಕಾಗಿ ಮಾರಾಟ ಮಾಡಿಕೊಂಡ ಆರೋಪ ಎದುರಿಸುತ್ತಿದ್ದರು.

ದೇಶದ ಸೂಕ್ಷ್ಮ ರಹಸ್ಯ ಮಾಹಿತಿಗಳನ್ನು ಸೋರಿಕೆ ಮಾಡಿದ್ದ ಆರೋಪದ ಪ್ರಕರಣದಲ್ಲಿ ಇಮ್ರಾನ್ ಖಾನ್ ಮತ್ತು ಮಾಜಿ ವಿದೇಶಾಂಗ ಸಚಿವ ಶಾ ಮೆಹಮೂದ್ ಖುರೇಷಿ ಅವರಿಗೆ ಮಂಗಳವಾರಷ್ಟೇ ವಿಶೇಷ ನ್ಯಾಯಾಲಯ 10 ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಿತ್ತು.

ಮಾಜಿ ಕ್ರಿಕೆಟಿಗ, ಪಾಕಿಸ್ತಾನ್–ತೆಹ್ರೀಕ್– ಎ– ಇನ್ಸಾಫ್ (ಪಿಟಿಐ) ಪಕ್ಷದ ಅಧ್ಯಕ್ಷರೂ ಆದ 71 ವರ್ಷದ ಖಾನ್, ಭ್ರಷ್ಟಾಚಾರದ ಆರೋಪದ ಮತ್ತೊಂದು ಪ್ರಕರಣದಲ್ಲಿ ಈಗಾಗಲೇ ಮೂರು ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದಾರೆ. 49 ವರ್ಷದ ಬುಶ್ರಾ ಬೀಬಿ ವಿಚಾರಣೆ ವೇಳೆ ಹಾಜರಿರಲಿಲ್ಲ. ತೀರ್ಪು ಪ್ರಕಟವಾದ ನಂತರ ಬುಶ್ರಾ ಅಡಿಯಾಲ ಜೈಲಿಗೆ ತೆರಳಿ ಅಲ್ಲಿ ಅಧಿಕಾರಿಗಳ ಎದುರು ಶರಣಾದರು.



ಬುಶ್ರಾ ಬೀಬಿ ಮತ್ತು ಇಮ್ರಾನ್ ಖಾನ್

ಮುಖ್ಯಾಂಶಗಳು

- ಸಾರ್ವತ್ರಿಕ ಚುನಾವಣೆಗೆ ಎಂಟು ದಿನಗಳ ಮುನ್ನ ಕೋರ್ಟ್ ತೀರ್ಪು
- ತಲಾ ಸುಮಾರು 78 ಕೋಟಿ ಪಾಕಿಸ್ತಾನಿ ರೂಪಾಯಿ ದಂಡ

ನ್ಯಾಯ ವಂಚನೆ– ಖಾನ್ ಆರೋಪ: 'ತೋಷಖಾನಾ ಭ್ರಷ್ಟಾಚಾರ ಪ್ರಕರಣದ ವಿಚಾರಣೆಗಾಗಿ ಮಾತ್ರ ಹಾಜರಾಗುವಂತೆ ಕರೆಸಿ, ನನಗೆ ಮತ್ತು ನನ್ನ ಪತ್ನಿಗೆ 14 ವರ್ಷಗಳ ಕಠಿಣ ಶಿಕ್ಷೆ ವಿಧಿಸಿ ನ್ಯಾಯ ವಂಚಿಸಲಾಗಿದೆ' ಎಂದು ಇಮ್ರಾನ್ ಖಾನ್, ಭ್ರಷ್ಟಾಚಾರ ಪ್ರಕರಣಗಳ ವಿಚಾರಣಾ ನ್ಯಾಯಾಲಯದ ವಿರುದ್ಧ ಬುಧವಾರ ಆರೋಪಿಸಿದ್ದಾರೆ.

ವಿಚಾರಣೆಯ ಆರಂಭದಲ್ಲಿ, ನ್ಯಾಯಾಧೀಶ ಬಶೀರ್ ಅವರು ಖಾನ್ ಅವರಿಗೆ 'ನಿಮ್ಮ ಹೇಳಿಕೆ ದಾಖಲಿಸಿದ್ದೀರಾ ಎಂದು ಕೇಳಿದರು. ಇದಕ್ಕೆ ವಕೀಲರು ಬಂದ ನಂತರ ಹೇಳಿಕೆ ನೀಡುವೆ' ಮಾಜಿ ಪ್ರಧಾನಿ ಉತ್ತರಿಸಿದರು.

'ಯಾಕೆ ಅವಸರ? ನಿನ್ನೆ ಸಹ ತರಾತುರಿಯಲ್ಲಿ ಶಿಕ್ಷೆ ಘೋಷಿಸಲಾಯಿತು' ಎಂದು, ಹಿಂದಿನ ದಿನದ ತೀರ್ಪು ಉಲ್ಲೇಖಿಸಿದ ಇಮ್ರಾನ್ ಖಾನ್ 'ನನ್ನ ವಕೀಲರು ಇನ್ನೂ ಬಂದಿಲ್ಲ. ಅವರು ಬಂದ ಮೇಲೆ ಹೇಳಿಕೆ ಸಲ್ಲಿಸುತ್ತೇನೆ. ಹಾಜರಾತಿಗಾಗಿ ಮಾತ್ರ ನ್ಯಾಯಾಲಯಕ್ಕೆ ಹಾಜರಾಗಿರುವೆ' ಎಂದರು.

ನ್ಯಾಯಾಧೀಶರು, 'ತಕ್ಷಣವೇ ತಮ್ಮ ಹೇಳಿಕೆ ದಾಖಲಿಸಬೇಕು. ನ್ಯಾಯಾಲಯದ ಸಮಯ ವ್ಯರ್ಥ ಮಾಡಬಾರದು' ಎಂದು ಖಾನ್‌ಗೆ ಆದೇಶಿಸಿದರು.

'ಸುಪ್ರೀಂ' ಮೊರೆ ಹೋದ ಇಮ್ರಾನ್

ಫೆಬ್ರುವರಿ 8ರಂದು ನಡೆಯಲಿರುವ ದೇಶದ ಸಾರ್ವತ್ರಿಕ ಚುನಾವಣೆಗಾಗಿ ಪಂಜಾಬ್ ಪ್ರಾಂತ್ಯದ ಎರಡು ರಾಷ್ಟ್ರೀಯ ಅಸೆಂಬ್ಲಿ ಸ್ಥಾನಗಳಿಗೆ ಸಲ್ಲಿಸಿದ್ದ ತಮ್ಮ ನಾಮಪತ್ರಗಳನ್ನುತಿರಸ್ಕರಿಸಿರುವುದನ್ನು ಪ್ರಶ್ನಿಸಿ ಇಮ್ರಾನ್ ಖಾನ್ ಬುಧವಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ಪಾಕಿಸ್ತಾನ್ ತೆಹ್ರೀಕ್-ಎ-ಇನ್ಸಾಫ್ (ಪಿಟಿಐ) ವರಿಷ್ಠರಾದ ಖಾನ್ ಅವರು, ಲಾಹೋರ್ ಮತ್ತು ಮಿಯಾನ್‌ವಾಲಿ ಜಿಲ್ಲೆಗಳ ಎರಡು ರಾಷ್ಟ್ರೀಯ ಅಸೆಂಬ್ಲಿ ಕ್ಷೇತ್ರಗಳಿಗೆ ಸಲ್ಲಿಸಿದ್ದ ನಾಮಪತ್ರಗಳನ್ನು ಕಳೆದ ತಿಂಗಳು ತೋಷಖಾನಾ ಭ್ರಷ್ಟಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿರುವ ಕಾರಣಕ್ಕೆ ನೈತಿಕತೆ ಆಧಾರದ ಮೇಲೆ ತಿರಸ್ಕರಿಸಲಾಗಿತ್ತು.

ಎರಡು ಕ್ಷೇತ್ರಗಳಿಂದ ಚುನಾವಣೆಗೆ ಸ್ಪರ್ಧಿಸಲು ಅರ್ಹರೆಂದು ಘೋಷಿಸುವಂತೆ ಖಾನ್ ಅವರು ಸುಪ್ರೀಂ ಕೋರ್ಟ್‌ಗೆಮನವಿ ಮಾಡಿದ್ದಾರೆ ಎಂದು ಜಿಯೋ ನ್ಯೂಸ್ ವರದಿ ಮಾಡಿದೆ.

ಬಹುಮುಖಿ ಸಾಹಿತ್ಯ ಜಾತ್ರೆ ಇಂದು ಆರಂಭ

• ರಾಜಲಕ್ಷ್ಮಿ ಕೋಡಿಬೆಟ್ಟು

ಜೈಪುರ: 'ಕಥೆಗಳು ನಮ್ಮನ್ನು ಬೆಸೆಯುತ್ತವೆ' ಎಂಬ ಆಶಯವನ್ನು ಹೊತ್ತ ಐದು ದಿನಗಳ ಬೃಹತ್ ಸಾಹಿತ್ಯ ಜಾತ್ರೆ, 'ಜೈಪುರ ಲಿಟರೇಚರ್ ಫೆಸ್ಟಿವಲ್' ಅನ್ನು ಗುರುವಾರ ರಾಜಸ್ಥಾನದ ಉಪಮುಖ್ಯಮಂತ್ರಿ ದಿಯಾ ಕುಮಾರಿ ಉದ್ಘಾಟಿಸುವರು.

ನಗರದ ಹೋಟೆಲ್ ಕ್ಲಾರ್ಕ್ಸ್ ಅಮರ್‌ನಲ್ಲಿ ನಡೆಯುವ ಈ ಸಾಹಿತ್ಯ–ಸಾಂಸ್ಕೃತಿಕ ಉತ್ಸವದಲ್ಲಿ ದೇಶ ವಿದೇಶಗಳ 550ಕ್ಕೂ ಹೆಚ್ಚು ಮಂದಿ ಸಾಧಕರು ಮಾತನಾಡಲಿದ್ದು, ಕಲೆ, ಸಾಹಿತ್ಯ ಮತ್ತು ಸಾಮಾಜಿಕ ವಿಷಯಗಳ ವಿವಿಧ ಆಯಾಮಗಳ ಕುರಿತು ಚರ್ಚಿಸಲಿದ್ದಾರೆ.

ಕಾವ್ಯದ ಹೃದಯಬಡಿತವನ್ನು ಪ್ರಸಿದ್ಧ ಚಿತ್ರ ಸಾಹಿತಿ ಗುಲ್ಜಾರ್ ಅವರು ವಿವರಿಸಲಿದ್ದರೆ, ಎ.ಕೆ. ರಾಮಾನುಜನ್ ಅವರ ಅಪ್ರಕಟಿತ ಕವಿತೆಗಳ ಸಂಪಾದಿತ ಕೃತಿ 'ಸೋಮ' ದ ಕುರಿತು ನಡೆಯುವ ಗೋಷ್ಠಿಯಲ್ಲಿ ಸಂಪಾದಕರಾದ ಗಿಲೆರ್ಮೋ ರೋಡ್ರಿಗಸ್ ಮತ್ತು ಕೃಷ್ಣ ರಾಮಾನುಜನ್ ಸಂವಾದ ನಡೆಸಲಿದ್ದಾರೆ. ಬೂಕರ್ ಪ್ರಶಸ್ತಿ ವಿಜೇತ ಐರಿಷ್ ಕಾದಂಬರಿಕಾರ ಪೌಲ್ ಲಿಂಚ್ ತಮ್ಮ 'ಪ್ರೊಫೆಟ್ ಸಾಂಗ್' ಕೃತಿಯ ಕುರಿತು ಅನಿಸಿಕೆ ಹಂಚಿಕೊಳ್ಳುವರು.

ಭಾರತೀಯ ರಿಸರ್ವ್‌ಬ್ಯಾಂಕ್ ಮಾಜಿ ಗವರ್ನರ್ ರಘುರಾಮ್ ರಾಜನ್ ಅವರಿಂದ 'ಅರ್ಥಶಾಸ್ತ್ರ ಭವಿಷ್ಯದ ಮರುಕಲ್ಪನೆ'ಯ ಕುರಿತು ಅನಿಸಿಕೆ ಮಂಡನೆ, 'ಓಪನ್ ಹೈಮರ್' ಸಿನಿಮಾಕ್ಕೆ ಪ್ರೇರಣೆಯಾದ ಅಮೆರಿಕನ್ ಪ್ರೊಮೆಥ್ಯೂಸ್ ಕೃತಿಯ ಸಹಲೇಖಕ ಕೈಬರ್ಡ್ ಅವರೊಡನೆ ನಡೆಯುವ ಮಾತುಕತೆಯ ಬಗ್ಗೆ ನಿರೀಕ್ಷೆ–ಕುತೂಹಲ ಹೆಚ್ಚಿದೆ. ವಿವೇಕ್‌ಶಾನಭಾಗ್, ಸುಧಾಮೂರ್ತಿ, ದೇವದತ್ತ ಪಟ್ಟನಾಯಿಕ್, ಶಶಿ ತರೂರ್, ಚಿತ್ರಾ ಬ್ಯಾನರ್ಜಿ ದಿವಾಕರುಣಿ, ಕ್ರಿಕೆಟಿಗ ಅಜಯ್ ಜಡೇಜ, ವೆಂಕಟ ಸುಂದರಂ ಸೇರಿದಂತೆ ಅನೇಕ ಸಾಧಕರು ಈ ಫೆಸ್ಟಿವಲ್‌ನಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ.

ಕನ್ನಡ, ಮಲಯಾಳಂ, ಅಸ್ಸಾಮಿ, ಹಿಂದಿ, ಕಾಶ್ಮೀರಿ, ಮರಾಠಿ, ಒಡಿಯಾ, ಪಂಜಾಬಿ, ತಮಿಳು, ಉರ್ದು ಸೇರಿದಂತೆ 16 ಭಾರತೀಯ ಭಾಷೆಗಳು ಮತ್ತು ಎಂಟು ಅಂತರರಾಷ್ಟ್ರೀಯ ಭಾಷೆಗಳ ಸಾಹಿತ್ಯ ಮತ್ತು ಸಾಂಸ್ಕೃತಿಕ ವಿಚಾರಗಳು ಚರ್ಚೆಗೆ ವಸ್ತುವಾಗಿವೆ. ಈ ವರ್ಷದ ಮಹಾಕವಿ ಕನ್ಹಯ್ಯಲಾಲ್ ಸೇಥಿಯಾ ಕಾವ್ಯ ಪ್ರಶಸ್ತಿಯು ಪ್ರಸಿದ್ಧ ಕವಯಿತ್ರಿ ಮುಂಬೈ ಮೂಲದ ಅರುಂಧತಿ ಸುಬ್ರಹ್ಮಣ್ಯಂ ಅವರಿಗೆ ನೀಡಲು ನಿರ್ಧರಿಸಲಾಗಿದ್ದು ಜ.4ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಕೃತಕ ಬುದ್ಧಿಮತ್ತೆ, ಜಾಗತಿಕ ತಾಪಮಾನ, ಕ್ರಿಕೆಟ್, ರಾಜಕೀಯ ಮುಂತಾಗಿ ವೈವಿಧ್ಯಮಯ ಕ್ಷೇತ್ರಗಳ ಪ್ರಮುಖ ಅಂಶಗಳಿಗೆ ಸಂಬಂಧಿಸಿದ ಚರ್ಚೆಗೆ ವೇದಿಕೆ ಕಲ್ಪಿಸಲಾಗಿದ್ದು ಡಿಜಿಟಲ್ ಕಾಲಮಾನದ ಜೀವನವಿಧಾನದೊಡನೆ ಸಾಹಿತ್ಯ ಮತ್ತು ಕಲೆಯು ಮಿಳಿತವಾಗುವ ಹೊಸಪರಿಯ ವಿಶ್ಲೇಷಣೆ ನಡೆಯಲಿದೆ.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್: ಫೆ.29ರ ನಂತರ ಸೇವೆ ಸ್ಥಗಿತಕ್ಕೆ ಸೂಚನೆ

ಮುಂಬೈ(ಪಿಟಿಐ): ಮಹತ್ವದ ಬೆಳವಣಿಗೆಯೊಂದರಲ್ಲಿ, ಫೆಬ್ರುವರಿ 29ರ ನಂತರ ಎಲ್ಲ ಬಗೆಯ ಸೇವೆಗಳನ್ನು ಸ್ಥಗಿತಗೊಳಿಸುವಂತೆ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ (ಪಿಪಿಬಿಎಲ್) ಆರ್‌ಬಿಐ ಬುಧವಾರ ನಿರ್ದೇಶನ ನೀಡಿದೆ.

ಗ್ರಾಹಕರ ಖಾತೆಗಳು, ವ್ಯಾಲೆಟ್‌ಗಳು ಫಾಸ್ಟ್ಯಾಗ್‌ಗಳಲ್ಲಿ ಯಾವುದೇ ಠೇವಣಿಗಳು ಅಥವಾ ಟಾಪ್‌ಅಪ್‌ಗಳನ್ನು ಸ್ವೀಕರಿಸಬಾರದು. ಆದರೆ, ಯಾವುದೇ ಬಡ್ಡಿ, ಕ್ಯಾಶ್‌ಬ್ಯಾಕ್ ಅಥವಾ ಮರುಪಾವತಿಯನ್ನು ಗ್ರಾಹಕರ ಖಾತೆಗಳಿಗೆ ಯಾವುದೇ ಸಮಯದಲ್ಲಿ ಪಾವತಿಸಬಹುದು ಎಂದು ಸೂಚಿಸಿದೆ. 'ಮೇಲಿಂದ ಮೇಲೆ ತಾನು ನೀಡಿದ ಸೂಚನೆಗಳನ್ನು ಪಾಲನೆ ಮಾಡದೇ ಇರುವ ಕಾರಣ ಈ ನಿರ್ದೇಶನ ನೀಡಲಾಗಿದೆ' ಎಂದು ಆರ್‌ಬಿಐ ಪ್ರಕಟಣೆ ಯಲ್ಲಿ ತಿಳಿಸಿದೆ. ನೂತನ ಗ್ರಾಹಕರನ್ನು ನೋಂದಣಿ ಮಾಡಿಕೊಳ್ಳದಂತೆ 2022ರ ಮಾರ್ಚ್ 11ರಂದು ಪಿಪಿಬಿಎಲ್‌ಗೆ ಆರ್‌ಬಿಐ ಸೂಚನೆ ನೀಡಿತ್ತು. ಆರ್‌ಬಿಐನ ಈ ಕ್ರಮದ ಬಗ್ಗೆ ಪಿಪಿಬಿಎಲ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಒನ್97 ಕಮ್ಯುನಿಕೇಷನ್ಸ್ ಕಂಪನಿಯು ತನ್ನ ಮಾಲೀಕತ್ವದ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಲಿಮಿಟೆಡ್‌ನಲ್ಲಿ (ಪಿಪಿಬಿಎಲ್) ಶೇ 49ರಷ್ಟು ಪಾಲು ಹೊಂದಿದೆ.

ಈ ಹಿಂದೆ, ಹೊಸದಾಗಿ ಫಾಸ್ಟ್ಯಾಗ್‌ಗಳನ್ನು ವಿತರಿಸದಂತೆ ಭಾರತೀಯ ಹೆದ್ದಾರಿಗಳ ಪ್ರಾಧಿಕಾರದ (ಎನ್‌ಎಚ್‌ಎಐ) ಅಂಗಸಂಸ್ಥೆ ಐಎಚ್‌ಎಂಸಿಎಲ್ ಕೂಡ ಪಿಪಿಬಿ ಎಲ್‌ಗೆ ನಿರ್ಬಂಧ ಹೇರಿತ್ತು. ಒಪ್ಪಂದ ದಲ್ಲಿ ಉಲ್ಲೇಖಿಸಿರುವ ಮಟ್ಟದಲ್ಲಿ ಸೇವೆಯನ್ನು ಒದಗಿಸದಿದ್ದ ಕಾರಣಕ್ಕೆ ಐಎಚ್ ಎಂಸಿಎಲ್ ಈ ಕ್ರಮ ತೆಗೆದುಕೊಂಡಿತ್ತು.

ಬುಲ್ಸ್– ಪೈರೇಟ್ಸ್ ಪಂದ್ಯ ಟೈ

ಪಟ್ನಾ (ಪಿಟಿಐ): ಪ್ರೊ ಕಬಡ್ಡಿ ಲೀಗ್‌ನಲ್ಲಿ ಬುಧವಾರ ನಡೆದ ಬೆಂಗಳೂರು ಬುಲ್ಸ್ ಮತ್ತು ಪಟ್ನಾ ಪೈರೇಟ್ಸ್ ನಡುವಿನ ಪಂದ್ಯ 28–28ರಿಂದ ಟೈ ಆಯಿತು.

ಪಾಟಲಿಪುತ್ರ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮಧ್ಯಂತರದ ವೇಳೆ ಬೆಂಗಳೂರು ತಂಡವು 16–13ರಿಂದ ಮುನ್ನಡೆ ಹೊಂದಿತ್ತು. ಆದರೆ, ಉತ್ತರಾರ್ಧದಲ್ಲಿ ಪೈರೇಟ್ಸ್ ತಂಡವು ಪುಟಿದೆದ್ದು ಸಮಬಲ ಸಾಧಿಸಿತು.

ಪೈರೇಟ್ಸ್ ತಂಡದ ಸಂದೀಪ್ ಕುಮಾರ್ (14) ರೈಡಿಂಗ್‌ನಲ್ಲಿ ಮತ್ತು ಅಂಕಿತ್ ಜಗ್ಲಾನ್ (8) ಟ್ಯಾಕಲ್‌ನಲ್ಲಿ ಮಿಂಚಿದರು. ಬುಲ್ಸ್ ಪರ ಸುಶೀಲ್ ಮತ್ತು ಅಕ್ಷಿತ್ ಧುಳ್ ಕ್ರಮವಾಗಿ 8 ಮತ್ತು 6 ಪಾಯಿಂಟ್ಸ್ ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು 42–27ರಿಂದ ತಮಿಳು ತಲೈವಾಸ್ ವಿರುದ್ಧ ಸುಲಭವಾಗಿ ಜಯ ಸಾಧಿಸಿತು. ಹೀಗಾಗಿ, 71 ಅಂಕಗಳೊಂದಿಗೆ ಜೈಪುರ ತಂಡವು ಮತ್ತೆ ಅಗ್ರಸ್ಥಾನಕ್ಕೆ ಏರಿತು.

ಪ್ಯಾರಿಸ್ ಒಲಿಂಪಿಕ್ಸ್‌ಗೆ ವಿಷ್ಣು ಸರವಣನ್

ಅಡಿಲೇಡ್ (ಪಿಟಿಐ): ಭಾರತದ ಸೇಲಿಂಗ್ ಕ್ರೀಡಾಪಟು ವಿಷ್ಣು ಸರವಣನ್ ಅವರು ಪ್ಯಾರಿಸ್ ಒಲಿಂಪಿಕ್ ಕೂಟಕ್ಕೆ ಅರ್ಹತೆ ಗಳಿಸಿದ್ದಾರೆ.

ಬುಧವಾರ ಇಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 24 ವರ್ಷದ ಸರವಣನ್ ಅವರು ಒಲಿಂಪಿಕ್ಸ್ ಅರ್ಹತಾ ಮಟ್ಟವನ್ನು ಯಶಸ್ವಿಯಾಗಿ ಸಾಧಿಸಿದರು. ಪ್ಯಾರಿಸ್ ಕೂಟಕ್ಕೆ ಆಯ್ಕೆಯಾದ ಭಾರತದ ಮೊದಲ ಸೇಲರ್ ಅವರಾಗಿದ್ದಾರೆ. ಮುಂಬೈನಲ್ಲಿ ಸೇನೆಯಲ್ಲಿ ಸುಬೇದಾರ್ ಆಗಿರುವ ಅವರು ಹೋದ ಏಷ್ಯನ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಪಡೆದಿದ್ದರು.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 152 ಸ್ಪರ್ಧಿಗಳೊಂದಿಗೆ ಪೈಪೋಟಿ ನಡೆಸಿದ ಅವರು 26ನೇ ಸ್ಥಾನ ಗಳಿಸಿದರು. ಏಷ್ಯನ್ ದೇಶಗಳ ಸ್ಪರ್ಧಿಗಳಲ್ಲಿ ಅಗ್ರಸ್ಥಾನವನ್ನು ಅವರು ಪಡೆದರು. ಏಷ್ಯನ್ ಕೂಟದಲ್ಲಿ ಚಿನ್ನ ಗೆದ್ದಿದ್ದ ಸಿಂಗಪುರದ ಸ್ಪರ್ಧಿ ಮತ್ತು ಕಾಂಟಿನೆಂಟಲ್ ಕ್ವಾಲಿಫೈಯರ್‌ಗಳಾದ ಹಾಂಗ್‌ಕಾಂಗ್ ಮತ್ತು ಥಾಯ್ಲೆಂಡ್ ಸ್ಪರ್ಧಿಗಳನ್ನೂ ಸರವಣನ್ ಹಿಂದಿಕ್ಕಿದರು.



ವಿಷ್ಣು ಸರವಣನ್

ವಿಷ್ಣು ಒಟ್ಟು 174 ಸ್ಕೋರ್ ಮಾಡಿದರು. ನಿಯಮದ ಪ್ರಕಾರ ಈ ಸ್ಪರ್ಧೆಯ ಒಂದು ಸುತ್ತಿನಲ್ಲಿ ಗಳಿಸಿದ ಕನಿಷ್ಠ ಸ್ಕೋರ್ 49 ಆಗಿತ್ತು. ಅದರಿಂದ ಭಾಗಾಕಾರ ಮಾಡಿದಾಗ 125 ಬಂದಿತು. ಅದನ್ನೇ ಅವರ ಸ್ಕೋರ್ ಎಂದು ಪರಿಗಣಿಸಲಾಯಿತು. 2019ರಲ್ಲಿ ನಡೆದಿದ್ದ 21 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ನಲ್ಲಿ ವಿಷ್ಣು ಕಂಚು ಗಳಿಸಿದ್ದರು.

'ಉದ್ಘಾಟನೆ; 3 ಲಕ್ಷ ಮಂದಿಗೆ ಅವಕಾಶ ಸಾಧ್ಯ'

ಪ್ಯಾರಿಸ್ (ಎಪಿ): ಪ್ಯಾರಿಸ್ ಒಲಿಂಪಿಕ್ಸ್‌ನ ಉದ್ಘಾಟನಾ ಸಮಾರಂಭಕ್ಕೆ ಸುಮಾರು ಮೂರು ಲಕ್ಷ ಮಂದಿ ಪ್ರೇಕ್ಷಕರಿಗೆ ಹಾಜರಾಗಲು ಅವಕಾಶವಾಗಬಹುದು ಎಂದು ಫ್ರಾನ್ಸ್‌ನ ಗೃಹ ಸಚಿವ ಜೆರಾಲ್ಡ್ ಡರ್ಮಾನಿನ್ ಅವರು ಹೇಳಿದ್ದಾರೆ. ಇದು ಮೊದಲು ಹಮ್ಮಿಕೊಂಡ ಯೋಜನೆಯ ಪ್ರಮಾಣದ ಸುಮಾರು ಅರ್ಧದಷ್ಟು ಕಡಿಮೆ.


ಸಾಮಾನ್ಯವಾಗಿ ಕ್ರೀಡಾಂಗಣದೊಳಗೆ ನಡೆಯುವ ಉದ್ಘಾ ಟನಾ ಸಮಾರಂಭ ಸಂಪ್ರದಾಯವನ್ನು ಈ ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿ ಮುರಿಯಲಾಗುತ್ತಿದ್ದು, ಸೀನ್ ನದಿಯ ದಂಡೆ ಯಲ್ಲಿ ಜುಲೈ 26ರಂದು ಈ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಈ ಸಮಾರಂಭಕ್ಕೆ ಭಾರಿ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿದ್ದು, ಸಾವಿರಾರು ಪೊಲೀಸರು ಮತ್ತು ಸೈನಿಕರನ್ನು ನಿಯೋಜಿಸಲಾಗಿದೆ.

ಫ್ರಾನ್ಸ್ ರಾಜಧಾನಿಯ ಹೃದಯಭಾಗದಲ್ಲಿರುವ ಸೀನ್ ನದಿಯ ದೋಣಿಗಳಲ್ಲಿ ಅಥ್ಲೀಟುಗಳು ಪಥಸಂಚಲನ ನಡೆಸಲಿದ್ದಾರೆ. ನದಿಯ ಎರಡೂ ದಡಗಳಲ್ಲಿ ಪ್ರೇಕ್ಷಕರಿಗೆ ವೀಕ್ಷಣೆ ವ್ಯವಸ್ಥೆ ಮಾಡಲಾಗಿದ್ದು, ಹಲವು ಹಂತಗಳ ಭದ್ರತಾ ವ್ಯವಸ್ಥೆ ಮಾಡಲಾಗಿದೆ. ಟಿಕೆಟ್ ಖರೀದಿಸಿದ ಒಂದು ಲಕ್ಷ ಮಂದಿಗೆ ನದಿಯ ನೇರ ನೋಟ ಲಭ್ಯವಾಗುವಂತೆ ಆಸನ ವ್ಯವಸ್ಥೆ ಕಲ್ಪಿಸಲಾಗಿದೆ. ಉಳಿದ 2,20,000 ಮಂದಿಗೆ ಎತ್ತರಿಸಿದ ಕಟ್ಟೆಗಳಲ್ಲಿ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಡರ್ಮಾನಿನ್ ಟಿವಿ ಚಾನೆಲ್‌ವೊಂದಕ್ಕೆ ತಿಳಿಸಿದ್ದಾರೆ.

ಸಂಘಟಕರು ಈ ಮೊದಲು 2022ರಲ್ಲಿ, ಉದ್ಘಾಟನಾ ಸಮಾರಂಭಕ್ಕೆ ಆರು ಲಕ್ಷ ಪ್ರೇಕ್ಷಕರಿಗೆ ವ್ಯವಸ್ಥೆ ಮಾಡಲಾಗುವುದು ಎಂದಿದ್ದರು. ಆದರೆ ಸಂಖ್ಯೆ ಮೊಟಕುಗೊಳಿಸಿರುವುದಕ್ಕೆ ಕಾರಣ ತಿಳಿಸಿಲ್ಲ.

ಬಿಎಫ್‌ಸಿ ತೆಕ್ಕೆಗೆ ನಿಖಿಲ್ ಪೂಜಾರಿ

ಬೆಂಗಳೂರು: ಹೈದರಾಬಾದ್ ಎಫ್‌ಸಿ ತಂಡದಲ್ಲಿದ್ದ ರೈಟ್ ಬ್ಯಾಕ್ ಆಟಗಾರ ನಿಖಿಲ್ ಪೂಜಾರಿ ಅವರು ಬೆಂಗಳೂರು ಎಫ್‌ಸಿ ತಂಡವನ್ನು ಸೇರಿಕೊಂಡಿದ್ದಾರೆ. ಮಂಗಳೂರು ಮೂಲದ ನಿಖಿಲ್ ಅವರು ಈ ಕುರಿತ ಒಪ್ಪಂದಕ್ಕೆ ಬುಧವಾರ ಸಹಿ ಹಾಕಿದ್ದಾರೆ.



ಬೆಂಗಳೂರಿನಲ್ಲಿ ಬುಧವಾರ ಸಿ.ವಿ. ಪ್ರಸಾದ್ ರಾವ್ ಅವರು ತಮ್ಮ ಪ್ರಾಯೋಜಕತ್ವದ 'ಮಿಲಿಯನ್ 2024' ಟ್ರೋಫಿಯನ್ನು ಬೆಂಗಳೂರು ಟರ್ಫ್ ಕ್ಲಬ್ ಅಧ್ಯಕ್ಷ ಅರವಿಂದ್ ರಾಘವನ್ ಅವರಿಗೆ ಹಸ್ತಾಂತರಿಸಿದರು –ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಎಸಿಸಿ ಅಧ್ಯಕ್ಷರಾಗಿ ಜಯ್ ಶಾ ಪುನರಾಯ್ಕೆ



ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯ ದರ್ಶಿ ಜಯ್ ಶಾ ಸತತ ಮೂರನೇ ಅವಧಿಗೆ ಏಷ್ಯನ್ ಕ್ರಿಕೆಟ್ ಕೌನ್ಸಿಲ್‌ಗೆ (ಎಸಿಸಿ) ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

ಬಾಲಿಯಲ್ಲಿ ಬುಧವಾರ ನಡೆದ ಎಸಿಸಿ ವಾರ್ಷಿಕ ಮಹಾಸಭೆಯಲ್ಲಿ ಶ್ರೀಲಂಕಾ ಕ್ರಿಕೆಟ್ ಅಧ್ಯಕ್ಷ ಶಮ್ಮಿ ಸಿಲ್ವ ಅವರು ಶಾ ಅವರ ಅವಧಿ ಮುಂದುವರಿಸಲು ಪ್ರಸ್ತಾವ ಮಂಡಿಸಿದರು. ಇದನ್ನು ಎಸಿಸಿ ಸದಸ್ಯರು ಸರ್ವಾನುಮತದಿಂದ ಅನುಮೋದಿಸಿದರು. 2021 ರಲ್ಲಿ ನಜ್ಮುಲ್ ಹಸನ್ ಅವರ ಉತ್ತರಾಧಿಕಾರಿಯಾಗಿ ಶಾ ಮೊದಲ ಬಾರಿ ಆಯ್ಕೆಯಾಗಿದ್ದರು.

ಚೆಕ್ ಬೌನ್ಸ್ ಪ್ರಕರಣ: ಮಾಜಿ ಕ್ರಿಕೆಟಿಗ ಬಂಧನ



ನಾಗ್ಪುರ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಪ್ರಶಾಂತ್ ವೈದ್ಯ ಅವರನ್ನು ಚೆಕ್ ಬೌನ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರ ಪೊಲೀಸರು ಬುಧವಾರ ಜಾಮೀನುರಹಿತ ವಾರೆಂಟ್ ಮೇಲೆ ಬಂಧಿಸಿದ್ದಾರೆ.

ಅವರನ್ನು ನಂತರ ನ್ಯಾಯಾಲಯವೊಂದರ ಮುಂದೆ ಹಾಜರುಪಡಿಸಿದ್ದು, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮಧ್ಯಮ ವೇಗಿಯಾಗಿದ್ದ ಪ್ರಶಾಂತ್ ವೈದ್ಯ 1990ರ ದಶಕದ ಮಧ್ಯದಲ್ಲಿ ನಾಲ್ಕು ಏಕದಿನ ಪಂದ್ಯಗಳನ್ನು ಆಡಿದ್ದರು.

ಐಎಸ್‌ಪಿಎಲ್: ಬಿಡ್‌ನಿಂದ ₹1,165 ಕೋಟಿ

ಮುಂಬೈ: ಇಲ್ಲಿ ಮೊದಲ ಬಾರಿ ನಡೆಯಲಿರುವ ಟೆನಿಸ್ ಬಾಲ್ ಟಿ10 ಕ್ರಿಕೆಟ್ ಟೂರ್ನಿಯಲ್ಲಿ ('ಇಂಡಿಯನ್ ಸ್ಟ್ರೀಟ್ ಪ್ರೀಮಿಯರ್ ಲೀಗ್'ನಲ್ಲಿ) ಪಾಲ್ಗೊಳ್ಳುವ ಆರು ನಗರ ತಂಡಗಳ ಸಹ ಮಾಲೀಕರಿಗಾಗಿ ಕರೆಯಲಾಗಿದ್ದ ಬಿಡ್ ಫಲಿತಾಂಶ ಪ್ರಕಟಿಸಲಾಗಿದೆ. ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ವ್ಯಕ್ತವಾಗಿದ್ದು ₹1,165 ಕೋಟಿ ಹರಿದುಬಂದಿದೆ.

ಹೃತಿಕ್ ರೋಷನ್ ಮಾಲೀಕತ್ವದ ಟೀಮ್ ಬೆಂಗಳೂರು ಸಹ ಮಾಲೀಕತ್ವವನ್ನು ವೆಂಕಟ್ ಕೆ.ನಾರಾಯಣ ಅವರ ಕೆವಿಎನ್ ಎಂಟರ್‌ಪ್ರೈಸಸ್ ₹225 ಕೋಟಿಗೆ ಪಡೆದಿದೆ. ಅಮಿತಾಭ್ ಬಚ್ಚನ್ ಅವರ ಮುಂಬೈ ತಂಡದ ಸಹ ಮಾಲೀಕತ್ವವನ್ನು ನೀತಿ ಅಗರವಾಲ್ ಅವರ ಪಾತ್ ಇಂಡಿಯಾ ₹205.6 ಕೋಟಿಗೆ ಪಡೆದುಕೊಂಡಿದೆ.

ಎರಡನೇ ಟೆಸ್ಟ್: 11ರ ಬಳಗದ ಆಯ್ಕೆ ಕಸರತ್ತು ಕುರಿತು ಬ್ಯಾಟಿಂಗ್ ಕೋಚ್ ವಿಕ್ರಂ ರಾಥೋಡ್

ರಜತ್, ಸರ್ಫರಾಜ್ ಇಬ್ಬರೂ ಉತ್ತಮರು

ವಿಶಾಖಪಟ್ಟಣ (ಪಿಟಿಐ): ಇಂಗ್ಲೆಂಡ್ ಎದುರಿನ ಎರಡನೇ ಟೆಸ್ಟ್ ಪಂದ್ಯದಲ್ಲಿ ಆಡುವ ಭಾರತದ ಹನ್ನೊಂದರ ಬಳಗದಲ್ಲಿ ಸರ್ಫರಾಜ್ ಖಾನ್ ಮತ್ತು ರಜತ್ ಅವರಲ್ಲಿ ಒಬ್ಬರನ್ನು ಆಯ್ಕೆ ಮಾಡುವುದು ಬಲು ಕಠಿಣ ಸವಾಲಾಗಲಿದೆ. ಇಬ್ಬರೂ ಉತ್ತಮ ಆಟಗಾರರಾಗಿದ್ದಾರೆ. ದೇಶಿ ಕ್ರಿಕೆಟ್‌ನಲ್ಲಿ ಅಮೋಘವಾಗಿ ಆಡಿದ್ದಾರೆ ಎಂದು ಬ್ಯಾಟಿಂಗ್ ಕೋಚ್ ವಿಕ್ರಂ ರಾಥೋಡ್ ಹೇಳಿದ್ದಾರೆ.

ಶುಕ್ರವಾರ ಇಲ್ಲಿ ಪಂದ್ಯ ಆರಂಭವಾಗಲಿದೆ. ಕೆ.ಎಲ್. ರಾಹುಲ್ ಮತ್ತು ಆಲ್‌ರೌಂಡರ್ ರವೀಂದ್ರ ಜಡೇಜ ಗಾಯಗೊಂಡಿದ್ದರಿಂದ ಈ ಪಂದ್ಯದಲ್ಲಿ ಆಡುವುದಿಲ್ಲ. ಅನುಭವಿ ಬ್ಯಾಟರ್ ವಿರಾಟ್ ಕೊಹ್ಲಿ ಕೂಡ ಈ ಪಂದ್ಯದಲ್ಲಿ ಆಡುತ್ತಿಲ್ಲ. ಅದರಿಂದಾಗಿ ತಂಡಕ್ಕೆ ಸರ್ಫರಾಜ್, ಸೌರಭ್ ಕುಮಾರ್ ಮತ್ತು ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರನ್ನು ಸೇರ್ಪಡೆ ಮಾಡಲಾಗಿತ್ತು. ರಜತ್ ಪಾಟೀದಾರ್ ಕೂಡ ತಂಡದಲ್ಲಿದ್ದಾರೆ.

‘ಅವರಿಬ್ಬರನ್ನೂ ಆಯ್ಕೆ ಮಾಡುವುದು ಕಷ್ಟವಲ್ಲ. ಆದರೆ ಇಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡುವುದು ಕಠಿಣ. ಈ ವಿಷಯ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತು ನಾಯಕ ರೋಹಿತ್ ಶರ್ಮಾ ಅವರಿಗೆ ಬಿಟ್ಟಿದ್ದು’ ಎಂದರು.

'ನಮ್ಮಲ್ಲಿ ಯುವ ಬ್ಯಾಟರ್‌ಗಳು ಇದ್ದಾರೆ. ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್ ಮತ್ತು ಶ್ರೇಯಸ್ ಅಯ್ಯರ್ ಅವರು ಕಳೆದ ಕೆಲ ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿದ್ದಾರೆ. ಆದರೆ ಅವರಿಗೆ ಹೆಚ್ಚು ಟೆಸ್ಟ್‌ಗಳಲ್ಲಿ ಆಡಿದ ಅನುಭವ ಇಲ್ಲ. ಆದ್ದರಿಂದ ಅವರ ಬಗ್ಗೆ ತಂಡವು ತಾಳ್ಮೆಯಿಂದ ಇರುವುದು ಮುಖ್ಯವಾಗಿದೆ. ಅವರು ದೊಡ್ಡ ಇನಿಂಗ್ಸ್ ಆಡುವ ಭರವಸೆ ಇದೆ’ ಎಂದರು.

ವಿಶ್ವ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಐದನೇ ಸ್ಥಾನಕ್ಕೆ ಕುಸಿದಿರುವ ಕುರಿತು ಪ್ರತಿಕ್ರಿಯಿಸಿದ ಅವರು, ‘ತವರಿನಲ್ಲಿ ಕಳೆದ 12–13 ವರ್ಷಗಳಲ್ಲಿ ನಾವು ಟೆಸ್ಟ್ ಸರಣಿ ಸೋತಿಲ್ಲ. ಬ್ಯಾಟರ್‌ಗಳೊಂದಿಗೆ ನಿರಂತರವಾಗಿ ಚರ್ಚಿಸುತ್ತಿದ್ದೇವೆ. ಅವರ ಕೌಶಲ ಗಳಲ್ಲಿ ಸುಧಾರಣೆಗೆ ಸೂಕ್ತ ಸಮಾಲೋಚನೆ ಮಾಡಿ ದ್ದೇವೆ. ಅಲ್ಲದೇ ಫೀಲ್ಡಿಂಗ್ ಮತ್ತು ಬೌಲಿಂಗ್ ವಿಭಾಗಗಳಲ್ಲಿಯೂ ಸುಧಾರಣೆಗೆ ಒತ್ತು ನೀಡಲಾಗಿದೆ’ ಎಂದರು.



ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್, ಫೀಲ್ಡಿಂಗ್ ಕೋಚ್ ಟಿ. ದಿಲೀಪ್ ಮತ್ತು ಬ್ಯಾಟಿಂಗ್ ಕೋಚ್ ವಿಕ್ರಂ ರಾಥೋಡ್ ನಡುವಣ ಮಾತುಕತೆ –ಪಿಟಿಐ ಚಿತ್ರ

ರಿವರ್ಸ್ ಸ್ವೀಪ್ ಅಭ್ಯಾಸ

ಭಾರತ ತಂಡದ ಬ್ಯಾಟರ್‌ಗಳು ಬುಧವಾರ ನೆಟ್ಸ್‌ನಲ್ಲಿ ರಿವರ್ಸ್ ಸ್ವೀಪ್ ಅಭ್ಯಾಸಕ್ಕೆ ಹೆಚ್ಚು ಒತ್ತು ನೀಡಿದರು. ಸ್ಪಿನ್ ಬೌಲರ್‌ಗಳಿಗೆ ಹೆಚ್ಚು ನೆರವು ನೀಡುವಂತಿರುವ ಪಿಚ್‌ನಲ್ಲಿ ಕೆಳಮಟ್ಟದಲ್ಲಿ ಪುಟಿದು ಬರುವ ಎಸೆತಗಳನ್ನು ಎದುರಿಸಲು ಸ್ವೀಪ್ ಮತ್ತು ರಿವರ್ಸ್ ಸ್ವೀಪ್‌ಗಳನ್ನು ಪ್ರಯೋಗಿಸಬೇಕಾಗಬಹುದು.

ಶುಭಮನ್ ಗಿಲ್, ರಜತ್ ಪಾಟೀದಾರ್, ಸರ್ಫರಾಜ್ ಖಾನ್ ಸೇರಿ ಬ್ಯಾಟರ್‌ಗಳೂ ಈ ಅಭ್ಯಾಸ ನಡೆಸಿದರು. ಇಂಗ್ಲೆಂಡ್‌ನ ಜೋ ರೂಟ್ ಅವರು ಎಡಗೈ ಬ್ಯಾಟಿಂಗ್ ಮಾಡುವ ಅಭ್ಯಾಸ ಮಾಡಿದರು.

ಜ್ಯಾಕ್ ಲೀಚ್ ಅಲಭ್ಯ

ವಿಶಾಖಪಟ್ಟಣ (ಪಿಟಿಐ): ಇಂಗ್ಲೆಂಡ್ ಕ್ರಿಕೆಟ್ ತಂಡದ ಅನುಭವಿ ಸ್ಪಿನ್ನರ್ ಜ್ಯಾಕ್ ಲೀಚ್ ಎಡ ಮೊಣಕಾಲಿನ ಗಾಯದಿಂದಾಗಿ ಭಾರತ ಎದುರಿನ 2ನೇ ಟೆಸ್ಟ್‌ಗೆ ಅಲಭ್ಯರಾಗಲಿದ್ದಾರೆ.

ಬುಧವಾರ ಇಲ್ಲಿ ನಡೆದ ತಂಡದ ಅಭ್ಯಾಸದಲ್ಲಿ ಅವರು ಭಾಗವಹಿಸಲಿಲ್ಲ. ಕ್ರೀಡಾಂಗಣದ ಒಂದು ಬದಿಯಲ್ಲಿ ಅವರು ತಂಡದ ಫಿಸಿಯೊರಿಂದ ಚಿಕಿತ್ಸೆ ಪಡೆದರು. ಹೈದರಾಬಾದಿನಲ್ಲಿ ಈಚೆಗೆ ನಡೆದಿದ್ದ ಪಂದ್ಯದ ಮೊದಲ ದಿನವೇ ಫೀಲ್ಡಿಂಗ್ ಮಾಡುವಾಗ ಲೀಚ್ ಗಾಯಗೊಂಡಿದ್ದರು.

ಅಗ್ರಸ್ಥಾನದಲ್ಲಿ ಅಶ್ವಿನ್

ದುಬೈ (ಪಿಟಿಐ): ಭಾರತ ತಂಡದ ಅನುಭವಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಟೆಸ್ಟ್ ವಿಭಾಗದ ಬೌಲಿಂಗ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ. ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ನಾಲ್ಕನೇ ಸ್ಥಾನಕ್ಕೆ ಜಿಗಿದಿದ್ದಾರೆ.

ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ 6ನೇ ಸ್ಥಾನದಲ್ಲಿದ್ದಾರೆ. ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಜಡೇಜ ಅಗ್ರಸ್ಥಾನದಲ್ಲಿದ್ದಾರೆ.

2ನೇ ಸುತ್ತಿಗೆ ಮಿಥುನ್

ಬ್ಯಾಂಕಾಕ್ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಅವರು ಥಾಯ್ಲೆಂಡ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಚೀನಾ ತೈಪಿಯ ವಾಂಗ್ ತ್ಸು ಅವರನ್ನು ಬುಧವಾರ ನೇರ ಸೆಟ್‌ಗಳಿಂದ ಸೋಲಿಸಿದರು. ವಿಶ್ವದ ಮಾಜಿ ಅಗ್ರ ಕ್ರಮಾಂಕದ ಆಟಗಾರ 22–20, 21–19 ರಿಂದ ವಾಂಗ್ ಅವರನ್ನು ಸೋಲಿಸಲು 45 ನಿಮಿಷ ಸೆಣಸಾಡಬೇಕಾಯಿತು.

ಶ್ರೀಕಾಂತ್ ಎರಡನೇ ಸುತ್ತಿನಲ್ಲಿ ಸ್ವದೇಶದ ಮಿಥುನ್ ಮಂಜುನಾಥ್ ಅವರನ್ನು ಎದುರಿಸಲಿದ್ದಾರೆ. ಮಿಥುನ್ ಇನ್ನೊಂದು ಪಂದ್ಯದಲ್ಲಿ ಹಾಂಗ್‌ಕಾಂಗ್‌ನ ಜೇಸನ್ ಗುಣವಾನ್ ಅವರನ್ನು 21–17, 21–8 ರಿಂದ ಹಿಮ್ಮೆಟ್ಟಿಸಿದರು.

ಭಾರತದ ಎಸ್.ಶಂಕರ್ ಮುತ್ತುಸಾಮಿ ಸುಬ್ರಮಣಿಯನ್ ಕೂಡ ನೇರ ಸೆಟ್ ಗೆಲುವಿನೊಡನೆ ಅಭಿಯಾನ ಆರಂಭಿಸಿದರು.

ಒಲಿಂಪಿಕ್ಸ್ ಪದಕ ಹರಾಜು

ನ್ಯೂಯಾರ್ಕ್ (ಎಎಫ್‌ಪಿ): 1968ರ ಮೆಕ್ಸಿಕೊ ಸಿಟಿ ಒಲಿಂಪಿಕ್ಸ್‌ನ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ವಿಶ್ವದಾಖಲೆಯೊಂದಿಗೆ ಗೆದ್ದಿದ್ದ ಚಿನ್ನದ ಪದಕವನ್ನು ಅಮೆರಿಕದ ಬಾಬ್ ಬೀಮನ್ ಹರಾಜಿಗೆ ಇಟ್ಟಿದ್ದಾರೆ.

ಬಾಬ್ ಅವರು 8.9 ಮೀಟರ್ ದೂರ ಜಂಪ್ ಮಾಡಿ ದಾಖಲೆ ನಿರ್ಮಿಸಿದ್ದರು. 1991ರ ಟೋಕಿಯೊ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಅಮೆರಿಕದ ಮೈಕ್ ಪೊವೆಲ್ ಆ ದಾಖಲೆಯನ್ನು ಮುರಿದಿದ್ದರು. ಆದರೆ, ಈಗಲೂ ಎರಡನೇ ಗರಿಷ್ಠ ದೂರದ ದಾಖಲೆಯಾಗಿ ಉಳಿದಿದೆ. ಅಲ್ಲದೆ, ಒಲಿಂಪಿಕ್ಸ್‌ನಲ್ಲಿ ಆ ದಾಖಲೆಯನ್ನು ಇನ್ನೂ ಯಾರಿಗೂ ಮುರಿಯಲು ಸಾಧ್ಯವಾಗಿಲ್ಲ.

ಬಾಬ್ ಅವರ ಪದಕಕ್ಕೆ ₹33 ಲಕ್ಷದಿಂದ ₹50 ಲಕ್ಷದವರೆಗಿನ ಮೌಲ್ಯವನ್ನು ಅಮೆರಿಕದ ಕ್ರಿಸ್ಟೀಸ್ ಆಕ್ಷನ್ ಹೌಸ್ ಅಂದಾಜಿಸಿದೆ.

ಬೆಂಗಳೂರಿಗೆ ಮರಳಿದ ಮಯಂಕ್ ಅಗರವಾಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ರಿಪುರಾದ ಅಗರ್ತಲಾದಲ್ಲಿ ಮಂಗಳವಾರ ತಾವು ಪ್ರಯಾಣಿಸುತ್ತಿದ್ದ ವಿಮಾನದಲ್ಲಿ ನೀರಿನಂತಿದ್ದ ದ್ರವವನ್ನು ಸೇವಿಸಿ ಅಸ್ವಸ್ಥರಾಗಿದ್ದ ಕರ್ನಾಟಕ ರಣಜಿ ತಂಡದ ನಾಯಕ ಮಯಂಕ್ ಅಗರವಾಲ್ ಬುಧವಾರ ರಾತ್ರಿ ಬೆಂಗಳೂರಿಗೆ ತಲುಪಿದರು.

ವಿಮಾನ ನಿಲ್ದಾಣದಿಂದ ಅವರು ತಮ್ಮ ಮನೆಗೆ ತೆರಳಿದರು. ತಂಡದ ವ್ಯವಸ್ಥಾಪಕರು ಅವರೊಂದಿಗೆ ಇದ್ದರು ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಅವರು ವಿಮಾನದಲ್ಲಿ ಸ್ವಚ್ಛತೆಗಾಗಿ ಬಳಸುವ ‘ಬ್ಲೀಚ್ ದ್ರಾವಣ’ವನ್ನು ಮಯಂಕ್ ಸೇವಿಸಿರಬಹುದು ಎಂದು ಹೇಳಲಾಗುತ್ತಿದೆ. ವಿಮಾನದಲ್ಲಿ ಸ್ವಚ್ಛತೆಯ ನಂತರ ಈ ದ್ರಾವಣದ ಬಾಟಲಿಯನ್ನು ಸಿಬ್ಬಂದಿಯು ಮರೆತು ಆಸನದ ಮುಂದಿದ್ದ ಪೌಚ್‌ನಲ್ಲಿ ಬಿಟ್ಟು ಹೋಗಿರಬಹುದು ಎಂದೂ ಮೂಲಗಳು ಹೇಳಿವೆ.

ಮಂಗಳವಾರ ದೆಹಲಿ ಮೂಲಕ ಸೂರತ್‌ಗೆ ತೆರಳಲು ಕರ್ನಾಟಕ ತಂಡದೊಂದಿಗೆ ಮಯಂಕ್ ಕೂಡ ವಿಮಾನವೇರಿದ್ದರು. ಟೇಕಾಫ್ ಆಗುವ ಸ್ವಲ್ಪ ಹೊತ್ತಿನ ಮುಂಚೆ ನೀರೆಂದು ತಿಳಿದು ದ್ರವ ಸೇವಿಸಿದ ಮಯಂಕ್ ಬಾಯಿ ಮತ್ತು ಗಂಟಲು ಉರಿದಿದ್ದರಿಂದ ಕೂಡಲೇ ಉಗುಳಿದರು. ಸಹಾಯಕ್ಕಾಗಿ ಕೂಗಿದರು. ವಿಮಾನದ ಸಿಬ್ಬಂದಿಯು ಧಾವಿಸಿದರು. ಸಹ ಆಟಗಾರರು, ತಂಡದ ನೆರವು ಸಿಬ್ಬಂದಿ ಕೂಡ ಮಯಂಕ್ ಬಳಿ ಹೋದರು. ಮಯಂಕ್ ಅವರ ಬಾಯಿಯಲ್ಲಿ ಬೊಬ್ಬೆಗಳೆದ್ದು ನೋವಿನಿಂದ ಒದ್ದಾಡಿದರು. ಕೂಡಲೇ ಆಂಬುಲೆನ್ಸ್ ಕರೆಸಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಐಎಲ್‌ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ವೈದ್ಯರು ಪ್ರಾಣಾಪಾಯವಿಲ್ಲ, ಚೇತರಿಸಿಕೊಳ್ಳಲು ಸಮಯ ಬೇಕಾಗಬಹುದು ಎಂದು ತಿಳಿಸಿದರು.

‘ವಿಮಾನ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ಸ್ವಚ್ಛತಾ ರಾಸಾಯನಿಕ ಸಾಮಗ್ರಿಗಳನ್ನು ಖರೀದಿಸುತ್ತವೆ. ದೊಡ್ಡ ಕ್ಯಾನ್‌ಗಳಲ್ಲಿ ಬರುವ ದ್ರಾವಣವನ್ನು ಚಿಕ್ಕ ಬಾಟಲಿಗಳಲ್ಲಿ ತುಂಬಿಕೊಂಡು ಬಳಸುತ್ತಾರೆ. ಅವು ನೋಡಲು ನೀರಿನ ಬಾಟಲಿಗಳಂತೆಯೇ ಇರುತ್ತವೆ. ಬಹುಶಃ ಸಿಬ್ಬಂದಿಯು ಬಿಟ್ಟು ಹೋಗಿದ್ದು ಮಯಂಕ್ ಸೀಟ್‌ನಲ್ಲಿತ್ತು. ಅವರು ನೀರೆಂದು ಭಾವಿಸಿ ಕುಡಿದಿದ್ದಾರೆ’ ಎಂದು ಮಯಂಕ್ ಅವರ ಯೋಗಕ್ಷೇಮ ನೋಡಿಕೊಳ್ಳುತ್ತಿರುವ ವ್ಯಕ್ತಿಯೊಬ್ಬರು ತಿಳಿಸಿದ್ದಾರೆ.

ಬಾಟಲಿ ಮತ್ತು ಅದರಲ್ಲಿದ್ದ ದ್ರಾವಣವನ್ನು ಪರೀಕ್ಷೆಗೆ ಕಳಿಸಲಾಗಿದೆ. ಪೊಲೀಸ್ ದೂರು ದಾಖಲಾಗಿದೆ.

‘ಈಗ ನನಗೆ ಅರಾಮ ಎನಿಸುತ್ತಿದೆ. ಮರಳಲು ಸಿದ್ಧವಾಗುತ್ತಿರುವೆ. ನನಗಾಗಿ ಪ್ರಾರ್ಥಿಸಿದ, ಪ್ರೀತಿಸಿದ ಮತ್ತು ಬೆಂಬಲಿಸಿದ ಪ್ರತಿಯೊಬ್ಬರಿಗೂ ಧನ್ಯವಾದಗಳು’ ಎಂದು ಮಯಂಕ್ ‘ಎಕ್ಸ್’ ಖಾತೆಯಲ್ಲಿ ಸಂದೇಶ ಹಾಕಿದ್ದಾರೆ. ಅದರೊಂದಿಗೆ ಆಸ್ಪತ್ರೆ ಬೆಡ್‌ನಲ್ಲಿರುವ ತಮ್ಮ ಚಿತ್ರವನ್ನೂ ಲಗತ್ತಿಸಿದ್ದಾರೆ.

‘ಈ ಘಟನೆ ನಡೆದಾಗಿನಿಂದ ಮಯಂಕ್ ಅವರಿಗೆ ಏನೂ ಸೇವಿಸಲು ಆಗುತ್ತಿಲ್ಲ. ಸೇವನೆ ಮಾಡಿದ ರಾಸಾಯನಿಕ ದ್ರವದಿಂದಾಗಿ ಬಾಯಿಯಲ್ಲಿ ಬಹಳಷ್ಟು ಗಾಯವಾಗಿದೆ. ಅವರಿಗೆ ಐ.ವಿ (ಅಭಿದಮನಿಯ ಪೈಪ್) ಹಾಕಲಾಗಿತ್ತು. ಅವರಿಗೆ ಬಹಳಷ್ಟು ಔಷಧಿಗಳನ್ನು ನೀಡಲಾಗಿದೆ. ಆರೋಗ್ಯ ಸ್ಥಿರವಾಗಿದೆ’ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಅಗರ್ತಲಾದ ಆಸ್ಪತ್ರೆಯಲ್ಲಿ ಮಯಂಕ್ ಅಗರವಾಲ್ –ಎಕ್ಸ್ ಚಿತ್ರ

ಸೂರತ್ ತಲುಪಿದ ಕರ್ನಾಟಕ ತಂಡ

ಕರ್ನಾಟಕ ತಂಡವು ಬುಧವಾರ ದೆಹಲಿಯಿಂದ ಸೂರತ್ ತಲುಪಿತು. ಇದೇ ಶುಕ್ರವಾರ ಇಲ್ಲಿ ನಡೆಯುವ ರೈಲ್ವೆಸ್ ವಿರುದ್ಧದ ಪಂದ್ಯದಲ್ಲಿ ತಂಡವು ಆಡಲಿದೆ.

ಮಯಂಕ್ ಅಸ್ವಸ್ಥರಾಗಿದ್ದರಿಂದಾಗಿ ಅಗರ್ತಲಾದಿಂದ ದೆಹಲಿಗೆ ಹೋಗುವ ವಿಮಾನವು ಸುಮಾರು ನಾಲ್ಕು ತಾಸು ತಡವಾಯಿತು. ಅದರಿಂದಾಗಿ ದೆಹಲಿಯಿಂದ ಸೂರತ್‌ಗೆ ಹೋಗುವ ವಿಮಾನ ಆಟಗಾರರಿಗೆ ತಪ್ಪಿತು. ಆದ್ದರಿಂದ ತಂಡದ ಆಟಗಾರರು ಮಂಗಳವಾರ ರಾತ್ರಿ ದೆಹಲಿಯಲ್ಲಿ ಉಳಿದುಕೊಂಡಿತು. ತಂಡದ ತರಬೇತಿ ಮತ್ತು ನೆರವು ಸಿಬ್ಬಂದಿಯೂ ಸೂರತ್ ತಲುಪಿದ್ದಾರೆ.

ನಿಕಿನ್ ಜೋಸ್ ಹಂಗಾಮಿ ನಾಯಕ?

ಸೂರತ್ ಪಂದ್ಯದಲ್ಲಿ ಮಯಂಕ್ ಅನುಪಸ್ಥಿತಿಯಲ್ಲಿ ನಿಕಿನ್ ಜೋಸ್ ಅವರು ಹಂಗಾಮಿ ನಾಯಕರಾಗಿ ಕಾರ್ಯನಿರ್ವಹಿಸುವ ಸಾಧ್ಯತೆ ಇದೆ.

ಈ ಋತುವಿಗೆ ಅವರನ್ನು ಉಪನಾಯಕರನ್ನಾಗಿ ನೇಮಕ ಮಾಡಲಾಗಿತ್ತು. ಮೈಸೂರು ಪಂದ್ಯದಲ್ಲಿ ಗಾಯಗೊಂಡಿದ್ದ ಅನುಭವಿ ಆಟಗಾರ ಮನೀಷ್ ಪಾಂಡೆ ಚೇತರಿಸಿಕೊಂಡು ಸೂರತ್‌ಗೆ ಬಂದಿಳಿದಿದ್ದಾರೆ. ಬುಧವಾರ ತಂಡವನ್ನು ಸೇರಿಕೊಂಡಿದ್ದಾರೆ.